ಸಂವಾದ

ಮೇ ೨೦೧೧ ರೂ. ೨೦

೭೦ಕ್ಕೆ ೪೦ ವರ್ಷ

ಒಂದು ಚಳವಳಿಯ ಶ್ರದ್ಧಾಂಜಲಿ

ಹಜಾರೆ ಗೆದ್ದರು ಭ್ರಷ್ಟಾಚಾರ ಸೋಲಲಿಲ್ಲ!

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೭
ಮೇ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೩೧
❑ ಸಂಪಾದಕರೊಂದಿಗೆ ಸಂವಾದ:
○ ಮ.ಶ್ರೀ. ಮುರಳಿ ಕೃಷ್ಣ ೦೪
○ ಅರ್ ಎಸ್ ಮಾಲಗತ್ತಿ ಸುರಪುರ ೦೫

❑ ದೈತ್ಯಾಕಾರ ತಾಳಿರುವ ಕೋಮುವಾದ ಮತ್ತು ರಾಜಕಾರಣಿಗಳ ಮೊಸಳೆ ಕಣ್ಣೀರು
○ ಸುರೇಶ್ ಭಟ್ ೦೬
❑ ಭ್ರಷ್ಟ ಜಗತ್ತಿನಲ್ಲೊಂದು ಸುತ್ತು
○ ನಾ ದಿವಾಕರ ೦೮
❑ ಹಜಾರೆ ಗೆದ್ದರು.. ಆದರೆ ಭ್ರಷ್ಟಾಚಾರ ಸೋಲಲಿಲ್ಲ!
○ ಶಿವಸುಂದರ್ ೧೨



❑ ಅಣ್ಣಾ ಹಜಾರೆ ಆಂದೋಲನ: ಉಳಿದು ಹೋದ ಕೆಲವು ಪ್ರಶ್ನೆಗಳು
○ ಡಿ. ಎಸ್. ನಾಗಭೂಷಣ ೧೬
❑ ಒಕ್ಕೂಟ ವ್ಯವಸ್ಥೆ ಮತ್ತು ಪ್ರಾದೇಶಿಕ ಪಕ್ಷಗಳು
○ ಡಾ. ವಿಠ್ಠಲ ಭಂಡಾರಿ ಕೆರೆಕೋಣ ೨೦
❑ ೭೦ ಕ್ಕೆ ೪೦ ವರ್ಷ ಒಂದು ಚಳವಳಿಯ ಶ್ರದ್ಧಾಂಜಲಿ
○ ಎನ್. ಕೆ. ಮೋಹನ್‌ರಾಂ ೨೪
❑ ಕರ್ನಾಟಕ ಗಡಿ ಪ್ರದೇಶಗಳ ಅಭಿವೃದ್ಧಿ ಸಾಧ್ಯತೆಗಳು
○ ಡಾ. ಎನ್. ಜಗದೀಶ್ ಕೊಪ್ಪ ೩೦
❑ "ಜಾಗತೀಕರಣ ಸಂದರ್ಭದಲ್ಲಿ ಇತ್ತೀಚಿನ ಕನ್ನಡ ಸಾಹಿತ್ಯದ ಧೋರಣೆಗಳು"
○ ಗೌಸುದ್ದೀನ್, ತುಮಕೂರಕರ ೩೪
❑ ಗೆದ್ದಲು ಕಾದಂಬರಿಯೂ ದೇಶದ ಇಂದಿನ ದುಃಸ್ಥಿತಿಯೂ
○ ಪ್ರೊ. ಶಿವರಾಮಯ್ಯ ೩೨



❑ ಹಾಗೆ ನೋಡಿದರೆ -೬
○ ಡಾ. ಬಂಜಗೆರೆ ಜಯಪ್ರಕಾಶ ೪೦
❑ ಹೊಸ ಪಕ್ಷಿ ರಾಗ...೧೦
○ ಜ್ಯೋತಿ ಗುರುಪ್ರಸಾದ್ ೪೪
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಬುದ್ಧಂ ಶರಣಂ ಗಚ್ಛಮಿ ೧೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)--

ಅಂಬೇಡ್ಕರ್‌ರನ್ನು ವಿಮರ್ಶಿಸಲು ಬಿಡದ ದಲಿತ ರಾಜಕಾರಣ

ಪ್ರಿಯ ಇಂದೂಧರ್,

ಪ್ರತಿ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲೂ ನಡೆಯುವಂತೆ, ಈ ವರ್ಷವೂ ಅವರ ಅಭಿಮಾನಿಗಳಿಂದ ಮೆರವಣಿಗೆ, ಸಮಾರಂಭ, ಲೇಖನ, ವಿಶೇಷ ಸಂಚಿಕೆಗಳ ರೂಪದಲ್ಲಿ ಅಂಬೇಡ್ಕರರ ಆರಾಧನೆ ನಡೆದಿದೆ. ಸ್ವಾತಂತ್ರ್ಯಾನಂತರದ ಮೊದಲ ಮುವ್ವತ್ತು-ನಲವತ್ತು ವರ್ಷಗಳ ಕಾಲ ಗಾಂಧೀಜಿಯನ್ನು ದೇವರು ಮಾಡಿ ಅವರನ್ನು ಮುಗಿಸಲಾಯಿತು. ಈಗ ಅಂಬೇಡ್ಕರರ ಸರದಿ. ಈ ವರ್ಷ 'ಸಂವಾದ'ದ ವಿಶೇಷ ಸಂಚಿಕೆಯ ಹಲವು ಲೇಖನಗಳನ್ನೂ, ಈ ಸಂದರ್ಭದಲ್ಲಿ ಇತರೆಡೆ ಪ್ರಕಟವಾಗಿರುವ ಲೇಖನಗಳನ್ನೂ ಮತ್ತು ಮಾಡಲಾಗಿರುವ ಭಾಷಣಗಳ ವರದಿಗಳನ್ನೂ ಗಮನಿಸಿದಾಗ ಇದು ಸ್ಪಷ್ಟವಾದೀತು.

ಸಂವಿಧಾನದಲ್ಲಿರುವ ಎಲ್ಲ 'ಒಳ್ಳೆಯ'ದಕ್ಕೂ ಅಂಬೇಡ್ಕರರು ಕಾರಣರು. ಆದರೆ ಅದರಲ್ಲಿನ ಎಲ್ಲ ಕೆಟ್ಟದಕ್ಕೂ ಇತರರು ಕಾರಣರು. ಮೊದಲನೆಯ ಸಂದರ್ಭದಲ್ಲಿ ಅವರು 'ಸಂವಿಧಾನ ಶಿಲ್ಪಿ'. ಎರಡನೆಯ ಸಂದರ್ಭದಲ್ಲಿ ಅವರು 'ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷ'ರು ಮಾತ್ರ! ಈ ಎರಡನೆಯ ವಾಸ್ತವವನ್ನು ಇತರರು ಹೇಳಿದರೆ ಅದು ಅಂಬೇಡ್ಕರರಿಗೆ ಮಾಡುವ ಅವಮಾನವಾಗಿ ಸಾರ್ವಜನಿಕ ಅಶಾಂತಿಗೆ ಕಾರಣವಾಗುತ್ತದೆ...

ಪತ್ರಾಗಾರ

ಒಬ್ಬ ಲೇಖಕರಂತೂ,ತಾವೊಂದು ಬಹು ಮುಖ್ಯ ಪ್ರಶ್ನೆಯೊಂದನ್ನು ಎತ್ತುತ್ತಿರುವ ಘನ ತಾತ್ವಿಕ ಭಂಗಿಯಲ್ಲಿ, ಗಾಂಧಿ ರಾಜಕೀಯ ಸ್ವಾತಂತ್ರ್ಯದ ಉದ್ದೇಶ ಮಾತ್ರ ಹೊಂದಿದ್ದರೆಂದೂ, ಅಂಬೇಡ್ಕರ್ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ-ಈ ಎರಡೂ ಉದ್ದೇಶಗಳನ್ನು ಹೊಂದಿದ್ದರೆಂದೂ, ಇದೇ ಇವರಿಬ್ಬರ ನಡುವಣ ಮುಖ್ಯ ವ್ಯತ್ಯಾಸವೆಂಬುದನ್ನು ಗಮನಿಸಬೇಕೆಂದು ಹೇಳುತ್ತಾ ಸಣ್ಣ ದಲಿತ ರಾಜಕಾರಣ ಮಾಡಲೂ ಯತ್ನಿಸಿದ್ದಾರೆ. ಅಂಬೇಡ್ಕರರನ್ನು ಜಗಜೀವನರಾಮರ ಜೊತೆ ಇಟ್ಟು ಚರ್ಚಿಸುವ, ಆರಾಧಿಸುವ ಇತ್ತೀಚಿನ ದಲಿತ ರಾಜಕಾರಣದ ನಿಜ ದುರಂತದ ಬಗ್ಗೆ ಯಾರ ಸೊಲ್ಲೂ ಇಲ್ಲ!

ಇದಕ್ಕೆ ಕಾರಣ, ಅಂಬೇಡ್ಕರರನ್ನು ವಿಮರ್ಶಾತೀತರನ್ನಾಗಿ ಮಾಡುವಂತೆ ಕಟ್ಟಲಾಗುತ್ತಿರುವ ಇತ್ತೀಚಿನ ದಲಿತ ರಾಜಕೀಯ ಸಂಕಥನವೇ ಆಗಿದೆ. ಅಂಬೇಡ್ಕರರ ಹಲವು ರಾಜಕೀಯ ನಡೆಗಳು, ತತ್ವಗಳು ವಿವಾದಾಸ್ಪದವೇ ಆಗಿವೆ. ಅದಕ್ಕೆ ಕಾರಣಗಳೂ ಇವೆ. ಆದರೆ ಅವು ಚರ್ಚೆಗೇ ಬರದಂತೆ ಇತ್ತೀಚಿನ ದಿನಗಳಲ್ಲಿ ದಲಿತ ಸಮೂಹ ಸನ್ನಿಯನ್ನು ಸೃಷ್ಟಿಸಲಾಗುತ್ತಿದೆ. ಇದು ಇಂದಿನ ದಲಿತ ಮತ್ತು ದಲಿತಪರ ನಾಯಕರಿಗೆ ಒಂದಿಷ್ಟು ರಾಜಕೀಯ ಲಾಭ ತಂದುಕೊಡಬಹುದಾದರೂ, ದೀರ್ಘ ಕಾಲಿಕವಾಗಿ ದಲಿತರಿಗೆ ತೊಂದರೆ ಮಾಡುವಂತಹುದೇ ಆಗಿದೆ.

ಕೆಲವು ವರ್ಷಗಳ ಹಿಂದೆ, ದಸಂಸದ ನಾಯಕರಲ್ಲೊಬ್ಬರಾಗಿದ್ದ ಗೆಳೆಯ ಎಚ್.ಗೋವಿಂದಯ್ಯ ನನ್ನೊಂದಿಗೆ ಮಾತನಾಡುತ್ತಾ, ದಸಂಸ ದಲಿತರನ್ನು ಅರ್ಧ ಎಬ್ಬಿಸಿ ಈಗ ಕೈಬಿಟ್ಟು ಅವರನ್ನು ಅರ್ಧ ಮನುಷ್ಯರನ್ನಾಗಿ (ಅವರು ಇದಕ್ಕಿಂತಲೂ ಸ್ಫೋಟಕ ಶಬ್ದ ಬಳಸಿದ್ದರು!) ಮಾಡಿ ದೊಡ್ಡದೊಂದು ಸಾಮಾಜಿಕ ಅನಾಹುತಕ್ಕೆ ಕಾರಣವಾಗಿದೆ ಎಂದಿದ್ದರು. ಅದನ್ನು ಆಗ ನಾನು ಅರ್ಧ ಸತ್ಯದ ಮಾತು ಎಂದು ಭಾವಿಸಿದ್ದೆ. ಆದರಿಂದು ಅದು ಇಂದು ನನಗೆ ಪೂರ್ಣ ಸತ್ಯವಾಗಿ ಕಾಣಿಸತೊಡಗಿದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ,

ಕವಿತೆಗೇಕೆ ಹುಟ್ಟಿನ ಹಂಗು?

ಪ್ರಿಯ ಸಂಪಾದಕರೇ,

ಏಪ್ರಿಲ್ 'ಸಂವಾದ'ದಲ್ಲಿ ಪ್ರಕಟವಾದ 'ಹೊಲಗೇರಿ ಎಂಬ University' ಕವಿತೆ ಓದಿ ಸಂತೋಷವಾಯಿತು. ತುಂಬ ಅರ್ಥವತ್ತಾದ ಶೀರ್ಷಿಕೆಯೊಂದಿಗೆ ಪ್ರಕಟವಾದ ಕವಿತೆಯ ಆಶಯ ಮೆಚ್ಚುವಂಥದ್ದು. ಸೃಜನ ಸೃಷ್ಟಿ ತನ್ನನ್ನು ತಾನೇ ನಿರ್ಮಿಸಿಕೊಳ್ಳುತ್ತದೆ. ಅಪರೂಪದ ಸಂವೇದನೆಗಳನ್ನು ಅಭಿವ್ಯಕ್ತಿಸುವ ಕಲೆ ಕೂಡ ಕವಿತೆಗೆ ಮೆರಗು ತಂದಿದೆ.

ಕೊನೆಯ ಹತ್ತು ಸಾಲುಗಳು ಮಾತ್ರ ಕೃತಕತೆಯನ್ನು ಹೊತ್ತಿವೆ. ಹುಟ್ಟುವ ಕವಿತೆಗೆ ಹುಟ್ಟು ಕಟ್ಟುವ ಅಗತ್ಯವಿರಲಿಲ್ಲ. ಅದು ತನ್ನ ಕ್ರಿಯಾಶೀಲತೆಯ ಶಕ್ತಿಯಿಂದಲೇ ಹುಟ್ಟಿಕೊಂಡಿರುತ್ತದೆ. ಕೊನೆಯ ಹತ್ತು ಸಾಲುಗಳು ರಚನಾತ್ಮಕತೆಯನ್ನು ಹೇಳುತ್ತವೆ. ಇದರ ಅಗತ್ಯವಿತ್ತೆನಿಸುವುದಿಲ್ಲ. ಕವಿತೆಯಲ್ಲಿ ಎಲ್ಲವೂ ಇದೆ. ಅದು ನಮಗೆ ಏನನ್ನಾದರೂ ಕೊಡುತ್ತದೆ. ಅದಕ್ಕೆ ಕೊಡುವುದು ನಮ್ಮಲ್ಲಿ ಏನೂ ಇಲ್ಲ ಎಂಬುದನ್ನು ಕವಿ ತಿಳಿದನೆಂದರೆ ಸಾಕು.

ಅರ್ಜುನ ತಾ. ಕೋರಟಕರ
ಜಮಖಂಡಿ

ಬಸವ ತತ್ವಕ್ಕೆ ತಿಲಾಂಜಲಿ!

ಪ್ರಿಯ ಸಂಪಾದಕರೇ,

ಮೊನ್ನೆ ಸುತ್ತೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಧಿವೇಶನದಲ್ಲಿ ಭ್ರಷ್ಟಾತಿಭ್ರಷ್ಟ ಮುಖ್ಯಮಂತ್ರಿ ಯಡಿಯೂರಪ್ಪ ಪರ ವಕಾಲತ್ತು ವಹಿಸಿದ್ದು ಬಸವ ಪ್ರಿಯರಿಗೆ ಅಘಾತವನ್ನುಂಟುಮಾಡಿದೆ. 'ಅನ್ನದೊಳಂದಗುಳ, ವಸ್ತ್ರದೊಳೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದು ಎತ್ತಿಟ್ಟುಕೊಂಡಡೆ ನಿಮ್ಮಾಣೆ ಎಂದ ಬಸವಣ್ಣನ ಪರಂಪರೆಯ ಕಾವೀಧಾರಿಗಳು ಸ್ವಜನಪಕ್ಷಪಾತಿ, ಲಜ್ಜೆಗೇಡಿ, ಲೂಟಿಕೋರ ಮುಖ್ಯಮಂತ್ರಿಗೆ 'ಭೋ ಪರಾಕ್' ಹೇಳಿ ಬೆತ್ತಲಾಗಿದ್ದಾರೆ.

ಸಮಾಜದ ಬಡವರ ಬಗ್ಗೆ ನೂನ್ಯತೆಗಳ ಬಗ್ಗೆ, ಸಾಂಸ್ಕೃತಿಕ ಅನನ್ಯತೆ ಕಾಪಾಡಿಕೊಳ್ಳುವ ಬಗ್ಗೆ ಹಾಗೂ ಬದಲಾದ ಕಾಲಘಟ್ಟದಲ್ಲಿ ಶರಣ ಸಮಾಜ ಯಾವ ದಿಕ್ಕಿನತ್ತ ಮುಂದಡಿಯಿಡಬೇಕು ಎಂಬ ಯಾವ ಗಮನಾರ್ಹ ಚರ್ಚೆಯೂ ಆಗದೆ ಕೇವಲ ವ್ಯಕ್ತಿಯೊಬ್ಬರನ್ನು ಅಧಿಕಾರದಲ್ಲಿ ಉಳಿಸಿಕೊಳ್ಳಲು ಒತ್ತಡ ಹೇರಲು ಈ ಅಧಿವೇಶನವನ್ನು ನಡೆಸಿದ್ದು ವೀರಶೈವ ಸಮಾಜದ ಬೌದ್ಧಿಕತೆ ಅಧೋಗತಿಗಿಳಿದಿರುವ ಸಂಕೇತ. ಅದೇ ಸಮಾಜದ ನನ್ನಂತಹವನಿಗೆ ತಲೆ ಎತ್ತಿ ನೋಡಲು ನಾಚಿಕೆಯಾಗುತ್ತದೆ.

ತಾವೇ ಶ್ರೇಷ್ಠರೆಂದು ಸದಾ ಕಿತ್ತಾಡಿಕೊಳ್ಳುವ ಪಂಚಾಚಾರ್ಯರು-ವಿರಕ್ತರು ಈ ವಿಚಾರದಲ್ಲಿ ಸಹಮತ ವ್ಯಕ್ತಪಡಿಸಿದ್ದು ಸೋಜಿಗದ ವಿಚಾರ. ನಾಡಿನ ಜ್ವಲಂತ ಸಮಸ್ಸೆಗಳಿಗೂ ತಮಗೂ ಸಂಬಂಧವೇ ಇಲ್ಲದಂತೆ ಮೌನ ವಹಿಸುವ ಜಗದ್ಗುರುಗಳು ಭ್ರಷ್ಟರನ್ನು ರಕ್ಷಿಸಲು ಬೀದಿಗಿಳಿದು ಕೂಗುಮಾರಿಗಳಂತೆ ರಂಪಾಟ ಮಾಡಿದ್ದು ಖಂಡನೀಯ. ಸಕಲರಿಗೆ ಲೇಸನ್ನು ಬಯಸುವ ಬದಲು ಲಾಬಿ ಮಾಡುವ ಇವರಿಗೆ ನೈತಿಕತೆಯೆಂಬುದಿದೆಯೇ?

ಸಮಾಜದ ಸಮಷ್ಠಿ ಹಿತವನ್ನು ಕಾಯಬೇಕಾದ ವೀರಶೈವ ಮಹಾಸಭಾ ಕೆಲವೇ ಕುತ್ಸಿತ ಹಾಗೂ ವಿಚಾರಹೀನ ವ್ಯಕ್ತಿಗಳ ಹಿಡಿತದಲ್ಲಿ ಸಿಕ್ಕು ನರಳುತ್ತಿದೆ. ಅಂತಹ ದುಷ್ಟ ಶಕ್ತಿಗಳಿಂದ ಬಿಡಿಸಿ ಸಚ್ಚಾರಿತ್ರ, ಸಾಹಾನುಭೂತಿಯುಳ್ಳ ವ್ಯಕ್ತಿಗಳ ಕೈಗೆ ಸಭಾ ಬರುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಿಜ ಬಸವ ಭಕ್ತರದು.

ನಾಗರಾಜು, ತುಮಕೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಪ್ರಕಟಣೆ: ಅನಿವಾರ್ಯ ಕಾರಣಗಳಿಂದಾಗಿ ಈ ಬಾರಿ ಮುಜಾಫರ್ 'ಅಸ್ಸಾದಿ' ಅವರ ಅಂಕಣ ಪ್ರಕಟವಾಗುತ್ತಿಲ್ಲ. -ಸಂ

ಸಂಪಾದಕರೊಡನೆ ಸಂವಾದ

ಇವು ನೈಜ ಸುಧಾರಣೆಗಳೇ?

ಮ. ಶ್ರೀ. ಮುರಳಿ ಕೃಷ್ಣ

ಮಾನ್ಯ ಸಂಪಾದಕರೇ,

ನಿಘಂಟಿನಲ್ಲಿ 'ಸುಧಾರಣೆ' ಎಂಬ ಪದಕ್ಕೆ ೧)ಸರಿಮಾಡಿದುದು; ತಿದ್ದುಪಡಿ, ೨) ಅಭಿವೃದ್ಧಿ; ಏಳಿಗೆ, ೩) ಸಹನೆ; ತಾಳ್ಮೆ, ೪) ಸಂಸ್ಕರಣ; ಪರಿಷ್ಕರಣ ಎಂಬ ಅರ್ಥ ಗಳಿರುವುದನ್ನು ಕಾಣಬಹುದು ಈ ಪದದ ಅರ್ಥ ವ್ಯಾಪ್ತಿ ದೊಡ್ಡದು. ಅದು ಇತ್ಯಾತ್ಮಕತೆಯ ಸೂಚಕವೂ ಹೌದು ಇಡೀ ನಾಗರಿಕತೆ ಮತ್ತು ಮಾನವ ಜನಾಂಗದ ವಿಕಸನದಲ್ಲಿ ಸುಧಾರಣೆಗಳು ವಹಿಸುತ್ತ ಬಂದಿರುವ ಪಾತ್ರ ಅತ್ಯಂತ ಮಹತ್ತರವಾದದ್ದು. ವೈಯಕ್ತಿಕ ಮಟ್ಟದಲ್ಲೇ ಇರಲಿ ಅಥವಾ ಸಮಷ್ಟಿಯ ನೆಲೆಯಲ್ಲೇ ಇರಲಿ ಸುಧಾರಣೆಗಳ ಪ್ರಕ್ರಿಯೆಗಳ ಜೊತೆ 'ಅಭಿವೃದ್ಧಿ' ಮತ್ತು 'ಏಳಿಗೆ' ಯಂಥ ಪರಿಕಲ್ಪನೆಗಳು ತಳಕು ಹಾಕಿಕೊಂಡಿವೆ.

ಎರಡು ದಶಕಗಳ ಹಿಂದೆ, ಅಂದರೆ, ಜೂನ್ 1991 ರಲ್ಲಿ ಅಂದಿನ ನರಸಿಂಹರಾವ್ ಸರ್ಕಾರ ಹೊಸ ಆರ್ಥಿಕ ನೀತಿಗಳನ್ನು ಜಾರಿ ಮಾಡಿತು. ಮೇ 1991ರಲ್ಲಿ ಸಾರ್ವತ್ರಿಕ ಚುನಾವಣೆ ಜರುಗಿತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ತಯಾರಿಸಿದ್ದ ಪ್ರಣಾಳಿಕೆಯಲ್ಲಿ ಈ ನೀತಿಗಳ ಪ್ರಸ್ತಾಪವಿರದಿದ್ದದ್ದು ಗಮನಾರ್ಹ ಮತ್ತು ಕುತೂಹಲಕಾರಿ ಸಂಗತಿ. ಈ ಕಾಲಘಟ್ಟದಲ್ಲಿ ಮತ್ತು ತರುವಾಯ ಮೊದಲು ನಮ್ಮ ರಾಷ್ಟ್ರದ ಆರ್ಥಿಕ ರಂಗದಲ್ಲಿ, ನಂತರ ಇತರ ಕ್ಷೇತ್ರಗಳಲ್ಲಿ ಸುಧಾರಣೆಗಳು ಎಂಬ ಕಲ್ಪನೆ/ಪದ ಒಂದು ವಿಶೇಷ ಜೋಶ್ ನಿಂದ ಪ್ರಯೋಗಿಸಲ್ಪಟ್ಟಿತು. ಈ ನಿಟ್ಟಿನಲ್ಲಿ 1947ರ ತರುವಾಯ ಜಾರಿಯಲ್ಲಿದ್ದ ಗಾಂಧಿ-ನೆಹರು ಕಾಣ್ಕೆಗಳ ಹಿನ್ನಲೆಯಲ್ಲಿ ರೂಪುಗೊಂಡಿದ್ದ ನೀತಿಗಳಿಗೆ ತಿಲಾಂಜಲಿ ನೀಡಲಾಯಿತು ನೆಹರು ಬ್ರಾಂಡ್‌ನ ಸಮಾಜವಾದ ಒಂದು 'ಲೈಸೆನ್ಸ್-ಪರ್ಮಿಟ್‌ರಾಜ್'ನ್ನು ಹುಟ್ಟುಹಾಕಿತೆಂದು ಸಾರಲಾಯಿತು. ಈ ಹೊಸ ಆರ್ಥಿಕ ನೀತಿಗಳು, ಸುಧಾ ರಣೆಗಳು ಇತ್ಯಾದಿಗಳನ್ನು ಅನುಷ್ಠಾನಕ್ಕೆ ತಂದದ್ದು ಅಂದಿನ ವಿತ್ತಸಚಿವರಾಗಿದ್ದ ಮನಮೋಹನ್ ಸಿಂಗ್. ಜೂನ್ 1991ರಲ್ಲಿ ತಲೆದೋರಿದ ಆತಂಕಕಾರಿ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಭಾರತ ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರಿಯ ವಿತ್ತ ನಿಧಿ ವಿಧಿಸಿದ ನಿಬಂಧನೆಗಳಿಗೆ ಒಪ್ಪಿಗೆಯನ್ನು ಸೂಚಿಸಬೇಕಾಯಿತು.

ಇದು ನಡೆದಿದ್ದು ಮನಮೋಹನ್ ಸಿಂಗ್‌ರವರ ಸಾರಥ್ಯದಲ್ಲಿ. ಅವರು ವಿತ್ತಸಚಿವರಾಗುವ ಮುನ್ನ ಸೌತ್ ಕಮೀಷನ್‌ನ ಸೆಕ್ರೆಟರಿ ಜನರಲ್‌ರಾಗಿದ್ದರು. ಇದಕ್ಕೆ ಜೂಲಿಯಸ್ ನೈರೇಲಿಯವರ ನೇತೃತ್ವವಿತ್ತು. ಈ ಕಮಿಷನ್‌ಗೆ ಸಿಂಗರು ಒಂದು ವರದಿಯನ್ನು ನೀಡಿದ್ದರು. ಅದರಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳು ವಿಧಿಸುವ ಷರತ್ತುಗಳ ವ್ಯತಿರಿಕ್ತ ಪರಿಣಾಮಗಳನ್ನು ಕುರಿತು ಒತ್ತು ನೀಡಿದ್ದರು. ಇದಾದ ಅಲ್ಪ ಸಮಯದಲ್ಲೇ ಅವರು ತಮ್ಮ ನಿಲುವಿನಲ್ಲಿ U-TURN (ಯೂ-ಟರ್ನ್) ತೆಗೆದುಕೊಂಡಿದ್ದೇಕೆ? ಯಾವ/ಯಾರ ಹಿತಾಸಕ್ತಿಗಳು ತೆರೆಮರೆಯ ಹಿಂದೆ ತಮ್ಮ ಪಾತ್ರ ವಹಿಸಿದವು?

ಈ ನೂತನ ಆರ್ಥಿಕ ನೀತಿಗಳು ಜಾರಿಯಾದ ನಂತರದ ಅವಧಿಯಲ್ಲಿ ಸುಧಾರಣೆಗಳ ರಾಜ್‌ನಲ್ಲಿ ನಡೆದದ್ದು ಏನು? ಆಂಗ್ಲ ಭಾಷೆಯಲ್ಲಿ 'Free For all' ಎಂದು ಹೇಳುತ್ತಾರಲ್ಲಾ, ಹಾಗಾಗಿದೆ ನಮ್ಮಲ್ಲಿ ಜರಗುತ್ತಿರುವ ಸಾರ್ವಜನಿಕ ಲೂಟಿಯ ಪರಿ. MRTP, FERA ಮುಂತಾದ ಕಾನೂನುಗಳನ್ನು ಮೊಟಕುಗೊಳಿಸಲಾಗಿದೆ ಅಥವಾ ತೀವ್ರವಾಗಿ ನಿಸ್ಸಾರಗೊಳಿಸಲಾಗಿದೆ. ಇವುಗಳು ಮುಕ್ತ ವ್ಯಾಪಾರ-ವಾಣಿಜ್ಯ ವಿನಿಮಯಕ್ಕೆ ಮಾರಕವಾಗಿದ್ದುದರಿಂದ ನಮ್ಮ ಆರ್ಥಿಕತೆ ತೀವ್ರ ಧಕ್ಕೆಗೆ ಒಳಗಾಯಿತೆಂದು ಟಾಂಟಾಂ ಮಾಡಲಾಯಿತು. ಸಾರ್ವಜನಿಕ ಕ್ಷೇತ್ರವನ್ನು ಕಡೆಗಣಿಸಿ, ಖಾಸಗಿ ಕ್ಷೇತ್ರಕ್ಕೆ ಎಲ್ಲ ಬಗೆಯ ಉತ್ತೇಜನವನ್ನು ನೀಡಲಾಗುತ್ತಿದೆ. ನೇರ ಕರಗಳನ್ನು ಕಡಿತಗೊಳಿಸಿ, ಕಾರ್ಪೋರೇಟ್ ಶಕ್ತಿಗಳಿಗೆ ಕುಮ್ಮಕ್ಕು ನೀಡುವ ವಿವಿಧ ಯೋಜನೆಗಳು ಜಾರಿಯಾಗುತ್ತಿವೆ.

ಇಂದು ಎಲ್ಲ ನಾಗರಿಕರ ಪಾರಂಪರಿಕ ಸ್ವತ್ತಾಗಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಕಸಿದುಕೊಳ್ಳಲು ಹೇಯ ಸ್ಪರ್ಧೆಗಳು ನಡೆಯುತ್ತಿವೆ. ಭೂಮಿ, ನೀರು, ಅರಣ್ಯಗಳು ಮತ್ತು ಆಕಾಶ ತರಂಗಗಳ ಮೇಲೆ ನಿಯಂತ್ರಣ ಹೊಂದಲು ಖಾಸಗಿ ಶಕ್ತಿಗಳ ನಡುವೆ ತೀವ್ರ ಪೈಪೋಟಿ ಜರಗುತ್ತಿವೆ. ನಮ್ಮಲ್ಲಿ ಜಮೀನ್ದಾರಿ ಪದ್ಧತಿ ರದ್ದಾಗಿ ಸುಮಾರು ಐದು ದಶಕಗಳಾಯಿತು. ಆದರೆ ಇಂದು ಹೊಸ ರಾಜರು, ಸಾಮಂತರು ಮತ್ತು ಭೂಪತಿಗಳು ತಲೆ ಎತ್ತುತ್ತಿದ್ದಾರೆ.

ಈ ನವ ಆರ್ಥಿಕ ನೀತಿಗಳ ಯುಗದಲ್ಲಿ ವ್ಯಾಪಾರಗಳನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ ವ್ಯಾಪಾರಿಗಳು, ರಾಜಕಾರಣಿಗಳು ಮತ್ತು ಕಾರ್ಯಾಂಗದ ನಡುವೆ ಒಂದು ಬೆಚ್ಚನೆ ಸಂಬಂಧ ಏರ್ಪಟ್ಟಿದೆ. ಸರ್ಕಾರವೆಂಬುದು India Inc ಆಗಿ ಪರಿವರ್ತನೆಯಾಗಿದೆ. ಖಾಸಗಿ ಕ್ಷೇತ್ರಕ್ಕೆ ಒತ್ತಾಸೆ ನೀಡುವ ನೆಪದಲ್ಲಿ, ಸರ್ಕಾರ ಎಲ್ಲ ಬಗೆಯ ಅಕ್ರಮಗಳಿಗೆ ಕುರುಡಾಗಿದೆ. ಇದು ಸರ್ಕಾರದಲ್ಲಿರುವ ಮತ್ತು ಹೊರಗಡೆ ಇರುವ ಅಕ್ರಮ ಕಾರ್ಯ ಎಸಗುವವರಿಗೆ ಒಂದು ವರವಾಗಿ ಪರಿಣಮಿಸಿದೆ. ಲೋಭತನಕ್ಕೆ ಲಭಿಸಿದೆ ಉನ್ನತ ಸ್ಥಾನ ಹಣವನ್ನು ಗಳಿಸಲು ಯಾವುದೇ ಮಾರ್ಗವಾದರೂ ಸರಿ ಎಂಬುದು ಇಂದಿನ ಸ್ವೀಕಾರಾರ್ಹ ಮಾನದಂಡವಾಗುತ್ತಿರುವುದು ಶುಭಸೂಚಕ ಬೆಳವಣಿಗೆಯಲ್ಲ. ಮಾಧ್ಯಮಗಳಲ್ಲೂ ಈ ಅನಿಷ್ಟಕಾರಿ ಬೆಳವಣಿಗೆಗಳು ತಲೆದೋರುತ್ತಿರುವುದು ಒಂದು ಆತಂಕಕಾರಿ ವಿಷಯವೇ ಸರಿ. ಉದಾ: ರಾಡಿಯಾ ಟೇಪ್ಸ್ ಹಗರಣ ಬಹಿರಂಗಗೊಳಿಸಿದ ಬೆಚ್ಚಿಬೀಳಿಸುವ ಸಂಗತಿಗಳು.

ನಾವು ಸ್ವಾತಂತ್ರ್ಯಗಳಿಸಿದ ತಾರುಣ್ಯದಲ್ಲಿ, ಅಂದಿನ ನಾಯಕತ್ವಕ್ಕೆ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಆಡಳಿತದ ಕಹಿ ಅನುಭವಗಳ ಬಗೆಗೆ ಅರಿವಿತ್ತು, ಅದು ಬಡತನ, ಅನಕ್ಷರತೆ, ಅನಾರೋಗ್ಯ ಮುಂತಾದುವುಗಳಿಗೆ ಸಾಮಾಜಿಕ ಕಾರಣಗಳಿರುತ್ತವೆ ಎಂಬ ಅಂಶವನ್ನು ನಂಬಿತ್ತು. ಅವುಗಳ ನಿವಾರಣೆಗೆ, ಸಾಮಾಜಿಕ ಮಧ್ಯ ಪ್ರವೇಶ ಅವಶ್ಯಕವೆಂದು ಮನಗಂಡಿತ್ತು. ಅದು ಸಾಮಾಜಿಕ ಕ್ರಿಯಾತ್ಮಕತೆಯಲ್ಲಿ ಪರಿಹಾರಗಳಿರುತ್ತವೆ ಎಂಬ ನಿಲುವನ್ನು ಹೊಂದಿತ್ತು. ಆದುದರಿಂದ, ಈ ಚಿಂತನಾ ಕ್ರಮದಲ್ಲಿ, 'ವ್ಯಕ್ತಿ' ನಿಂದನೆಗೆ ಒಳಗಾಗುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಆರ್ಥಿಕತೆಯ ವಿಚಾರಗಳಲ್ಲಿ ಪ್ರಭುತ್ವಕ್ಕೆ (State) ದೊಡ್ಡ ಪಾತ್ರ ವಿರಬೇಕೆಂಬುದು ಅದರ ದೃಷ್ಟಿಕೋನವಾಗಿತ್ತು. ಅದು ಜಾರಿಯೂ ಆಯಿತು. ಆದರೆ ನವ ಆರ್ಥಿಕ ನೀತಿಗಳಡಿ ಈ ನಿಲುವು ತಿರುಗಮುರುಗ ಆಗಿದೆ. ಪ್ರಸ್ತುತ, ಸಮಸ್ಯೆಗಳಿಗೂ ವ್ಯಕ್ತಿಗಳಿಗೂ ಸಂಬಂಧ ಕಲ್ಪಿಸಲಾಗುತ್ತಿದೆ. ಅಂದರೆ ಸಮಸ್ಯೆಗಳಿಗೆ ವ್ಯಕ್ತಿಗಳೇ ಜವಾಬ್ದಾರರು, ಅವುಗಳನ್ನು ವೈಯಕ್ತಿಕ ಮಟ್ಟದಲ್ಲೇ ಎದುರಿಸಬೇಕು ಮತ್ತು ಪ್ರಭುತ್ವ ಅವುಗಳನ್ನು ಶಮನಗೊಳಿಸುವ ಜವಾಬ್ದಾರಿ ಹೊಂದಿರುವುದಿಲ್ಲ ಎಂಬ ವಿಚಾರಕ್ಕೆ ಹೆಚ್ಚು ಒತ್ತು ಸಿಗುತ್ತಿದೆ.

ಬಡತನ ನಿವಾರಣೆಯಾಗಲಿ ಅಥವಾ ಉದ್ಯೋಗಗಳ ಉತ್ಪತ್ತಿಯಾಗಲಿ ವೈಯಕ್ತಿಕ ನೆಲೆಯ ಪರಿಶ್ರಮದಿಂದ ಆಗಬೇಕು ಹಾಗೂ ಅದಕ್ಕಾಗಿ 'ಮಾರುಕಟ್ಟೆ'ಯನ್ನು ಆಶ್ರಯಿಸಬೇಕು ಎಂಬುದು ಆಡಳಿತಾರೂಢರ ಅಭಿಮತವಾಗಿದೆ. ಇದರಿಂದ, ಒಂದರ್ಥದಲ್ಲಿ ಪ್ರಭುತ್ವ ಆರ್ಥಿಕತೆಯಿಂದ ಹಿಂದೆ ಸರಿದಿದೆ. ವ್ಯಕ್ತಿಯೊಬ್ಬ ತನ್ನ ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತಿತರ ಅವಶ್ಯಕತೆಗಳಿಗಾಗಿ ಮಾರುಕಟ್ಟೆಯ ಅವಲಂಬಿಯಾಗಿದ್ದಾನೆ. ಮಾರುಕಟ್ಟೆಗಳು ಸಮರ್ಥವಾಗಿ ಕಾರ್ಯನಿರ್ವಹಿಸುವುದಷ್ಟೇ ಪ್ರಭುತ್ವದ ಪಾತ್ರ ಎಂಬುದು ಇಂದಿನ ಬೀಜ ಮಂತ್ರವಾಗಿದೆ. ವಿಶ್ವಬ್ಯಾಂಕಿನ ಪರಿಭಾಷೆಯಲ್ಲಿ ಇದನ್ನು 'ಮಾರುಕಟ್ಟೆ-ಸ್ನೇಹಿ ಪ್ರಭುತ್ವದ ಮಧ್ಯಪ್ರವೇಶ' ಎಂದು ಕರೆಯಲಾಗುತ್ತದೆ.

ಎರಡು ದಶಕಗಳನ್ನು ಕಂಡಿರುವ ಈ ಸುಧಾರಣೆಗಳ ರಾಜ್‌ನಲ್ಲಿ ಸಂಭವಿಸಿರುವ Scan (ಹಗರಣ)ಗಳಿಗೆ ಲೆಕ್ಕವೇ ಇಲ್ಲ. ಸಕ್ಕರೆ, ಮೇವು, ಮಧುಕೋಡ್, ಬಳ್ಳಾರಿ ಬ್ರದರ್ಸ್, ಐಪಿಎಲ್, ಬಿಸಿಸಿಐ, ಸತ್ಯಂ, ಆದರ್ಶ ಸೊಸೈಟಿ ಫ್ಲಾಟ್ಸ್, ರಾಡಿಯಾ ಟೇಪ್ಸ್, CWG, 2ಜಿ ಸ್ಪೆಕ್ಟ್ರಮ್‌ಗೆ ಸಂಬಂಧಿಸಿದ ಹಗರಣದಲ್ಲಿ ಗುಳುಂ ಆಗಿರುವ ಕೋಟಿಗಳೆಷ್ಟು? ಇಲ್ಲಿ ಹೆಸರಿಸಿರುವುದು ಕೆಲವು ಹಗರಣಗಳಷ್ಟೆ. ಅವುಗಳ ಪಟ್ಟಿ ತಯಾರಿಸಿದರೆ, ಅದು ಪುರಾಣದ ಹನುಮಂತನ ಬಾಲದಂತಾಗುವುದರಲ್ಲಿ ಸಂದೇಹವೇ ಇಲ್ಲ! ಉಗ್ರ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಪಕ್ಷದ ಸರ್ಕಾರವಿದ್ದಾಗಲೇ Coffin Scam (ಶವಪೆಟ್ಟಿಗೆಗಳ ಹಗರಣ) ಜರುಗಿದ್ದು. ತಾಯ್ನಾಡಿನ ಸೇವೆಯಲ್ಲಿ ಮಡಿದ ವೀರ ಯೋಧರ ವಿಷಯದಲ್ಲೂ ಈ ಹಗರಣಕೋರರ ಲಕ್ಷ್ಯವಿದ್ದದ್ದು ತಮ್ಮ ಲೂಟಿಯ ಮೇಲೆ ಮೇರಾ ಭಾರತ್ ಮಹಾನ್!! ಈಗ ಸುದ್ದಿಯಲ್ಲಿರುವ 2G ಸ್ಪೆಕ್ಟ್ರಮ್ ಹಗರಣವಂತೂ ಇದುವರೆಗೆ ಜರುಗಿದ ಹಗರಣ

ಗಳಲ್ಲೇ 'Mother Of all Scams' ಎನ್ನಬಹುದು ಈ ಹಗರಣಗಳಿಗೂ ನವ ಆರ್ಥಿಕ ನೀತಿಗಳಿಗೂ ಸಂಬಂಧವಿದೆಯೇ?

ಉದಾರೀಕರಣದ ಯುಗದಲ್ಲಿ ಹಗರಣಗಳೂ ಉದಾರವಾಗಿ ಜರುಗುತ್ತಿವೆಯಾ? ಈ ಸುಧಾರಣೆಗಳು ಜಾರಿಯಾಗುವ ಮುನ್ನ ಬೊಫೋರ್ಸ್ ಹಗರಣ ಸುದ್ದಿ ಮಾಡಿತ್ತು. ಇದರ ಮೊತ್ತ ಸುಮಾರು 64 ಕೋಟಿ ರೂಗಳಷ್ಟಿತ್ತು. ಈಗಿನ ಹಗರಣಗಳ ಮೊತ್ತಕ್ಕೆ ಸಂಬಂಧಿಸಿ ಹೇಳುವುದಾದರೆ ಇದೊಂದು Peanut ಆಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

1991ರ ನಂತರ ಆರ್ಥಿಕ ಕೊರತೆ (Fiscal Deficit) ಸ್ವಲ್ಪ ಸಮಯ ಕಡಿಮೆಯಾಗಿತ್ತು. ಆದರೆ ಪುನಃ ಅದು 1991ರಲ್ಲಿ ಇದ್ದ ಪರಿಸ್ಥಿತಿಗೆ ಮರಳಿತು. ಈಗ ಅದು ತುಯ್ದಾಡುತ್ತಲೇ ಇದೆ ಈ ಅವಧಿಯಲ್ಲಿ ಭಾರತದ ವಿದೇಶಿ ವಿನಿಮಯದ ಮಿಸಲು (Reserves) ಏರಿತು. NRI ಠೇವಣಿಗಳು, ವಿದೇಶಿ ಸಾಂಸ್ಥಿಕ ಹೊಡಿಕೆ (FII) ಮತ್ತು ವಿದೇಶಿ ನೇರ ಹೊಡಿಕೆ (FdI)ಗಳ ಒಳಹರಿವು ಹೆಚ್ಚಿತು. ಸಾಫ್ಟ್‌ವೇರ್ ರಫ್ತುಗಳು ಮತ್ತು ಐಟಿ ಸೇವೆಗಳು ವಿದೇಶಿ ವಿನಿಮಯದ ಗಳಿಕೆಗಳನ್ನು ವೃದ್ಧಿಸಿದವು. ಆದರೆ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗಗಳು ಕ್ಷೀಣಿಸಿದವು. ಏಕೆಂದರೆ ಜಾಗತೀಕರಣದ ಸವಾಲುಗಳನ್ನು ಎದುರಿಸಲು ಅಧಿಕ ಬಂಡವಾಳದ ಕೈಗಾರಿಕೆಗಳಿಗೆ ಒತ್ತು ನೀಡಲಾಯಿತು. ಮುಕ್ತ ಮಾರುಕಟ್ಟೆಯ ಆರ್ಥಿಕ ವಾತಾವರಣದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ಮತ್ತು ಅವುಗಳ ಕಾರ್ಯಾಚರಣೆಗಳು ಸುಗಮವಾಗುವಂತೆ ಕ್ರಮಗಳನ್ನು ಜರುಗಿಸಲಾಯಿತು. ಉದಾರ ಆಮದುಗಳು ಮತ್ತು ಕೆಲವು ಸುರಕ್ಷಣಾ ಕ್ರಮಗಳ ಹಿಂತೆಗೆತದಿಂದ ತೀವ್ರ ಧಕ್ಕೆಯಾದದ್ದು ಸಣ್ಣ ಕೈಗಾರಿಕೆಗಳ ಕ್ಷೇತ್ರಕ್ಕೆ. ಇದರಿಂದ ಈ ಕ್ಷೇತ್ರದಲ್ಲಿ ಉದ್ಯೋಗಗಳ ಉತ್ಪತ್ತಿಯು ಕುಂಠಿತಗೊಂಡಿತ್ತು.

ಈ ನವ ಆರ್ಥಿಕ ನೀತಿಗಳು ಹೆಚ್ಚಾಗಿ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಗಳ ಜನರಿಗೆ ಆಪ್ಯಾಯಮಾನವಾಗಿ ಕಂಡವು ಅನೇಕ ಬಗೆಯ ಗ್ರಾಹಕ ಸರಕುಗಳು ಭಾರತದ ಮಾರುಕಟ್ಟೆಗಳನ್ನು ಪ್ರವೇಶಿಸಿದವು 'ಒಳ್ಳೆಯ ಜೀವನ' ನಡೆಸಲು ಬೇಕಾದ ಉಪಭೋಗ ವಸ್ತುಗಳು ಸುಲಭವಾಗಿ ದೊರಕುವುದೆಂಬ ಭರವಸೆ ನೀಡಲಾಯಿತು. ಉಳಿತಾಯಕ್ಕಿಂತ ಹೆಚ್ಚಿನ ಮಟ್ಟದಲ್ಲಿ ವೆಚ್ಚಮಾಡಿಸುವಂಥ ಪರಿಸ್ಥಿತಿ ನಿರ್ಮಾಣವಾಯಿತು ಮಧ್ಯಮ ವರ್ಗಗಳಗೆ ಉದಾರವಾದ ಸಾಲಗಳು ದೊರಕಿದವು. ಉಪಭೋಗವಾದ ವಿಜೃಂಭಿಸಿ, ಈ ವರ್ಗದ ಜನರು ಪಾಶ್ಚಿಮಾತ್ಯ ಉಪಭೋಗಿ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಪ್ರಾರಂಭಿಸಿದರು.

ಆದರೆ ಈ ಥಳಕುಗಳ ಜೊತೆಯಲ್ಲೇ ಗಾಢಾಂಧಕಾರವೂ ಪಸರಿಸಿತು. Shining india ಮತ್ತು Dark Sadie ನಡುವಿನ ಕಂದರ ವರ್ಷಗಳುರುಳುತ್ತಿರುವಂತೆ ಜಾಸ್ತಿಯಾಗುತ್ತಲೇ ಇದೆ. ಇದರ ಪರಿಣಾಮವಾಗಿ ಭಾರತ ವಿಶ್ವದ ಅಭಿವೃದ್ಧಿಯ ನಕಾಶೆಯಲ್ಲಿ ಕನಿಷ್ಟ ಸ್ಥಾನದಲ್ಲೇ ಇದೆ. ಅಸಮತೆಯಿಂದಲೇ ನಮ್ಮ ರಾಷ್ಟ್ರದ ಅನೇಕ ಭಾಗಗಳಲ್ಲಿ ಪ್ರಕ್ಷುಬ್ಧ ವಾತಾವರಣವಿದೆ. ಅಶಾಂತಿ ಹೆಚ್ಚುತ್ತಿದೆ ಗೋಡೆಯ ಮೇಲಿನ ಬರಹ ನಿಚ್ಚಳವಾಗಿ ಕಾಣಿಸುತ್ತಿದೆ. ಸುಧಾರಣೆಗಳು, ತಮ್ಮ ನೈಜವಾದ ಅರ್ಥದಲ್ಲಿ, ಬಹುಜನರಿಗೆ ತಲುಪಬೇಕಿರುವುದು ವರ್ತಮಾನದ ತುರ್ತು. □

ಸಂಪಾದಕರೊಡನೆ ಸಂವಾದ

ಬಹಿಷ್ಕಾರಕ್ಕೆ ಅಂತ್ಯ ಯಾವಾಗ?

ಅರ್ ಎಸ್ ಮಾಲಗತ್ತಿ ಸುರಪುರ.

ಮಾನ್ಯ ಸಂಪಾದಕರೇ,

ಕುಲಕಸುಬು ಧಿಕ್ಕರಿಸಿದ ದಲಿತರಿಗೆ ಬಹಿಷ್ಕಾರ ಎಂಬ ಕನ್ನಡದ ಪ್ರಮುಖ ಪತ್ರಿಕೆಯೊಂದಲ್ಲಿ ಪ್ರಕಟವಾದ ಸುದ್ದಿ ಓದಿ ಮನಸ್ಸಿಗೆ ಬಹಳ ನೋವಾಯಿತು. ಇದು ನಿಜಕ್ಕೂ ಪ್ರಜ್ಞಾವಂತ ಸಮಾಜ ತಲೆತಗ್ಗಿಸುವಂತ ವಿಚಾರವಾಗಿದೆ. ಸ್ವತಂತ್ರ ಭಾರತ ಆರು ದಶಕಗಳೇ ಕಳೆದರೂ ಸ್ವತಂತ್ರವಾಗಿ ಬದುಕಲು ಬಿಡದ ಹೇಯ ಮನಸ್ಸುಗಳು ಭಾರತ ಮಾತೆಯ ಮಡಿಲಲ್ಲಿ ಇದ್ದಾರೆ ಎಂಬುವುದು ದುರಂತದ ವಿಷಯವಾಗಿದೆ.

ಶತಶತಮಾನಗಳಿಂದ ನಂಬಿ ಮಾಡಿಕೊಂಡು ಬಂದ ಕುಲಕಸಬುಗಳನ್ನು ಪ್ರಜ್ಞಾವಂತ ದಲಿತ ಯುವಕರಿಗೆ ಕೀಳರಿಮೆಯಾಗಿ ಕಾಣುವುದು ಸಹಜ. ಹಿರಿಯರು ಮಾಡಿಕೊಂಡು ಬಂದ ಈ ಕೆಲಸವು ಇಂದಿನ ಯುವಕರು ನಿರಾಕರಿಸುವ ಧೈರ್ಯ ತೋರಿದ್ದಕ್ಕೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಬೇಕಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕೆರೆಗೋಡು ಗ್ರಾಮದವರು ಬಹಿಷ್ಕಾರಕ್ಕೆ ಒಳಗಾದ ನತದೃಷ್ಟ ಕುಟುಂಬಗಳು. ಸತ್ತ ದನಕರುಗಳನ್ನು ಹೊರಸಾಗಿಸಲು, ಮದುವೆ-ಮುಂಜಿ, ಉತ್ಸವಗಳ ಸಂದರ್ಭದಲ್ಲಿ ತಮಟೆ ಬಾರಿಸುವುದು ಗ್ರಾಮದ ನಾನಾ ಕೆಲಸಗಳನ್ನು ಮಾಡಲು ನೀರಾಕರಿಸಿದ ಏಳು ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಬಹಿಷ್ಕಾರಕ್ಕೆ ಒಳಗಾಗಿರುವವರ ಬಗ್ಗೆ ಸಾಮಾಜಿಕ ಕಳಕಳಿ ಹೊಂದಿದ ವ್ಯಕ್ತಿ ಇವರ ಪರ ಮಾತನಾಡಿದರೆ ಅವನ ಪರಿಸ್ಥಿತಿ ಇನ್ನೂ ನಿಕೃಷ್ಠ. ಅಂತಹ ವ್ಯಕ್ತಿಗೆ ದಂಡವಿದಿಸಿದ್ದು ಉಂಟು. ತಮ್ಮ ಸಮಾಜದ ದೃಷ್ಠಿಯಲ್ಲಿ ಅವನು ಖಳನಾಯಕ.

ಈ ಬಹಿಷ್ಕಾರ ಎಂಬುದು ಕೇವಲ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗದೆ ಇಡಿ ದೇಶಕ್ಕೆ ಮಾರಕವಾದಂತ ಜ್ವಲಂತ ಸಮಸ್ಯೆಯಾಗಿದೆ. ಇಂತಹ ಘಟನೆಗಳು ಹಲವಾರು ನಡೆದರೂ ಮೇಲ್ವರ್ಗದ ಜನರಿಗೆ ಹೆದರಿ (ಅಂಜಿ) ಪ್ರಕರಣ ದಾಖಲಾಗದೆ, ದಾಖಲಾದರೂ ಅದಕ್ಕೆ ಯಾವುದೇ ಫಲಿತಾಂಶ ಸಿಗದೆ ರಾಜಿ ಮಾಡಿಕೊಂಡು ಬದುಕವ ದಲಿತ ಕುಟುಂಬಗಳು ಸಾಕಷ್ಟಿವೆ.

ಆಧುನಿಕ ಸಮಾಜ ಎಷ್ಟೆ ಮುಂದುವರಿದಿದೆ ಎಂದು ಜಂಬಕೊಚ್ಚಿಕೊಂಡರೂ ಅಸ್ಪೃಶ್ಯತೆ, ಜಾತಿಯತೆ ಎಂಬ ಭೂತ ನಮ್ಮ ಸಮಾಜದ ಜನರಿಂದ ದೂರವಾಗುತ್ತಿಲ್ಲ ಎಂದರೆ ನಮ್ಮ ಸಂಸ್ಕೃತಿ ಮಹಿಮೆಯೇ ಅಥವ ಸಂಸ್ಕೃತಿಯೇ ಜಾತಿಯತೆಯೆ ಎಂಬುವುದು ತೋಚದ ವಿಚಾರ.

ಭಾರತಿಯ ಸಂಸ್ಕೃತಿಯ ಬಗ್ಗೆ ಘಂಟಾಗೋಷವಾಗಿ ಭಾಷಣ ಬೀಗಿಯುತ್ತಿರುವ ಜನತೆ ಭಾಷಣದಲ್ಲಿಯೇ ಸಂಸ್ಕೃತಿ ಉಳಿಸಿಕೊಂಡಿದ್ದಾರೆಯೆ ಹೊರತು ಕೃತಿಯಲ್ಲಿ ಅಲ್ಲ. ಸಂಸ್ಕೃತಿ ಎಂದರೆ ಸ್ತ್ರೀಯರಿಗೆ ಹಣೆಯಲ್ಲಿ ಕುಂಕುಮ, ಕಿವಿಯಲ್ಲಿ ಓಲೆ, ಕೈಯಲ್ಲಿ ಬಳೆ, ಇಳಕಲ್‌ಸೀರೆ ಉಟ್ಟು ಹಳ್ಳಿ ಗೌರಮ್ಮನಂತೆ ನಾಲ್ಕು ಗೋಡೆಗಳ ಮಧ್ಯೆದಲ್ಲಿ ಇರಬೇಕು ಎಂದು ಕಟ್ಟುಪಾಡು ಹಾಕಿದ್ದೆ ಸಂಸ್ಕೃತಿ ಎಂದು ನಂಬಿದ್ದ ಹೇಯ ಮನಸ್ಸುಗಳಿಗೆ ಸಂಸ್ಕೃತಿಯ ಆಳ ಅರಿವಾದರೂ ಹೇಗೆ ಆದೀತು.

ಅಸ್ಪೃಶ್ಯತೆ ಹೋಗಲಾಡಿಸುವುದೇ ನನ್ನ ಗುರಿ ಎಂದು ಪಾದಯಾತ್ರೆ ಕೈಗೊಂಡ ಪೇಜಾವರ ಸ್ವಾಮಿಜೀಯನ್ನು ತುಂಬು ಹೃದಯದಿಂದ ಪಾದ ಪೂಜೆ ಮಾಡಿ ಸ್ವಾಗತಿಸಿದ ದಲಿತರು ಧನ್ಯರೊ ಅಥವ ಸಮಾಜದಿಂದ ಬಹಿಷ್ಕಾರ ಹಾಕಿ ಹೊರದೂಡಲ್ಪಟ್ಟ ಮೇಲ್ವರ್ಗ ಧನ್ಯವೋ ಎಂಬುವುದನ್ನು ಪ್ರಜ್ಞಾವಂತ ಧಾರ್ಮಿಕ ನಾಯಕರು ಹೇಳಬೇಕಾಗಿದೆ. ನೀವು ಪಾದಯಾತ್ರೆ ಕೈಗೊಂಡು ಮೂರು ತಿಂಗಳಲ್ಲಿ ಫಲಶೃತಿ ಎಂಬಂತೆ ಮೇಲ್ವರ್ಗ ಕೊಟ್ಟ ದೊಡ್ಡ ಕಾಣಿಕೆ?

ಪಾದಯಾತ್ರೆಯಿಂದ ಅಸ್ಪೃಶ್ಯತೆ ಅಳಿಸಿ ಹಾಕುತ್ತೆವೆ ಎಂದು ನಂಬಿದ ಧಾರ್ಮಿಕ ನಾಯಕರಿಗೆ ಒಂದು ಮಾತನ್ನು ಹೇಳಬಯಸುವೆ. ಅಸ್ಪೃಶ್ಯತೆ ಅಳಿಸಿ ಹಾಕುವುದಲ್ಲ ಅದರ ಬುಡ ಸಹ ನಡುಗಿಸಲು ಸಾಧ್ಯವಿಲ್ಲ. ಹಿಂದೆ ಹಲವಾರು ಸಮಾಜ ಸುಧಾರಕರು ಮತ್ತು ಧಾರ್ಮಿಕ ನಾಯಕರು ಈ ಕೆಲಸಕ್ಕೆ ಕೈ ಹಾಕಿ ವಿಫಲರಾಗಿದ್ದೆ ಹೆಚ್ಚು..

ಸಮಾಜದಲ್ಲಿರುವ ಅಸ್ಪೃಶ್ಯತೆ, ಜಾತಿಯತೆ ಹೋಗಲಾಡಿಸಬೇಕಾದರೆ ಶಿಕ್ಷಣವೊಂದೆ ಪ್ರಮುಖ ಅಸ್ತ್ರ ಎಂದು ನಂಬಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರ ಕನಸು ಇಂದು ಭಗ್ನವಾಗಿದೆ. ಸುಶಿಕ್ಷಿತ ನಾಗರಿಕರೆ ಇಂತಹ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ ಎಂಬುವುದು ದುರದೃಷ್ಟ ಕರ ಸಂಗತಿ. ಜತೆಗೆ ಜಾತಿ ಸಂಘಟನೆ ಕಟ್ಟಿ ಬೆಳೆಸಲಾಗುತ್ತದೆ. ಇದಕ್ಕೆ ಹಲವು ರಾಜಕೀಯ ನಾಯಕರು ಮತ್ತು ಧಾರ್ಮಿಕ ನಾಯಕರು ನೀರು ಹಾಕಿ ಪೋಷಿಸುತ್ತಿದ್ದಾರೆ.

ಹೀಗಾಗಿ ಶಿಕ್ಷಣದಿಂದ ನಾಶವಾಗಬೇಕಾಗಿದ್ದ ಅಸ್ಪೃಶ್ಯತೆ ಮರುಜೀವ ಪಡೆಯುತ್ತಿದೆ. ಅದರ ಬೇರು ಇನ್ನಷ್ಟು ಗಟ್ಟಿಯಾಗುತ್ತಿವೆಯೇ ಹೊರತು ಕೊಳೆಯುತ್ತಿಲ್ಲ. ಆಧುನಿಕ ಸಮಾಜದ ಮುಂದೆ ಇರುವ ಇನ್ನೊಂದು ಅಸ್ತ್ರ ಎಂದರೆ ಕಾನೂನು, ಈ ಖಡ್ಗದ ಮೂಲಕ ಅಸ್ಪೃಶ್ಯತೆ ಅಳಿಸಿ ಹಾಕಲು ಸಾಧ್ಯವಿದೆಯಾದರೂ ಅಂತಹ ಕಾನೂನುಗಳು ಸಂವಿಧಾನದಲ್ಲಿದ್ದರೂ ಜಾರಿ ಮಾಡುವವರು ಯಾರು? ಜಾರಿ ಮಾಡಿದ ಕಾನೂನುಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವವರು ಯಾರು? □

ದೈತ್ಯಾಕಾರ ತಾಳಿರುವ ಕೋಮುವಾದ ಮತ್ತು ರಾಜಕಾರಣಿಗಳ ಮೊಸಳೆ ಕಣ್ಣೀರು

ಸುರೇಶ್ ಭಟ್

ಕರಾವಳಿ ಜಿಲ್ಲೆಗಳಲ್ಲಿ ಕೋಮುವಾದಿಗಳ ಅಟ್ಟಹಾಸ ಮತ್ತೊಮ್ಮೆ ತಾರಕಕ್ಕೇರುತ್ತಿದೆ. ಮತಾಂತರದ ಗುಮ್ಮಕ್ಕೆ ಈ ಬಾರಿ ಗುರಿಯಾಗಿರುವುದು ವಿವಿಧ ಕ್ರೈಸ್ತ ಸಂಘಟನೆಗಳು ನಡೆಸುತ್ತಿರುವಂತಹ ಮಕ್ಕಳ ಅನಾಥಾಶ್ರಮ ಮತ್ತು ಹಾಸ್ಟೆಲ್‌ಗಳು. ಕಳೆದ ಸುಮಾರು ಎರಡು ವಾರಗಳ ಅವಧಿಯಲ್ಲಿ ಬಜರಂಗಿಗಳು ಕಕ್ಕಿರುವ ಕೋಮು ವಿಷಕ್ಕೆ ಹಳೆಯಂಗಡಿಯ "ಅಬೆನೆಜರ್ ಹೋಂ", ಮಂಗಳೂರು ಬಿಜೈನ "ಆಶ್ರಯ", ಕೋಟೆಕಾರಿನ ಸ್ಟೆಲ್ಲಾ ಮೇರಿ ಕಾನ್ವೆಂಟ್‌ನ ಅನಾಥಾಶ್ರಮಗಳ ಮುದ್ದು ಪುಟಾಣಿಗಳು ಬಲಿಯಾಗಿವೆ. ಸೂರ್ಯನ ಬೆಳಕಿನಷ್ಟೆ ಸ್ಪಷ್ಟವಾಗಿರುವ ಈ ಕೋಮುವಾದಿ ಕೃತ್ಯಗಳಿಗೆ ಅಧಿಕೃತ ಮನ್ನಣೆ ಗಿಟ್ಟಿಸಿಕೊಳ್ಳಲು ಬಾಲ ಕಲ್ಯಾಣ ಸಮಿತಿ, ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳ ನೆರವು ಪಡೆದುಕೊಳ್ಳಲಾಗಿದೆ. ಇದರರ್ಥ ಏನಾಯಿತೆಂದರೆ ಚರ್ಚ್ ದಾಳಿಗಳ ಮಾದರಿಯಲ್ಲಿ ಇದೂ ಕೂಡ ಅಲ್ಪ ಸಂಖ್ಯಾತ ಕ್ರೈಸ್ತರನ್ನು ಬಗ್ಗುಬಡಿಯುವ ಸಲುವಾಗಿರುವ ಒಂದು ಸರಕಾರಿ ಪ್ರೇರಿತ ಮತ್ತು ಕೃಪಾಪೋಷಿತ ಕಾರ್ಯಕ್ರಮ.

ಅದೇ ರೀತಿ ಮತ್ತೊಂದು ಅಲ್ಪಸಂಖ್ಯಾತ ಸಮುದಾಯವಾಗಿರುವ ಮುಸ್ಲಿಮರ ವಿರುದ್ಧದ ತರಹೇವಾರು ಕಾರ್ಯಾಚರಣೆಗಳಲ್ಲಿ ಒಂದಾದ ಜಾನುವಾರು ಸಾಗಾಟಗಾರರ ಮೇಲಿನ ಹಲ್ಲೆಗಳು ಈಗಾಗಲೆ ಅನೇಕ ಸಾವುನೋವುಗಳಿಗೆ ಕಾರಣವಾಗಿವೆ. ಬೆಳೆಯುತ್ತಿರುವ ಜೀವ ಬಲಿಗಳ ಪಟ್ಟಿಯಲ್ಲಿ ಕೇವಲ ಮುಸ್ಲಿಮರಷ್ಟೆ ಅಲ್ಲ, ಪಾಟಾಳಿ ಕೃಷ್ಣಯ್ಯರಂತಹ ಹಿಂದೂಗಳೂ ಇದ್ದಾರೆ. ಈ ಪಟ್ಟಿಗೆ ಇತ್ತೀಚಿನ ಸೇರ್ಪಡೆ ದಯಾನಂದ ಶೆಟ್ಟಿ ಎಂಬ ಮತ್ತೊಬ್ಬ ಹಿಂದೂ ರೈತ. ವೀರಾವೇಶದ ಹೇಳಿಕೆಗಳನ್ನು ನೀಡುವ ಹಿರಿಯ ಪೊಲೀಸ್ ಅಧಿಕಾರಿಗಳು ಒಂದೋ ದಂತಗೋಪುರಗಳಲ್ಲಿದ್ದಾರೆ ಇಲ್ಲಾ ಜನರ ಕಣ್ಣಿಗೆ ಧೂಳೆರಚುತ್ತಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆನ್ನುವುದು ಸ್ಪಷ್ಟವಿದೆ. ಮೇಲಿಂದ ಮೇಲೆ ಸಂಭವಿಸುತ್ತಲೆ ಇರುವ ಕೋಮುವಾರು ಘಟನೆಗಳೇ ಇದಕ್ಕೆ ಸಾಕ್ಷಿ. ನಂಬಲೇಬೇಕಾಗಿರುವ ನಿಷ್ಠುರ ಸತ್ಯ ಏನೆಂದರೆ ಆಡಳಿತ ಯಂತ್ರದ ಇನ್ನಿತರ ಇಲಾಖೆಗಳಂತೆ ಪೊಲೀಸ್ ಇಲಾಖೆಯೊಳಗೂ ಬಹಳಷ್ಟು ಸಂಖ್ಯೆಯಲ್ಲಿ ಕೋಮುವಾದಿಗಳು ತೂರಿಕೊಂಡಿದ್ದಾರೆ.

ಬಾಲಾಶ್ರಮಗಳಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ಆ ಅಮಾಯಕ ಮಕ್ಕಳಲ್ಲಿ ಹೆಚ್ಚಿನವರು ಬೀದರ್ ಮುಂತಾದೆಡೆಯ ಬಡ ದಲಿತ ಕುಟುಂಬಗಳಿಂದ ಬಂದವರು. ಬಜರಂಗಿಗಳು ಕೇವಲ ದೂರು ಕೊಟ್ಟಿದ್ದರೆಂದಿದ್ದರೆ ಅದು ಬೇರೆ ವಿಷಯ. ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದರ ಬಗ್ಗೆ ಖಚಿತ ಮಾಹಿತಿ ಇದ್ದಲ್ಲಿ ಅದನ್ನು ಬಾಲ ಕಲ್ಯಾಣ ಸಮಿತಿಯ ಗಮನಕ್ಕೆ ತರುವುದು ಖಂಡಿತಾ ಎಲ್ಲ ನಾಗರಿಕರ ಅಥವಾ ಸಾಮಾಜಿಕ ಸಂಸ್ಥೆಗಳ ಕರ್ತವ್ಯ. ಅಲ್ಲಿಗೆ ಅವರ ಕೆಲಸ ಮುಗಿಯಿತು. ಮುಂದಿನ ಕ್ರಮ ಏನಿದ್ದರೂ ಅದು ಸರಕಾರದ ಅಧಿಕೃತ ಸಂಸ್ಥೆಗಳಿಗೆ ಬಿಟ್ಟ ವಿಚಾರ. ಮಾಧ್ಯಮದವರನ್ನು ಅಥವಾ/ಮತ್ತು ಪೊಲೀಸರನ್ನು ಕಟ್ಟಿಕೊಂಡು ದಾಳಿ ನಡೆಸುವ ಹಕ್ಕು ಇನ್ಯಾರಿಗೂ ಇಲ್ಲ. ಆದರೆ ಇಲ್ಲಿ "ಅಬೆನೆಜರ್ ಹೋಂ" ಒಳಗೆ ಅತಿಕ್ರಮ ಪ್ರವೇಶ ಮಾಡಿ ಪಾಸ್ಟರ್ ಮೇಲೆ ಹಲ್ಲೆ ನಡೆಸಿದ ಬಜರಂಗ ದಳದ ವಿಕೃತ ಕಾಮಿಗಳು 14ರ ಹರೆಯದ ಚಿಕ್ಕ ಬಾಲಕಿಯನ್ನು ತನ್ನ ಮೇಲೆ ಲೈಂಗಿಕ ದೌರ್ಜನ್ಯ ಆಗಿದೆಯೆಂದು ಸುಳ್ಳು ಹೇಳುವಂತೆ ಬಲಾತ್ಕರಿಸಿದ್ದಾರೆ. ಆಕೆ ಪಾಪ ಅತ್ತುಕೊಂಡು ಮಾಧ್ಯಮದವರೊಂದಿಗೆ ಹಾಗೆ ಹೇಳಿದ್ದಾಳೆ.

ಆದರೆ ಯಾವುದೇ ಲೈಂಗಿಕ ದೌರ್ಜನ್ಯ ನಡೆದಿಲ್ಲವೆಂಬ ಸತ್ಯಾಂಶ ಬಾಲ ಕಲ್ಯಾಣ ಸಮಿತಿ ವತಿಯಿಂದ ನಡೆಸಲಾದ ವೈದ್ಯಕೀಯ ಪರೀಕ್ಷೆಯಲ್ಲಿ ನಂತರ ಖಚಿತಪಟ್ಟಿದೆ. ಸ್ಟೆಲ್ಲಾ ಮೇರಿ ಅನಾಥಾಲಯದ 4ರಿಂದ 7ನೆ ತರಗತಿಯ ಸುಮಾರು 41 ಮಕ್ಕಳು ರಜೆಯಲ್ಲಿ ಊರಿಗೆ ಹೊರಟಿದ್ದರು. ಏಕಾಏಕಿಯಾಗಿ ಬಸ್ಸಿಗೆ ನುಗ್ಗಿದ ಬಜರಂಗಿ ಪಿಶಾಚಿಗಳು ಕಿಡ್ನಿ ತೆಗೆಯುತ್ತೇವೆಂದು ಆ ಎಳೆ ಕಂದಮ್ಮಗಳನ್ನು ಬೆದರಿಸಿದ್ದಾರೆ. ಬಜರಂಗಿಗಳ ದೂರಿನ ಆಧಾರದ ಮೇರೆಗೆ ದಾಳಿ ನಡೆಸಿದ ಬಾಲ ಕಲ್ಯಾಣ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆಗಳು ಆ ಪುಟಾಣಿಗಳನ್ನೆಲ್ಲಾ ಬೋಂದೆಲ್‌ನಲ್ಲಿರುವ ಸರಕಾರಿ ಮಕ್ಕಳ ವೀಕ್ಷಣಾಲಯಕ್ಕೆ ಸಾಗಿಸಿ, ಅನ್ನನೀರಿಲ್ಲದೆ ಹಲ ವಾರು ಗಂಟೆಗಳ ಕಾಲ ಕೂಡಿಹಾಕಿ ರಾತ್ರಿ 10 ಗಂಟೆ ನಂತರವಷ್ಟೆ ಬಿಟ್ಟುಕೊಟ್ಟಿದ್ದಾರೆ. ಪೊಲೀಸರು "ಅಬೆನೆಜರ್ ಹೋಂ"ನ ಪಾಸ್ಟರ್ ಮತ್ತು "ಆಶ್ರಯ"ದ ಮುಖ್ಯಸ್ಥ ಇವರಿಬ್ಬರ ಮೇಲೆ ವಿವಿಧ ಆರೋಪಗಳನ್ನು ಹೊರಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ಅಂದ ಹಾಗೆ "ಆಶ್ರಯ"ಕ್ಕೆ ದೌಡಾಯಿಸಿದ ಬಿಜೆಪಿ ಎಂಎಲ್‌ಸಿ ಕ್ಯಾ ಗಣೇಶ್ ಕಾರ್ಣಿಕ್, ಮಾಜಿ ಮಂತ್ರಿ ನಾಗರಾಜ ಶೆಟ್ಟಿಯಂತಹವರಿಗೆ ಅಲ್ಲೇನು ಕೆಲಸ? ಅವರನ್ನು ಕರೆದವರಾರು?

ಕಂಡಕಂಡಲ್ಲಿ ದಾಳಿ, ದೈಹಿಕ ಹಲ್ಲೆ ಇತ್ಯಾದಿ ನಡೆಸಲು ಬಜರಂಗ ದಳಕ್ಕೆ ಪೊಲೀಸ್ ಇಲಾಖೆ ವತಿಯಿಂದ ಅಧಿಕೃತ/ಅನಧಿಕೃತ ಅನುಮತಿ ಪತ್ರ ಏನಾದರೂ ನೀಡಲಾಗಿದೆಯೇ ಎಂಬ ಅನುಮಾನ ಸಹಜವಾಗಿಯೇ ನಾಗರಿಕರನ್ನು ಕಾಡುತ್ತಿದೆ. ಇಲ್ಲವೆಂದಾದರೆ ಇಷ್ಟರಲ್ಲಾಗಲೆ ಬಜರಂಗ ದಳದ ವಿರುದ್ಧ ಮಾತ್ರವಲ್ಲ ಅದಕ್ಕೆ ಚಿತಾವಣೆ ನೀಡುತ್ತಿರುವವರ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗಿತ್ತು. ಬದಲು ನಪುಂಸಕರಂತೆ ಕೋಮುವಾದಿಗಳ ಪರವಾಗಿ ವರ್ತಿಸುವುದು ತಾವು ತೊಟ್ಟಿರುವ ಸಮವಸ್ತ್ರಕ್ಕಷ್ಟೆ ಅಲ್ಲ, ಭಾರತದ ಸಂವಿಧಾನಕ್ಕೇ ಮಾಡುವ ಘೋರ ಅಪಚಾರ. ಕಾನೂನುಬಾಹಿರ ಕೃತ್ಯಗಳನ್ನು ಕಂಡೂ ಕಾಣದಂತಿರುವುದು ಜನಸಾಮಾನ್ಯರಿಗೆ ಏನು ಸಂದೇಶವನ್ನು ರವಾನಿಸುತ್ತದೆ ಎಂಬ ಕನಿಷ್ಠ ಅರಿವಾದರೂ ಪೊಲೀಸ್ ಇಲಾಖೆಗೆ ಇರಬೇಕು.

ಇನ್ನು ಬಜರಂಗ ದಳವೆಂಬ ವಾನರಸೇನೆಯ ದೂರು ಬಂದಾಕ್ಷಣ ಪೂರ್ವಾಪರ ಯೋಚಿಸದೆ ಛಂಗನೆ ನೆಗೆದು ಧಾವಿಸುವ ಇದೇ ಬಾಲ ಕಲ್ಯಾಣ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಆರೆಸ್ಸೆಸ್ ಮಕ್ಕಳ ಕಳ್ಳಸಾಗಾಣಿಕೆ ಮಾಡುತ್ತಿರುವ ಕುರಿತ ಪುರಾವೆ ಸಮೇತ ದೂರುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಸೈಫ್ ಎಂಬ 16 ವರ್ಷದ ಬಾಲಕನನ್ನು ಕಳ್ಳತನದ ಸುಳ್ಳು ಆರೋಪದ ಮೇರೆಗೆ ಠಾಣೆಗೊಯ್ದು ಸರಪಳಿಯಿಂದ ಕಂಬಕ್ಕೆ ಬಿಗಿದು ಹಿಂಸಿಸಿದ ಕಾವೂರು ಪೊಲೀಸರ ವಿರುದ್ಧ ಏಕೆ ದೂರು ದಾಖಲಿಸಿಲ್ಲ?

ಸದ್ಯದ ದಾಳಿಗಳ ಹಿಂದೆ ಒಂದು ವ್ಯವಸ್ಥಿತ ಸಂಚು ಅಡಗಿದೆ ಎಂಬುದಕ್ಕೆ ಕನಿಷ್ಠ ಎರಡು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಚರ್ಚ್ ದಾಳಿ ಕುರಿತಂತೆ ನ್ಯಾ ಸೋಮಶೇಖರ ಆಯೋಗ ನೀಡಿರುವ ವರದಿ ನ್ಯಾಯಯುತವಲ್ಲ, ಅದು ಸತ್ಯಕ್ಕೆ ದೂರವಾಗಿದೆ ಎಂಬುದನ್ನು ಬಯಲಿಗೆಳೆದ ನ್ಯಾ ಸಲ್ಡಾನಾರ ವರದಿ,

ಅಲ್ಪಸಂಖ್ಯಾತ ಸಮುದಾಯವಾಗಿರುವ ಮುಸ್ಲಿಮರ ವಿರುದ್ಧದ ತರಹೇವಾರು ಕಾರ್ಯಾಚರಣೆಗಳಲ್ಲಿ ಒಂದಾದ ಜಾನುವಾರು ಸಾಗಾಟಗಾರರ ಮೇಲಿನ ಹಲ್ಲೆಗಳು ಈಗಾಗಲೆ ಅನೇಕ ಸಾವುನೋವುಗಳಿಗೆ ಕಾರಣವಾಗಿವೆ. ಬೆಳೆಯುತ್ತಿರುವ ಜೀವ ಬಲಿಗಳ ಪಟ್ಟಿಯಲ್ಲಿ ಕೇವಲ ಮುಸ್ಲಿಮರಷ್ಟೆ ಅಲ್ಲ, ಪಾಟಾಳಿ ಕೃಷ್ಣಯ್ಯರಂತಹ ಹಿಂದೂಗಳೂ ಇದ್ದಾರೆ. ಈ ಪಟ್ಟಿಗೆ ಇತ್ತೀಚಿನ ಸೇರ್ಪಡೆ ದಯಾನಂದ ಶೆಟ್ಟಿ ಎಂಬ ಮತ್ತೊಬ್ಬ ಹಿಂದೂ ರೈತ. ವೀರಾವೇಶದ ಹೇಳಿಕೆಗಳನ್ನು ನೀಡುವ ಹಿರಿಯ ಪೊಲೀಸ್ ಅಧಿಕಾರಿಗಳು ಒಂದೋ ದಂತಗೋಪುರಗಳಲ್ಲಿದ್ದಾರೆ ಇಲ್ಲಾ ಜನರ ಕಣ್ಣಿಗೆ ಧೂಳೆರಚುತ್ತಿದ್ದಾರೆ.

ದಾಳಿಗಳು ರಾಜ್ಯದ ಬಿಜೆಪಿ ಸರಕಾರದ ನೇರ ಕುಮ್ಮಕ್ಕಿನಿಂದ ನಡೆದಿರುವ ಸತ್ಯಾಂಶವನ್ನು ಇಡೀ ದೇಶದ ಮುಂದಿಟ್ಟಿವೆ. ಮಾತ್ರವಲ್ಲ ನ್ಯಾ. ಸೋಮಶೇಖರ ಆಯೋಗ ಮಾಡಿರುವ ಮತಾಂತರದ ಆರೋಪಗಳೂ ಸುಳ್ಳೆಂಬುದನ್ನು ಸಾಬೀತುಪಡಿಸಿದೆ. ಎರಡನೆಯದಾಗಿ ಕ್ರೈಸ್ತ ಯುವಕರ ಮೇಲೆ ಸುಳ್ಳು ಸುಳ್ಳೇ ಹೇರಲಾಗಿದ್ದ ಸುಮಾರು 338 ಪ್ರಕರಣಗಳನ್ನು ಹಿಂದೆಗೆದುಕೊಳ್ಳಬೇಕೆಂದು ರಾಜ್ಯಪಾಲರು ಸರಕಾರಕ್ಕೆ ಆದೇಶಿಸಿರುವ ಹಿನ್ನೆಲೆಯಲ್ಲಿ ಆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಇವೆಲ್ಲ ಬೆಳವಣಿಗೆಗಳ ಪರಿಣಾಮವಾಗಿ ಬಿಜೆಪಿಯ ಮಾತೃ ಸಂಘಟನೆ ಆರೆಸ್ಸೆಸ್‌ಗೆ ಭಾರೀ ಇರುಸುಮುರುಸಾಗಿದೆ. ಹೀಗಾಗಿ ಇತ್ತೀಚಿನ ಪುತ್ತೂರು ಸಮಾವೇಶದ ನಂತರ 'ಮತಾಂತರ'ದ ವಿಷಯವನ್ನು ಎತ್ತಿಕೊಂಡು ಮಗದೊಮ್ಮೆ ಕ್ರೈಸ್ತರನ್ನು ಗುರಿಯಾಗಿಸುವ ನಿರ್ಧಾರವೊಂದನ್ನು ಕೈಗೊಳ್ಳಲಾಗಿದೆಯೆಂದು ನಂಬಲು ಬಲವತ್ತರ ಕಾರಣಗಳಿವೆ.

ಪುತ್ತೂರು ಬೈಠಕ್ ನಂತರದ ಘಟನಾವಳಿಗಳನ್ನು ನೋಡಿ. ಸನ್ಮಾನ್ಯ ಡಾಕ್ಟರ್ ಚಿದಾನಂದ ಮೂರ್ತಿ ಮತ್ತು ನಿವೃತ್ತ ನ್ಯಾಯಾಧೀಶ ರಾಮಾ ಜೋಯಿಸರ ಜೋಡಿ ರಾಜ್ಯಪಾಲರನ್ನು ಭೇಟಿಯಾಗಿ ಮತಾಂತರದ ಬಗೆಗಿನ ವರದಿಯೊಂದನ್ನು ಸಲ್ಲಿಸುತ್ತದೆ. ನಂತರದ ದಿನಗಳಲ್ಲಿ ಮೂಲ್ಕಿಯ ಪೊಲೀಸರು ಅಲ್ಲಿನ ಒಂದು ಪ್ರೊಟೆಸ್ಟಾಂಟ್ ಚರ್ಚನ್ನು ಮುಚ್ಚುವಂತೆ ಆದೇಶಿಸುತ್ತಾರೆ! ತರುವಾಯದಲ್ಲಿ ಜಿಲ್ಲು ಕೆಟರರ್ಸ್, ಅಬೆನೆಜರ್ ಹೋಂ, ಆಶ್ರಯ, ಸ್ಟೆಲ್ಲಾ ಮೇರಿ ಕಾನ್ವೆಂಟ್ ಪ್ರಕರಣಗಳು ನಡೆದಿವೆ. ಮೇಲುನೋಟಕ್ಕೆ ಇವೆಲ್ಲವನ್ನೂ ಬಜರಂಗಿಗಳು ಮಾಡಿದ್ದಾರೆನ್ನುವುದೂ ನಿಜ. ಈಗ ಎಲ್ಲರೂ ಬಜರಂಗ ದಳಕ್ಕೆ ಧಿಕ್ಕಾರ ಕೂಗುತ್ತಿದ್ದಾರೆ.

ಆದರೆ ಇದನ್ನೆಲ್ಲ ಬಜರಂಗಿಗಳು ಅವರಷ್ಟಕ್ಕೇ ಮಾಡಿಲ್ಲ. ಅಲ್ಪಸಂಖ್ಯಾತರ ಮೇಲೆ ಹಲ್ಲೆ, ಕೋಮು ಗಲಭೆ ಇತ್ಯಾದಿಗಳನ್ನು ಬಜರಂಗ ದಳ ತನ್ನಿಷ್ಟ ಬಂದಂತೆ ನಡೆಸುವಂತಿಲ್ಲ. ಆ ಕೋಡಂಗಿ ಸೈನ್ಯವನ್ನು ಕುಣಿಸುವ ಸೂತ್ರಧಾರಿಗಳು ಬೇರೆಯೆ ಇದ್ದಾರೆ. ನಿರ್ಧಾರಗಳನ್ನು ತೆಗೆದುಕೊಂಡು, ಯೋಜನೆಗಳನ್ನು ರೂಪಿಸಿ, ಹಣಕಾಸು ವ್ಯವಸ್ಥೆಮಾಡಿ ಅಂತಿಮವಾಗಿ ಬಜರಂಗ ದಳದ ಮೂಲಕ ಕಾರ್ಯರೂಪಕ್ಕೆ ಇಳಿಸುವವರು ಅವರು. ಆದುದರಿಂದ ಬಜರಂಗಿಗಳನ್ನು ನಿಯಂತ್ರಿಸುತ್ತಿರುವ ಆರೆಸ್ಸೆಸ್ ವಿರುದ್ಧವೂ ಧಿಕ್ಕಾರ ಕೂಗಬೇಕಾಗಿದೆ.

ಪ್ರಶ್ನೆ: ಆರೆಸ್ಸೆಸ್‌ಗೂ ಈ ಬಜರಂಗ ದಳಕ್ಕೂ ಏನು ಸಂಬಂಧ? ಉತ್ತರ: ಬಜರಂಗ ದಳ ಎಂಬುದು ಆರೆಸ್ಸೆಸ್‌ನ ಧಾರ್ಮಿಕ ಶಾಖೆಯಾಗಿರುವ ವಿಶ್ವ ಹಿಂದೂ ಪರಿಷತ್ತಿನ ಉಪಶಾಖೆ. ಮೇಲ್ವರ್ಗಗಳಿಗೆ ಸೇರಿದ ಮತ್ತು ಧಾರ್ಮಿಕ ಮುಖವಾಡ ಹಾಕಿಕೊಂಡಿರುವ ಕೆಲವು ದೊಡ್ಡದೊಡ್ಡವರು ಕೋಮು ದಾಳಿಗಳಲ್ಲಿ ನೇರವಾಗಿ ಪಾಲ್ಗೊಳ್ಳುವುದಿಲ್ಲ. ಇದಕ್ಕಾಗೆಂದೇ, ಅಂದರೆ ಬೀದಿ ಕಾರ್ಯಾಚರಣೆಗಳಿಗೆಂದೇ, ಬಜರಂಗ ದಳ ಎಂಬ ಕಾಲಾಳು ಪಡೆಯನ್ನು ಕಟ್ಟಲಾಗಿದೆ. ಹಣ, ಪುಕ್ಕಟೆ ಬೈಕ್, ಪುಕ್ಕಟೆ ಪೆಟ್ರೋಲ್, ಪುಕ್ಕಟೆ ಮಾಂಸದೂಟ, ಪುಕ್ಕಟೆ ಸ್ತ್ರೀಸೌಖ್ಯ ಮುಂತಾದ ಹಲವಾರು ಆಮಿಷಗಳ ಮೂಲಕ ಮತ್ತು ಧರ್ಮರಕ್ಷಣೆ, ಸಂಸ್ಕೃತಿರಕ್ಷಣೆ, ಗೋರಕ್ಷಣೆ ಇದೇ ಮುಂತಾದ ಭಾವನಾತ್ಮಕ ಘೋಷಣೆಗಳ ಮೂಲಕ ಅಮಾಯಕ ಕೆಳವರ್ಗದ ಯುವಕರನ್ನು ಸೆಳೆದುಕೊಳ್ಳ

“ಆರೆಸ್ಸೆಸ್ ಒಂದು ಉಗ್ರವಾದಿ ಹಾಗೂ ಆಕ್ರಮಣಶೀಲ ಪ್ರವೃತ್ತಿಯನ್ನು ಅಳವಡಿಸಿಕೊಂಡಿದೆ. ಯಾವುದು ಹಿಂದೂಗಳ ಹಕ್ಕುಗಳೆಂದು ಅದು ಭಾವಿಸಿಕೊಂಡಿದೆಯೋ ಅವುಗಳಿಗಾಗಿ ಅಲ್ಪಸಂಖ್ಯಾತರ ವಿರುದ್ಧ ಹೋರಾಡಲು ತನ್ನನ್ನು ತಾನೇ ನೇಮಿಸಿಕೊಂಡಿದೆ. ಅಲ್ಪ ಸಂಖ್ಯಾತರಿಗೆ ಅವರ ಸ್ಥಾನವನ್ನು ತೋರಿಸಿಕೊಡುವ ಕೆಲಸವನ್ನು ತನಗೆತಾನೇ ವಿಧಿಸಿಕೊಂಡಿದೆ. ಇದಕ್ಕೆ ಅಲ್ಪಸಂಖ್ಯಾತರು ಸಿದ್ಧರಿಲ್ಲದಿದ್ದಲ್ಲಿ ಅವರಿಗೆ ಪಾಠ ಕಲಿಸುವ ಕೆಲಸವನ್ನೂ ಅದು ವಿಧಿಸಿಕೊಂಡಿದೆ.

ಲಾಗುತ್ತದೆ. ಬಜರಂಗಿಗಳ ಪೈಶಾಚಿಕ ಗುಣಗಳನ್ನು ಸಾರ್ವಜನಿಕರಿಂದ ಮರೆಮಾಚುವುದಕ್ಕಾಗಿ ಅವರ ಮೂಲಕ ಹಿಂದೂ ಸಮಾಜೋತ್ಸವ, ರಾಮೋತ್ಸವ, ಸಾರ್ವಜನಿಕ ಸತ್ಯನಾರಾಯಣ ಪೂಜೆ, ಭಜನೆ, ಅಧ್ಯಾತ್ಮಿಕ ಶಿಬಿರ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ಸಂಘಪರಿವಾರದ ಬಜರಂಗ ದಳ ಮತ್ತಿತರ ಅಂಗಸಂಸ್ಥೆಗಳ ದಾರವನ್ನು ಹಿಡಿದುಕೊಂಡಿರುವ ಆರೆಸ್ಸೆಸ್ ಒಂದು ಉಗ್ರವಾದಿ ಸಂಘಟನೆಯಾಗಿದ್ದು ಅದಕ್ಕೆ ಎಂತಹ ಕಳಂಕಿತ, ಭಯಾನಕ ಚರಿತ್ರೆಯಿದೆ ಎಂಬುದಕ್ಕೆ ನೂರಾರು ನಿದರ್ಶನಗಳನ್ನು ಕೊಡಬಹುದು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ದಿನಗಳಲ್ಲಿ ನಡೆದ ಘಟನೆಯೊಂದನ್ನು ನೋಡೋಣ. ಕರಾಚಿ ನಗರದ ಶಿಕಾರ್‌ಪುರ ಎಂಬಲ್ಲಿನ ಮನೆಯೊಂದರಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಸಂಘ ಪರಿವಾರದ ವಾಸುದೇವ ಬದ್ಲಾನಿ ಮತ್ತು ಪ್ರಭು ಬದ್ಲಾನಿ ಎಂಬಿಬ್ಬರು ಮೃತಪಟ್ಟಿದ್ದರು. ರಾಯ್ ಬಹಾದೂರ್ ತೋಲಾರಾಂ ಎಂಬಾತನ ಆ ಮನೆಯನ್ನು ಮಕ್ಕಳಿಗೆ ಟ್ಯೂಷನ್ ಕೊಡಲೆಂದು ಬಾಡಿಗೆಗೆ ಪಡೆದುಕೊಳ್ಳಲಾಗಿತ್ತು. ವಾಸ್ತವವಾಗಿ ಕರಾಚಿಯ ಹಲವಾರು ಕಡೆಗಳಲ್ಲಿ ಬಾಂಬ್ ಸ್ಫೋಟಿಸುವ ಸಂಚೊಂದರ ಭಾಗವಾಗಿ ಸುಮಾರು 21 ಆರೆಸ್ಸೆಸಿಗರು ಅಲ್ಲಿ ಬಾಂಬ್‌ಗಳನ್ನು ತಯಾರಿಸುತ್ತಿದ್ದರು.** (2006ರಲ್ಲಿ ಇಂತಹದೇ ಘಟನೆ ಮಹಾರಾಷ್ಟ್ರದ ನಾಂದೆಡ್‌ನಲ್ಲಿ ಪುನರಾವರ್ತನೆ ಆಗಿರುವುದನ್ನು ನೆನಪಿಸಿಕೊಳ್ಳಬಹುದು) ಮತ್ತೊಂದು ನಿದರ್ಶನ ಇಲ್ಲಿದೆ. 1982ರ ಮಾರ್ಚ್ ತಿಂಗಳಲ್ಲಿ ಕನ್ಯಾಕುಮಾರಿ ಜಿಲ್ಲೆಯಲ್ಲಿ ಕೋಮು ಗಲಭೆ ಭುಗಿಲೆದ್ದಿತ್ತು. ಇದರ ತನಿಖೆ ನಡೆಸಿದ ನ್ಯಾ ಪಿ.ವೇಣುಗೋಪಾಲ್ ಆಯೋಗ ಆರೆಸ್ಸೆಸ್ ವಿರುದ್ಧ ತೀಕ್ಷ್ಣ ಆರೋಪಗಳನ್ನು ಮಾಡಿತ್ತು. ನ್ಯಾ। ವೇಣುಗೋಪಾಲ್ ಬರೆದಿರುವಂತೆ:

“ಆರೆಸ್ಸೆಸ್ ಒಂದು ಉಗ್ರವಾದಿ ಹಾಗೂ ಆಕ್ರಮಣಶೀಲ ಪ್ರವೃತ್ತಿಯನ್ನು ಅಳವಡಿಸಿಕೊಂಡಿದೆ. ಯಾವುದು ಹಿಂದೂಗಳ ಹಕ್ಕುಗಳೆಂದು ಅದು ಭಾವಿಸಿಕೊಂಡಿದೆಯೋ ಅವುಗಳಿಗಾಗಿ ಅಲ್ಪಸಂಖ್ಯಾತರ ವಿರುದ್ಧ ಹೋರಾಡಲು ತನ್ನನ್ನು ತಾನೇ ನೇಮಿಸಿಕೊಂಡಿದೆ. ಅಲ್ಪ ಸಂಖ್ಯಾತರಿಗೆ ಅವರ ಸ್ಥಾನವನ್ನು ತೋರಿಸಿಕೊಡುವ ಕೆಲಸವನ್ನು ತನಗೆ ತಾನೇ ವಿಧಿಸಿಕೊಂಡಿದೆ. ಇದಕ್ಕೆ ಅಲ್ಪ ಸಂಖ್ಯಾತರು ಸಿದ್ಧರಿಲ್ಲದಿದ್ದಲ್ಲಿ ಅವರಿಗೆ ಪಾಠ ಕಲಿಸುವ ಕೆಲಸವನ್ನೂ ಅದು ವಿಧಿಸಿಕೊಂಡಿದೆ. ಕೋಮುವಾದಕ್ಕೆ, ಕೋಮು ಗಲಭೆಗಳಿಗೆ ಗೌರವ ದೊರಕಿಸಿ ಕೊಟ್ಟು ಆಡಳಿತದ ನೈತಿಕ ಸ್ಥೈರ್ಯವನ್ನು ಕುಂದಿಸಿದೆ. ಕೋಮು ಹಿಂಸಾಚಾರಕ್ಕೆ ಪ್ರಚೋದನೆ ನೀಡಲು ಆರೆಸ್ಸೆಸ್ ಬಳಸುವ ವಿಧಾನಗಳೆಂದರೆ:

1. ಕ್ರೈಸ್ತರು ಈ ದೇಶಕ್ಕೆ ನಿಷ್ಠೆ ಪ್ರದರ್ಶಿಸುವವರಲ್ಲವೆಂದು ಅಪಪ್ರಚಾರ ಮಾಡಿ ಬಹುಸಂಖ್ಯಾತ ಸಮುದಾಯದ ಕೋಮು ಭಾವನೆಗಳನ್ನು ಕೆರಳಿಸುವುದು;

2. ಅಲ್ಪಸಂಖ್ಯಾತರ ಜನಸಂಖ್ಯೆ ಏರುತ್ತಿದೆ, ಹಿಂದೂಗಳದ್ದು ಇಳಿಯುತ್ತಿದೆ ಎಂಬ ಚಾಣಾಕ್ಷ ಅಪಪ್ರಚಾರದ ಮೂಲಕ ಬಹುಸಂಖ್ಯಾತ ಸಮುದಾಯದ ಭೀತಿಯನ್ನು ಹೆಚ್ಚಿಸುವುದು;

3. ಆಡಳಿತದಲ್ಲಿ ತೂರಿಕೊಂಡು ಅದರೊಳಗೆ ಕೋಮುವಾದಿ ನಿಲುವುಗಳನ್ನು ಅಳವಡಿಸಿ ಬೆಳೆಸುವ ಮುಖಾಂತರ ನಾಗರಿಕ ಸೇವೆಗಳ ಮತ್ತು ಪೊಲೀಸ್ ಸೇವೆಗಳ ಸದಸ್ಯರನ್ನು ಪ್ರೇರೇಪಿಸುವುದು;

4. ಬಹುಸಂಖ್ಯಾತ ಸಮುದಾಯದ ಯುವಜನರಿಗೆ ಚಾಕು, ತಳವಾರು, ಭರ್ಜಿ ಇತ್ಯಾದಿ ಆಯುಧ ಬಳಕೆಯಲ್ಲಿ ತರಬೇತು ಒದಗಿಸುವುದು;

5. ಕೋಮುಗಳ ನಡುವಿನ ಸೀಳುಗಳನ್ನು ಮತ್ತಷ್ಟು ಅಗಲಗೊಳಿಸುವ ಸಲುವಾಗಿ ವದಂತಿಗಳನ್ನು ಹಬ್ಬಿಸುವುದು. ಯಾವುದೇ ಕ್ಷುಲ್ಲಕ ಘಟನೆ ಇರಲಿ, ಅದಕ್ಕೆ ಬಣ್ಣ ಹಚ್ಚುವ ಮೂಲಕ ಕೋಮು ಭಾವನೆಗಳನ್ನು ತೀವ್ರಗೊಳಿಸುವುದು.

ಆರೆಸ್ಸೆಸ್ 'ಶಾಖಾ'ಗಳ ವಿವಿಧ ಕಾರ್ಯಕ್ರಮಗಳಲ್ಲಿ ಲಾಠಿ, ಖಡ್ಗಗಳ ಬಳಕೆ, ಜ್ಯಾವೆಲಿನ್ ಎಸೆಯುವಿಕೆಯ ತರಬೇತಿ ಕೂಡಾ ಸೇರಿದೆ. ಡ್ರಿಲ್, ಶಾರೀರಿಕ ಕಸರತ್ತು, ಪರೇಡ್ ಮತ್ತಿತರ ಚಟುವಟಿಕೆಗಳನ್ನು ಆಟದ ಮೈದಾನಗಳಲ್ಲೂ ಇತರ ಸಾರ್ವಜನಿಕ ಸ್ಥಳಗಳಲ್ಲೂ ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮಗಳನ್ನೆಲ್ಲಾ ದೈಹಿಕ ಕಸರತ್ತುಗಳ ಹೆಸರಿನಲ್ಲಿ ನಡೆಸಲಾಗುತ್ತದೆ. ಉಗ್ರಗಾಮಿ ನಿಲುವನ್ನು ಬೆಳೆಸುವುದು ಮತ್ತು ಯಾವುದೇ ರೀತಿಯ ನಾಗರಿಕ ಕಲಹಗಳಿಗಾಗಿ ತರಬೇತಿ ಒದಗಿಸುವುದು ಈ ಚಟುವಟಿಕೆಗಳ ಉದ್ದೇಶವೆಂದು ತೋರುತ್ತದೆ. ಇದರಿಂದಾಗಿ ಅಲ್ಪಸಂಖ್ಯಾತರಲ್ಲಿ ಹೆಚ್ಚಿನ ವೇಳೆ ಆತಂಕ, ಭಯ ಮತ್ತು ಅಭದ್ರತೆಯ ಭಾವನೆ ಉಂಟಾಗುತ್ತಿದೆ. ಇದು ಸಮಾಜದ ಸ್ವಾಸ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.”

ನೆನಪಿರಲಿ, ಆರೆಸ್ಸೆಸ್ ಎಂಬ ಈ ಸೂಪರ್‌ಗ್ಯಾಂಗ್‌ನ ಎಲ್ಲಾ ಉಗ್ರವಾದಿ ಚಟುವಟಿಕೆಗಳ ಬಗ್ಗೆ ಸರಕಾರಗಳಿಗೆ ಬಹಳಷ್ಟು ಹಿಂದೆಯೇ ತಿಳಿದಿತ್ತು. ಹೀಗಿದ್ದರೂ ಅತಿ ಹೆಚ್ಚು ಕಾಲ ನಮ್ಮನ್ನಾಳಿದ ಕಾಂಗ್ರೆಸ್ ಸರಕಾರಗಳಿರಲಿ ಅಥವಾ ಬಿಜೆಪಿಯನ್ನೊಳಗೊಂಡ ಎನ್‌ಡಿಎ ಸರಕಾರಗಳಿರಲಿ ಮೊಸಳೆ ಕಣ್ಣೀರು ಸುರಿಸುವ ಕೆಲಸವೊಂದನ್ನು ಮಾತ್ರ ಅಮೋಘವಾಗಿ ನಿರ್ವಹಿಸಿದವಷ್ಟೆ ಹೊರತು ಇನ್ನೇನನ್ನೂ ಮಾಡಲಿಲ್ಲ. ಪರಿಣಾಮ ದೈತ್ಯಾಕಾರಕ್ಕೆ ಬೆಳೆದ ಕೋಮುವಾದ ಇಂದು ನಮ್ಮ ಬದುಕನ್ನೇ ಆಪೋಶನ ತೆಗೆದುಕೊಳ್ಳುತ್ತಿದೆ.

* * * * *

RSS in Sindh, Economic and Political Weekly, 8 July 2006.

□

ನಾ ದಿವಾಕರ

ಉದಾರವಾದದ ಕರಿ ನೆರಳು ದೇಶವನ್ನು ಆವರಿಸುತ್ತಿರುವಂತೆಲ್ಲಾ ಭ್ರಷ್ಟಾಚಾರದ ಕಾರ್ಮೋಡಗಳು ದಟ್ಟವಾಗಿ ಕವಿಯುತ್ತಿವೆ. ನವ ಉದಾರವಾದಿ ಆರ್ಥಿಕ ನೀತಿಗಳು ದೇಶದಲ್ಲಿ ಬಂಡವಾಳದ ಹರಿವನ್ನು ಹೆಚ್ಚಿಸಿದಂತೆಯೇ ಭ್ರಷ್ಟಾಚಾರದ ಪರಂಪರೆಯನ್ನೂ ಸರ್ವವ್ಯಾಪಿಯನ್ನಾಗಿ ಮಾಡುತ್ತಿದೆ. ಏರುತ್ತಿರುವ ಬೆಲೆಗಳು, ರೈತರ ಸಂಕಷ್ಟಗಳು, ಕೃಷಿ ಬಿಕ್ಕಟ್ಟು, ಕಾರ್ಮಿಕರ ಬವಣೆ, ಕೂಲಿಕಾರರ ವೇದನೆ, ಜನತೆಗೆ ಕೈಗೆಟುಕದಂತಾಗಿರುವ ಮೂಲಭೂತ ಸೌಲಭ್ಯಗಳು ಈ ಎಲ್ಲಾ ಸಮಸ್ಯೆಗಳ ನಡುವೆ ದೇಶವನ್ನಾಳುವ ಪ್ರಜಾಪ್ರತಿನಿಧಿಗಳು ತಮ್ಮ ದಂತದರಮನೆಗಳಲ್ಲೇ ಕುಳಿತು ಭ್ರಷ್ಟಾಚಾರವೆಂಬ ಪೆಡಂಭೂತವನ್ನು ಸೃಷ್ಟಿಸುತ್ತಿದ್ದಾರೆ. 1970ರ ದಶಕದಲ್ಲಿ ಕಂಡುಬಂದ ವಿಷಮ ಸನ್ನಿವೇಶ ಮತ್ತೊಮ್ಮೆ ಮರುಕಳಿಸುತ್ತಿರುವಾಗಲೇ ದೇಶಾದ್ಯಂತ ಭ್ರಷ್ಟಾಚಾರದ ವಿರುದ್ಧ ಜನಾಂದೋಲನವೂ ಹಮ್ಮಿಕೊಂಡಿರುವುದು ಸ್ವಾಗತಾರ್ಹವೇ. ಅಣ್ಣಾ ಹಜಾರೆ ಅವರ ನಿರಶನ ಮತ್ತು ಉಪವಾಸ ಸತ್ಯಾಗ್ರಹಗಳ ಪರಿಣಾಮ ಕೇಂದ್ರ ಸರ್ಕಾರ ಜನಲೋಕಪಾಲ್ ಮಸೂದೆಯನ್ನು ಜಾರಿಗೊಳಿಸಲು ಸಜ್ಜಾಗಿದ್ದು. ಈ ನಿಟ್ಟಿನಲ್ಲಿ ಸಮಿತಿಯನ್ನೂ ರಚಿಸಿದೆ.

ವಿಕಿಲೀಕ್ಸ್‌ನಿಂದ ಬಯಲಾಗುತ್ತಿರುವ ಘೋರ ವಾಸ್ತವಗಳು, ಏರುತ್ತಿರುವ ಅವಶ್ಯ ವಸ್ತುಗಳ ಬೆಲೆಗಳು, ದೇಶದೆಲ್ಲೆಡೆ ಪಕ್ಷಾತೀತವಾಗಿ ನಡೆಯುತ್ತಿರುವ ಭೂಹಗರಣ ಪ್ರಕರಣಗಳು, ಎಲ್ಲ ಕ್ಷೇತ್ರಗಳಲ್ಲೂ ಮಾಫಿಯಾಗಳ ಉಗಮ ಮತ್ತು ವೃದ್ಧಿ, ಸೇನಾಪಡೆಯಿಂದ ಹಿಡಿದು ಗ್ರಾಮ ಪಂಚಾಯತಿಯ ಕಾರಖೂನನವರೆಗೆ ಪಸರಿಸಿರುವ ಲಂಚಗುಳಿತನ, ಆದರ್ಶ, ಕಾಮನ್‌ವೆಲ್ತ್, 2ಜಿ ತರಂಗಾಂತರ ಮುಂತಾದ ಬೃಹದಾಕಾರದ ಹಗರಣಗಳು, ಚುನಾವಣೆಗಳಲ್ಲಿ ನೀರಿಗಿಂತಲೂ ಯಥೇಚ್ಚವಾಗಿ ಹರಿಯುತ್ತಿರುವ ಕಪ್ಪುಹಣ, ಭೂತಾಯಿಯ ಒಡಲಲ್ಲಿ ದೊರೆಯುವ ಮರಳಿನಿಂದಲೂ ಲಾಭಗಳಿಸುವ ಮರಳು ಗಣಿಗಾರಿಕೆಯ ದಂಧೆ, ರಾಜ್ಯ-ದೇಶದ ಬೊಕ್ಕಸವನ್ನೇ ಬರಿದುಮಾಡುತ್ತಿರುವ ಅದಿರು ರಫ್ತು ವ್ಯಾಪಾರ ಮತ್ತು ಗಣಿ ಉದ್ಯಮ, ಅರಣ್ಯ ಮತ್ತು ಜಲ ಸಂಪತ್ತನ್ನು ಸ್ವಾಧೀನಪಡಿಸಿಕೊಂಡು ಮೂಲ ನಿವಾಸಿಗಳ ಮೂಲೋತ್ಪಾಟನೆ ಮಾಡುತ್ತಿರುವ ಕಾರ್ಪೋರೇಟ್ ಉದ್ಯಮಿಗಳು, ಪರಾಕಾಷ್ಠೆಗೆ ತಲುಪಿರುವ ರಾಜಕೀಯ ಭ್ರಷ್ಟತೆ, ಕುಟುಂಬ ರಾಜಕಾರಣ, ಸ್ವಜನ ಪಕ್ಷಪಾತ ಮತ್ತು ಅಧಿಕಾರಶಾಹಿ ಧೋರಣೆ, ಅಧಿಕಾರ ರಾಜಕಾರಣ ಎಂದರೆ ಭೂ ಸ್ವಾಧೀನ ಮತ್ತು ಡಿ ನೋಟಿಫಿಕೇಷನ್ ಪ್ರಕ್ರಿಯೆ ಎಂದು ಅರ್ಥ ಮೂಡಿಸುವ ರಾಜಕೀಯ.

ಈ ಮೇಲಿನ ಎಲ್ಲ ವಿದ್ಯಮಾನಗಳನ್ನು ಒಂದೆರಡು ಪದಗಳಲ್ಲಿ ವರ್ಣಿಸಲು ಹೆಚ್ಚು ಶ್ರಮ ಬೇಕಿಲ್ಲ. "ಇದು ನಮ್ಮ ಭಾರತ" ಎಂದರೆ ಸಾಕಲ್ಲವೇ? ಜನ ಲೋಕಪಾಲ್ ಮಸೂದೆಯನ್ನು ಜಾರಿಗೊಳಿಸಲು ಮತ್ತು ಈ ಮಸೂದೆಯ ರೂಪುರೇಷೆಗಳನ್ನು ನಿರ್ಧರಿಸಲು ಒಂದು ನಿಷ್ಪಕ್ಷಪಾತ ಸಮಿತಿಯನ್ನು ರಚಿಸಲು ಹಜಾರೆ ಆಗ್ರಹಿಸಿದ್ದಾರೆ 42 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಈ ಮಸೂದೆಗೆ ಕಾಯಕಲ್ಪ ನೀಡುವ ಮೂಲಕ ತನ್ನ ನೈತಿಕತೆಯನ್ನು ನಿರೂಪಿಸಲು ಹೊರಟಿರುವ ಯುಪಿಎ ಸರ್ಕಾರಕ್ಕೆ ಇದು ದೊಡ್ಡ ಸವಾಲೇ ಸರಿ. ಆದರೆ ಅಣ್ಣಾ ಹಜಾರೆ ಹೋರಾಟಕ್ಕೆ ಬೆಂಬಲ ಸೂಚಿಸಿರುವ ಭಾಜಪ ಮತ್ತಿತರ ಬೂರ್ಷ್ವಾ ಪಕ್ಷಗಳ ನೈತಿಕತೆಯೂ ಇಲ್ಲಿ ಪರಾಮರ್ಶೆಗೊಳಗಾಗಬೇಕಿದೆ. ಏಕೆಂದರೆ 42 ವರ್ಷಗಳಲ್ಲಿ ಭಾರತವನ್ನು ಎಲ್ಲ ರಾಜಕೀಯ ಪಕ್ಷಗಳೂ ಪ್ರತ್ಯಕ್ಷವಾಗಿ-ಪರೋಕ್ಷವಾಗಿ ಆಳಿವೆ. ಯಾವುದೇ ಸರ್ಕಾರವೂ ಲೋಕಪಾಲ್ ಬಗ್ಗೆಯಾಗಲೀ, ಭ್ರಷ್ಟಾಚಾರ ನಿರ್ಮೂಲನೆಯ ಬಗ್ಗೆಯಾಗಲೀ ಸಕಾರಾತ್ಮಕ ಕ್ರಮ ಕೈಗೊಂಡಿಲ್ಲ.. ಇದು ಸಾರ್ವತ್ರಿಕ ಸತ್ಯ. ಕಾರಣ ಹುಡುಕಬೇಕಿಲ್ಲ. ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಮೊರಾರ್ಜಿ ದೇಸಾಯಿ, ವಿ.ಪಿ.ಸಿಂಗ್, ದೇವೇಗೌಡ, ವಾಜಪೇಯಿ ಮತ್ತು ಮನ ಮೋಹನ್ ಸಿಂಗ್ ಈ ಎಲ್ಲ ಪ್ರಧಾನಿಗಳೂ ಲೋಕಪಾಲ್ ಮಸೂದೆಯನ್ನು ನಿರ್ಲಕ್ಷಿಸಿದ ಅಪವಾದಕ್ಕೆ ಗುರಿಯಾಗುತ್ತಾರೆ.

ಲೋಕಪಾಲ್ ಮಸೂದೆಯ ಸುತ್ತ

ಭಾರತದ ಸಂಸತ್ತಿನ ಸ್ಟೈಲೇ ಬೇರೆ. ಇಲ್ಲಿನ ಪ್ರಜಾ ಪ್ರತಿನಿಧಿಗಳಿಗೆ ಹಾಜರಾತಿ ಪುಸ್ತಕ ಎಂದರೇನು ಎಂತಲೇ ತಿಳಿದಿಲ್ಲ. ರಾಜಕೀಯ ಪಕ್ಷಗಳು ತಮಗೆ ವಿರಾಮ ಬೇಕೆಸಿದಾಗೆಲ್ಲಾ ವಾಕ್ ಔಟ್ ಮಾಡುವ ಮೂಲಕ ಸಂಸತ್ ಅಧಿವೇಶನಗಳ ನಾಕ್‌ಔಟ್ ಮಾಡುತ್ತಿರುತ್ತಾರೆ. ನಿರ್ಭೀತಿಯಿಂದ. ಏಕೆಂದರೆ ವಾಕ್‌ಔಟ್ ಮಾಡುವುದು, ಅಧಿವೇಶನ ಬಹಿಷ್ಕರಿಸುವುದು, ಕೂಗಾಡಿ, ಅರಚಾಡಿ ಚರ್ಚೆಯಾಗದಂತೆ ನೋಡಿಕೊಳ್ಳುವುದು ಇವೆಲ್ಲವೂ ಭಾರತೀಯ ಪ್ರಜಾ ಪ್ರತಿನಿಧಿಗಳ ಜನ್ಮ ಸಿದ್ಧ ಹಕ್ಕು. ಮತ್ತೊಂದು ಮಹತ್ವದ ಸಂಗತಿ ಎಂದರೆ ಜನಪರವಾದ ಯಾವುದೇ ಕ್ರಮ ಕೈಗೊಳ್ಳಲು ಸಂಸತ್ತಿನಲ್ಲಿ ದಿನಗಟ್ಟಲೆ ಚರ್ಚೆಗಳಾಗುತ್ತವೆ. ರಾಜಕೀಯ ಪಕ್ಷಗಳ ನೇತಾ

ಜನ ಲೋಕಪಾಲ್ ಮಸೂದೆಯನ್ನು ಜಾರಿಗೊಳಿಸಲು ಮತ್ತು ಈ ಮಸೂದೆಯ ರೂಪುರೇಷೆಗಳನ್ನು ನಿರ್ಧರಿಸಲು ಒಂದು ನಿಷ್ಪಕ್ಷಪಾತ ಸಮಿತಿಯನ್ನು ರಚಿಸಲು ಹಜಾರೆ ಆಗ್ರಹಿಸಿದ್ದಾರೆ. ೪೨ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಈ ಮಸೂದೆಗೆ ಕಾಯಕಲ್ಪ ನೀಡುವ ಮೂಲಕ ತನ್ನ ನೈತಿಕತೆಯನ್ನು ನಿರೂಪಿಸಲು ಹೊರಟಿರುವ ಯುಪಿಎ ಸರ್ಕಾರಕ್ಕೆ ಇದು ದೊಡ್ಡ ಸವಾಲೇ ಸರಿ. ಆದರೆ ಅಣ್ಣಾ ಹಜಾರೆ ಹೋರಾಟಕ್ಕೆ ಬೆಂಬಲ ಸೂಚಿಸಿರುವ ಭಾಜಪ ಮತ್ತಿತರ ಬೂರ್ಷ್ವಾ ಪಕ್ಷಗಳ ನೈತಿಕತೆಯೂ ಇಲ್ಲಿ ಪರಾಮರ್ಶೆಗೊಳಗಾಗಬೇಕಿದೆ.



ಭ್ರಷ್ಟ ಜಗತ್ತಿನಲ್ಲೊಂದು ಸುತ್ತು

ರರು ತಮ್ಮ ಬತ್ತಳಿಕೆಯಲ್ಲಿನ ಅಸ್ತ್ರವನ್ನೆಲ್ಲಾ ಪ್ರಯೋಗಿಸಿ, ಕೊನೆಗೆ ಬ್ರಹ್ಮಾಸ್ತ್ರವನ್ನೂ ಉಪಯೋಗಿಸಿ ಅನೇಕ ಜನಪರ ಯೋಜನೆಗಳಿಗೆ ಎಳ್ಳು ನೀರು ಬಿಡಲಾಗಿದೆ. ಆದರೆ ಸಂಸದರ ಸಂಬಳ, ಭತ್ಯೆ ಮತ್ತಿತರ ಸವಲತ್ತುಗಳನ್ನು ಹೆಚ್ಚಿಸುವಾಗ ಮಾತ್ರ ಉಸಿರೇ ಬಿಡುವುದಿಲ್ಲ. ಎಲ್ಲವೂ ಮೌನ. ವೇತನ ಹೆಚ್ಚಳ ಮಸೂದೆಗೆ ಮೌನಂ ಸಮ್ಮತಿ ಲಕ್ಷಣಂ!

ದೇಶದಲ್ಲಿ ಸ್ವಚ್ಛ ಆಡಳಿತ ನೀಡುವ ಉದ್ದೇಶದಿಂದ 1969ರಲ್ಲಿ ರೂಪುಗೊಂಡ ಮಸೂದೆಯೊಂದು ಸಂಸತ್ತಿನ ಅಂಗೀಕಾರ ಪಡೆಯಲು 42 ವರ್ಷ, ತನ್ನ ಪಿಂಚಣಿಗೆ ಕಾಯುವ ತಬರನ ಹಾಗೆ ಕಾಯಬೇಕಾದರೆ, ನಮ್ಮ ದೇಶದ ಆಳುವ ವರ್ಗಗಳು ಇನ್ನೆಷ್ಟು ಭಂಡರಾಗಿರಬೇಡ. ಬಹುಶಃ ವಿಶ್ವದ ಇತರ ಯಾವುದೇ ದೇಶದಲ್ಲಿ ಒಂದು ಮಸೂದೆ ನಾಲ್ಕು ದಶಕಗಳ ಕಾಲ ನೆನೆಗುದಿಗೆ ಬಿದ್ದಿರಲಾರದು. ಅದರಲ್ಲೂ ಸ್ವಚ್ಛ, ಭ್ರಷ್ಟಾಚಾರ ರಹಿತ ಆಡಳಿತ ನೀಡುವ ಉದ್ದೇಶದಿಂದ ರಚಿತವಾದ ಕಾಯಿದೆ ಇಷ್ಟು ವರ್ಷ ಆಳ್ವಿಕರ ನಿರ್ಲಕ್ಷ್ಯಕ್ಕೊಳಗಾಗಿರುವುದು ಹಾಸ್ಯಾಸ್ಪದ, ಅಪಮಾನಕರ. ಲೋಕಪಾಲ್ ಎಂಬ ಮಸೂದೆ ಲೋಕಸಭೆಯ ಅಟ್ಟದ ಮೇಲೆ ಧೂಳು ತಿನ್ನುತ್ತಾ ನಿದ್ರಾವಸ್ಥೆಯಲ್ಲಿದೆ ಎಂದು ಆಳ್ವಿಕರಿಗೆ ತಿಳಿಯಲು ಅಣ್ಣಾ ಹಜಾರೆ ಎಂಬ ಕಿಂದರಜೋಗಿಯ ಪ್ರವೇಶ ಅನಿವಾರ್ಯವಾಗಿತ್ತು. ಅಣ್ಣಾ ಹಜಾರೆ ಅವರ ಆಶಯಗಳು ಸ್ವಾಗತಾರ್ಹವೇ. ದೇಶದ ನರನಾಡಿಗಳಲ್ಲಿ ಹರಿದಾಡುತ್ತಿರುವ ಭ್ರಷ್ಟ ಪರಂಪರೆಯನ್ನು ಹೊಡೆದೋಡಿಸಲು ಹಲವು ಆಯಾಮಗಳ ಪ್ರಯತ್ನ ಅಗತ್ಯವಾಗಿದೆ. ಅದರಲ್ಲಿ ಹಜಾರೆಯವರ ಗಾಂಧಿ ಮಾರ್ಗವೂ ಒಂದು.

ಲೋಕಪಾಲ್ ಮಸೂದೆಯನ್ನು ಜಾರಿಗೊಳಿಸುವುದೇ ಅಂತಿಮವಾಗಬಾರದು. ಎಷ್ಟೇ ಆಗಲಿ ಅದೂ ಸಹ ಸರ್ಕಾರದ ಒಂದು ಅಂಗ ಸಂಸ್ಥೆಯಾಗಿಯೇ ಕಾರ್ಯ ನಿರ್ವಹಿಸುತ್ತದೆ. ಜನಲೋಕಪಾಲ್ ಮಸೂದೆಯೇ ಅಂಗೀಕೃತವಾದರೂ ಈ ಅಪಾಯದ ಸಾಧ್ಯತೆಗಳೇನೂ ಕಡಿಮೆಯಾಗುವುದಿಲ್ಲ. ಆದಾಗ್ಯೂ ಆಳುವ ವರ್ಗಗಳ ಮತ್ತು ಅಧಿಕಾರಶಾಹಿಯ ಭ್ರಷ್ಟ ಪರಂಪರೆಯ ವಿರುದ್ಧ ಹೋರಾಡಲು ಲೋಕಪಾಲ್ ಪ್ರಜೆಗಳ ಕೈಯ್ಯಲ್ಲಿರುವ ಪ್ರಬಲ ಅಸ್ತ್ರವಾಗಿ ಪರಿಣಮಿಸುವುದಂತೂ ಸತ್ಯ. ಈ ದೃಷ್ಟಿಯಿಂದ ಜನಲೋಕಪಾಲ್ ಮಸೂದೆಯನ್ನು ಸ್ವಾಗತಿಸಬಹುದು. ಆದರೆ ರಾಜಕೀಯ ಮತ್ತು ಔದ್ಯಮಿಕ ಭ್ರಷ್ಟಾಚಾರಗಳನ್ನೂ ಮೀರಿದ ಕೆಲವು ಸಂಗತಿಗಳನ್ನು ನವ ಉದಾರವಾದ ಸೃಷ್ಟಿಸಿದ್ದು ಈ ಸೂಕ್ಷ್ಮತೆಗಳನ್ನು ಗ್ರಹಿಸದೆ ಹೋದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ಮತ್ತೊಂದು ಜೆಪಿ ಸಂಪೂರ್ಣ ಕ್ರಾಂತಿಯಾಗಿ ಪರ್ಯವಸಾನ ಹೊಂದುವ ಸಾಧ್ಯತೆಗಳೇ ಹೆಚ್ಚು.

ಭಾರತದ ರಾಜಕೀಯ–ಸಾಮಾಜಿಕ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಅಡಗಿರುವುದು ಪ್ರಾಬಲ್ಯ ಮತ್ತು ಶ್ರೀಮಂತಿಕೆಗಳಲ್ಲಿ. ಈ ಪ್ರವೃತ್ತಿಗಳು ಚುನಾವಣೆಯಲ್ಲಿ ಪರಿಣಾಮ ಬೀರುವಂತೆಯೇ ಆಡಳಿತದಲ್ಲೂ ಬೀರುತ್ತವೆ. ಪ್ರಜಾತಂತ್ರ ವ್ಯವಸ್ಥೆಯ ಮೂಲ ಬೇರು ಚುನಾವಣೆ ಮತ್ತು ಸಾಮಾಜಿಕ ನ್ಯಾಯ. ಈ ಎರಡೂ ವಿದ್ಯಮಾನಗಳು ಭ್ರಷ್ಟರ ಕೈವಶವಾಗಿ ಹಲವು ದಶಕಗಳೇ ಕಳೆದಿವೆ. ಹಾಗಾಗಿಯೇ ಇಲ್ಲಿನ ಕಾನೂನುಗಳು ಪ್ರಬಲ ವರ್ಗಗಳ ಪರವಾಗಿಯೇ ಇರುತ್ತವೆ. ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ಮರೆತು ಸಮಾಜದ ಸ್ವಾಸ್ಥ್ಯವನ್ನೇ ಕೆಡಿಸುವ ವ್ಯಕ್ತಿಗಳು ಗಣ್ಯರೆನಿಸಿ

ಮಾನವ ಆಧುನಿಕತೆಯೆಡೆಗೆ ಸಾಗುತ್ತಿರುವಂತೆಲ್ಲಾ ಈ ನೇತ್ಯಾತ್ಮಕ ಪ್ರವೃತ್ತಿಗಳೂ ಅತ್ಯಾಧುನಿಕ ಸ್ವರೂಪ ಪಡೆಯುತ್ತಿವೆ. ತಂತ್ರಜ್ಞಾನದ ಅವಿಷ್ಕಾರಗಳ ಫಲಾನುಫಲಗಳನ್ನು ತನ್ನ ಅಭ್ಯುದಯಕ್ಕೆ ಉಪಯೋಗಿಸುವ ಪ್ರಮಾಣದಲ್ಲೇ ಭ್ರಷ್ಟ ಪರಂಪರೆಯನ್ನು ಬೆಳೆಸಲೂ ಮಾನವ ಉಪಯೋಗಿಸುತ್ತಿದ್ದಾನೆ. ಜಾಗತೀಕರಣ–ನವ ಉದಾರವಾದ ಪ್ರಕ್ರಿಯೆಗಳು ಇಡೀ ವಿಶ್ವವನ್ನು ಒಂದು ಪುಟ್ಟ ಗ್ರಾಮವನ್ನಾಗಿ ಪರಿವರ್ತಿಸುತ್ತಿರುವಂತೆಯೇ ಭ್ರಷ್ಟರ ಸಾಮ್ರಾಜ್ಯವೂ ಕ್ರೋಢೀಕೃತಗೊಳ್ಳುತ್ತಿದೆ. ಎಲ್ಲಿಂದ ಎಲ್ಲಿಯವರೆಗೆ ಈ ಕೊಂಡಿ ಹರಡಿದೆ ಎಂದು ಹುಡುಕುತ್ತಾ ಹೋದಾಗ ಸಿಂದಬಾದ್‌ನ ಅನುಭವಗಳೇ ನಮಗೂ ಆಗಬಹುದು. ಭಾರತದ ಯಾವುದೋ ಅರಣ್ಯ ಪ್ರದೇಶದಲ್ಲಿ ತನ್ನ ಉದ್ಯಮವನ್ನು ಸ್ಥಾಪಿಸಲು ಬಯಸುವ ಉದ್ಯಮಿಗೆ ಅಲ್ಲಿ ಶತಮಾನಗಳಿಂದ ನೆಲೆಸಿರುವ ಇಡೀ ಜನ ಸಮುದಾಯವನ್ನು ಮೂಲೋತ್ಪಾಟನೆ ಮಾಡುವುದೇ ಧ್ಯೇಯವಾಗುತ್ತದೆ.

ಕೊಳ್ಳುತ್ತಾರೆ. ಅಥವಾ ನಿರಂತರ ವಿಚಾರಣಾಧೀನರಾಗಿಯೇ ಉಳಿದುಬಿಡುತ್ತಾರೆ. ಆದರೆ ತಮ್ಮ ಸಾಂವಿಧಾನಿಕ ಹಕ್ಕುಗಳಿಗಾಗಿ ಹೋರಾಡುವ ಶೋಷಿತರು ಶಿಕ್ಷಾರ್ಹರಾಗಿಬಿಡುತ್ತಾರೆ. ಅಪರಾಧಿಗಳಾಗಿಬಿಡುತ್ತಾರೆ. ಮಿತ್ತಲ್ ಹೀರೋ ಆದರೆ ಆದಿವಾಸಿಗಳು ವಿಲನ್‌ಗಳಾಗುತ್ತಾರೆ. ಆದಿವಾಸಿಗಳು ತಮ್ಮ ಮೂಲ ನೆಲೆಗಾಗಿ ನಡೆಸುವ ಹೋರಾಟಗಳು ವಿಧ್ವಂಸಕ ಎನಿಸಿಕೊಳ್ಳುತ್ತವೆ. ಆದರೆ ಉದ್ಯಮಿಗಳು ತಿಪ್ಪೆಯಿಂದ ಉಪ್ಪರಿಗೆಗೆ ಚಲಿಸುವುದನ್ನು ವೈಭವೀಕರಿಸಲಾಗುತ್ತದೆ. ಈ ಮಾರ್ಗದಲ್ಲಿನ ಅಕ್ರಮಗಳ ಮೈಲಿಗಲ್ಲುಗಳು ಮಾತ್ರ ಗೋಚರಿಸುವುದೇ ಇಲ್ಲ.

ಭ್ರಷ್ಟಾಚಾರ ಏನೆಲ್ಲಾ ಅವತಾರಗಳನ್ನೆತ್ತಿದೆ! ಗ್ರಾಮ ಪಂಚಾಯತಿಯ ಸದಸ್ಯನಿಂದ ಹಿಡಿದು ದೇಶದ ಕಾನೂನು ಪಾಲಕ ಸಂಸ್ಥೆಗಳ ಅಧಿಕಾರಿ ವರ್ಗಗಳವರೆಗೂ ಈ ಪಿಡುಗು ವ್ಯಾಪಿಸಿದೆ. 3000 ಕೋಟಿ ರೂಗಳ ಹರ್ಷದ್ ಮೆಹ್ತಾನಿಂದ 1 ಲಕ್ಷ 76 ಸಾವಿರ ಕೋಟಿರೂಗಳ ತರಂಗಾಂತರ ಹಗರಣದವರೆಗೆ ಹಬ್ಬಿದೆ. ಟೇಬಲ್ ಕೆಳಗೆ ನೀಡಲಾಗುತ್ತಿದ್ದ ಲಂಚದ ಮೊತ್ತ ಹೆಚ್ಚಾಗುತ್ತಿದಂತೆಲ್ಲಾ ಸೂಟ್‌ಕೇಸ್ ತಲುಪಿ, ಈಗ ಆನ್ ಲೈನ್ ಅಕೌಂಟ್ ವರ್ಗಾವಣೆಯ ಹಂತಕ್ಕೆ ಬಂದು ನಿಂತಿದೆ. ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಅಲ್ಪ ಸ್ವಲ್ಪ ಕಬಳಿಸುವ ಛಾಳಿ ಬೃಹದಾಕಾರವಾಗಿ ಬೆಳೆದುನಿಂತಿದ್ದು ಈಗ ಸಾವಿರಾರು ಎಕರೆ ಭೂಮಿಯನ್ನೇ ನುಂಗಿ ನೀರು ಕುಡಿಯುವ ಮಟ್ಟಕ್ಕೆ ತಲುಪಿದೆ. ಎಲ್ಲಕ್ಕೂ ಮಿಗಿಲಾಗಿ ಭ್ರಷ್ಟತೆಯ ಹಣೆಪಟ್ಟಿ ತಗುಲಿದರೆ ಸಾರ್ವಜನಿಕ ವಲಯದಲ್ಲಿ ಮರ್ಯಾದೆಗೆ ಅಂಜಿ ತಲೆಮರೆಸಿಕೊಂಡಿರುತ್ತಿದ್ದ ಲಂಚಕೋರರು ಈಗ “ನಾವೇನು ಮಹಾ ಮಾಡಿದ್ದೇವೆ –ಅವರು ನಮಗಿಂತಲೂ ಹೆಚ್ಚಾಗಿ ಮಾಡಿದ್ದಾರೆ” ಎಂದು ಹೇಳುತ್ತಾ ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ.

ಮಾನವ ಆಧುನಿಕತೆಯೆಡೆಗೆ ಸಾಗುತ್ತಿರುವಂತೆಲ್ಲಾ ಈ ನೇತ್ಯಾತ್ಮಕ ಪ್ರವೃತ್ತಿಗಳೂ ಅತ್ಯಾಧುನಿಕ ಸ್ವರೂಪ ಪಡೆಯುತ್ತಿವೆ. ತಂತ್ರಜ್ಞಾನದ ಅವಿಷ್ಕಾರಗಳ ಫಲಾನುಫಲಗಳನ್ನು ತನ್ನ ಅಭ್ಯುದಯಕ್ಕೆ ಉಪಯೋಗಿಸುವ ಪ್ರಮಾಣದಲ್ಲೇ ಭ್ರಷ್ಟ ಪರಂಪರೆಯನ್ನು ಬೆಳೆಸಲೂ ಮಾನವ ಉಪಯೋಗಿಸುತ್ತಿದ್ದಾನೆ. ಜಾಗತೀಕರಣ–ನವ ಉದಾರವಾದ ಪ್ರಕ್ರಿಯೆಗಳು ಇಡೀ ವಿಶ್ವವನ್ನು ಒಂದು ಪುಟ್ಟ ಗ್ರಾಮವನ್ನಾಗಿ ಪರಿವರ್ತಿಸುತ್ತಿರುವಂತೆಯೇ ಭ್ರಷ್ಟರ ಸಾಮ್ರಾಜ್ಯವೂ ಕ್ರೋಢೀಕೃತಗೊಳ್ಳುತ್ತಿದೆ. ಎಲ್ಲಿಂದ ಎಲ್ಲಿಯವರೆಗೆ ಈ ಕೊಂಡಿ ಹರಡಿದೆ ಎಂದು ಹುಡುಕುತ್ತಾ ಹೋದಾಗ ಸಿಂದಬಾದ್‌ನ ಅನುಭವಗಳೇ ನಮಗೂ ಆಗಬಹುದು. ಭಾರತದ ಯಾವುದೋ ಅರಣ್ಯ ಪ್ರದೇಶದಲ್ಲಿ ತನ್ನ ಉದ್ಯಮವನ್ನು ಸ್ಥಾಪಿಸಲು ಬಯಸುವ ಉದ್ಯಮಿಗೆ ಅಲ್ಲಿ ಶತಮಾನಗಳಿಂದ ನೆಲೆಸಿರುವ ಇಡೀ ಜನ ಸಮುದಾಯವನ್ನು ಮೂಲೋತ್ಪಾಟನೆ ಮಾಡುವುದೇ ಧ್ಯೇಯವಾಗುತ್ತದೆ. ಈ ಉದ್ಯಮಿಗೆ ಸಾರ್ವಭೌಮ ಪ್ರಜೆಗಳ ನೆಲೆ–ಸೆಲೆಗಿಂತಲೂ ತನ್ನ ಔದ್ಯಮಿಕ ಪ್ರಗತಿ ಮುಖ್ಯವಾಗುತ್ತದೆ.

ಈ ಉದ್ಯಮಿಗೆ ಪ್ರಭುತ್ವ ಮತ್ತು ಪ್ರಭುತ್ವದ ಪ್ರತಿನಿಧಿಗಳ ಬೆಂಬಲ ಶತಃಸಿದ್ಧ. ಹಾಗಾಗಿ ಜನಸಮುದಾಯಗಳ ಮೂಲೋತ್ಪಾಟನೆಗೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಕಾನೂನು ಪಾಲಕ ಸಾರ್ವಜನಿಕ ಸಂಸ್ಥೆಗಳ ಬಳಕೆ. ಈ ಸಂಸ್ಥೆಗಳು ಬಳಸುವ ಸಲಕರಣೆಗಳನ್ನು ಸರಬರಾಜು ಮಾಡಲು ಮತ್ತೊಂದು ಉದ್ಯಮ ಸದಾ ಸಿದ್ಧವಾಗಿರುತ್ತದೆ. ಔದ್ಯಮಿಕ ಪ್ರಗತಿಗೆ ಜನಸಾಮಾನ್ಯರು ತ್ಯಾಗ ಮಾಡುವ ಸಂದರ್ಭ ಬಂದಾಗ ಸೇನೆಯೇ ಮಧ್ಯವರ್ತಿಯಾಗುತ್ತದೆ. ಶಸ್ತ್ರಾಸ್ತ್ರಗಳೇ ಸಂವಾದಿಗಳಾಗುತ್ತವೆ. ಈ ಸಂವಾದಿಗಳ ಒಡೆಯರು ಮತ್ತೊಂದು ಜಾಗತಿಕ ಮಾರುಕಟ್ಟೆಯಲ್ಲಿ ಲಾಭಕ್ಕಾಗಿ ಹಾತೊರೆಯುತ್ತಿರುತ್ತವೆ. ಈ ಪ್ರಕ್ರಿಯೆಯಲ್ಲಿ ಪ್ರಭುತ್ವದ ಮನವೊಲಿಸಲು ಔದ್ಯಮಿಕ ಕ್ಷೇತ್ರಕ್ಕೆ ಇರುವ ಏಕೈಕ ಮಾರ್ಗವೆಂದರೆ ಸರ್ಕಾರಿ ವಲಯದಲ್ಲಿ ಶಿಫಾರಸುಗಳನ್ನು ಮಾಡುವ ಮೂಲಕ ತಮ್ಮ ಕೆಲಸ ಸಾಧಿಸುವುದು. ಇಲ್ಲಿ ಎದುರಾಗುವ ಸಾಂವಿಧಾನಿಕ ಕಾನೂನು ನಿಯಮಗಳನ್ನು ನಿವಾರಿಸಲು ಮಂತ್ರಿ ಮಂಡಲದವರನ್ನು ಓಲೈಸುವುದು ಅತ್ಯಗತ್ಯ. ಇಲ್ಲಿಯೇ ಸೃಷ್ಟಿಯಾಗುವುದು ಭ್ರಷ್ಟಾಚಾರದ ಪೆಡಂಭೂತ. ಇದು ಭ್ರಷ್ಟ ಪರಂಪರೆಯ ಒಂದು ಆಯಾಮ ಮಾತ್ರ.

ಮತ್ತೊಂದು ಆಯಾಮವೆಂದರೆ ಅಧಿಕಾರ ಹೊಂದಿರುವ ಆಳುವ ವರ್ಗಗಳು ರಾಜ್ಯ–ದೇಶದ ಪ್ರಗತಿಗಾಗಿ ಜನತೆಯ ಮನವೊಲಿಸಲು ಉಪಯೋಗಿಸುವ ತಂತ್ರಗಾರಿಕೆಗಳು. ವಿಶೇಷ ಆರ್ಥಿಕ ವಲಯಗಳಿಗಾಗಿ ಕೃಷಿ ಭೂಮಿಯ ಸ್ವಾಧೀನ. ನಗರಗಳ ವಿಸ್ತೀರ್ಣಕ್ಕಾಗಿ ಭೂ ಸ್ವಾಧೀನ. ಬೆಳೆಯುತ್ತಿರುವ ನಗರ ಸಂಸ್ಕೃತಿಗೆ ಪೂರಕವಾಗಿ ಅಧೋರಚನೆಗಳನ್ನು ನಿರ್ಮಿಸಲು ರಸ್ತೆ ಅಗಲೀಕರಣ. ಯಾವುದೇ ನಗರಗಳಲ್ಲಿ ನೋಡಿ ರಸ್ತೆ ಅಗಲೀಕರಣ, ಮೇಲ್ ಸೇತುವೆಗಳು, ಚತುಷ್ಪಥ ರಸ್ತೆ

ಇವೆಲ್ಲವೂ ಅಗತ್ಯವಲ್ಲದಿದ್ದರೂ ಅನಿವಾರ್ಯವೇನೋ ಎನ್ನುವಂತಾಗಿದೆ. ಅಷ್ಟೇ ಅಲ್ಲ ಸಹಜ ಪ್ರವೃತ್ತಿಯೂ ಆಗಿದೆ. ಆದರೆ ಈ ಪ್ರಗತಿ ಪಥದಲ್ಲಿ ಬಲಿಯಾಗುವವರಾರು? ಹಲವು ವರ್ಷಗಳ ಪರಿಶ್ರಮದಿಂದ, ಬೆವರು ಸುರಿಸಿ ದುಡಿದು ಅಲ್ಪ ಸ್ವಲ್ಪ ಆಸ್ತಿ ಮಾಡಿಕೊಂಡಿರುವ ಮಧ್ಯಮ ವರ್ಗ ಅಥವಾ ನಿರ್ಗತಿಕರಾಗಿ ಸ್ಲಂಗಳಲ್ಲಿ ನೆಲೆ ಮಾಡಿರುವ ಕಾರ್ಮಿಕ ವರ್ಗ. ಈ ಪ್ರಕ್ರಿಯೆಗಳ ಫಲಾನುಭವಿಗಳು ಬೆವರಿನ ವಾಸನೆಯೂ ಬರದಂತೆ ಡಿಯೋಡರೆಂಟ್ ಬಳಸುವ ಶ್ರೀಮಂತ ವರ್ಗಗಳು.

ಈ ಪರಿಸ್ಥಿತಿಗೆ ಕಾರಣ ಪ್ರಜಾತಂತ್ರದ ಬುನಾದಿಯಾದ ಚುನಾವಣೆಗಳೇ ಎಂದು ಹೇಳಬೇಕಿಲ್ಲ. ಚುನಾವಣೆಗಳಲ್ಲಿ ಹರಿಯುವ ಕಪ್ಪುಹಣದ ಹೊಳೆಯೇ ಐಪಿಎಲ್‌ನಲ್ಲೂ ಹರಿಯುತ್ತದೆ. ಅದೇ ಬಂಡವಾಳ ವಿಶ್ವಕಪ್ ಕ್ರಿಕೆಟ್‌ನಲ್ಲೂ ಹರಿದಾಡುತ್ತದೆ. ಇದೇ ಧನಭಂಡಾರ ಬಾಲಿವುಡ್‌ನಲ್ಲೂ ರಾರಾಜಿಸುತ್ತದೆ. ಈ ಕಪ್ಪು ಹಣದ ಮೂಲ ಕೇವಲ ರಾಜಕಾರಣದಲ್ಲಿ ಇದೆ ಎಂದು ಭಾವಿಸುವುದು ತಪ್ಪಾಗುತ್ತದೆ. ಭಾರತದ ಸಾಮಾಜಿಕ ಜೀವನದಲ್ಲಿ ಭ್ರಷ್ಟಾಚಾರ ಮತ್ತು ಜಾತೀಯತೆ ಒಂದು ನಾಗರೀಕತೆಯಾಗಿಯೇ ಬೆಳೆದುಬಂದಿದ್ದು ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಮೂಲ ಸೆಲೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಭ್ರಷ್ಟ ಪರಂಪರೆಯ ವ್ಯಾಪ್ತಿ ಮತ್ತು ವಿಸ್ತೀರ್ಣವನ್ನು ಹೆಚ್ಚಿಸುತ್ತಿರುವುದು ನವ ಉದಾರವಾದ ಮತ್ತು ಅದು ಸೃಷ್ಟಿಸುವ ಬಂಡವಾಳದ ಹೊರೆ. ಈ ಮೂಲ ಬೇರುಗಳನ್ನು ಕಿತ್ತೊಗೆಯದೆ, ಈ ಬೇರುಗಳಿಗೆ ನೀರೆರೆಯುವ ಉದಾರವಾದದ ಸೂಕ್ಷ್ಮ ತರಂಗಗಳನ್ನು ಕಂಡುಹಿಡಿಯದೆ ಲೋಕಪಾಲ್-ಲೋಕಾಯುಕ್ತ ಎಂಬ ಸರ್ಕಾರಿ ನಿಯಂತ್ರಿತ ಸಂಸ್ಥೆಗಳನ್ನೇ ಆಶ್ರಯಿಸುವುದು ವ್ಯರ್ಥಾಲಾಪವಾಗುತ್ತದೆ.

ಉದಾರವಾದ ಖಾಸಗೀಕರಣ ಮತ್ತು ಭ್ರಷ್ಟಾಚಾರ

ಕಳೆದ ಒಂದು ವರ್ಷದಲ್ಲಿ ದೇಶ ಕಂಡಿರುವ ಭ್ರಷ್ಟಾಚಾರದ ಹಗರಣಗಳು ಭಾರತದ ಭ್ರಷ್ಟ ಪರಂಪರೆ ಮತ್ತು ಮನಸ್ಥಿತಿಯನ್ನು ಮಾತ್ರ ಬಿಂಬಿಸಿಲ್ಲ. ಇಡೀ ವಿಶ್ವವೇ ಒಂದು ಪುಟ್ಟ ಗ್ರಾಮವಾಗುತ್ತದೆ, ಮಾರುಕಟ್ಟೆ ಆರ್ಥಿಕತೆಯ ಪ್ರಭಾವದಿಂದ ಲೈಸೆನ್ಸ್ ಪರ್ಮಿಟ್ ರಾಜ್ ತೊಲಗಿ ಭ್ರಷ್ಟಾಚಾರ ಕೊನೆಗೊಳ್ಳುತ್ತದೆ ಎಂದೆಲ್ಲಾ ಭ್ರಮೆ ಹುಟ್ಟಿಸಿದ ನವ ಉದಾರವಾದದ ಕರಾಳ ಮುಖವನ್ನೂ ಪರಿಚಯಿಸಿದೆ. ದೇಶದ ಆರ್ಥಿಕ ನೀತಿ ಮತ್ತು ಧೋರಣೆಗಳನ್ನು ರೂಪಿಸುವ ಆಳ್ವಿಕರಿಂದ ತಮ್ಮ ಉದ್ದಿಮೆಗಳನ್ನು, ತಮ್ಮ ಬಂಡವಾಳವನ್ನು ವೃದ್ಧಿಸಿಕೊಂಡಿರುವ ಉದ್ಯಮಪತಿಗಳು ಈಗ ಭ್ರಷ್ಟಾಚಾರದ ಪಾಲನ್ನೂ ವಹಿಸಿಕೊಳ್ಳಬೇಕಿದೆ.

ಭಾರತದಲ್ಲಿ ಭ್ರಷ್ಟ ಪರಂಪರೆ ಜಾಗತೀಕರಣದ ಪ್ರವೇಶಾನಂತರದಲ್ಲಿ ಸೃಷ್ಟಿಯಾದುದೇನಲ್ಲವಾದರೂ, 1991ರ ನಂತರದಲ್ಲಿ ನಡೆದಿರುವ ಭ್ರಷ್ಟಾಚಾರ ಪ್ರಕರಣಗಳ ಪ್ರಮಾಣ, ಸ್ವರೂಪ ಮತ್ತು ಆಯಾಮಗಳು ಮಾತ್ರ ವಿಭಿನ್ನ, ಗಂಭೀರ ಸ್ವರೂಪ ಪಡೆದಿವೆ. ಈ ಪ್ರಕರಣಗಳು ಭ್ರಷ್ಟಾಚಾರದ ಗುಣಾತ್ಮಕ ಪರಿಣಾಮ ಮತ್ತು ಸ್ವರೂಪ ಸಾಕಷ್ಟು ಬದಲಾವಣೆ ಹೊಂದಿವೆ. ಆಳ್ವಿಕರು ಮತ್ತು ಅಧಿಕಾರಶಾಹಿಗಳು ತಮ್ಮ ಸಾಂವಿಧಾನಿಕ ಹೊಣೆಗಾರಿಕೆಯನ್ನೂ ಮರೆತು ಬೆರಳೆಣಿಕೆಯ ಉದ್ಯಮಿಗಳಿಗೆ ಸಂಪತ್ತಿನ ಭಂಡಾರವನ್ನೇ ಪರಭಾರೆ ಮಾಡಿರುವುದನ್ನು ಈ ಅವಧಿಯಲ್ಲಿ ಕಾಣಬಹುದು.

ಈ ಪ್ರಕ್ರಿಯೆಯಲ್ಲಿ ಎರಡು ಗುಂಪುಗಳ ಬಳಿ ಅಧಿಕ ಸಂಪತ್ತಿನ ಕ್ರೋಢೀಕರಣವಾಗುವುದನ್ನು ಕಾಣಬಹುದು. ಮೊದಲನೆಯ ಗುಂಪು ಸರ್ಕಾರಿ ಆಡಳಿತ ಯಂತ್ರವನ್ನು ನಿರ್ವಹಿಸುವ ಉನ್ನತಾಧಿಕಾರಿಗಳ ವರ್ಗ. ಭಾರಿ ಉದ್ಯಮಪತಿಗಳು ಮತ್ತು ರಾಜಕಾರಣಿಗಳ ನಿಕಟ ಸಂಬಂಧಗಳು ಮತ್ತು ಸಂಪರ್ಕಗಳು ಮತ್ತು ಚುನಾಯಿತ ಪ್ರಜಾ ಪ್ರತಿನಿಧಿಗಳು ಅಲ್ಪಾವಧಿಯಲ್ಲೇ ಅಪಾರ ಆಸ್ತಿಯನ್ನು ಸಂಪಾದಿಸುವುದು ಈ ನಿಟ್ಟಿನಲ್ಲಿ ಸಾಕ್ಷಿಯಾಗಿ ನಿಲ್ಲುತ್ತವೆ. ಎರಡನೆಯ ಗುಂಪು ಔದ್ಯಮಿಕ ಸಮೂಹಗಳು. ಈ ಸಮೂಹಗಳು ತಮ್ಮ ಆರ್ಥಿಕ ಪ್ರಾಬಲ್ಯ ಮತ್ತು ಮಾರುಕಟ್ಟೆ ಸಾಮರ್ಥ್ಯಕ್ಕನುಗುಣವಾಗಿ ಅತ್ಯಂತ ಕಡಿಮೆ ದರದಲ್ಲಿ ಅತ್ಯಮೂಲ್ಯ ಸಂಪತ್ತನ್ನು ಲಪಟಾಯಿಸಲು ಸರ್ವ ಪ್ರಯತ್ನಗಳನ್ನೂ ಮಾಡಿ, ಯಶಸ್ವಿಯೂ ಆಗುತ್ತವೆ. 2ಜಿ ತರಂಗಾಂತರದಲ್ಲಿ 1 ಲಕ್ಷ 76 ಸಾವಿರ ಕೋಟಿ ರೂಗಳನ್ನು ಕಬಳಿಸಿರುವುದೇ ಇದಕ್ಕೆ ಸಾಕ್ಷಿ. ಈ ರೀತಿಯ ಅನೇಕ ವ್ಯವಹಾರಗಳು ನಡೆಯುತ್ತಲೇ ಇರುತ್ತವೆ. ಎಲ್ಲವೂ ಭ್ರಷ್ಟಾಚಾರದ ಪರಿಧಿಯಲ್ಲಿ ಬರುವುದಿಲ್ಲವಾದರೂ ಅಡ್ಡ ಮಾರ್ಗಗಳನ್ನು ಅನುಸರಿಸಿ ಖಾಸಗಿ ಕಂಪನಿಗಳು ತಮ್ಮ ಲಾಭ ಹೆಚ್ಚಿಸಿಕೊಳ್ಳುವುದು ಜಾಗತೀಕರಣದ ವೈಶಿಷ್ಟ್ಯ.

ನವ ಉದಾರವಾದದ ಸಾಮ್ರಾಜ್ಯದಲ್ಲಿ ಈ ರೀತಿಯ (ಅ)ವ್ಯವಹಾರಗಳು ನಡೆಯುವುದು ಸಹಜವೇ ಆಗಿರುತ್ತದೆ. ಏಕೆಂದರೆ ನವ ಉದಾರವಾದಿ ಆರ್ಥಿಕ ನೀತಿಗಳು ಜಾರಿಗೊಂಡಂತೆಲ್ಲಾ ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಪಾತ್ರ ಕಿರಿದಾಗುತ್ತಲೇ ಹೋಗುತ್ತದೆ. ವಾಣಿಜ್ಯೋದ್ಯಮಿಗಳು ಸರ್ಕಾರದ ಹಿಡಿತದಿಂದ ಮುಕ್ತರಾಗುತ್ತಾರೆ. ಮಾರುಕಟ್ಟೆ ನೀತಿಗಳು ಸರ್ಕಾರದ ನೀತಿಯನ್ನು ನಿಯಂತ್ರಿಸುತ್ತವೆ. ಹಾಗಾಗಿ ಹೆಚ್ಚು ಉದಾರವಾದಿ ಆಳ್ವಿಕೆಗೆ ಒಳಪಟ್ಟಂತೆಲ್ಲಾ ದೇಶದ ಆರ್ಥಿಕತೆ ಭ್ರಷ್ಟಾಚಾರದ ಆಗರವಾಗುತ್ತಾ ಹೋಗುತ್ತದೆ. ಆರ್ಥಿಕತೆಯಲ್ಲಿ ಪ್ರಭುತ್ವದ ಹಸ್ತಕ್ಷೇಪವನ್ನು ಕಡಿಮೆ ಮಾಡಿದಂತೆಲ್ಲಾ ಭ್ರಷ್ಟಾಚಾರವೂ ಕಡಿಮೆಯಾಗುತ್ತದೆ, ಪಾರದರ್ಶಕತೆ ಹೆಚ್ಚಾಗುತ್ತದೆ ಎಂದು ವಾದಿಸುತ್ತಿದ್ದ ನವ ಉದಾರವಾದದ ಪೂಜಾರಿಗಳು ಈಗ ಕೈಕೈ ಹಿಸುಕಿಕೊಳ್ಳುವಂತಾಗಿದೆ. ನವ ಉದಾರವಾದ ನೀತಿಗಳು ಭಾರತಕ್ಕೆ ಲಗ್ಗೆ ಇಟ್ಟ ನಂತರ ಸಂಭವಿಸಿರುವ ಭ್ರಷ್ಟಾಚಾರ ಹಗರಣಗಳೇ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ಮಹಾ ಹಗರಣಗಳ ಸರಮಾಲೆ

ಭಾರತ 1991ರಲ್ಲಿ ಮುಕ್ತ ಮಾರುಕಟ್ಟೆ ನೀತಿಯನ್ನು ಅಪ್ಪಿಕೊಂಡ ನಂತರದಲ್ಲಿ ಸಂಭವಿಸಿರುವ ಹಗರಣಗಳೆಲ್ಲವೂ ಬೃಹತ್ ಪ್ರಮಾಣದವು. 90ರ ದಶಕದ ಹವಾಲ ಹಗರಣ ಈ ಸರಮಾಲೆಗೆ ಪ್ರಥಮ ಸೋಪಾನ. 18 ಮಿಲಿಯನ್ ಡಾಲರ್‌ಗಳನ್ನೊಳಗೊಂಡಿದ್ದ ಈ ಹಗರಣದಲ್ಲಿ ಭಾಗಿಯಾಗಿದ್ದವರಲ್ಲಿ ಗಣ್ಯ ರಾಜಕಾರಣಿಗಳೇ ಹೆಚ್ಚು. ಹರ್ಷದ್ ಮೆಹ್ತಾ ಎಂಬ ಉದ್ಯಮಿ ದೇಶದ ಬೊಕ್ಕಸಕ್ಕೆ 3000 ಕೋಟಿ ರೂಗಳಷ್ಟು ನಷ್ಟ ಮಾಡಿದ್ದರೂ ಶಿಕ್ಷೆಗೊಳಗಾಗಲಿಲ್ಲ. ಜವರಾಯನ ಶಿಕ್ಷೆಯೇ ಗತಿಯಾಯಿತು. ಆದರೂ ಈ ಮೆಹ್ತಾ ದೇಶದ ಅತಿ ದೊಡ್ಡ ಭ್ರಷ್ಟಾಚಾರ ಹಗರಣದ ರೂವಾರಿಯಾಗಿದ್ದರೂ ಮುಂಬೈನಲ್ಲಿ ಆರ್ಥಿಕತೆಯ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಲೇ ಕಾಲ ಕಳೆದದ್ದು ನಮ್ಮ ದೇಶದ ನ್ಯಾಯ ವ್ಯವಸ್ಥೆಗೆ ಕನ್ನಡಿ ಹಿಡಿದಂತಿತ್ತು.

ಜಾಗತೀಕರಣದ ಪಾದಾರ್ಪಣೆಗೂ ಮುನ್ನ ರಾಜೀವ್‌ಗಾಂಧಿ ಅವಧಿಯಲ್ಲಿನ ಬೋಫೋರ್ಸ್ ಪ್ರಕರಣದಲ್ಲಿ ಈವರೆಗೂ ನ್ಯಾಯ ದೊರೆತಿಲ್ಲ. 40 ಕೋಟಿ ರೂಗಳ ಲಂಚ ಪ್ರಕರಣದಲ್ಲಿ ಭಾಗಿಯಾಗಿದ್ದ ರಾಜಕಾರಣಿಗಳೆಲ್ಲರೂ ಸಾಕ್ಷ್ಯಾಧಾರಗಳಿಲ್ಲದೆ(?) ತಪ್ಪಿಸಿಕೊಂಡಿದ್ದಾಯಿತು. ಇಡೀ ಹಗರಣದ ರೂವಾರಿ ಇಟಲಿಯ ಕಟ್ರೋಚಿ ಇಂದಿಗೂ ಮುಕ್ತವಾಗಿ ಓಡಾಡಿಕೊಂಡಿದ್ದಾನೆ. ಬೋಫೋರ್ಸ್ ಗನ್‌ಗಳು ಇಂದಿಗೂ ಬಳಕೆಯಲ್ಲಿವೆ. ಆದರೆ ಈ ಗನ್‌ಗಳ ಹಿಂದಿನ ಕರಾಳ ಭ್ರಷ್ಟ ಮುಖವಾಡಗಳು ಮಾತ್ರ ನ್ಯಾಯದ ಕಣ್ ತಪ್ಪಿಸಿ ಮುಕ್ತವಾಗಿ ಓಡಾಡುತ್ತಲೇ ಇವೆ. ಮತ್ತೊಂದು ಪ್ರಕರಣದಲ್ಲಿ 2009ರ ಫೆಬ್ರವರಿ 20ರಂದು ಅಂದಿನ ಕೇಂದ್ರ ಸಂಪರ್ಕ ಖಾತೆ ಮಂತ್ರಿ ಸುಖ್‌ರಾಂ 2.45 ಕೋಟಿ ರೂಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಮಂತ್ರಿ ಮಹೋದಯರು 4.25 ಕೋಟಿ ರೂಗಳ ಅಕ್ರಮ ಆಸ್ತಿ ಸಂಪಾದಿಸಿರುವುದಾಗಿ ಆರೋಪಿಸಲಾಗಿತ್ತು. ಆದರೆ ಸುಖ್‌ರಾಂಗೆ ಯಾವುದೇ ರೀತಿಯ ಶಿಕ್ಷೆಯಾಗಿಲ್ಲ. ಮಧುಕೋಡಾ, ಜಾರ್ಖಂಡಿನ ಮಾಜಿ ಮುಖ್ಯಮಂತ್ರಿ, 4 ಸಾವಿರ ಕೋಟಿ ರೂಗಳ ಅಕ್ರಮ ಆಸ್ತಿಯ ಒಡೆಯ. ಈತನ ಆಸ್ತಿ ವಿವರ ನೋಡಿದರೆ ಎದೆ ಝಲ್ಲೆನ್ನುತ್ತದೆ. ಮುಂಬೈನಲ್ಲಿ ಮೂರು ಕಂಪನಿಗಳು, ಥಾಯ್ಲೆಂಡಿನಲ್ಲಿ ಹೋಟೆಲ್, ಕೊಲ್ಕತ್ತಾದಲ್ಲಿ ಸ್ಥಿರಾಸ್ತಿ, ಲೈಬೀರಿಯಾದಲ್ಲಿ ಗಣಿ ಉದ್ಯಮ ಇತ್ಯಾದಿ.

ಭಾರತ 1991ರಲ್ಲಿ ಮುಕ್ತ ಮಾರುಕಟ್ಟೆ ನೀತಿಯನ್ನು ಅಪ್ಪಿಕೊಂಡ ನಂತರದಲ್ಲಿ ಸಂಭವಿಸಿರುವ ಹಗರಣಗಳೆಲ್ಲವೂ ಬೃಹತ್ ಪ್ರಮಾಣದವು. 90ರ ದಶಕದ ಹವಾಲ ಹಗರಣ ಈ ಸರಮಾಲೆಗೆ ಪ್ರಥಮ ಸೋಪಾನ. 18 ಮಿಲಿಯನ್ ಡಾಲರ್‌ಗಳನ್ನೊಳಗೊಂಡಿದ್ದ ಈ ಹಗರಣದಲ್ಲಿ ಭಾಗಿಯಾಗಿದ್ದವರಲ್ಲಿ ಗಣ್ಯ ರಾಜಕಾರಣಿಗಳೇ ಹೆಚ್ಚು. ಹರ್ಷದ್ ಮೆಹ್ತಾ ಎಂಬ ಉದ್ಯಮಿ ದೇಶದ ಬೊಕ್ಕಸಕ್ಕೆ 3000 ಕೋಟಿ ರೂಗಳಷ್ಟು ನಷ್ಟ ಮಾಡಿದ್ದರೂ ಶಿಕ್ಷೆಗೊಳಗಾಗಲಿಲ್ಲ. ಜವರಾಯನ ಶಿಕ್ಷೆಯೇ ಗತಿಯಾಯಿತು. ಆದರೂ ಈ ಮೆಹ್ತಾ ದೇಶದ ಅತಿ ದೊಡ್ಡ ಭ್ರಷ್ಟಾಚಾರ ಹಗರಣದ ರೂವಾರಿಯಾಗಿದ್ದರೂ ಮುಂಬೈನಲ್ಲಿ ಆರ್ಥಿಕತೆಯ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಲೇ ಕಾಲ ಕಳೆದದ್ದು ನಮ್ಮ ದೇಶದ ನ್ಯಾಯ ವ್ಯವಸ್ಥೆಗೆ ಕನ್ನಡಿ ಹಿಡಿದಂತಿತ್ತು. ಜಾಗತೀಕರಣದ ಪಾದಾರ್ಪಣೆಗೂ ಮುನ್ನ ರಾಜೀವ್‌ಗಾಂಧಿ ಅವಧಿಯಲ್ಲಿನ ಬೋಫೋರ್ಸ್ ಪ್ರಕರಣದಲ್ಲಿ ಈವರೆಗೂ ನ್ಯಾಯ ದೊರೆತಿಲ್ಲ.

ತಾನು ಆಳಿದ ರಾಜ್ಯದ ವಾರ್ಷಿಕ ಬಜೆಟ್‌ನ ಐದನೇ ಒಂದು ಭಾಗದಷ್ಟನ್ನು ಈ ಮಾಜಿ ಮುಖ್ಯಮಂತ್ರಿಗಳು ತಮ್ಮದಾಗಿಸಿಕೊಂಡಿದ್ದರು. ಹರ್ಷದ್ ಮೆಹ್ತಾ, ಹಸನ್ ಆಲಿ ನಂತರದ ಸ್ಥಾನ ಬಹುಶಃ ಮಧುಕೋಡಾ ಅವರಿಗೇ ಸಲ್ಲಬೇಕು, ಭ್ರಷ್ಟರ ಪಟ್ಟಿಯಲ್ಲಿ.

ಇನ್ನು ಕರ್ನಾಟಕದ ತೆಲಗಿ. ಸ್ಟಾಂಪ್ ಪೇಪರ್ ಎಂಬ ಸರ್ಕಾರಿ ಆದಾಯದ ಮೂಲವನ್ನೇ ಅಲುಗಾಡಿಸಿದ ಈತ 43 ಸಾವಿರ ಕೋಟಿ ರೂಗಳ ಅಕ್ರಮ ನಡೆಸಿದ್ದ. ಈತನ ಬಳಿ ನಕಲಿ ಸ್ಟಾಂಪ್ ಪೇಪರ್ ತಯಾರಿಸಲು 300 ಏಜೆಂಟರಿದ್ದರು. ತೆಲಗಿಯ ವಾರ್ಷಿಕ ಲಾಭವೇ 202 ಕೋಟಿ ರೂಗಳಾಗಿತ್ತು. 2006ರಲ್ಲಿ ಹತ್ತು ವರ್ಷಗಳ ಕಠಿಣ ಸಜೆಗೊಳಗಾಗಿರುವ ತೆಲಗಿಗೆ ಇಂದಿಗೂ ಸೂಕ್ತ ರೀತಿಯ ಶಿಕ್ಷೆಯಾಗಿಲ್ಲ. ರಾಷ್ಟ್ರ ಮಟ್ಟದಲ್ಲಿ ಇದಕ್ಕಿಂತಲೂ ಹೆಚ್ಚಿನ ಪ್ರಮಾಣದ ಭ್ರಷ್ಟಾಚಾರ ಹಗರಣ ಸಂಭವಿಸಿಲ್ಲವೆಂದರೂ ತಪ್ಪೇನಿಲ್ಲ. ಮಾರುಕಟ್ಟೆ ಆರ್ಥಿಕತೆಯ ಕೇಂದ್ರ ಬಿಂದು ಎಂದೇ ಪರಿಗಣಿಸಲ್ಪಡುವ ಷೇರು ಮಾರುಕಟ್ಟೆ ಸೃಷ್ಟಿಸಿರುವ ಭ್ರಷ್ಟ ಕುಳಗಳಿಗೆ ಲೆಕ್ಕವೇ ಇಲ್ಲ.

ಇವರಲ್ಲಿ ಕೇತನ್ ಪರೇಖ್ ಒಬ್ಬರು. 1999–2000ರ ಅವಧಿಯಲ್ಲಿ ಭಾರತದ ಷೇರು ಮಾರುಕಟ್ಟೆಗಳು ಉಚ್ಛ್ರಾಯ ಹಂತ ತಲುಪಿದ್ದ ಸಂದರ್ಭದಲ್ಲಿ ಪರೇಖ್ ಎಂಬ ಈ ಷೇರು ದಲ್ಲಾಳಿ ಆಧುನಿಕ ತಂತ್ರಜ್ಞಾನ ಮತ್ತು ಮಾರುಕಟ್ಟೆ ಮಂತ್ರವನ್ನೇ ತನ್ನ ಬಂಡವಾಳವನ್ನಾಗಿಸಿಕೊಂಡು ಕೋಟ್ಯಾಂತರ ರೂಗಳನ್ನು ಲಪಟಾಯಿಸಿದ್ದ. ಇದರ ಪರಿಣಾಮ ಷೇರು ಮಾರುಕಟ್ಟೆ ಕುಸಿತ, ಆರ್ಥಿಕ ಹಿನ್ನಡೆ, ಲಕ್ಷಾಂತರ ಮಧ್ಯಮ ವರ್ಗಗಳ ದೀವಾಳಿ. ಆದರೆ ಪರೇಖ್ ಮಾತ್ರ ಇಂದಿಗೂ ಪರೋಕ್ಷವಾಗಿ ಮಾರುಕಟ್ಟೆಯಲ್ಲಿ ಸಕ್ರಿಯನಾಗಿದ್ದಾನೆ. ಇನ್ನು ಇತ್ತೀಚಿನ 2ಜಿ ತರಂಗಾಂತರ, ಆದರ್ಶ ವಸತಿ ಸಮುಚ್ಛಯ, ಕಾಮನ್‌ವೆಲ್ತ್ ಹಗರಣಗಳ ಬಗ್ಗೆ ಹೆಚ್ಚಿಗೆ ಹೇಳುವುದೇ ಬೇಕಿಲ್ಲ. ಭಾರತದ ಇತಿಹಾಸದಲ್ಲಿ ಎಂದೂ ಕಂಡರಿಯದ ಭ್ರಷ್ಟಾಚಾರವನ್ನು ಕಳೆದ ವರ್ಷ ಕಂಡಿದ್ದೇವೆ.

ಬಂಡವಾಳದ ಬಡಾಯಿ

ನವ ಉದಾರವಾದಿ ಆರ್ಥಿಕತೆಯಲ್ಲಿ ಸಂಭವಿಸಿರುವ ಈ ಭ್ರಷ್ಟಾಚಾರ ಹಗರಣಗಳು ಸೂಚಿಸುವುದಾದರೂ ಏನನ್ನು? ಈ ಎಲ್ಲಾ ಹಗರಣಗಳ ಹಿಂದಿರುವುದು ಜಾಗತಿಕ ಬಂಡವಾಳವೇ. ಕರ್ನಾಟಕದಲ್ಲಿ ನಡೆಯುತ್ತಿರುವ ಭೂಹಗರಣ, ಅಕ್ರಮ ಗಣಿಗಾರಿಕೆ, ಒರಿಸ್ಸಾದ ಪಾಸ್ಕೋ, ವೇದಾಂತ, ಮಹಾರಾಷ್ಟ್ರದ ಜೈತಾಪುರ, ಛತ್ತಿಸ್‌ಘಡದ ಮಿತ್ತಲ್ ಉದ್ಯಮಗಳು, ಝಾರ್ಖಂಡಿನ ಗಣಿ ಉದ್ಯಮಗಳು, ಬಂಗಾಲದ ಸಿಂಗೂರ್ ಮತ್ತು ನಂದಿಗ್ರಾಮಗಳು, ಉಡುಪಿಯ ತದಡಿ ಉಷ್ಣ ವಿದ್ಯುತ್ ಸ್ಥಾವರ ಇವೆಲ್ಲ ವನ್ನೂ ನಿಯಂತ್ರಿಸುವ ಸೂತ್ರಧಾರ ಜಾಗತಿಕ ಬಂಡವಾಳ. ಈ ಬಂಡವಾಳದ ಹರಿವು ಕೇವಲ ಔದ್ಯಮಿಕ ಕ್ಷೇತ್ರವನ್ನು ಮಾತ್ರ ಆವರಿಸಿಲ್ಲ. ಪ್ರಗತಿ, ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಳ್ಳಲಾಗುತ್ತಿರುವ ಬೃಹತ್ ಯೋಜನೆಗಳು, ನಗರೀಕರಣ ಪ್ರಕ್ರಿಯೆಗೆ ಪೂರಕವಾಗಿ ಬೆಳೆ ಯುತ್ತಿರುವ ರಿಯಲ್ ಎಸ್ಟೇಟ್ ಮಾಫಿಯ, ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಸದಾ ಸಿದ್ಧವಾಗಿರುವ ಗಣಿ ಉದ್ಯಮ ಎಲ್ಲೆಡೆಯೂ ಜಾಗತಿಕ ಬಂಡವಾಳ ಪಸರಿಸಿದೆ.

ಇದೇ ಜಾಗತಿಕ ಬಂಡವಾಳವೇ ಇಂದು ಭಾರತದ ರಾಜಕಾರಣವನ್ನೂ ನಿಯಂತ್ರಿಸುತ್ತಿದೆ. ಗ್ರಾಮಪಂಚಾಯತಿ ಚುನಾವಣೆಗಳಾಗಲಿ, ಲೋಕಸಭಾ ಚುನಾವಣೆಗಳಾಗಲಿ ಬಂಡವಾಳವೇ ಗೆಲುವಿನ ಸೋಪಾನವಾಗಿರುತ್ತದೆ. ರಾಜಕಾರಣಿಗಳು ತಮ್ಮ ಆಸ್ತಿ ಘೋಷಣೆಯನ್ನೇನೋ ಮಾಡುತ್ತಾರೆ. ಆದರೆ ಒಂದೇ ಅವಧಿಗೆ ಶಾಸಕರಾದವರ ಆಸ್ತಿಯಲ್ಲೂ ಕೋಟ್ಯಾಂತರ ರೂಗಳ ವೃದ್ಧಿಯಾಗಿದ್ದರೂ ಏಕೆ–ಹೇಗೆ ಎಂದು ಪ್ರಶ್ನಿಸುವವರಿಲ್ಲ. ಆಸ್ತಿ ಘೋಷಿಸಿರುವುದೇ ಮಹತ್ಕಾರ್ಯ ಎಂಬಂತೆ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಗೆ ನಾಗರಿಕ ಸಮಾಜ ತಲುಪಿದೆ. ಇದು ಭ್ರಷ್ಟತೆಯನ್ನು ಸ್ವೀಕೃತಗೊಳಿಸುವ ಒಂದು ವಿಧಾನವಾಗಿದೆ. ವೇದಾಂತ ಔದ್ಯಮಿಕ ಸಮೂಹದ ಒಡೆಯ ಮಿತ್ತಲ್ ಅವರ ಜೀವನಗಾಥೆಯನ್ನು ವೈಭವೋಪೇತವಾಗಿ ವರ್ಣಿಸಿ, ಶ್ಲಾಘಿಸಿ ವರದಿ ಮಾಡುವ ಪ್ರಸಿದ್ಧ ಮುದ್ರಣ–ದೃಶ್ಯ ಮಾಧ್ಯಮಗಳು ಮಿತ್ತಲ್ ಅವರ ಆಸ್ತಿ ವೃದ್ಧಿಯ ಹಿಂದಿನ ಕರಾಳ ಅಧ್ಯಾಯಗಳನ್ನು ಪರಿಗಣಿಸುವುದೇ ಇಲ್ಲ. ಶ್ರಮಿಕರ ಬೆವರು ಮತ್ತು ಶ್ರಮಕ್ಕೆ ಕಿಂಚಿತ್ತೂ ಬೆಲೆ ನೀಡದ ಮಾಧ್ಯಮಗಳಿಗೆ ಮಿತ್ತಲ್ ಅವರ ಪಯಣ ಅಪ್ರತಿಮ, ಐತಿಹಾಸಿಕವಾಗಿ ಕಾಣುತ್ತದೆ. ಇದು ನಾಗರಿಕ ಸಮಾಜದ ದುರಂತ.

ಇಂದು ಭಾರತದಲ್ಲಿ ನಡೆಯುತ್ತಿರುವ ಸಂಘರ್ಷದ ಸ್ವರೂಪವನ್ನೇ ಪುನರ್ ಪರಿಶೀಲಿಸುವ ಅಗತ್ಯತೆ ಹೆಚ್ಚಾಗಿದೆ. ಮೂಲಭೂತವಾಗಿ ಭಾರತದಲ್ಲಿ ನಡೆಯುತ್ತಿರುವುದು ಬಂಡವಾಳ ಮತ್ತು ಶ್ರಮದ ನಡುವಿನ ಸಂಘರ್ಷ. ದಾಂತೇವಾಡ, ಸಿಂಗೂರು, ನಂದಿಗ್ರಾಮ, ಝಾರ್ಖಂಡ್, ಒರಿಸ್ಸಾ, ಬಳ್ಳಾರಿಗಳಲ್ಲಿ ಹರಿಯುತ್ತಿರುವ ಬಂಡವಾಳದ ನದಿಗಳ ಮಗ್ಗುಲಲ್ಲೇ ಶ್ರಮಜೀವಿಗಳ ಬೆವರು–ನೆತ್ತರುಗಳು ಸದ್ದಿಲ್ಲದೆ ಹರಿಯುತ್ತಿವೆ. ತಮ್ಮ ಮೂಲ ನೆಲೆಯನ್ನು ಕಾಪಾಡಿಕೊಳ್ಳಲು ಆದಿವಾಸಿಗಳು, ಕೃಷಿ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಮಧ್ಯಮವರ್ಗಗಳು, ಬಡ ರೈತರು ಪರದಾಡಬೇಕಾಗಿದೆ. ಅಭಿವೃದ್ಧಿ ಪಥದಲ್ಲಿ ಮೈಲುಗಲ್ಲಾಗಬೇಕಿದ್ದ ಈ ಶ್ರಮಜೀವಿ ವರ್ಗಗಳು ಬಂಡವಾಳಿಗರ, ಕಾರ್ಪೋರೇಟ್ ಉದ್ಯಮಿಗಳ ಹಾಸುಗಲ್ಲುಗಳಾಗಿದ್ದಾರೆ. ಈ ಹಾಸುಗಲ್ಲುಗಳ ಮೇಲೆ ಚಲಿಸುತ್ತಲೇ ಕಾರ್ಪೋರೇಟ್ ವಲಯಗಳು, ಪ್ರಜಾಪ್ರತಿನಿಧಿಗಳೊಡನೆ ಕೈಜೋಡಿಸಿ ಭ್ರಷ್ಟಾಚಾರದ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ.

ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನ ಮತ್ತು ಅಪೇಕ್ಷಿತ ಲೋಕಪಾಲ್ ಮಸೂದೆ ರಾಜಕೀಯ ಭ್ರಷ್ಟತೆಯ ವಿರುದ್ಧ ರಣಕಹಳೆ ಮೊಳಗಿಸಿದ್ದರೂ, ಇಡೀ ಭ್ರಷ್ಟ ಪರಂಪರೆಯ ಮೂಲ ಸೆಲೆಯಾದ ಜಾಗತಿಕ ಬಂಡವಾಳದ ಪ್ರಭಾವವನ್ನು ಗ್ರಹಿಸದೆ ಹೋದಲ್ಲಿ ಇಡೀ ಆಂದೋಲನವೇ ವಿಫಲವಾಗುತ್ತದೆ. ಜನಪರ, ಪ್ರಜಾಸತ್ತಾತ್ಮಕ ಹೋರಾಟವನ್ನು ನಿಷ್ಕ್ರಿಯಗೊಳಿಸುವ ತಂತ್ರಗಾರಿಕೆ ನವ ಉದಾರವಾದಕ್ಕೆ ಕರಗತವಾಗಿದೆ. ನವ ಉದಾರವಾದ ಪೋಷಿಸಿ ಬೆಳೆಸುತ್ತಿರುವ ಔದ್ಯಮಿಕ ಜಾಗತಿಕ ಬಂಡವಾಳ ಸೃಷ್ಟಿಸುತ್ತಿರುವ ಭ್ರಮಾಲೋಕದಲ್ಲಿ ಸಿಲುಕಿ, ಬಂಡವಾಳದ ಮೂಲ ಉದ್ದೇಶವನ್ನು ಗ್ರಹಿಸದೆ ಹೋದಲ್ಲಿ, ಭಾರತದಲ್ಲಿ ರಾಜಕೀಯ ಭ್ರಷ್ಟಾಚಾರ ಕೊನೆಗಾಣುವುದು ಕನಸಿನ ಮಾತೇ ಸರಿ. ಅಣ್ಣಾ ಹಜಾರೆಯವರ ಹೋರಾಟವನ್ನು ಸ್ವಾಗತಿಸುತ್ತಲೇ ಈ ಅಪಾಯದ ಗಂಟೆಯನ್ನು ಬಾರಿಸುವ ಅವಶ್ಯಕತೆಯನ್ನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಹಜಾರೆ ಗೆದ್ದರು ಭ್ರಷ್ಟಾಚಾರ ಸೋಲಲಿಲ್ಲ!

ಶಿವಸುಂದರ್

ಕಳೆದ ಒಂದು ವಾರದಿಂದ ಭಾರತದ ಮಧ್ಯಮ ವರ್ಗ ಅದರಲ್ಲೂ ನಗರದ ಮಧ್ಯಮ ವರ್ಗ ಒಂದು ಕ್ರಾಂತಿಯನ್ನೇ ಮಾಡಿದ ಧನ್ಯತೆಯಲ್ಲಿ ತೇಲಾಡುತ್ತಿದೆ. ಖ್ಯಾತ ಗಾಂಧೀವಾದಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಜನಲೋಕ್‌ಪಾಲ್ ಮಸೂದೆಯನ್ನು ಜಾರಿಗೆ ತರಲು ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ 97 ಗಂಟೆಗಳ ಉಪವಾಸದ ಮೂಲಕ ಭಾರತದಲ್ಲಿ ಕ್ರಾಂತಿಯ ಹೊಸ ಪರ್ವವೇ ಪ್ರಾರಂಭವಾಗಿದೆಯೆಂಬ ಭ್ರಾಂತಿಯನ್ನು ಮಾಧ್ಯಮಗಳೂ ಸಹ ಯಶಸ್ವಿಯಾಗಿ ಬಿತ್ತುತ್ತಲೇ ಇವೆ. ಕೆಲವು ಮಹಾಶಯರಂತೂ 97 ಗಂಟೆಗಳ ಈ ಕ್ರಾಂತಿಯನ್ನು ಈಜಿಪ್ಟ್‌ನ ತೆಹ್ರೀಕ್ ಚೌಕದ ಕ್ರಾಂತಿಗೂ ಹೋಲಿಸಿ ಸಂಭ್ರಮಿಸಿದರು.

ವಾಸ್ತವವಾಗಿ ಇಂಥಾ ಹೋಲಿಕೆಗಳೇ ಈ ಹೋರಾಟದ ಸುತ್ತಾ ಇರುವ ಭ್ರಾಂತಿಯ ಪರಿಮಾಣವನ್ನು ಸೂಚಿಸುತ್ತದೆ. ಈಜಿಪ್ಟ್, ಟುನಿಸಿಯಾ, ಇನ್ನಿತರ ಅರಬ್ ದೇಶಗಳಲ್ಲಿ ನಡೆಯುತ್ತಿರುವ ಜನಸಂಗ್ರಾಮಗಳಿಗೆ ಸ್ಪಷ್ಟ ಶತ್ರುಗಳಿದ್ದರು. ಇಡೀ ವ್ಯವಸ್ಥೆಯ ಭ್ರಷ್ಟಾಚಾರ, ನಿರಂಕುಶತ್ವಗಳ ಸಾಂದ್ರಿತ ರೂಪವಾದ ಆ ದೇಶದ ಅಧ್ಯಕ್ಷರ ವಿರುದ್ಧ ಅಲ್ಲಿಯ ಜನಹೋರಾಟಗಳು ನಡೆದವು. ಕನಿಷ್ಟ ಈಜಿಪ್ಟ್ ಮತ್ತು ಟುನಿಸಿಯಾಗಳಲ್ಲಿ ಭ್ರಷ್ಟರು, ದುಷ್ಟರು ಒಂದು ಕಡೆ ಇದ್ದರೆ ಅವರಿಂದ ಭಾಧಿತವಾದ ಇಡೀ ಜನತೆ ಮತ್ತೊಂದು ಕಡೆ ಧೃವೀಕರಣಗೊಂಡು ಹೋರಾಟ ನಡೆಸುತ್ತಿದ್ದರು. ಹೀಗಾಗಿ ಅಲ್ಲಿ ನಡೆದ ಸಂಗ್ರಾಮ ಮೌಲಿಕವಾಗಿಯೇ ಭಿನ್ನವಾಗಿತ್ತು.

ಆದರೆ ಇಲ್ಲಿ ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಎಂದು ನಡೆಸಿದ ಸಂಗ್ರಾಮದಲ್ಲಿ ಯಾರು ಯಾರ ವಿರುದ್ಧ ನಡೆಸಿದ ಸಂಗ್ರಾಮ ಎಂಬುದೇ ಅರ್ಥವಾಗುವಂತಿರಲಿಲ್ಲ. ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನ ಮಂತ್ರಿ ಮತ್ತು ಅತ್ಯುನ್ನತ ಪ್ರಜಾತಾಂತ್ರಿಕ ಸಂಸ್ಥೆಯಾದ ಸಂಸತ್ತಿನಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹತ್ತಿಕ್ಕಲು ರೂಪಿಸಲಾದ ಲೋಕ್‌ಪಾಲ್ ಮಸೂದೆಗೆ ಜನಪರ ತಿದ್ದುಪಡಿ ತರಬೇಕೆಂದು ಪ್ರಾರಂಭವಾದ ಈ ಚಳವಳಿಯನ್ನು ವಿರೋಧಿಸಿದವರೇ ಇಲ್ಲ! ಏಕೆಂದರೆ ಪರಮ ಭ್ರಷ್ಟಾಚಾರಿಗಳು ಮತ್ತು ಕೊನೆಗೆ ಸರ್ಕಾರ ಸಹ ಭ್ರಷ್ಟಾಚಾರ ನಿಗ್ರಹದ ಬಗ್ಗೆ ಬದ್ಧತೆಯ ಮಾತುಗಳನ್ನಾಡಲು ಪ್ರಾರಂಭಿಸಿದವು.

ಯುದ್ಧದ ಎರಡು ಬಣದಲ್ಲೂ ಭ್ರಷ್ಟಾಚಾರಿಗಳೇ ಇದ್ದದ್ದರಿಂದ ಇದು ಒಂದು ಬಣದ ಭ್ರಷ್ಟಾಚಾರಿಗಳ ವಿರುದ್ಧ ಮತ್ತೊಂದು ಬಣದ ಭ್ರಷ್ಟಾಚಾರಿಗಳ ಹೋರಾಟವಾಗಿತ್ತು. ಈವರೆಗೆ ತನ್ನ ರಾಜಿರಹಿತ ಹೋರಾಟದ ನೈತಿಕ ಶಕ್ತಿಯಿಂದ ಸಾಕ್ಷಿ ಪ್ರಜ್ಞೆಯಾಗಿದ್ದ ಅಣ್ಣಾ ಹಜಾರೆಯವರ ಕುದುರೆಯನ್ನೇರಿ ದೆಹಲಿ ತಲುಪಲು ಬಿಜೆಪಿ ಪ್ರಯತ್ನಿಸಿತು. ಮತ್ತೊಂದು ಕಡೆ ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಯಾವತ್ತೂ ನಂಬಿಕೆಯಿಲ್ಲದ, ಹಿಟ್ಲರ್ ಆದರೂ ಸರಿ, ಗಾಂಧಿಯಾದರೂ ಸರಿ ಯಾರಾದರೂ ಒಬ್ಬ ಅತಿಮಾನವ ಬಂದರೆ ಮಾತ್ರ ಈ ದೇಶ ಸರಿಹೋಗುತ್ತದೆ ಎಂಬ ಪ್ರಚ್ಛನ್ನ ಫ್ಯಾಸೀ ಮನೋಭಾವ ಈ ದೇಶದ ಮೇಲ್ ಮಧ್ಯಮ ವರ್ಗ ಭ್ರಷ್ಟಾಚಾರದ ಬಗ್ಗೆ ಮಾತ್ರವಲ್ಲ, ಪ್ರಜಾತಾಂತ್ರಿಕ ರಾಜಕಾರಣದ ಬಗೆಗೆ ತಮಗಿದ್ದ ಆಕ್ರೋಶವನ್ನು ಹೊರಹಾಕಲು ಈ ಸಂದರ್ಭವನ್ನು ಬಳಸಿಕೊಂಡಿತು.

ಹಿಂದೆ ಪ್ರಧಾನ ಮಂತ್ರಿಗಳಾಗಿದ್ದರೂ ಲೋಕ್‌ಪಾಲ್ ಮಸೂದೆಯ ಬಗ್ಗೆ ಚಕಾರ ಎತ್ತದ ಅಡ್ವಾನಿ ಮತ್ತವರ ಬಿಜೆಪಿ ಅಣ್ಣಾ ಹಜಾರೆಯವರ ಸಂಪೂರ್ಣ ಬೆಂಬಲಕ್ಕೆ ನಿಂತಿತು. ಕರ್ನಾಟಕೆ ಹಿಂದೆಂದೂ ಕಾಣದಂಥ ಭ್ರಷ್ಟಾಚಾರಿಯಾದ ಯಡಿಯೂರಪ್ಪನವರೂ ಸಹ ಹಜಾರೆ ಹೋರಾಟವನ್ನು ಬೆಂಬಲಿಸಿದರು. ಕೊನೆಗೆ ಈ ಹೋರಾಟವನ್ನು ಬೆಂಬಲಿಸಿ ಹಜಾರೆಯವರಿಗೆ ಫ್ರೀಡಂ ಪಾರ್ಕಿನಲ್ಲೇ 60/40 ಸೈಟು ಕೂಡಾ ಕೊಟ್ಟೆಬಿಡಬಹುದೆಂಬ ಅನುಮಾನವೂ ಹುಟ್ಟಿಬಿಟ್ಟಿತ್ತು!

ಅಲ್ಲಿ ಕೇಂದ್ರದಲ್ಲಿ ಸಹ ಬಾಬಾ ರಾಮ್‌ದೇವ್‌ನಂಥಾ ಗೋಸುಂಬೆ ಚಡ್ಡಿ ಸ್ವಾಮಿ, ರಾಜೀವ್ ಚಂದ್ರಶೇಖರ್‌ನಂಥ ಭ್ರಷ್ಟಾಚಾರಿ ಕಾರ್ಪೊರೇಟ್ ಉದ್ಯಮಪತಿ, ಕೊನೆಗೆ ಕಾಂಗ್ರೆಸ್, ಬಿಜೆಪಿ, ದಳ ಎಲ್ಲಾ ಪಕ್ಷಗಳೂ ಸಹ ಈ ಅಕ್ಷರ–ಅರ್ಥಗಳೇ ಇಲ್ಲದ ಸಮೂಹ ಗಾನಕ್ಕೆ ಕೋರಸ್ ಸೇರಿಸಿಬಿಟ್ಟವು. ಕೊನೆಗೆ ಭ್ರಷ್ಟಾಚಾರದ ನೇತಾರನಾದ ಕೇಂದ್ರದ ಕಾಂಗ್ರೆಸ್ ಪಕ್ಷ ತಾನು ಅತ್ಯಂತ ಸಂವೇದನಾಶಿಲ ಸರ್ಕಾರವೆಂಬಂತೆ ಅಣ್ಣಾ ಹಜಾರೆ ಸೂಚಿಸಿದವರನ್ನೇ ಕೂಡಿಸಿ

ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಎಂದು ನಡೆಸಿದ ಸಂಗ್ರಾಮದಲ್ಲಿ ಯಾರು ಯಾರ ವಿರುದ್ಧ ನಡೆಸಿದ ಸಂಗ್ರಾಮ ಎಂಬುದೇ ಅರ್ಥವಾಗುವಂತಿರಲಿಲ್ಲ. ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನ ಮಂತ್ರಿ ಮತ್ತು ಅತ್ಯುನ್ನತ ಪ್ರಜಾತಾಂತ್ರಿಕ ಸಂಸ್ಥೆಯಾದ ಸಂಸತ್ತಿನಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹತ್ತಿಕ್ಕಲು ರೂಪಿಸಲಾದ ಲೋಕ್ ಪಾಲ್ ಮಸೂದೆಗೆ ಜನಪರ ತಿದ್ದುಪಡಿ ತರಬೇಕೆಂದು ಪ್ರಾರಂಭವಾದ ಈ ಚಳವಳಿಯನ್ನು ವಿರೋಧಿಸಿದವರೇ ಇಲ್ಲ! ಏಕೆಂದರೆ ಪರಮ ಭ್ರಷ್ಟಾಚಾರಿಗಳು ಮತ್ತು ಕೊನೆಗೆ ಸರ್ಕಾರ ಸಹ ಭ್ರಷ್ಟಾಚಾರ ನಿಗ್ರಹದ ಬಗ್ಗೆ ಬದ್ಧತೆಯ ಮಾತುಗಳನ್ನಾಡಲು ಪ್ರಾರಂಭಿಸಿದವು.

ಜನಲೋಕ್ ಪಾಲ್ ಮಸೂದೆಯನ್ನು ರೂಪಿಸಲು ಒಂದು ಕಮಿಟಿಯನ್ನು ಮಾಡಿ ತಾವೂ ಸಹ ಭ್ರಷ್ಟಾಚಾರ ವಿರೋಧಿ ಗುಂಪಿಗೆ ಸೇರಿಕೊಂಡು ಬಿಟ್ಟರು. ಎದುರಾಳಿಯಾಗಬೇಕಿದ್ದ ಶತ್ರುವನ್ನೇ ಜೊತೆಗೆ ಸೇರಿಸಿಕೊಂಡು ನಡೆದ ಈ ಯುದ್ಧದಲ್ಲಿ ಗೆದ್ದವರು ಹಜಾರೆಯಾದರೂ ಸೋತದ್ದು ಮಾತ್ರ ಭ್ರಷ್ಟಾಚಾರ ಅಲ್ಲವೇ ಅಲ್ಲ.

ಹೀಗಾಗಿ ಪೊಳ್ಳು ಕ್ರಾಂತಿಯ ಮತ್ತು ಪೊಳ್ಳು ಯಶಸ್ಸಿನ ಈ ಉನ್ಮಾದ ಒನ್‌ಡೇ ಕ್ರಿಕೆಟಿನ ಉನ್ಮಾದದಷ್ಟೇ ನಿರರ್ಥಕ ಮತ್ತು ಆತ್ಮ ಘಾತುಕವಾಗದಿರಬೇಕೆಂದರೆ ಈ 97 ಗಂಟೆಗಳ ಕ್ರಾಂತಿಯ ಹಕೀಕತ್ತನ್ನು ಕೂಲಂಕಷವಾಗಿ ವಿಶ್ಲೇಷಿಸಬೇಕಿದೆ. ಇದೇ ಭಾರತದಲ್ಲಿ ಇರೋಮ್ ಶರ್ಮಿಳಾ ಎಂಬ ಮಣಿಪುರದ ಧೀರೋದ್ದಾತ್ತ ಮಹಿಳೆ ತನ್ನ ಜನರ ಮೇಲೆ ಸೈನಿಕರು ಅತ್ಯಾಚಾರ ನಡೆಸಲು ಅನುವು ಮಾಡಿಕೊಡುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಕಳೆದ 10 ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಳೆ.

ಆದರೆ 10 ವರ್ಷಗಳಿಂದ ನಡೆಯುತ್ತಿರುವ ಉಪವಾಸ ಸತ್ಯಾಗ್ರಹಕೆ ಸರ್ಕಾರವಾಗಲೀ, ನಾಗರಿಕ ಸಮಾಜವಾಗಲೀ ಸ್ಪಂದಿಸಲಿಲ್ಲ. ಈಗಲೂ ಆಕೆಯ ಹೋರಾಟ ಮುಂದುವರೆದೇ ಇದೆ. ಆದರೆ 10 ವರ್ಷವಿರಲೀ, 10 ದಿನಗಳು ನಡೆಯದ ಈ ಉಪವಾಸ ಸತ್ಯಾಗ್ರಹ ಮತ್ತು ಅದಕ್ಕೆ ಈ ದೇಶದ ಮೇಲ್‌ಮಧ್ಯಮ ವರ್ಗ, ಉದ್ಯಮಪತಿಗಳಿಂದ ಸಿಕ್ಕ ಅಭೂತಪೂರ್ವ ಬೆಂಬಲವನ್ನು ಕಂಡ "ಸಂವೇದನಾಶೀಲ" ಸರ್ಕಾರ "ಹೋರಾಟಗಾರರ ಆಗ್ರಹಕ್ಕೆ ಮಣಿದುಬಿಟ್ಟಿತು". ಈ ಹುಸಿ ಸಮರ, ಹುಸಿ ವಿಜಯದ ಹಿಂದೆ ಈ ದೇಶದ ಅಂತಸ್ಸಾಕ್ಷಿಯೇ ಭ್ರಷ್ಟಗೊಳ್ಳುತ್ತಿರುವ ಕುರುಹುಗಳು ಇವೆ. ಯಾವುದೇ ಹೋರಾಟದ ಜಯ ಯಾವುದರ ವಿರುದ್ಧ ಹೋರಾಡಲಾಗುತ್ತಿದೆ, ಯಾರು ಹೋರಾಡುತ್ತಿದ್ದಾರೆ, ಅಂತಿಮವಾಗಿ ಪಡೆದುಕೊಂಡದ್ದು ಸಾರಾಂಶದಲ್ಲಿ ಶತ್ರುವಿಗೆ ಯಾವ ರೂಪದಲ್ಲಾದರೂ ಸಾರ ರೂಪದ ಪೆಟ್ಟನ್ನಾದರೂ ಕೊಡುತ್ತದೆಯೇ ಎಂಬುದನ್ನೇ ಆಧರಿಸಿರುತ್ತದೆ.

ಮೊದಲನೆಯದಾಗಿ ಅಣ್ಣಾ ಹಜಾರೆಯವರ ಹೋರಾಟ ಈ ದೇಶದಲ್ಲಿ ಆಳವಾಗಿ ಬೇರುಬಿಟ್ಟಿರುವ ಭ್ರಷ್ಟಾಚಾರದ ವಿರುದ್ಧ ಎಂದು ಬಣ್ಣಿಸಲಾಗುತ್ತಿದೆ. ಆದರೆ ಲೋಕ್‌ಪಾಲ್ ಮಸೂದೆಯಾಗಲೀ ಅಥವಾ ಅದರ ಜನಲೋಕ್‌ಪಾಲ್ ಸ್ವರೂಪವಾಗಲೀ ಕೇಂದ್ರದ ಅಧಿಕಾರಿ, ಸಂಸದರು ಮತ್ತು ಮಂತ್ರಿಮಂಡಲವನ್ನು ಮಾತ್ರ ತನ್ನ ವಿಚಾರಣಾ ಮತ್ತು ಶಿಕ್ಷೆಯ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ. ಆದರೆ ಜಾಗತೀಕರಣದ ನಂತರದಲ್ಲಿ ಸರ್ಕಾರದ ಗಾತ್ರವೇ ಕಿರಿದಾಗುತ್ತಾ ಖಾಸಗೀ ಕ್ಷೇತ್ರದ ಪಾತ್ರ ಹಿರಿದಾಗುತ್ತಿದೆ. ಹಾಗೆಯೇ ಭ್ರಷ್ಟಾಚಾರವೂ ಸಹ ಅತ್ಯಂತ ಹೆಚ್ಚಾಗಿ ಲಕ್ಷ ಕೋಟಿ ರೂಪಾಯಿಗಳ ಸ್ವರೂಪ ಪಡೆದುಕೊಳ್ಳುತ್ತಿರುವುದು ಖಾಸಗಿ ಕ್ಷೇತ್ರವೂ ಸರ್ಕಾರಿ ವಲಯದಲ್ಲಿ ಪ್ರವೇಶ ಮಾಡಿದ ನಂತರ. ಉದಾರೀಕರಣ ಎಂದು ಕರೆಯಲ್ಪಡುವ ಈ ಶಾಸನ ಬದ್ಧ ಭ್ರಷ್ಟಾಚಾರದ ನೇರ ಫಲಾನುಭವಿಗಳು ಇಂದು ಅಣ್ಣಾ ಹಜಾರೆಯವರನ್ನು ಬೆಂಬಲಿಸುತ್ತಿರುವ ರಾಜೀವ್ ಚಂದ್ರಶೇಖರ್, ರಾಹುಲ್ ಬಜಾಜ್, ಅಂಬಾನಿ, ಟಾಟಾರಂಥ ಉದ್ಯಮಿಗಳೇ. ಇಂದು ಜಯ ಸಿಕ್ಕಿದೆ ಎಂದು ಹೇಳಲಾಗುತ್ತಿರುವ ಜನಲೋಕ್‌ಪಾಲ್ ಮಸೂದೆಯಿರಲಿ ಅಥವಾ ಈವರೆಗೆ ಅಸ್ತಿತ್ವದಲ್ಲಿದ್ದ ಯಾವುದೇ ತನಿಖಾ ಸಂಸ್ಥೆ ಅಥವಾ ಕಾನೂನುಗಳಾಗಲೀ ಈ ಭ್ರಷ್ಟಾಚಾರವನ್ನು ಭ್ರಷ್ಟಾಚಾರ ಎಂದೇ ಪರಿಗಣಿಸುವುದಿಲ್ಲ.

97 ಗಂಟೆಗಳ ಕ್ರಾಂತಿಯ ಹಕೀಕತ್ತನ್ನು ಕೂಲಂಕಷವಾಗಿ ವಿಶ್ಲೇಷಿಸಬೇಕಿದೆ. ಇದೇ ಭಾರತದಲ್ಲಿ ಇರೋಮ್ ಶರ್ಮಿಳಾ ಎಂಬ ಮಣಿಪುರದ ಧೀರೋದ್ದಾತ್ತ ಮಹಿಳೆ ತನ್ನ ಜನರ ಮೇಲೆ ಸೈನಿಕರು ಅತ್ಯಾಚಾರ ನಡೆಸಲು ಅನುವು ಮಾಡಿಕೊಡುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಕಳೆದ 10 ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಳೆ. ಆದರೆ 10 ವರ್ಷಗಳಿಂದ ನಡೆಯುತ್ತಿರುವ ಉಪವಾಸ ಸತ್ಯಾಗ್ರಹಕೆ ಸರ್ಕಾರವಾಗಲೀ, ನಾಗರಿಕ ಸಮಾಜವಾಗಲೀ ಸ್ಪಂದಿಸಲಿಲ್ಲ. ಈಗಲೂ ಆಕೆಯ ಹೋರಾಟ ಮುಂದುವರೆದೇ ಇದೆ.

ಉದಾರೀಕರಣ-ಜಾಗತೀಕರಣ ಪೂರ್ವ ಕಾಲಘಟ್ಟದಲ್ಲಿ ಖಾಸಗಿ ವ್ಯಕ್ತಿಗೆ ಸರ್ಕಾರಿ ಅಧಿಕಾರಿ ಕಾನೂನು ಬಾಹಿರವಾಗಿ ಮಾಡಿಕೊಡುತ್ತಿದ್ದ ಅನುಕೂಲಗಳು ಮತ್ತು ಜನರ ಸಂಕ್ಷೇಮಕ್ಕೆ ನಿಗದಿಯಾಗಿದ್ದ ಹಣವನ್ನು ಗುಳುಂ ಮಾಡುವುದು ಇವುಗಳನ್ನೇ ಭ್ರಷ್ಟಾಚಾರವೆಂದು ಕರೆಯಲಾಗುತ್ತಿತ್ತು. ಭಾರತದ ಭ್ರಷ್ಟಾಚಾರದ ಇತಿಹಾಸವನ್ನು ನೋಡಿದರೆ ಈ ಬಗೆಯ ಭ್ರಷ್ಟಾಚಾರದ ಗಾತ್ರ 1991ರ ವರೆಗೆ ಹಲವು ಕೋಟಿ ರೂಪಾಯಿಗಳ ಗಡಿಯನ್ನು ದಾಟಿರಲಿಲ್ಲ. ಆದರೆ 1991ರ ನಂತರ ನಡೆದಿರುವ ಹಗರಣಗಳನ್ನು ನೋಡಿ. ಹರ್ಷದ್ ಮೆಹ್ತಾ 5000 ಕೋಟಿ, ಟೆಲಿಕಾಂ ಹಗರಣ 10-12,000 ಕೋಟಿ, ಈಗ ಕಾಮನ್‌ವೆಲ್ತ್ ಹಗರಣ 60,000 ಕೋಟಿ, 2 ಜಿ ಸ್ಪೆಕ್ಟ್ರಂ ಹಗರಣ 2.5 ಲಕ್ಷ ಕೋಟಿಗಳಾದದ್ದೇ ಸರ್ಕಾರ ಮಾಡಬೇಕಾದ ಕೆಲಸವನ್ನೆಲ್ಲಾ ಕಡ್ಡಾಯವಾಗಿ ಲಾಭಕೋರ ಖಾಸಗೀ ಕಂಪನಿಗಳಿಗೆ ವಹಿಸಬೇಕೆಂಬ ನೀತಿ ಜಾರಿಗೆ ಬಂದದ್ದರಿಂದ.

ಅಂದರೆ ಸಾರ್ವಜನಿಕ ಸಂಪನ್ಮೂಲಗಳನ್ನು ಶಾಸನಬದ್ಧವಾಗಿ ಲಾಭಕೋರ ಖಾಸಗಿ ಕಂಪನಿಗಳ ಪಾಲು ಮಾಡುವ Public-Private Participation (PPP- ಸಾರ್ವಜನಿಕ-ಖಾಸಗಿ ಸಹಭಾಗಿತ್ವ) ಎಂಬ ನೀತಿ ಜಾರಿಗೆ ಬಂದಿರುವುದರಿಂದ. ಈ ನೀತಿಯೇ ಭ್ರಷ್ಟಾಚಾರದ ಗಂಗೋತ್ರಿ. ಇದನ್ನೇ ಅಭಿವೃದ್ಧಿಯ ಮೂಲಮಂತ್ರವೆಂದು ಸಹ ಎಲ್ಲಾ ಪಕ್ಷಗಳ ಸರ್ಕಾರಗಳು, ಇಂದು ಅಣ್ಣಾ ಹಜಾರೆಯವರ ಜೊತೆಯಲ್ಲಿರುವ ಕಾರ್ಪೊರೇಟ್ ಉದ್ಯಮಪತಿಗಳು, ಎನ್‌ಜಿಒಗಳು ಮತ್ತು ಈ ಅಭಿವೃದ್ಧಿ ಮಾದರಿಯ ಫಲಾನುಭವಿ ಮೇಲ್ ಮಧ್ಯಮ ವರ್ಗದವರು ಪ್ರತಿ ಪಾದಿಸುತ್ತಾರೆ.

12ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ.51 ಕ್ಕಿಂತ ಹೆಚ್ಚಿನ ಈ ಬಗೆಯ ತಥಾಕಥಿತ "ಅಭಿವೃದ್ಧಿ ಯೋಜನೆ"ಗಳನ್ನು ಖಾಸಗಿ ಕ್ಷೇತ್ರಕ್ಕೆ ವಹಿಸಲಾಗಿದೆ. ಅರ್ಥಾತ್ ಈ ದೇಶದ ಜನರ ಅಭಿವೃದ್ಧಿಗೆ ದಕ್ಕಬೇಕಿದ್ದ ಸಂಪನ್ಮೂಲಗಳು ಪ್ರತ್ಯಕ್ಷವಾಗಿ ಮತ್ತು ಶಾಸನಬದ್ಧವಾಗಿ ಕಾರ್ಪೊರೇಟ್ ಉದ್ಯಮಪತಿಗಳ ತಿಜೋರಿಯನ್ನು ಸೇರುತ್ತಿದೆ. ಹೀಗಾಗಿ ಇಂದು ಈ ದೇಶದಲ್ಲಿ ಬಡವರು ಬಡವರಾಗುತ್ತಾ ದೊಡ್ಡ ದೊಡ್ಡ ಬಿಲಿಯನಾಧೀಶ್ವರರಾಗುತ್ತಿರುವುದಕ್ಕೆ ಅಭಿವೃದ್ಧಿ ಎಂಬ ಹೆಸರಿನ ಅತಿ ದೊಡ್ಡ ಶಾಸನ ಬದ್ಧ ಭ್ರಷ್ಟಾಚಾರವೇ ಕಾರಣ. ವಾಸ್ತವವಾಗಿ ಅಣ್ಣಾ ಹಜಾರೆಯವರ ಜನಲೋಕಪಾಲ್ ಮಸೂದೆಯಾಗಲೀ ಅಥವಾ ಇಂದು ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರೋಧಿ ಅಭಿಯಾನಿಗಳಾಗಲೀ ಈ ಭ್ರಷ್ಟಾಚಾರದ ಬಗ್ಗೆ ಕಿಮ್ಮನ್ನುತ್ತಿಲ್ಲ.

ಉದಾಹರಣೆಗೆ ಕಳೆದ ಕೆಲವು ವರ್ಷಗಳ ಹಿಂದೆ ಸದ್ದಾಂ ಹುಸೇನ್ ಬದುಕಿದ್ದಾಗ "ಆಹಾರಕ್ಕಾಗಿ ತೈಲ ಯೋಜನೆ"ಯ ಹೆಸರಲ್ಲಿ ಇರಾಕ್‌ನಿಂದ ತೈಲ ಆಮದು ಮಾಡಿಕೊಂಡು ಅದಕ್ಕೆ ಬದಲಾಗಿ ಆಹಾರವನ್ನು ರಫ್ತು ಮಾಡುವ ಯೋಜನೆಯೊಂದು ಜಾರಿಗೆ ಬಂದಿತ್ತು. ಅದನ್ನು ಸರ್ಕಾರವೇ ತನ್ನ ಸರ್ಕಾರಿ ಗೋದಾಮಿನಿಂದ ಆಹಾರ ಸರಬರಾಜು ಮಾಡಿ ಅಗ್ಗದ ತೈಲವನ್ನು ಇರಾಕ್‌ನಿಂದ ಆಮದು ಮಾಡಿಕೊಂಡು ಜನಸಾಮಾನ್ಯರಿಗೆ ಕಡಿಮೆ ಬೆಲೆಯ ಇಂಧನವನ್ನು ಸರಬರಾಜು ಮಾಡಬಹುದಿತ್ತು. ಆದರೆ ಆಹಾರವನ್ನು ಇರಾಕಿಗೆ ರಫ್ತು ಮಾಡುವ ಮತ್ತು ಅಲ್ಲಿಂದ ತೈಲವನ್ನು ಆಮದು ಮಾಡಿಕೊಳ್ಳುವ ಕಾಂಟ್ರಾಕ್ಟನ್ನು ಖಾಸಗಿಯವರಿಂದಲೇ ಮಾಡಿಸುವ ಯೋಜನೆ ರೂಪುಗೊಂಡಿತು.

ಇದಕ್ಕೆ ಮಧ್ಯವರ್ತಿಯಾಗಿ ಕೆಲಸ ಮಾಡಿದ ಆಗಿನ ವಿದೇಶಾಂಗ ಮಂತ್ರಿ ನಟವರ್‌ಸಿಂಗ್ ಮಗ ಇದರಲ್ಲಿ ನೂರು ಕೋಟಿಗೂ ಹೆಚ್ಚು ದುಡ್ಡುಮಾಡಿಕೊಂಡ. ಇದು ಬಯಲಾಗಿ ನಟವರ್‌ಸಿಂಗ್ ರಾಜೀನಾಮೆ ಕೂಡಾ ಕೊಡಬೇಕಾಯಿತು. ಆದರೆ ಸದ್ದಾಂ ಜೊತೆ ಒಪ್ಪಂದದಿಂದ ಎರಡು ಕಡೆ 20,000 ಕೋಟಿ ರೂಗಳಿಗೂ ಹೆಚ್ಚಿನ ಲಾಭ ಮಾಡಿಕೊಂಡಿದ್ದು ಅಂಬಾನಿಗಳು! ಅಂದರೆ ಸರ್ಕಾರಕ್ಕೆ, ಜನರಿಗೆ 20,000 ಕೋಟಿ ನಷ್ಟವಾದದ್ದು ಈ ಖಾಸಗೀಕರಣ ನೀತಿಯಿಂದ ಮತ್ತು ಅಂಬಾನಿಯಿಂದ! ಆದರೆ ಅದು ಈಗ ಶಾಸನಬದ್ಧ!

ಈ ಹಿಂದೆ ಅವರು ಈ ವಹಿವಾಟಿಗೆ ಸರ್ಕಾರಕ್ಕೆ ತೆರಿಗೆ ಕಟ್ಟಬೇಕಿತ್ತು. ಅದನ್ನು ಕೊಡದಿದ್ದರೆ ಅಪರಾಧವಾಗುತ್ತಿತ್ತು. ತೆರಿಗೆ ಪಾವತಿ ಮಾಡದೆ ಅವರ ವಹಿವಾಟಿಗೆ ಅನುಕೂಲ ಮಾಡಿಕೊಟ್ಟ ಅಧಿಕಾರಿ ಭ್ರಷ್ಟಾಚಾರಿಯಾಗುತ್ತಿದ್ದ. ಆದರೆ ಈಗ ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ಈ ಎಲ್ಲಾ ಅಪರಾಧಗಳನ್ನು ಉತ್ತಮ ಅಭಿವೃದ್ಧಿ ಪರ ನೀತಿಗಳೆಂದು ಶಾಸನಬದ್ಧಗೊಳಿಸಿಬಿಟ್ಟಿವೆ. ಹೀಗಾಗಿ ಲೋಕಪಾಲ್ ಮಸೂದೆ ಹೆಚ್ಚೆಂದರೆ ಈ ವ್ಯವಸ್ಥಾಗತ ಭ್ರಷ್ಟಾಚಾರವನ್ನು ಅನುಷ್ಠಾನಕ್ಕೆ ತರುವಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳು ಮಾಡುವ ಭ್ರಷ್ಟಾಚಾರದ ಬಗ್ಗೆ ಮಾತ್ರ ಕ್ರಮ ತೆಗೆದುಕೊಳ್ಳಬಹುದೇ ವಿನಃ ಖಾಸಗೀಕರಣದ ಮತ್ತು ಉದಾರೀಕರಣದ ಹೆಸರಿನಲ್ಲಿ ವ್ಯವಸ್ಥೆಯ ಭಾಗವೇ ಆಗಿಬಿಟ್ಟಿರುವ ಭ್ರಷ್ಟಾಚಾರವನ್ನು ಭ್ರಷ್ಟಾಚಾರವೆಂದೇ ಪರಿಗಣಿಸುವುದಿಲ್ಲ.

ಹೀಗಾಗಿ ಇಂದು ನಿಜಕ್ಕೂ ಈ ದೇಶದಿಂದ ಭ್ರಷ್ಟಾಚಾರವನ್ನು ಹೊಡೆದೋಡಿಸಬೇಕೆಂಬ ಆಶಯವುಳ್ಳವರು ಈ ದೇಶದ ಬಂಡವಾಳಶಾಹಿ ವ್ಯವಸ್ಥೆ, "ಅಭಿವೃದ್ಧಿ



ಯೋಜನೆಗಳು", PPP– ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಎಂಬ ನೀತಿ, ಈ ದೇಶದ ಸಂಪನ್ಮೂಲಗಳನ್ನು ಖಾಸಗಿಯವರಿಗೆ ಪರಭಾರೆ ಮಾಡುವ ಭ್ರಷ್ಟಾಚಾರವನ್ನು ಶಾಸನಬದ್ಧಗೊಳಿಸಿರುವ ಉದಾರೀಕರಣ–ಖಾಸಗೀಕರಣ ನೀತಿಗಳು ಇವೆಲ್ಲವನ್ನೂ ವಿರೋಧಿಸಬೇಕು. ಆದರೆ ಅಣ್ಣಾ ಹಜಾರೆಯವರ ಈ ಇಡೀ "ಆಂದೋಲನ" ಭ್ರಷ್ಟಾಚಾರದ ವ್ಯಾಖ್ಯಾನವನ್ನು ಕೇವಲ ರಾಜಕಾರಣಿಗಳಿಗೆ ಮಾತ್ರ ಸೀಮಿತಗೊಳಿಸಿತಲ್ಲದೆ, ಆ ಭ್ರಷ್ಟಾಚಾರವನ್ನು ಈ ದೇಶದ ಗಣ್ಯಮಾನ್ಯರಿಗೆ ಕೆಲವು ವಿಶೇಷ ಅಧಿಕಾರಗಳನ್ನು ಕೊಡುವುದರ ಮೂಲಕ ನಿಗ್ರಹಿಸಬಹುದೆಂಬ ಅತ್ಯಂತ ಅಪಾಯಕಾರಿ ಪರಿಹಾರವನ್ನು ಮುಂದಿರಿಸಿದೆ.

ವಾಸ್ತವವಾಗಿ ಅಣ್ಣಾ ಹಜಾರೆಯವರ ಬೆನ್ನ ಹಿಂದೆ ಸೇರಿರುವ ರಾಜಕಾರಣಿಗಳಿಗೂ, ಉದ್ಯಮಪತಿಗಳಿಗೂ, ಉದಾರೀಕರಣ ನೀತಿಗಳ ಫಲಾನುಭವಿಗಳೇ ಆಗಿರುವ ಮೇಲ್ ಮಧ್ಯಮವರ್ಗಕ್ಕೂ ಭ್ರಷ್ಟಾಚಾರದ ಈ ಬಗೆಯ ವ್ಯಾಖ್ಯಾನ ಹಾಗೂ ಪರಿಹಾರ ಅತ್ಯಂತ ಅನುಕೂಲಕರವಾದದ್ದೇ ಆಗಿದೆ. 10 ವರ್ಷದ ಉಪವಾಸವನ್ನು ಕ್ಯಾರೇ ಅನ್ನದ ಈ ವರ್ಗ 97 ಗಂಟೆಗಳ ಉಪವಾಸಕ್ಕೆ ಬಗ್ಗಿದ್ದಕ್ಕೆ ಕಾರಣ ಇದು. ಆದರೆ ಅದಕ್ಕಿಂತಲೂ ಹೆಚ್ಚಿನ ಮೌಲಿಕ ಭ್ರಷ್ಟಾಚಾರವೆಂದರೆ ಈ ಹುಸಿ ವಿಜಯವನ್ನು ಈ ದೇಶಕ್ಕೂ, ಜನತೆಗೂ ಸಿಕ್ಕ ಅತಿದೊಡ್ಡ ಗೆಲುವು ಎಂದು ನಂಬಿಸುತ್ತಿರುವುದು.

ಎರಡನೆಯದಾಗಿ, ಈ ಜನಲೋಕಪಾಲ್ ಮಸೂದೆ ಅಣ್ಣಾ ಹಜಾರೆ ಮತ್ತವರ ಮಿತ್ರರು ರೂಪಿಸಿದ ರೀತಿಯಲ್ಲೇ ಜಾರಿಗೆ ಬಂದರೆ ಕೆಲವು ಭ್ರಷ್ಟ ಮಂತ್ರಿಗಳು, ಪ್ರಧಾನಿ, ಇನ್ನಿತರರು ಶಿಕ್ಷೆಗೆ ಗುರಿಯಾಗಬಹುದು. ಆದರೆ ಅದಕ್ಕಾಗಿ ಅವರು ಸೂಚಿಸುತ್ತಿರುವ ಮಾರ್ಗೋಪಾಯಗಳು ಮಾತ್ರ ಪ್ರಜಾತಂತ್ರಕ್ಕೆ ದೊಡ್ಡ ಮಾರಕವಾಗಲಿದೆ. ಹೀಗಾಗಿ ಭ್ರಷ್ಟಾಚಾರದ ವ್ಯಾಖ್ಯಾನವನ್ನೇ ಕುಬ್ಜಗೊಳಿಸಿ ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಿ ಶಾಸನಬದ್ಧ ಭ್ರಷ್ಟಾಚಾರವನ್ನು ಪ್ರಶ್ನಿಸಲೂ ಹೋಗದ ಈ ಆಂದೋಲನದ ಭೂಮಿಕೆಯೇ ಅತ್ಯಂತ ಪ್ರಶ್ನಾರ್ಹವಾಗಿದೆ.

ಸಂಸತ್ ಹಾಗೂ ಪ್ರಧಾನಿ ಮಂತ್ರಿಮಂಡಳಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ನಿಗ್ರಹಿಸಲು ಜನಲೋಕ್‌ಪಾಲ್ ಸೂಚಿಸಿರುವ ಮಸೂದೆಯಲ್ಲಿ ಸರ್ಕಾರ ಪ್ರಸ್ತಾಪಿಸಿದ ಮಸೂದೆಗಳಿಗಿಂತ ಕೆಲವು ಕಠಿಣ ಎನಿಸಬಹುದಾದ ಅಂಶಗಳಿರುವುದು ನಿಜ.

ಆದರೆ ಈ ಮಸೂದೆಯಿಂದ ರಚಿತವಾಗುವ ಜನಲೋಕ್‌ಪಾಲ್ ಸಮಿತಿಯೇ ಅತ್ಯಂತ ಅಪ್ರಜಾತಾಂತ್ರಿಕವಾಗಿ ಆಯ್ಕೆಯಾಗುವ ಪ್ರಕ್ರಿಯೆಯನ್ನು ಹೊಂದಿದೆ. ಮೊದಲಿಗೆ ಈ ಹೋರಾಟದ ಕಾರಣದಿಂದ ಜನಲೋಕ್‌ಪಾಲ್ ಮಸೂದೆಯ ಕರಡನ್ನು ರಚಿಸಲು ರೂಪಿಸಲಾದ ಸಮಿತಿ. ಅದರಲ್ಲಿ ಶಾಂತಿಭೂಷಣ್ ಮತ್ತು ಪ್ರಶಾಂತಿ ಭೂಷಣ್‌ರಂತ ಜನಪರ ವಕೀಲರು ಇರುವುದು ನಿಜವಾದರೂ ಇದರ ಬಗ್ಗೆ ಸರ್ಕಾರ ಹೊರಡಿಸಿದ ಗೆಜೆಟ್ಟಿನಲ್ಲಿ "ಅಣ್ಣಾ ಹಜಾರೆಯವರು" ಸೂಚಿಸುವ ಐದು ಜನರನ್ನು ಒಳಗೊಂಡ ಸಮಿತಿ ಎಂದೇ ಆದೇಶವಿದೆ.

ಇದು ಮತ್ತೆ ವ್ಯಕ್ತಿಗಳನ್ನು ಅದರಲ್ಲೂ ಜನತೆಗೆ ನೇರವಾಗಿ ಜವಾಬುದಾರರಾಗಿರುವಂತೆ ವ್ಯವಸ್ಥೆಯೊಳಗೆ ಇರದ ವ್ಯಕ್ತಿಗಳನ್ನು ಈ ದೇಶದ ಒಟ್ಟು ಜನಾಭಿಪ್ರಾಯದ ಸಾಂದ್ರ ರೂಪವಾಗಿರಬೇಕಾದ ಸರ್ಕಾರಕ್ಕಿಂತಲೂ ದೊಡ್ಡ ಸ್ಥಾನದಲ್ಲಿರಿಸುತ್ತದೆ. ಇದು ತತ್ಕಾಲದಲ್ಲಿ ಆಳುವ ಕಾಂಗ್ರೆಸ್, ವಿರೋಧಿ ಬಿಜೆಪಿಗಳಿಗೆ ಒಂದಷ್ಟು ಲಾಭ ತಂದುಕೊಡಬಹುದಾದರೂ ದೀರ್ಘಕಾಲದಲ್ಲಿ ಇದು ಪ್ರಜಾತಂತ್ರಕ್ಕೆ ಅತ್ಯಂತ ಅಪಾಯಕಾರಿ. ಅಂಬೇಡ್ಕರ್ ಅವರು ಹೇಳಿದ್ದು ಅದನ್ನೇ. ಯಾರೊಬ್ಬ ವ್ಯಕ್ತಿಯನ್ನು ಮಹಾತ್ಮ ಮಾಡುವುದು ಜನತೆಯನ್ನು ದೀನರನ್ನಾಗಿಸುವ ಮತ್ತೊಂದು ರೂಪ.

ಮೂರನೆಯದಾಗಿ ಲೋಕ್‌ಪಾಲ್ ಸದಸ್ಯರ ಆಯ್ಕೆಯ ಕುರಿತು. ಈ ದೇಶದ ಬುದ್ಧಿಜೀವಿಗಳು, ಜ್ಞಾನಪೀಠ ಪ್ರಶಸ್ತಿ ವಿಜೇತರು, ಭಾರತೀಯ ಸಂಜಾತ ನೊಬೆಲ್ ಪ್ರಶಸ್ತಿ ವಿಜೇತರೂ ಎಲ್ಲರೂ ಸೇರಿಕೊಂಡು ಲೋಕಪಾಲ್ ಸದಸ್ಯರನ್ನು ಆಯ್ಕೆ ಮಾಡಬಹುದೆಂಬ ಪ್ರಸ್ತಾಪ ಹೋರಾಟಗಾರರದ್ದು. ಇದರ ಹಿಂದಿರುವ ಮನೋಭಾವ ಅತ್ಯಂತ ಆಕ್ಷೇಪಣೀಯವಾದದ್ದು. ನೊಬೆಲ್ ಪ್ರಶಸ್ತಿ ವಿಜೇತರು, ಜ್ಞಾನಪೀಠಿಗಳು ಹಾಗೂ ಯಾವುದೋ ನಿರ್ದಿಷ್ಟ ಕ್ಷೇತ್ರದಲ್ಲಿ ನಿಪುಣರಾದ ಬುದ್ಧಿಜೀವಿಗಳು ಜನರ ಬದುಕನ್ನು ಪ್ರಭಾವಿಸುವ ಭ್ರಷ್ಟಾಚಾರದ ನಿಗ್ರಹದ ಬಗ್ಗೆ ಪರಿಣಿತ ಸಲಹೆ ಕೊಡುತ್ತಾರೆಂಬ ತಿಳವಳಿಕೆಯೇ ಹಾಸ್ಯಾಸ್ಪದವಾದದ್ದು ಮತ್ತು ಅಪಾಯಕಾರಿಯಾದದ್ದು.

ಒಂದು ರೀತಿಯಲ್ಲಿ ಇದು ಸಾಮಾನ್ಯ ಜನರ ವಿವೇಕವನ್ನೂ, ಜನತಂತ್ರವನ್ನು ಮತ್ತು ದೇಶದ ಆಗುಹೋಗುಗಳಲ್ಲಿ ಅವಿದ್ಯಾವಂತರ ಪಾತ್ರವನ್ನು ಅನುಮಾನದಿಂದಲೇ ನೋಡುವ ಪ್ರಜಾತಂತ್ರ ವಿರೋಧಿ ಶೋಷಕ ವರ್ಗಗಳ ತಿಳವಳಿಕೆಯೇ ಆಗಿದೆ. ಇನ್ನೂ ಈ ನೊಬೆಲ್ಗಳು ಮತ್ತು ಜ್ಞಾನಪೀಠಿಗಳ ರಾಜಕೀಯ ತಿಳವಳಿಕೆ ಎಷ್ಟರ ಮಟ್ಟಿಗೆ ಜನಪರವಾಗಿರುತ್ತದೆ ಎಂಬುದು ಇನ್ನೊಂದು ವಿಷಯ. ಸಾಕ್ಷಾತ್ ಅಣ್ಣಾ ಹಜಾರೆಯವರೇ ಈ ಹೋರಾಟದಲ್ಲಿ ಜಯಗಳಿಸಿದ ನಂತರ ಈ ದೇಶದ ಮುಖ್ಯಮಂತ್ರಿಗಳು ಮೋದಿಯ ಗುಜರಾತಿನಿಂದ ಮತ್ತು ಬಿಹಾರದ ನಿತೀಶ್‌ಕುಮಾರರ ಎನ್‌ಡಿಎ ಸರ್ಕಾರದಿಂದ ಪಾಠ ಕಲಿಯಬೇಕೆಂದು ಕರೆ ಕೊಟ್ಟಿದ್ದರು. ಹಾಗೆ ನೋಡಿದರೆ ಮೋದಿ ಅಧಿಕಾರಕ್ಕೆ ಬಂದ ಮೇಲೆ ಗುಜರಾತಿನಲ್ಲಿ ಲೋಕಾಯುಕ್ತರ ನೇಮಕವನ್ನೇ ಮಾಡಿಲ್ಲ. ಸುಜಲಾಂ ಯೋಜನೆಯಲ್ಲಿ 1700 ಕೋಟಿ, ರೋಜ್‌ಗಾರ್ ಯೋಜನೆಯಲ್ಲಿ 109 ಕೋಟಿ, ಮೀನುಗಾರಿಕಾ ಇಲಾಖೆಯಲ್ಲಿ 600 ಕೋಟಿ ಹಣ ಭ್ರಷ್ಟಾಚಾರವಾಗಿರುವುದು ಜಗಜ್ಜಾಹೀರಾಗಿರುವುದು ಹಜಾರೆ ಕಣ್ಣಿಗೆ ಬೀಳಲಿಲ್ಲ.

ಹಾಗೆಯೇ ಗ್ರಾಮಾಂತರ ಪ್ರದೇಶದ ದಲಿತ ಹಾಗೂ ಭೂಹೀನ ಕಾರ್ಮಿಕರಿಗೆ ಸೇರಬೇಕಿದ್ದ ಲಕ್ಷಾಂತರ ಎಕರೆ ಗೋಮಾಳ ಭೂಮಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಬಿಜೆಪಿ ಪರವಾದ ಉದ್ಯಮಿಗಳ ಸಣ್ಣ ಗುಂಪಿಗೆ ಪರಭಾರೆ ಮಾಡಿರುವುದು ಅದರ ವಿರುದ್ಧ

ಅಣ್ಣಾ ಹಜಾರೆಯವರ ಬೆನ್ನ ಹಿಂದೆ ಸೇರಿರುವ ರಾಜಕಾರಣಿಗಳಿಗೂ, ಉದ್ಯಮಪತಿಗಳಿಗೂ, ಉದಾರೀಕರಣ ನೀತಿಗಳ ಫಲಾನುಭವಿಗಳೇ ಆಗಿರುವ ಮೇಲ್ ಮಧ್ಯಮವರ್ಗಕ್ಕೂ ಭ್ರಷ್ಟಾಚಾರದ ಈ ಬಗೆಯ ವ್ಯಾಖ್ಯಾನ ಹಾಗೂ ಪರಿಹಾರ ಅತ್ಯಂತ ಅನುಕೂಲಕರವಾದದ್ದೇ ಆಗಿದೆ. 10 ವರ್ಷದ ಉಪವಾಸವನ್ನು ಕ್ಯಾರೇ ಅನ್ನದ ಈ ವರ್ಗ 97 ಗಂಟೆಗಳ ಉಪವಾಸಕ್ಕೆ ಬಗ್ಗಿದ್ದಕ್ಕೆ ಕಾರಣ ಇದು. ಆದರೆ ಅದಕ್ಕಿಂತಲೂ ಹೆಚ್ಚಿನ ಮೌಲಿಕ ಭ್ರಷ್ಟಾ ಚಾರವೆಂದರೆ ಈ ಹುಸಿ ವಿಜಯವನ್ನು ಈ ದೇಶಕ್ಕೂ, ಜನತೆಗೂ ಸಿಕ್ಕ ಅತಿದೊಡ್ಡ ಗೆಲುವು ಎಂದು ನಂಬಿಸುತ್ತಿರುವುದು.

ನಡೆಯುತ್ತಿರುವ ಹೋರಾಟಗಳನ್ನು ಕ್ರೂರವಾಗಿ ದಮನಿಸಿರುವುದು ಹಜಾರೆಯವರ ಕಣ್ಣಿಗೆ ಏಕೆ ಬೀಳುವುದಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಹಾಗೆಯೇ 2002ರ ಗುಜರಾತ್ ನರಮೇಧ ಸಹಾ! ಹಾಗಿದ್ದಲ್ಲಿ ಹಜಾರೆಯವರ ಭ್ರಷ್ಟಾಚಾರದ ಪರಿಕಲ್ಪನೆಯಲ್ಲಿ ಸಾಂವಿಧಾನಿಕ ಮೌಲ್ಯಗಳ ಹತ್ಯೆಯ ಪ್ರಶ್ನೆಯೇನು? ಹಾಗೆಯೇ ಜನರ ಸಂಪನ್ಮೂಲಗಳು ಬಂಡವಾಳಶಾಹಿಗಳ ಅಭಿವೃದ್ಧಿಗೆ ಹರಿದುಹೋಗುವುದು ಭ್ರಷ್ಟಾಚಾರವೆಂದು ಪರಿಗಣನೆಗೇ ಬರುವುದಿಲ್ಲ ಎಂದಾಯ್ತು!! ರಾಜ್ ಠಾಕ್ರೆಯ ನೇತೃತ್ವದಲ್ಲಿ ಮರಾಠಿಯರಲ್ಲದವರು ಮಹಾರಾಷ್ಟ್ರದಲ್ಲಿ ಎರಡನೇ ಆದ್ಯತೆಗೆ ತೃಪ್ತಿ ಪಟ್ಟುಕೊಳ್ಳಬೇಕೆಂಬ ಚಳವಳಿ ಯನ್ನೂ ಸಹ ಹಜಾರೆಯವರು ಬೆಂಬಲಿಸಿದ್ದರು.

ಇದು ಭ್ರಷ್ಟಾಚಾರದ ಬಗ್ಗೆ ಮತ್ತು ಇಂದು ಸಾಂವಿಧಾನಿಕ ಮೌಲ್ಯಗಳಿಗೇ ಕುತ್ತು ತರುತ್ತಿರುವ ಇತರ ರಾಜಕೀಯ ವಿಷಯಗಳ ಬಗ್ಗೆ ಚಳವಳಿಯ ಮುಂಚೂಣಿಯಲ್ಲಿರುವ ಅಣ್ಣಾ ಹಜಾರೆಯವರ ನೆಲೆ ಮತ್ತು ನಿಲುವುಗಳು. ಇನ್ನು ನೊಬೆಲ್ ವಿಜೇತ ಭಾರತೀಯ ಸಂಜಾತ ನೈಪಾಲ್ ಅಂತೂ ಅತ್ಯಂತ ಪ್ರತಿಗಾಮಿ ತಿಳುವಳಿಕೆಯುಳ್ಳವರು. ವಿಖ್ಯಾತ ವಿಜ್ಞಾನಿಗಳು ಮತ್ತು ಸಾಹಿತಿಗಳು ರಾಜಕೀಯದ ಬಗ್ಗೆ ಆರ್ಥಿಕತೆಯ ಬಗ್ಗೆ ಮೇಲ್‌ತೋರಿಕೆಯ ತಿಳವಳಿಕೆಯನ್ನೂ ಹೊಂದಿರುವುದಿಲ್ಲ. ಅದಕ್ಕೆ ಸಾಕಷ್ಟು ಉದಾಹರಣೆಗಳು ಕರ್ನಾಟಕದಲ್ಲೇ ಇವೆ!

ಇದು ಹಜಾರೆಯವರ ನೈತಿಕತೆಯನ್ನು, ಬದ್ಧತೆಯನ್ನು ಅನುಮಾನಿಸುವ ಪ್ರಶ್ನೆಯಲ್ಲ. ನೈತಿಕತೆಯ ಜೊತೆಜೊತೆಗೆ ಜನಪರ ರಾಜಕೀಯ ಆರ್ಥಿಕ ಚಿಂತನೆಗಳಿಲ್ಲದಿದ್ದರೆ ಹೇಗೆ ಅತ್ಯಂತ ಪ್ರಾಮಾಣಿಕರೂ ಸಹ ಮೋದಿಯಂತವರು, ರಾಜೀವ್ ಚಂದ್ರಶೇಖರ್, ಬಜಾಜ್‌ಗಳಂತವರು ಸವಾರಿ ಮಾಡುವ ಕುದುರೆಗಳಾಗಿ ಬಿಡುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

ಈಗಾಗಲೇ ಈ ಭ್ರಷ್ಟಾಚಾರ ವಿರೋಧೀ "ಆಂದೋಲನ"ವನ್ನು ಸಂಘಪರಿವಾರ ಹೈಜಾಕ್ ಮಾಡಿಯಾಗಿದೆ. ವಾಸ್ತವವಾಗಿ ಬಿಜೆಪಿಯ ಇತ್ತೀಚಿನ ರಾಷ್ಟ್ರೀಯ ರಾಜಕಾರಣಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಕಾರ್ಯಕಾರಣಿ, ಪುತ್ತೂರಿನಲ್ಲಿ ನಡೆದ ಆರೆಸ್ಸೆಸ್ಸಿನ ಕಾರ್ಯಕಾರಣಿಯಲ್ಲಿ ತಮಗೆ ಅಂಟಿರುವ ಕೋಮುವಾದಿ ಹಣೆಪಟ್ಟಿಯನ್ನು ಜನರಿಂದ ಮರೆಮಾಚಬೇಕೆಂದರೆ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ದೊಡ್ಡ ಮಟ್ಟದಲ್ಲಿ ಪ್ರಚಾರಾಂದೋಲನವನ್ನು ಪ್ರಾರಂಭಿಸಬೇಕೆಂದು ನಿರ್ಣಯ ಕೈಗೊಂಡಿದ್ದವು. ಹಜಾರೆಯವರು ಲೋಕ್‌ಪಾಲ್ ಮಸೂದೆಯ ಬಗ್ಗೆ ಪ್ರಾರಂಭಿಸಿದ ಹೋರಾಟವೂ ಸಹ ಇದರ ಭಾಗವೇ ಎಂದು ಹೇಳಲು ಪುರಾವೆಗಳಿಲ್ಲವಾದರೂ ಅದರ ಸಂಪೂರ್ಣ ಲಾಭವನ್ನು ಪಡೆದುಕೊಂಡಿದ್ದು ಮತ್ತು ಪಡೆದುಕೊಳ್ಳುತ್ತಿರುವುದು ಮಾತ್ರ ಬಿಜೆಪಿಯೇ! ಬಿಜೆಪಿ ಆ ಬಗೆಯ ಲಾಭಗಳನ್ನು ಪಡೆದುಕೊಳ್ಳಬಾರದೆಂಬ ಬಗ್ಗೆ ಹಜಾರೆಯವರಿಗೂ ವಿಶೇಷ ವಿರೋಧವೇನೂ ಇರಲಿಲ್ಲ ಎಂಬುದು ಕೂಡಾ ಈಗ ಸ್ಪಷ್ಟವಾಗುತ್ತಿದೆ.

ಇದಕ್ಕೆ ಕಾರಣ ಹಜಾರೆಯವರು ಬಿಜೆಪಿ ಪರ ಎಂಬುದಲ್ಲದೇ ಇರಬಹುದು. ಕಾಂಗ್ರೆಸ್ ಪಕ್ಷ ಅಸಹನೀಯವಾಗುವಷ್ಟು ಭ್ರಷ್ಟಾಚಾರ ನಡೆಸುತ್ತಿದೆ ಎಂಬುದೇ ಆಗಿರಬಹುದು. ಆದರೆ ಅದಕ್ಕಿಂತ ಮುಖ್ಯವಾದ ಕಾರಣ

ಒಬ್ಬ ಹಜಾರೆಯವರಿಂದ ಇಡೀ ರಾಜಕಾರಣವೇ ಕ್ಲೀನ್ ಆಗಬಹುದೆಂಬ ತಿಳುವಳಿಕೆಯುಳ್ಳ ಮತ್ತು ಸಾರ್ವಜನಿಕ ಜೀವನವನ್ನು ಶುದ್ಧಗೊಳಿಸಲು ಜನರ ಪ್ರಜ್ಞಾಪೂರ್ವಕ ಭಾಗೀದಾರಿಕೆ ಮತ್ತು ಚಳವಳಿಯ ಬದಲಿಗೆ ಯಾರೋ ಒಬ್ಬ ಮಹಾತ್ಮನ ಆಗಮನಕ್ಕೆ ಕಾಯುವ ಈ ದೇಶದ ಮಧ್ಯಮ ವರ್ಗದ ಮನಸ್ಸತ್ವವು ಹೇಗೆ ಕಾರ್ಪೋರೇಟ್ ನಿರಂಕುಶತ್ವ – ಬಿಜೆಪಿ ಕೋಮುವಾದದೊಡನೆ ಹೊಂದಾಣಿಕೆ ಮಾಡಿಕೊಳ್ಳಬಲ್ಲದು ಎಂಬುದನ್ನೂ ಸಹ ಕಳೆದ 97 ಗಂಟೆಗಳು ತೋರಿಸಿಕೊಟ್ಟಿವೆ! ಇದು ಪ್ರಜಾತಂತ್ರಕ್ಕೆ ಅಪಾಯಕಾರಿ. ಔಷಧಿಯೇ ರೋಗಕ್ಕಿಂತ ಅಪಾಯಕಾರಿಯಾಗಿಬಿಡುವ ಸನ್ನಿವೇಶ ಇದೀಗ ಪ್ರಜಾತಂತ್ರದ್ದು.

ಬಿಜೆಪಿ ತಾನೂ ಸಹ ಅಷ್ಟೇ ಭ್ರಷ್ಟಾಚಾರಿ ಎಂಬುದನ್ನು ಮರೆಮಾಚುವಷ್ಟು ಯಶಸ್ವಿಯಾಗಿ ಸಾರ್ವಜನಿಕ ಸಂಪರ್ಕವನ್ನು ಕಾದುಕೊಂಡಿರುವುದು!

ಇದೆಲ್ಲವನ್ನೂ ಕಾಣಬಲ್ಲಷ್ಟು ರಾಜಕೀಯ ಗ್ರಹಿಕೆ ಈ ಚಳವಳಿಗೆ ಇರಲೇ ಇಲ್ಲ. ಅಲ್ಲದೆ ಕಾಂಗ್ರೆಸ್‌ನ ಭ್ರಷ್ಟಾಚಾರದಿಂದ ಬೇಸತ್ತ ಜನತೆಗೆ ಒಂದು ವೇದಿಕೆಯೂ ಬೇಕಿತ್ತು. ಹೀಗೆ ಒಂದೇ ಕಲ್ಲಿನಲ್ಲಿ ಹಲವು ಹಕ್ಕಿಗಳನ್ನು ಹೊಡೆದ ಬಿಜೆಪಿ ಮತ್ತು ಸಂಘಪರಿವಾರ ಭ್ರಷ್ಟಾಚಾರದ ವ್ಯಾಖ್ಯಾನವು ಸಂಪೂರ್ಣವಾಗಿ ಕೇವಲ ಕಾಂಗ್ರೆಸ್ ವಿರೋಧಿಯಾಗುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಭ್ರಷ್ಟಾಚಾರ ವಿರೋಧಿ ಹೋರಾಟದ ಪ್ರಮುಖ ದಾಳಿ ಕಾಂಗ್ರೆಸ್ ಆಗಲೇ ಬೇಕು. ಆದರೆ ಬಿಜೆಪಿ ಅದಕ್ಕೆ ಕಮ್ಮಿಯೇನಲ್ಲ. ಈ ಚಳವಳಿಯನ್ನು ಬೆಂಬಲಿಸುತ್ತಿರುವ ಉದ್ಯಮಪತಿಗಳ ಕಡಿಮೆ ಭ್ರಷ್ಟರೇನಲ್ಲ. ಆದರೆ ಸಂಘಪರಿವಾರ ಹಜಾರೆ ಒದಗಿಸಿದ ಭೂಮಿಕೆಯನ್ನು ಬಳಸಿಕೊಂಡು ಬಹಳ ಯಶಸ್ವಿಯಾಗಿ ಈ ಆಂದೋಲನದ ರಾಜಕೀಯ ಲಾಭವನ್ನು ಪಡೆದುಕೊಳ್ಳುತ್ತಿದೆ. ಅದರಲ್ಲೂ ಹಜಾರೆಯವರು ಮೋದಿಯನ್ನು ಮತ್ತು ನಿತೀಶರನ್ನು ಬೆಂಬಲಿಸಿ ನೀಡಿರುವ ಹೇಳಿಕೆಯಂತೂ ಸಂಘ ಪರಿವಾರಕ್ಕೆ 1975ರಲ್ಲಿ ನೀಡಿದ ಬೃಹತ್ ಜೀವದಾನವನ್ನೇ ನೀಡುತ್ತಿದೆ.

ಇತಿಹಾಸ ಮತ್ತೊಮ್ಮೆ ಮರುಕಳಿಸಿದಾಗ ಅದು ಮೋಸದಿಂದ ಕೂಡಿರುತ್ತದೆ ಎಂಬ ಹೇಳಿಕೆ ಇದೆ. ಅದನ್ನು ಬಿಜೆಪಿಯ ವಿಷಯದಲ್ಲಿ ಮೊದಲ ಬಾರಿ ಮೋಸ ಎರಡನೇ ಬಾರಿ ಮರುಕಳಿಸಿದರೆ ದ್ರೋಹ ಎಂದು ಬದಲಿಸಿಕೊಳ್ಳಬಹುದೇನೋ? 1948ರಲ್ಲಿ ಗಾಂಧಿಯನ್ನು ಕೊಲೆ ಮಾಡಿದ ನಂತರ ಪ್ರಧಾನ ಧಾರೆ ರಾಜಕಾರಣದ ಅಂಚಿಗೆ ಸರಿದು ಹೋದ ಸಂಘಪರಿವಾರ ಮತ್ತೆ ದೊಡ್ಡ ಮಟ್ಟದಲ್ಲಿ ಪ್ರಧಾನ ಧಾರೆ ರಾಜಕಾರನದಲ್ಲಿ ಪ್ರವೇಶ ಪಡೆದದ್ದೇ ಜಯಪ್ರಕಾಶ್ ನಾರಾಯಣರ ಕಾಂಗ್ರೆಸ್ ವಿರೋಧೀ ಭ್ರಷ್ಟಾಚಾರ ವಿರೋಧೀ ಹೋರಾಟದ ಮೂಲಕ.

ಆಗ ಜೆಪಿಯವರು ನೀವು ಆರೆಸ್ಸೆಸ್ಸನ್ನು ಫ್ಯಾಸಿಸ್ಟ್ ಎನ್ನುವುದಾದರೆ ನಾನೂ ಸಹ ಫ್ಯಾಸಿಸ್ಟೇ ಎಂದು ಘೋಷಿಸಿ ಅದರ ನರಹಂತಕ ದೇಶ ವಿಭಜಕ ವ್ಯೂಹತಂತ್ರಗಳ ಮೇಲೆ ಭ್ರಷ್ಟಾಚಾರ ವಿರೋಧೀ ಮಖಮಲ್ ಮುಸುಕನ್ನು ಹೊದಿಸಿಬಿಟ್ಟಿತು. ಆ ಮೂಲಕ ಮತ್ತೆ ಪ್ರಧಾನ ಧಾರೆ ರಾಜಕಾರಣವನ್ನು ಪ್ರವೇಶಿಸಿದ ಆಗಿನ ಭಾರತ ಜನಸಂಘ ಹಾಗೂ ಇಂದಿನ ಭಾರತೀಯ ಜನತಾ ಪಕ್ಷ ತನ್ನ ದೇಶವಿಭಜಕ ಮತ್ತು ಕೋಮುವಾದೀ ರಾಜಕೀಯದಿಂದ ಬೆಳೆದು ನಿಂತಿರುವ ಪರಿ ನಮ್ಮ ಮುಂದಿದೆ.

1999ರಲ್ಲಿ ಕೇಂದ್ರದಲ್ಲಿ ಅಧಿಕಾರ ಪಡೆದ ಬಿಜೆಪಿ ತಾನೂ ಸಹ ಕಾಂಗ್ರೆಸ್‌ನಷ್ಟೇ ಭ್ರಷ್ಟಾಚಾರಿ ಮಾತ್ರವಲ್ಲ ಜನವಿರೋಧೀ ಸಹ ಎಂದು ಸಾಬೀತು ಮಾಡಿದ ನಂತರ ಕಳೆದ ಎರಡು ಚುನಾವಣೆಗಳಿಂದ ಅಧಿಕಾರದಿಂದ ದೂರ ಉಳಿದಿದೆ. ಹೀಗಾಗಿ ಮತ್ತೆ ತನ್ನ ರಾಜಕೀಯ ಮೆರುಗನ್ನು ಪಡೆದುಕೊಳ್ಳಲು ಈಗ ಮತ್ತೆ ಕಾಂಗ್ರೆಸ್ ವಿರೋಧೀ ಭ್ರಷ್ಟಾಚಾರ ಆಂದೋಲನದ ವ್ಯೂಹತಂತ್ರವನ್ನು ಹೆಣೆದಿದೆ. ಅದಕ್ಕೆ ಅಯಾಚಿತವಾಗಿ ಹಜಾರೆಯವರು ಕುದುರೆಯಾಗಿ ಒದಗಿದ್ದಾರೆ.

ಇದಲ್ಲದೆ ಒಬ್ಬ ಹಜಾರೆಯವರಿಂದ ಇಡೀ ರಾಜಕಾರಣವೇ ಕ್ಲೀನ್ ಆಗಬಹುದೆಂಬ ತಿಳುವಳಿಕೆಯುಳ್ಳ ಮತ್ತು ಸಾರ್ವಜನಿಕ ಜೀವನವನ್ನು ಶುದ್ಧಗೊಳಿಸಲು ಜನರ ಪ್ರಜ್ಞಾಪೂರ್ವಕ ಭಾಗೀದಾರಿಕೆ ಮತ್ತು ಚಳವಳಿಯ ಬದಲಿಗೆ ಯಾರೋ ಒಬ್ಬ ಮಹಾತ್ಮನ ಆಗಮನಕ್ಕೆ ಕಾಯುವ ಈ ದೇಶದ ಮಧ್ಯಮ ವರ್ಗದ ಮನಸ್ಸತ್ವವು ಹೇಗೆ ಕಾರ್ಪೊರೇಟ್ ನಿರಂಕುಶತ್ವ ಮತ್ತು ಬಿಜೆಪಿ ಕೋಮುವಾದದೊಡನೆ ಹೊಂದಾಣಿಕೆ ಮಾಡಿಕೊಳ್ಳಬಲ್ಲದು ಎಂಬುದನ್ನೂ ಸಹ ಕಳೆದ 97 ಗಂಟೆಗಳು ತೋರಿಸಿಕೊಟ್ಟಿವೆ!

ಇದು ಪ್ರಜಾತಂತ್ರಕ್ಕೆ ಅಪಾಯಕಾರಿ. ಔಷಧಿಯೇ ರೋಗಕ್ಕಿಂತ ಅಪಾಯಕಾರಿಯಾಗಿಬಿಡುವ ಸನ್ನಿವೇಶ ಇದೀಗ ಪ್ರಜಾತಂತ್ರದ್ದು. ಭ್ರಷ್ಟಾಚಾರದ ಮೂಲ ಅಭಿವೃದ್ಧಿಯ ಹೆಸರಲ್ಲಿ ಈ ದೇಶದಲ್ಲಿ ಗಟ್ಟಿಗೊಳ್ಳುತ್ತಿರುವ ಪರಾವಲಂಬಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿದೆ. ಈ ಪಾಪದಲ್ಲಿ ಕಾಂಗ್ರೆಸ್, ಬಿಜೆಪಿ ಎಲ್ಲಾ ಪಕ್ಷಗಳಿಗೂ ಸರಿಸಮಾನ ಪಾಲಿದೆ. ಭ್ರಷ್ಟಾಚಾರ ವ್ಯವಸ್ಥಾಗತವಾಗಿರುವಾಗ ಅದನ್ನು ವೈಯಕ್ತಿಕ ನೆಲೆಯಲ್ಲಿ ಹುಡುಕುವುದು, ವ್ಯಕ್ತಿಗತ ನೆಲೆಯಲ್ಲಿ ಪರಿಹಾರ ಹುಡುಕುವುದು, ಭ್ರಷ್ಟಾಚಾರವನ್ನು ಹುಟ್ಟಿಹಾಕುವ ಬುನಾದಿಯನ್ನು ಭದ್ರಪಡಿಸಿಕೊಂಡು ಅದರ ಅಭಿವ್ಯಕ್ತಿಯನ್ನು ಮಾತ್ರ ಕಠಿಣವಾಗಿ ದಂಡಿಸುವುದು ಮತ್ತು ಅದನ್ನೇ ಸಾಧನೆಯೆಂದು ಭ್ರಮಿಸುವುದು ಎಲ್ಲವೂ ಪ್ರಜಾತಂತ್ರದ ಕ್ರೂರ ಪ್ರಹಸನದಂತೆ ಕಾಣುತ್ತದೆ. ಹೀಗಾಗಿ ಭ್ರಷ್ಟಾಚಾರದ ಗಂಗೋತ್ರಿಯಾದ ಈ ವ್ಯವಸ್ಥೆಯನ್ನು ಜನರ ಪಜ್ಞಾಪೂರ್ವಕ ಭಾಗೀದಾರಿಕೆ ಮತ್ತು ಸಮರಶೀಲ ಜನರ ಚಳವಳಿಯ ಮೂಲಕ ಬದಲಿಸುವ ಮೂಲಕ ಮಾತ್ರ ಭ್ರಷ್ಟಾಚಾರ ನಿಲ್ಲುತ್ತದೆ.

ಆದರೆ ವಾಸ್ತವವೆಂದರೆ ಅಂಥಾ ಚಳವಳಿಯ ಕೊರತೆಯಿರುವುದರಿಂದಲೇ ಮಹಾತ್ಮರಿಗೆ, ಪವಾಡಗಳಿಗೆ ಹಂಬಲಿಸುವ ಪರಿಸ್ಥಿತಿ ಎದುರಾಗುತ್ತದೆ. □

ಅಣ್ಣಾ ಹಜಾರೆ ಆಂದೋಲನ: ಉಳಿದು ಹೋದ ಕೆಲವು ಪ್ರಶ್ನೆಗಳು

ಡಿ. ಎಸ್. ನಾಗಭೂಷಣ

ಅಣ್ಣ ಹಜಾರೆ ನೇತೃತ್ವದ ಜನಲೋಕಪಾಲ್ ಮಸೂದೆ ರಚನಾ ಸಮಿತಿ ವಿವಾದಕ್ಕೆ ಸಿಲುಕಿದೆ. ಒಂದು ಕಡೆ ಈ ಸಮಿತಿಯ ಸ್ವರೂಪವೇ ನಮ್ಮ ಸಂವಿಧಾನದ ಭಾವನೆಗೆ ವಿರುದ್ಧವಾಗಿದ್ದು, ಸಂಸದೀಯ ಪ್ರಜಾಸತ್ತಾತ್ಮಕ ವಿಧಿ-ವಿಧಾನಗಳಿಗೇ ಅಪಚಾರವೆಸಗುವಂತಿದೆ ಎಂದು ಕೆಲವರು ವಾದಿಸುತ್ತಿದ್ದರೆ; ಇನ್ನೊಂದು ಕಡೆ, ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರದ ವಿರುದ್ಧದ 'ರಾಮಬಾಣ'ವೆಂದೇ ಪರಿಗಣಿಸಲಾಗುತ್ತಿರುವ ಈ ಮಸೂದೆಯನ್ನು ರಚಿಸುತ್ತಿರುವವರೇ ಭ್ರಷ್ಟಾಚಾರಿಗಳಾಗಿದ್ದಾರೆ ಎಂಬ ಆರೋಪಗಳನ್ನು ಮಾಡಲಾಗುತ್ತಿದೆ.

1968ರಿಂದಲೂ ಸಂಸತ್ತಿನಲ್ಲಿ ನೆನಗುದಿಗೆ ಬಿದ್ದಿರುವ ಈ ಮಸೂದೆ ಅಂತೂ ಅಂತಿಮ ರೂಪು ಪಡೆದು ಕಾನೂನಾಗಿ ಜಾರಿಗೆ ಬರುವ ದಿನಗಳು ದೂರವಿಲ್ಲ ಎಂಬ ಭರವಸೆ ಹುಟ್ಟಿದ ಸಂದರ್ಭದಲ್ಲೇ ಈ ವಿವಾದ ಸೃಷ್ಟಿಯಾಗಿದೆ. ಏಕೆ ಈ ವಿವಾದ? ಯಾರಿದನ್ನು ಸೃಷ್ಟಿಸುತ್ತಿರುವವರು? ಈ ಬಗ್ಗೆಯೂ ಈಗ ಸಾಕಷ್ಟು ಚರ್ಚೆ-ವಿವಾದಗಳು ನಡೆದಿವೆ. ಹಾಗೆ ನೋಡಿದರೆ, ಸಮಿತಿಯ ಸ್ವರೂಪ ಕುರಿತ ಆಕ್ಷೇಪ ಮತ್ತು ಅದರ ಕೆಲವು ಸದಸ್ಯರ ಮೇಲೆ ಮಾಡಲಾಗುತ್ತಿರುವ ಆರೋಪಗಳೆರಡೂ ಒಂದೇ ನೆಲೆಯಿಂದ ಹುಟ್ಟಿದವುಗಳಾಗಿವೆ ಎಂಬುದನ್ನು ನಾವು ಗಮನಿಸಬಹುದು. ಅಥವಾ ಮೊದಲನೆಯದರಿಂದ ಎರಡನೆಯದು ಹುಟ್ಟಿದೆ ಎಂದೂ ಹೇಳಬಹುದಾಗಿದೆ. ಸಮಿತಿಯ ಸ್ವರೂಪ ಕುರಿತ ಆಕ್ಷೇಪಣೆ ಎಂದರೆ, ಶಾಸಕಾಂಗ ಮಾಡಬೇಕಾದ ಮಸೂದೆ ರಚನೆಯ ಕೆಲಸವನ್ನು ನಾಗರಿಕ ಸಮಾಜಕ್ಕೆ ಒಪ್ಪಿಸಲಾಗಿದೆ; ಹಾಗಾಗಿ, ಚುನಾವಣೆಗಳ ಮೂಲಕ ಆಯ್ಕೆಯಾದ ಜನತಾ ಪ್ರತಿನಿಧಿಗಳ ರೂಪದಲ್ಲಿನ ಜನತಾ ಶಕ್ತಿಯೇ ರಾಷ್ಟ್ರದ ಸಾರ್ವಭೌಮ ಅಧಿಕಾರ ಶಕ್ತಿ ಎಂಬ ಸಂವಿಧಾನದ ಕೇಂದ್ರ ಭಾವನೆಗೇ ಧಕ್ಕೆ ತರಲಾಗಿದೆ.

ಆದರೆ ಇದು ಸರ್ಕಾರದ ಪ್ರಜ್ಞಾಪೂರ್ವಕ ನಿರ್ಧಾರವೇ? ಎಂದೂ ನಾವು ಆಲೋಚನೆ ಮಾಡಬೇಕು. ಜನತಾ ಪ್ರತಿನಿಧಿಗಳೆಂದು ಸಂವಿಧಾನಿಕವಾಗಿ ಕರೆಯಲ್ಪಡುವ ನಮ್ಮ ಶಾಸಕರು/ಸಂಸದರು ಕಳೆದ 50 ವರ್ಷಗಳಿಂದಲೂ ಸಂವಿಧಾನದಿಂದ ನಿರ್ದೇಶಿತವಾದ ಈ ಲೋಕಪಾಲ ಮಸೂದೆಗೆ ಅಂತಿಮ ರೂಪು ಕೊಟ್ಟು ಕಾಯಿದೆಯನ್ನಾಗಿ ಜಾರಿಗೊಳಿಸಲು ಏಕೆ ಹಿಂಜರಿಯುತ್ತಿದ್ದಾರೆ? ಒಂದರ ಮೇಲೊಂದು ಸಮಿತಿ-ಉಪ ಸಮಿತಿಗಳನ್ನು ರಚಿಸುತ್ತಾ, ಈ ಸಮಗ್ರ ಭ್ರಷ್ಟಾಚಾರ ವಿರೋಧಿ ಶಾಸನಾತ್ಮಕ ಕ್ರಮವನ್ನು ಮುಂದೂಡುತ್ತಲೇ ಇದ್ದಾರೆ ಏಕೆ? ಇದಕ್ಕೆ ಕಳೆದ 50 ವರ್ಷಗಳಲ್ಲಿ ಒಂದರ ಮೇಲೊಂದರಂತೆ ಸಾರ್ವಜನಿಕ ವಲಯದಲ್ಲಿ ಸ್ಫೋಟಿಸುತ್ತಿರುವ ಕೋಟ್ಯಾಂತರ ರೂ.ಗಳ ಹಗರಣಗಳೇ ಉತ್ತರ ಹೇಳುವಂತಿವೆ. ಈ ಹಗರಣಗಳಲ್ಲಿ ಆಪಾದಿತರು ಯಾರು? ಸಂವಿಧಾನದ ಯಾವ ಅಂಗಗಳಿಗೆ ಸೇರಿದವರು? ಇವರ ಪೈಕಿ ಎಷ್ಟು ಜನರ ವಿರುದ್ಧ ಪ್ರಕರಣಗಳು ದಾಖಲಾಗಿ, ಎಷ್ಟು ಜನಕ್ಕೆ ಶಿಕ್ಷೆಯಾಗಿದೆ? ಉತ್ತರಗಳು ಸ್ಪಷ್ಟವಿವೆ.

ಹೀಗೆ ನಮ್ಮ ಶಾಸಕಾಂಗ ಸಂಪೂರ್ಣ ಭ್ರಷ್ಟಗೊಂಡು, ನಿಷ್ಕ್ರಿಯವಾಗಿ ತನ್ನ ಉದ್ದೇಶಗಳ ವಿಫಲತೆಯ ಅಂಚನ್ನು ತಲುಪಿದೆ. ಇದರ ಪರಿಣಾಮವಾಗಿ ಕಾರ್ಯಾಂಗವೂ ಭ್ರಷ್ಟಗೊಂಡು, ನಮ್ಮ ಜನ ತಮ್ಮ ನಾಗರಿಕ ಬದುಕಿನ ಮೌಲ್ಯಗಳ ರಕ್ಷಣೆಗಾಗಿ, ಆ ಮೂಲಕ ಸಂವಿಧಾನದ ರಕ್ಷಣೆಗಾಗಿ ಇನ್ನೂ ಅಷ್ಟೇನೂ ಭ್ರಷ್ಟಗೊಂಡಿಲ್ಲವೆಂದು ನಂಬಲಾಗಿರುವ ಉನ್ನತ ಸ್ತರದ ನ್ಯಾಯಾಂಗದ ಮೊರೆ ಹೋಗಲಾರಂಭಿಸಿದ್ದಾರೆ. ನಮ್ಮ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳಲ್ಲಿ ವಿಚಾರಣೆಗೆ ದಾಖಲಾಗಿರುವ ಪ್ರಕರಣಗಳ ಸ್ವರೂಪವನ್ನು ನೋಡಿದರೇ ಇದು ನಿಚ್ಚಳವಾಗುತ್ತದೆ. ಆ ಹುಡುಗನಿಗೆ ಈ ಕಾಲೇಜಿನಲ್ಲಿ ಸೀಟು ಕೊಡಿ, ಆ ಹಳ್ಳಿಗೆ ಈ ಗಡುವಿನಲ್ಲಿ ಕುಡಿಯುವ ನೀರು ಪೂರೈಸಿ ಎಂಬ ಆಜ್ಞೆಗಳಿಂದ ಹಿಡಿದು, ರೈತರಿಂದ ಸಂಗ್ರಹಿಸಿದ ಧಾನ್ಯಗಳನ್ನು ಕೊಳೆಯದಂತೆ ಸರಿಯಾಗಿ ಸಂರಕ್ಷಿಸಿ, ರೈಲುಗಳನ್ನು ಸರಿಯಾದ ಸಮಯಕ್ಕೆ ಓಡಿಸಿ ಎಂದು ಸೂಚಿಸಲೂ ಇಂದು ಈ ನ್ಯಾಯಾಲಯಗಳು ಬೇಕಾಗಿವೆ! ಅಂದರೆ, ಸಂವಿಧಾನ ಅರ್ಥಾತ್ ರಾಷ್ಟ್ರಜೀವನದ ಕಾರ್ಯಶೀಲತೆ ಇಂದು ಒಂಟಿಗಾಲ ಮೇಲೆ, ಅದೂ ಸಾಕಷ್ಟು ಕುಂಟಾಗಿರುವಂತೆ ತೋರುತ್ತಿರುವ ನ್ಯಾಯಾಂಗದ ಮೇಲಷ್ಟೇ ನಿಲ್ಲುವಂತಾಗಿದೆ. ಇಂತಹ ಸಂದರ್ಭದಲ್ಲಿ ಅದು ಕುಸಿದು ಬೀಳದಂತೆ ತಡೆಯಲು ನಾಗರಿಕ ಸಮಾಜ ಮುಂದಾದರೆ, ಅದು ಸಂವಿಧಾನ ರಕ್ಷಣೆಯ ಕ್ರಮವಾಗುತ್ತದೆಯೇ ಹೊರತು ಸಂವಿಧಾನ ವಿರೋಧಿ ಕ್ರಮ ಹೇಗಾಗುತ್ತದೆ? ಅಷ್ಟಕ್ಕೂ, ಈ ಜನಲೋಕಪಾಲ ಮಸೂದೆ ರಚನಾ ಸಮಿತಿಯಲ್ಲಿ ನಾಗರಿಕ ಸಮಾಜದ ಸದಸ್ಯರಷ್ಟೇ ಅಲ್ಲ, ಶಾಸಕಾಂಗ ಮತ್ತು ಕಾರ್ಯಾಂಗಗಳ ಸದಸ್ಯರೂ ಇದ್ದಾರಲ್ಲವೇ?

ಇರಬಹುದು, ಈಗ ಸಂವಿಧಾನದ ರಕ್ಷಣೆಗೆ ಧಾವಿಸಿ ಬಂದಿರುವ ನಾಗರಿಕ ಸಮಾಜ ಎಲ್ಲರೂ ಒಪ್ಪುವಂತಹ ರೀತಿಯಲ್ಲಿ ಪ್ರಾತಿನಿಧಿಕವಾಗಿಲ್ಲದಿರಬಹುದು. ಅಣ್ಣಾ ಹಜಾರೆ ರಾಷ್ಟ್ರದ ಇಂದಿನ ಸರ್ವಶ್ರೇಷ್ಠ ನಾಯಕರಲ್ಲದಿರಬಹುದು. ಆದರೆ ಜನತಾ

ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರದ ವಿರುದ್ಧದ 'ರಾಮಬಾಣ'ವೆಂದೇ ಪರಿಗಣಿಸಲಾಗುತ್ತಿರುವ ಜನಲೋಕಪಾಲ್ ಮಸೂದೆಯನ್ನು ರಚಿಸುತ್ತಿರುವವರೇ ಭ್ರಷ್ಟಾಚಾರಿಗಳಾಗಿದ್ದಾರೆ ಎಂಬ ಆರೋಪಗಳನ್ನು ಮಾಡಲಾಗುತ್ತಿದೆ. ೧೯೬೮ರಿಂದಲೂ ಸಂಸತ್ತಿನಲ್ಲಿ ನೆನಗುದಿಗೆ ಬಿದ್ದಿರುವ ಈ ಮಸೂದೆ ಅಂತೂ ಅಂತಿಮ ರೂಪು ಪಡೆದು ಕಾನೂನಾಗಿ ಜಾರಿಗೆ ಬರುವ ದಿನಗಳು ದೂರವಿಲ್ಲ ಎಂಬ ಭರವಸೆ ಹುಟ್ಟಿದ ಸಂದರ್ಭದಲ್ಲೇ ಈ ವಿವಾದ ಸೃಷ್ಟಿಯಾಗಿದೆ. ಏಕೆ ಈ ವಿವಾದ? ಯಾರಿದನ್ನು ಸೃಷ್ಟಿಸುತ್ತಿರುವವರು? ಈ ಬಗ್ಗೆಯೂ ಈಗ ಸಾಕಷ್ಟು ಚರ್ಚೆ-ವಿವಾದಗಳು ನಡೆದಿವೆ. ಸಮಿತಿಯ ಸ್ವರೂಪ ಕುರಿತ ಆಕ್ಷೇಪ ಅದರ ಕೆಲವು ಸದಸ್ಯರ ಮೇಲೆ ಮಾಡಲಾಗುತ್ತಿರುವ ಆರೋಪಗಳೆರಡೂ ಒಂದೇ ನೆಲೆಯಿಂದ ಹುಟ್ಟಿದವುಗಳಾಗಿವೆ ಎಂಬುದನ್ನು ಗಮನಿಸಬಹುದು.

ಶಕ್ತಿಯನ್ನು ಶಾಸನಾ ತ್ಮಕವಾಗಿ ಪ್ರತಿನಿಧಿಸಬಲ್ಲ ಈ ಜನ ಪ್ರತಿನಿಧಿಗಳ ಆಯ್ಕೆಗೆ ಅನುವು ಮಾಡಿಕೊಡಬೇಕಾದ ಚುನಾವಣಾ ಪ್ರಕ್ರಿಯೆಯೇ ಭ್ರಷ್ಟಗೊಂಡು ಕುಸಿದು ಬೀಳುತ್ತಿರುವಾಗ ನಿಜವಾದ ಜನ ಪ್ರತಿನಿಧಿಗಳೆಂದು ಯಾರನ್ನು ಒಪ್ಪುವುದು? ಭ್ರಷ್ಟತೆಯಲ್ಲಿ ಭಾಗಿಯಾಗಿ ಅಥವಾ ಅದನ್ನು ಕಣ್ಮುಚ್ಚಿ ಸಹಿಸುತ್ತಿರುವ ಶಾಸನಾತ್ಮಕ ಪ್ರತಿನಿಧಿಗಳನ್ನೋ? ಅಥವಾ, ಅವರ ಮತ್ತು ಅವರ ಚೇಲಾಗಳಾಗಿ ಪರಿವರ್ತಿತರಾಗಿರುವ ಕಾರ್ಯಾಂಗದ ಕಾರ್ಯವೈಖರಿಯನ್ನು ಇನ್ನು ಸಹಿಸಲಾಗದೆಂಬಂತೆ; ಯಾರು ಜನ ಸಂಘಟನೆ ಮಾಡಿ ಸರ್ಕಾರವನ್ನು ಮಣಿಸಿ, ಈಗ ಈ ಎಲ್ಲ ಅನಾಹುತವನ್ನು ಸ್ವಲ್ಪ ಮಟ್ಟಿಗಾದರೂ ತಡೆಯಬಲ್ಲ ಶಾಸನ ರಚಿಸುವ ಪ್ರಾಥಮಿಕ ಹಂತದ ಪ್ರಕ್ರಿಯೆಯಲ್ಲಿ ಭಾಗವಹಿಸುವ 'ಮಾನ್ಯತೆ' ಪಡೆಯಬಲ್ಲವರಾಗಿದ್ದಾರೋ ಅವರನ್ನೋ? ಸಹಜವಾಗಿ ಎರಡನೆಯವರನ್ನು ನಮ್ಮ ಆಪತ್ಬಾಂಧವರೆಂಬ ನೆಲೆಯಲ್ಲಾದರೂ ತತ್ಕಾಲೀನ ಜನಪ್ರತಿನಿಧಿಗಳೆಂದು ಒಪ್ಪಿಕೊಳ್ಳಲು ನಾವು ಸಿದ್ಧರಾಗಬೇಕಲ್ಲವೇ? ಇದಾವುದನ್ನೂ ಮಾಡದೆ, ಬರೇ ಬೈಯುತ್ತಾ, ವಿಮರ್ಶಿಸುತ್ತಾ, ಅದರಲ್ಲಿ ಮಹಿಳೆಯರಿಲ್ಲ, ದಲಿತರಿಲ್ಲ ಎಂಬ ಅರ್ಧ ತಾಂತ್ರಿಕ, ಅರ್ಧ ಭಾವನಾತ್ಮಕ ಆಕ್ಷೇಪಣೆಗಳನ್ನು ದಾಖಲಿಸುತ್ತಾ ಕೂರುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನೂ ಇಂದು ನಾವು ಹಾಕಿಕೊಳ್ಳಬೇಕಾಗಿದೆ. ಇಲ್ಲದೆ ಹೋದರೆ ನಮ್ಮ ಅಸಮಧಾನ, ವಿರೋಧ, ವಿಮರ್ಶೆ, ಆಕ್ಷೇಪಣೆಗಳೇ ಅನುಮಾನಾಸ್ಪದವಾಗತೊಡಗುತ್ತವೆ.

ಆದರೆ ಅದೇ ಸಮಯದಲ್ಲಿ ಈ ಅನೌಪಚಾರಿಕ ಮಾರ್ಗದ ಮೂಲಕ ಮೂಡಿದ ನಾಗರಿಕ ಸಮಾಜದ ಈ 'ಜನತಾ' ಪ್ರತಿನಿಧಿಗಳು, ಕೆಲವರು ಆಪಾದಿಸುತ್ತಿರುವಂತೆ ಶಾಸನಾತ್ಮಕ ಪ್ರತಿನಿಧಿಗಳಂತೆಯೇ ನಿಜವಾಗಿ ಭ್ರಷ್ಟರೇ ಆಗಿದ್ದರೆ, ಅವರಿಂದ ಎಂತಹ ಕಾಯಿದೆ ರೂಪುಗೊಳ್ಳಬಹುದೆಂಬ ಆತಂಕ ಯಾರಲ್ಲಾದರೂ ಉಂಟಾಗುವುದು ಸಹಜವೇ ಎಂಬುದನ್ನೂ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ; ಉದಾಹರಣೆಗೆ, ಖ್ಯಾತ ನ್ಯಾಯವಾದಿ ಶಾಂತಿಭೂಷಣ್ ಅವರ ಮೇಲೆ ಮಾಡಲಾಗುತ್ತಿರುವ ಆರೋಪಗಳನ್ನು ಗಮನಿಸಬೇಕು.

೧

ಆಗ ಹಜಾರೆ ಅವರ ನೇತೃತ್ವದ ಈ ಇಡೀ ಭ್ರಷ್ಟಾಚಾರ ವಿರೋಧಿ ಆಂದೋಲನ ಸದುದ್ದೇಶಿತವಾದರೂ, ಅಂತಹ ಸುಭದ್ರ ಭ್ರಷ್ಟಾಚಾರ ವಿರೋಧಿ ನೆಲೆಯ ಮೇಲೆ ರೂಪುಗೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತಾ ಹೋಗುತ್ತದೆ. ಶಾಂತಿ ಭೂಷಣ್ ಹಿರಿಯ ವಕೀಲರಾಗಿ, ಮಾಜಿ ಕೇಂದ್ರ ಕಾನೂನು ಮಂತ್ರಿಯಾಗಿ ಕಳೆದ ನಾಲ್ಕು ದಶಕಗಳಿಂದಲೂ ಭ್ರಷ್ಟಾಚಾರದ ವಿರುದ್ಧ ಹಲವು ಹೋರಾಟಗಳನ್ನು ನಡೆಸುತ್ತಾ ಬಂದಿರುವ ಇತಿಹಾಸ ಹೊಂದಿರುವವರು. ಆದರೆ, 2006ರಲ್ಲಿ, ಆಗ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಮುಲಾಯಂ ಸಿಂಗ್ ಯಾದವ್ ಪರ ನಡೆಸುತ್ತಿದ್ದ ಮೊಕದ್ದಮೆಯೊಂದರಲ್ಲಿ ಸಂಬಂಧಪಟ್ಟ ನ್ಯಾಯಾಧೀಶರ ಮೇಲೆ 'ಪ್ರಭಾವ' ಬೀರಲು ಯತ್ನಿಸಿದರೆಂದು ಈಗ ಆಪಾದಿಸಲಾಗುತ್ತಿದೆ. ಅದಕ್ಕೆ ಈಗ 'ಧ್ವನಿ ಮುದ್ರಿಕೆ' ರೂಪದ ಸಾಕ್ಷಿಯೂ ಲಭ್ಯವಾಗಿದೆಯಂತೆ. ಆದರೆ ಈ ಸಾಕ್ಷ್ಯ ನಿರ್ಮಾಣದ ಹಿಂದೆ ಇರುವವರು ಮತ್ತಾರೂ ಅಲ್ಲ, ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಮಾಜವಾದವೂ ಸೇರಿದಂತೆ ಭಾರತೀಯ ರಾಜಕಾರಣದಲ್ಲಿ ಅಳಿದುಳಿದಿದ್ದ ಎಲ್ಲ ಪವಿತ್ರ ಮೌಲ್ಯಗಳನ್ನೂ ಬುಡಮೇಲು ಮಾಡಿದ ಕುಖ್ಯಾತಿಯ ಅಮರ್ ಸಿಂಗ್ ಎಂಬ ರಾಜಕಾರಣಿ ಎಂಬುದು ಮಾತ್ರ ನಮಗೆ ಅಷ್ಟಾಗಿ ಮುಖ್ಯವಾಗಿ ಕಾಣದೇ ಹೋಗುತ್ತದೆ! ಇನ್ನು ಶಾಂತಿ ಭೂಷಣ್ ಮತ್ತು ಅವರ ಮಗ ಪ್ರಶಾಂತ್ ಭೂಷಣ್ ಉತ್ತರ ಪ್ರದೇಶದಲ್ಲಿ ಮಾರುಕಟ್ಟೆ ಬೆಲೆಗಿಂತ ಅತಿ ಕಡಿಮೆ ದರದಲ್ಲಿ ಜಮೀನು ಕೊಂಡು ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ್ದಾರೆಂಬುದು ಇನ್ನೊಂದು ಭ್ರಷ್ಟಾಚಾರದ ಆರೋಪ. ಸರಿ, ಆದರೆ ಇವೊತ್ತು ಯಾವ ಮತ್ತು ಯಾರ ಭೂ-ಖರೀದಿ, ಮಾರುಕಟ್ಟೆ ಬೆಲೆಯಲ್ಲಿ ನೋಂದಿತವಾಗುತ್ತಿದೆ? ಇದಕ್ಕೆ ಕಾರಣವೇನು? ಯಾರು? ಈ ಪ್ರಶ್ನೆಗಳನ್ನೂ ನಮ್ಮನ್ನು ನಾವೇ ಕೇಳಿಕೊಳ್ಳಬೇಕಾಗುತ್ತದೆ ಅಲ್ಲವೇ?

> **ಆರೋಪಗಳು ಭ್ರಷ್ಟಾಚಾರ ನಡೆಯಿತೆಂದು ಹೇಳಲಾಗುತ್ತಿರುವ ಸಂದರ್ಭಗಳಲ್ಲಿ ಕೇಳಿ ಬರದೆ, ಭ್ರಷ್ಟಾಚಾರ ವಿರೋಧೀ ಆಂದೋಲನವೊಂದು ಗಂಭೀರ ರೂಪದಲ್ಲಿ ಆರಂಭವಾದಾಗ ಮಾತ್ರ ಏಕೆ ಕೇಳಿ ಬರುತ್ತವೆ? ಶಾಂತಿ ಭೂಷಣರು, ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರುಪಾಯಿಗಳ ನಷ್ಟಕ್ಕೆ ಕಾರಣ ಎಂದು ಹೇಳಲಾಗುತ್ತಿರುವ 2ಜಿ ಸ್ಪೆಕ್ಟ್ರಂ ಹಗರಣದ ಬಗ್ಗೆ ಆರಂಭವಾಗಿರುವ ವಿಚಾರಣೆಯ ರೂವಾರಿ ಎಂದೋ ಅಥವಾ ಅವರೂ ಭ್ರಷ್ಟ ವ್ಯವಸ್ಥೆಯ ಫಲಾನುಭವಿಯೇ ಆಗಿದ್ದಾರೆ ಎಂದೋ? ಎರಡೂ ಇರಬಹುದು. ಆದರೆ ಈ ಎರಡೂ ಅಭಿನ್ನವಾಗಿ ಬೆರತು, ಜನಲೋಕಪಾಲ ಮಸೂದೆ ರಚನಾ ಸಮಿತಿಯ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸುವಂತಹ ಏಕ ಪರಿಣಾಮ ರೂಪದಲ್ಲಿ ಕಾಣಿಸಿಕೊಳ್ಳ ತೊಡಗಿದಾಗ ಬೇಸರವಾಗುತ್ತದೆ, ಜಿಗುಪ್ಸೆಯಾಗುತ್ತದೆ, ಗಾಬರಿಯಾಗುತ್ತದೆ.**

ಮುಖ್ಯವಾಗಿ ಇಲ್ಲಿ ಗಮನಿಸಬೇಕಾದದ್ದು, ಇಂತಹ ಆರೋಪಗಳು ಭ್ರಷ್ಟಾಚಾರ ನಡೆಯಿತೆಂದು ಹೇಳಲಾಗುತ್ತಿರುವ ಸಂದರ್ಭಗಳಲ್ಲಿ ಕೇಳಿ ಬರದೆ, ಭ್ರಷ್ಟಾಚಾರ ವಿರೋಧೀ ಆಂದೋಲನವೊಂದು ಗಂಭೀರ ರೂಪದಲ್ಲಿ ಆರಂಭವಾದಾಗ ಮಾತ್ರ ಏಕೆ ಕೇಳಿಬರುತ್ತವೆ? ಶಾಂತಿ ಭೂಷಣರು, ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರುಪಾಯಿಗಳ ನಷ್ಟಕ್ಕೆ ಕಾರಣ ಎಂದು ಹೇಳಲಾಗುತ್ತಿರುವ 2ಜಿ ಸ್ಪೆಕ್ಟ್ರಂ ಹಗರಣದ ಬಗ್ಗೆ ಆರಂಭವಾಗಿರುವ ವಿಚಾರಣೆಯ ರೂವಾರಿ ಎಂದೋ ಅಥವಾ ಅವರೂ ಭ್ರಷ್ಟ ವ್ಯವಸ್ಥೆಯ ಫಲಾನುಭವಿಯೇ ಆಗಿದ್ದಾರೆ ಎಂದೋ? ಎರಡೂ ಇರಬಹುದು. ಆದರೆ ಈ ಎರಡೂ ಅಭಿನ್ನವಾಗಿ ಬೆರತು, ಜನಲೋಕಪಾಲ ಮಸೂದೆ ರಚನಾ ಸಮಿತಿಯ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸುವಂತಹ ಏಕ ಪರಿಣಾಮ ರೂಪದಲ್ಲಿ ಕಾಣಿಸಿಕೊಳ್ಳತೊಡಗಿದಾಗ ಬೇಸರ, ಜಿಗುಪ್ಸೆ, ಗಾಬರಿಯಾಗುತ್ತದೆ.

ಸ್ವಲ್ಪ ಆಳವಾಗಿ ಯೋಚಿಸಿದಾಗ ಇದಕ್ಕೆ ಕಾರಣ, ಪ್ರಸಕ್ತ ಭ್ರಷ್ಟಾಚಾರ ವಿರೋಧಿ ಆಂದೋಲನವು 'ಭ್ರಷ್ಟಾಚಾರ' ವೆಂಬುದನ್ನು ಗ್ರಹಿಸಿರುವ ರೀತಿ-ನೀತಿಗಳಲ್ಲೇ ಅಡಗಿದೆ ಎಂದೆನಿಸುತ್ತದೆ. ಭ್ರಷ್ಟಾಚಾರವೇನೂ ಈ ದೇಶದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದದ್ದಲ್ಲ. ಗಾಂಧಿಯುಗದ ರಾಜಕಾರಣದ ಸಾಮಾನ್ಯ ಪ್ರತಿನಿಧಿಯೆಂದು ಗುರುತಿಸಬಹುದಾದ ನಿಜಲಿಂಗಪ್ಪನವರೇ ಒಂದೆಡೆ ಹೇಳಿದಂತೆ, ಶ್ರೀರಾಮನ ಕಾಲದಲ್ಲೂ ಭ್ರಷ್ಟಾಚಾರವಿತ್ತು. ಇನ್ನು ಈ ಗಾಂಧಿ ರಾಜಕಾರಣದ ಯುಗಕ್ಕೆ ಅಂತ್ಯ ಹಾಡಿದವರೆಂದು ಹೇಳಲಾಗುವ ಹೊಸ ಕಾಲದ 'ಗಾಂಧಿ', ಇಂದಿರಾ ಗಾಂಧಿಯವರು ತಮ್ಮ ವಿರುದ್ಧದ ಜೆಪಿ ನೇತೃತ್ವದ ಭ್ರಷ್ಟಾಚಾರ ಆಂದೋಲನದ ಸಂದರ್ಭದಲ್ಲಿ ಹೇಳಿದಂತೆ, ಭ್ರಷ್ಟಾಚಾರವಿಲ್ಲದ ಜಾಗ ಜಗತ್ತಿನಲ್ಲಿಯೇ ಇಲ್ಲ!

ಜೆಪಿ ಆಂದೋಲನ ಅನತಿ ಕಾಲದಲ್ಲೇ ಭ್ರಮನಿರಸನ ಉಂಟು ಮಾಡಿ ಭ್ರಷ್ಟಾಚಾರ ಕುರಿತ ಈ ಎರಡೂ ಮಾತುಗಳು ನಿಜವೆನ್ನಿಸುವಂತಾದರೂ, ಇಂದು ಮತ್ತೆ ರಾಷ್ಟ್ರಾದ್ಯಂತ ಭ್ರಷ್ಟಾಚಾರದ ವಿರುದ್ಧ ಹೊಸ ಜಾಗೃತಿ, ಹೊಸ ಆವೇಶ ಉಂಟಾಗಿರುವಂತೆ ತೋರುತ್ತಿದೆಯಾದರೆ, ಅದಕ್ಕೆ ಭ್ರಷ್ಟಾಚಾರ ಈಗ ಸಹಿಸಲಾಗದಷ್ಟು ಬೃಹದಾಕಾರವಾಗಿ ಬೆಳೆದಿದೆ ಎಂಬುದಷ್ಟೇ ಕಾರಣವಿರಲಾರದು. ಏಕೆಂದರೆ, ಭ್ರಷ್ಟಾಚಾರ ನಿಗ್ರಹಿಸಲು ಸಂವಿಧಾನದಲ್ಲಿ, ಸರ್ಕಾರಗಳನ್ನು ಕಾಲಾನುಕಾಲಕ್ಕೆ ಬದಲಿಸುವುದೂ ಸೇರಿದಂತೆ, ಸಾಕಷ್ಟು ಅಸ್ತ್ರಗಳಿಲ್ಲವೇ? ಅವನ್ನೇಕೆ ಪರಿಣಾಮಕಾರಿಯಾಗಿ ಬಳಸಬಾರದು ಎಂಬ ಪ್ರಶ್ನೆ ಏಳುತ್ತದೆ. ಆದರೆ ಪರಿಸ್ಥಿತಿ ಇಂದು ಅಷ್ಟು ಸರಳವಾಗಿಲ್ಲ. ಸಂವಿಧಾನದ ಈ ಅಸ್ತ್ರಗಳನ್ನೇ ನಿಷ್ಕ್ರಿಯಗೊಳಿಸಬಲ್ಲಂತಹ 'ಹೊಸ ಭ್ರಷ್ಟಾಚಾರ' ಇಂದು ಮೈದಳೆದು ನಿಂತಿದೆ. ಅದು ಶಾಸಕಾಂಗವನ್ನೂ, ಕಾರ್ಯಾಂಗವನ್ನೂ ನುಂಗಿ, ನ್ಯಾಯಾಂಗವನ್ನೂ ನುಂಗಲು ಕಾದು ನಿಂತಿದೆ!

ಸಂವಿಧಾನ ಎಷ್ಟೇ ಚೈತನ್ಯಶಾಲಿ ಎಂದು ನಾವು ಬೌದ್ಧಿಕವಾಗಿ ವರ್ಣಿಸಿದರೂ, ಅದು ಆ ಚೈತನ್ಯ ಪಡೆಯುವುದು ಅದನ್ನು ನಂಬಿ ಆಚರಿಸುವ ಪ್ರಜೆಗಳ ಮೂಲಕ ತಾನೇ? ಆದರೆ ಪ್ರಜೆಗಳನ್ನೇ ನಿಶ್ಚೇಷ್ಟಿತಗೊಳಿಸುವಂತಹ ಶಕ್ತಿಗಳು ಸೃಷ್ಟಿಯಾದರೆ ಏನು ಮಾಡುವುದು? ಇಂದು ಹಣ ಎನ್ನುವುದು ಎಂತಹ ರಾಕ್ಷಸ ಪ್ರಮಾಣ ಮತ್ತು ಸಾಧ್ಯತೆಗಳನ್ನು ಗಳಿಸಿಕೊಂಡಿದೆ ಎಂದರೆ, ಅದು ಈ ಕಾಲದ ಎಂತಹ ಬೈರಾಗಿಗಳನ್ನೂ ನುಂಗಿ ನೊಣೆಯಬಲ್ಲುದಾಗಿದೆ. ಸಾವಿರ ರೂಪಾಯಿಗಳಿಗೆ ಬಗ್ಗದವನು, ಲಕ್ಷಕ್ಕೆ ಬಗ್ಗದಿರುವನೇ? ಲಕ್ಷಕ್ಕೆ ಬಗ್ಗದವನು ಕೋಟಿಗೆ ಬಗ್ಗದಿರುವನೇ? ಕೋಟಿಗೆ ಬಗ್ಗದವನು ದಶಕೋಟಿ-ಶತಕೋಟಿಗೆ ಬಗ್ಗದಿರುವನೇ? ಈ ಹಣ ಗಳಿಸಿ ಈಗ ಏನೆಲ್ಲ ಸುಖ ಅನುಭವಿಸಬಹುದು! ಇದರ ವೈವಿಧ್ಯತೆಗೆ, ತೀವ್ರತೆಗೆ ಮಿತಿ ಎಂಬುದಿದೆಯೇ? ಕೊನೆಯಿಲ್ಲದೆ, ಸದಾ ಆವಿಷ್ಕಾರಗೊಳ್ಳುತ್ತಾ ಹೋಗುತ್ತಿರುವ ಸುಖದ ಈ ವೈವಿಧ್ಯತೆ ಮತ್ತು ತೀವ್ರತೆಗಳ ದೊಡ್ಡ ಕೈಗಾರಿಕೆಯನ್ನೇ ನಾವಿಂದು ಮುಕ್ತ ಮಾರುಕಟ್ಟೆ ಪ್ರಪಂಚ ಎಂದು ಕರೆಯುತ್ತಿರುವುದಲ್ಲವೇ? ಶಾಂತಿಭೂಷಣ್ ಈ ಪ್ರಪಂಚದ ಒಬ್ಬ ಸಾಮಾನ್ಯ ಪ್ರಜೆ ಮಾತ್ರವಲ್ಲವೇ? ನಾನು,

ನೀವು? ಹೆಚ್ಚೆಂದರೆ, ನಾವಿನ್ನೂ ಅಂತಹ ಪ್ರಜೆತನದ ಸುಖಗಳಿಗೆ ತೆರೆದುಕೊಳ್ಳುವ ಅವಕಾಶಗಳನ್ನು ಪಡೆದಿಲ್ಲ.

ಇದು ನಮ್ಮ ಕಣ್ಮುಂದೆ ಇರುವ ಸತ್ಯ. ಇದನ್ನು ಎದುರಿಸಲು, ನಮ್ಮ ನ್ಯಾಯಾಲಯಗಳಲ್ಲಿ ಬಾಡಿಗೆ ಬಂಟರ ಬಾಯಿಗೆ ಸಿಕ್ಕಿ ಭಾಷೆಯ ಎಂಜಲಿನಲ್ಲಿ ಹೊರಳಾಡಿ ಉಸಿರುಗಟ್ಟಿಕೊಳ್ಳಬಲ್ಲ ಕಾಯಿದೆಯೊಂದನ್ನು ರೂಪಿಸಲು ನಾವಿಂದು ಹೊರಟಿದ್ದೇವೆ. ಯಡಿಯೂರಪ್ಪನವರಿಗೆ ಮತ್ತು ದಿಗ್ವಿಜಯ ಸಿಂಗ್ ಅವರಿಗೆ ಅರ್ಥವಾಗಿರುವ ಈ ಸಂಗತಿ ಸಂತೋಷ್ ಹೆಗ್ಡೆಯವರೂ ಸೇರಿದಂತೆ ಇತರ ಕಾನೂನು ತಜ್ಞರು ಮತ್ತು ಹೋರಾಟಗಾರರಿಗೆ ಅರ್ಥವಾಗದಿರುವುದರಿಂದಲೇ ಈ ಎಲ್ಲ ಅಸಮಧಾನ, ಆರೋಪ, ಜಗಳ, ಕಿತ್ತಾಟಗಳು! ಆದರೆ ಇವೆಲ್ಲವುಗಳ ಮಧ್ಯೆ, ಕೆಲವರಿಗೆ ಮಿತಿಯಿಲ್ಲದ ಸ್ವರ್ಗ ಸುಖವನ್ನೂ, ಮತ್ತೆ ಕೆಲವರಿಗೆ ಮಿತಿಯಿಲ್ಲದ ನರಕ ವಾಸವನ್ನೂ ಸೃಷ್ಟಿಸುತ್ತಿರುವ ಮನ ಮೋಹನ ಸಿಂಗ್ ಪ್ರಣೀತ ಉದಾರ ಆರ್ಥಿಕ ನೀತಿಯು, ದುಡಿಮೆಯ ಅರ್ಥವನ್ನೇ, ದುಡಿಮೆ ಮತ್ತು ಪ್ರತಿಫಲಗಳ ನಡುವಣ ಸಮೀಕರಣವನ್ನೇ ಅಸ್ತವ್ಯಸ್ತಗೊಳಿಸಿದೆ ಎಂಬುದೇ ನಮ್ಮ ಗಮನಕ್ಕೆ ಬಾರದೇ ಹೋಗಿದೆ. ಇದು ಈ ಸಂದರ್ಭದ ನಿಜವಾದ ದುರಂತ! ಈ ಹಿಂದೆ ಯಾವುದನ್ನು ಅನ್ಯಾಯ, ಅನುಚಿತ, ಅಕ್ರಮ, ಮೋಸ-ವಂಚನೆ, ದಗಾ ಎಂದು ಕರೆಯುತ್ತಿದ್ದೆವೋ ಅವು ಇಂದು ಈ ನೀತಿ ಎತ್ತಿ ಹಿಡಿಯುತ್ತಿರುವ ಅಭಿವೃದ್ಧಿ ಮತ್ತು ಅದಕ್ಕೆ ತಕ್ಕುನಾದ ವಾಣಿಜ್ಯ ವ್ಯವಸ್ಥಾಪನೆಯ ಪರಿಭಾಷೆಯಲ್ಲಿ ಬಹು ಮರ್ಯಾದಸ್ಥ ಹೆಸರುಗಳನ್ನು ಪಡೆದು, ನ್ಯಾಯ-ಅನ್ಯಾಯ, ತೃಪ್ತಿ, ನೆಮ್ಮದಿ, ಸಂತೋಷಗಳ ಅರ್ಥಗಳೇ ವಿಕ್ಷಿಪ್ತಗೊಂಡಿವೆ.

೨

ಇಂದು, ಸ್ವಲ್ಪ ಕಾಲದ ಮಟ್ಟಿಗೆ ಮತ್ತು ಸ್ವಲ್ಪ ಪ್ರಮಾಣದಲ್ಲಷ್ಟೇ ವೈಯುಕ್ತಿಕ ಮಾನ-ಮರ್ಯಾದೆಗಳನ್ನು ತ್ಯಜಿಸಿಬಲ್ಲ ದುಸ್ಸಾಹಸ ಮಾಡಬಲ್ಲಷ್ಟು 'ಉದ್ಯಮಶೀಲತ್ವ'ವನ್ನು ಪ್ರದರ್ಶಿಸಬಲ್ಲಿರಾದರೆ, ನೀವು ರಾತ್ರೋ ರಾತ್ರಿ ಕೋಟ್ಯಾಧೀಶರಾಗಬಲ್ಲಿರಿ ಮತ್ತು ಆನಂತರ ಅದರ ಹತ್ತು-ನೂರರಷ್ಟು ಕಾಲ ಮತ್ತು ಪ್ರಮಾಣದ ಸಾರ್ವಜನಿಕ ಮಾನ ಮರ್ಯಾದೆಗಳನ್ನು ಗಳಿಸಬಲ್ಲಿರಿ! ಈ ಹಿಂದಿನ ಷೇರು ಹಗರಣ, ಬ್ಯಾಂಕ್ ಹಗರಣ, ಯುಟಿಐ ಹಗರಣ ಇತ್ಯಾದಿಗಳು ಮತ್ತು ಇತ್ತೀಚಿನ 2ಜಿ ಸ್ಪೆಕ್ಟ್ರಂ ಹಗರಣ, ಕಾಮನ್ ವೆಲ್ತ್ ಕ್ರೀಡಾಕೂಟದ ಹಗರಣ ಇವನ್ನು ಸಾಬೀತುಪಡಿಸುತ್ತಿವೆ. ಆದರೆ ಇದರ ಪರಿಣಾಮಗಳನ್ನು ನಾವು ಅಭೂತಪೂರ್ವ ಅಭಿವೃದ್ಧಿ ಪಥದಲ್ಲಿ ಎದುರಾಗುವ ಸಣ್ಣ ತೊಡಕುಗಳೆಂದಷ್ಟೇ ಪರಿಗಣಿಸಿ, ಜನರ ತಕ್ಷಣದ ಸಮಾಧಾನಕ್ಕಾಗಿ ಒಂದು ತನಿಖೆಗೋ ಒಂದು ಆಯೋಗ ರಚನೆಗೋ ಆದೇಶಿಸಿ ನಿರ್ಯೋಚನೆಯಿಂದ ಮುಂದೆ ಸಾಗುತ್ತಿದ್ದೇವೆ!

ಇದೊಂದು ನೈತಿಕ ಬಿಕ್ಕಟ್ಟು ಮಾತ್ರವೆಂದೂ, ಇದನ್ನು ಮೌಲ್ಯಗಳ ಪುನರುತ್ಥಾನ ಆಂದೋಲನದ ಮೂಲಕ ಸರಿಪಡಿಸಬಹುದೆಂದೂ ಈ ಆರ್ಥಿಕ ನೀತಿಯ ಕೆಲ ಫಲಾನುಭವಿಗಳು ಅಮಾಯಕವಾಗಿ ಹೇಳತೊಡಗಿದ್ದಾರೆ. ಕೆಲವರು ನಂಬಿರುವಂತೆ ಅಂತಹ ಆಳವಾದ ನಂಬಿಕೆಯುಳ್ಳ ಗಾಂಧೀವಾದಿಯೇನೂ ಅಲ್ಲದ ಅಣ್ಣ ಹಜ಼ಾರೆಯವರು ನರೇಂದ್ರ ಮೋದಿಯವರ ಆಡಳಿತವನ್ನು ಮೆಚ್ಚಿ ಮಾತಾಡಿದ್ದೂ ಇಂತಹ ಸುಲಭ ಚಿಂತನೆಯ ಪ್ರಭಾವದಿಂದಲೇ ಇರಬಹುದು. ಆದರೆ ಮನುಷ್ಯನನ್ನು ಒಂದು ಜೈವಿಕ ಮತ್ತು ಸಾಮಾಜಿಕ ಸಮತೋಲನದಲ್ಲಿಡಬಲ್ಲ ಕರುಣೆ-ಸಹಾನುಭೂತಿ, ನ್ಯಾಯ-ಅನ್ಯಾಯ, ನೆಮ್ಮದಿ-ತೃಪ್ತಿಗಳ ಅರ್ಥಸೀಮೆಗಳನ್ನೇ ಅಸ್ತವ್ಯಸ್ತಗೊಳಿಸಬಲ್ಲಷ್ಟು ಹಣ ಕೆಲವರ ಕೈಸೇರಿ, ಅವರನ್ನು ತೀರದ ದಾಹಕ್ಕೆ ಬಲಿ ಕೊಡುವಂತಹ ರಾಕ್ಷಸ ವ್ಯವಸ್ಥೆ ಸೃಷ್ಟಿಯಾದಾಗ, ನೈತಿಕತೆ, ಮೌಲ್ಯಗಳನ್ನು ವ್ಯಾಖ್ಯಾನಿಸಬಲ್ಲ ಬಗೆಯಾದರೂ ಯಾವುದು? ಅದಕ್ಕೆ ಬೇಕಾದ ಭಾಷೆಯಾದರೂ ಎಲ್ಲಿ, ಹೇಗೆ ಉಳಿದಿರುತ್ತದೆ? ನಿಮ್ಮ ನೈತಿಕ ಪುನರುತ್ಥಾನದ ಬೋಧೆಯನ್ನು ಎಲ್ಲಿಂದ, ಹೇಗೆ ಆರಂಭಿಸುವಿರಿ? ರವಿಶಂಕರ್, ನಿತ್ಯಾನಂದರ ಮಠಗಳಿಂದಲೇ? ಅಥವಾ ನಮ್ಮ ವೀರಶೈವ ಮಠಗಳಿಂದಲೇ? ಮೂರ್ತದ ಆಧಾರವಿಲ್ಲದ ಅಮೂರ್ತಗಳು ಭೋಳೆ ಮಾತ್ರ ಎನ್ನಿಸಿಕೊಳ್ಳಬಲ್ಲವು ಅಲ್ಲವೇ?

ನಿಜ ಇದೊಂದು ನೈತಿಕ ಬಿಕ್ಕಟ್ಟೇ. ಹಾಗೆ ನೋಡಿದರೆ ಎಲ್ಲ ಮಾನವ ಬಿಕ್ಕಟ್ಟುಗಳೂ ಆಳದಲ್ಲಿ ನೈತಿಕ ಬಿಕ್ಕಟ್ಟುಗಳೇ. ಆದರೆ ಕಳೆದ ಇಪ್ಪತ್ತು ವರ್ಷಗಳ ಆರ್ಥಿಕ ನೀತಿಯ ಉದಾರತೆ, ಮಿತಿ ಇಲ್ಲದ ಹಣ ಶೇಖರಣೆಗೆ ದಾರಿ ಮಾಡಿಕೊಟ್ಟಿರುವುದೇ ಇವರು ಹೇಳುವಂತಹ ಇಂದಿನ ನೈತಿಕ ಬಿಕ್ಕಟ್ಟಿಗೆ ಕಾರಣವಾಗಿದೆ ಎಂಬುದು ಮೊದಲು ನಮಗೆ ಅರ್ಥವಾಗಬೇಕಿದೆ. ಹಣ ಮತ್ತು ನೈತಿಕತೆಯ ನಡುವಣ ಈ ನಿರ್ಣಾಯಕ ಸಂಬಂಧವನ್ನು ಅರ್ಥಮಾಡಿಕೊಳ್ಳದ ಹೊರತು, ಯಾವುದನ್ನು ಇಂದು ಭ್ರಷ್ಟಾಚಾರ ಎಂದು ಕರೆಯುತ್ತಿದ್ದೇವೆಯೋ ಅದು ಕಾನೂನಿಗೆ ಇರಲಿ, ಕಲ್ಪನೆಗೂ ಸಿಗದಂತೆ ಬೆಳೆದು ನಮ್ಮನ್ನು ನಮ್ಮ ರಾಷ್ಟ್ರದ ಸಹಿತ ನುಂಗಿ ಹಾಕಬಲ್ಲುದು. ಈ ಅರಿವು ಭಾರತ ಮಾತೆಯ ಭವ್ಯ ಚಿತ್ರವನ್ನು ಮುಂದಿಟ್ಟುಕೊಂಡು ಉಪವಾಸ ಮಾಡಿದ ಈ ಭ್ರಷ್ಟಾಚಾರ ವಿರೋಧಿ ಆಂದೋಲನಕಾರರಲ್ಲಿ ಮತ್ತು ಅದಕ್ಕಿಂತ ಮುಖ್ಯವಾಗಿ, ಅದರ ಟೀಕಾಕಾರರಲ್ಲಿ ಮೂಡಬೇಕಿದೆ. ಅದರ ಹೊರತಾಗಿ, ಈ ಜಗಳ, ಈ ತರ್ಕ, ಈ ಕಿತ್ತಾಟಗಳು ಲೋಕಪಾಲ ಮಸೂದೆ ಕಾಯಿದೆಯಾದ ನಂತರವೂ, ಭ್ರಷ್ಟಾಚಾರದೊಂದಿಗೆ ಮುಂದುವರೆದೇ ಇರುತ್ತದೆ!

ಈ ಹೊಸ ಉದಾ[illegible]ರ್ಥಿಕ ನೀತಿ ಜಾರಿಗೆ ಬಂದುದು, ನೆಹರೂ ಪ್ರಣೀತ ಮಿಶ್ರ ಆರ್ಥಿಕ ನೀತಿಯ ಹೆಸರಿನ 'ಸಮಾಜವಾದಿ' ರಾಜಕಾರಣದ ವೈಫಲ್ಯಕ್ಕೆ ಉತ್ತರವಾಗಿ ಎಂದು ಹೇಳಲಾಗುತ್ತದೆ. ಆ 'ಸಮಾಜವಾದ'ದ ದಿನಗಳನ್ನು, ಉದ್ಯಮಶೀಲತೆಯನ್ನು ಲಂಚಕೋರತನದಿಂದ ನಿರ್ಬಂಧಿಸುತ್ತಿದ್ದ 'ಲೈಸೆನ್ಸ್ ರಾಜ್ಯ'ವೆಂದೂ ಹಳಿಯಲಾಗುತ್ತಿದೆ. ಆದರೆ ಈಗ ಇದಕ್ಕೆ ಪ್ರತಿಯಾಗಿ ಸೃಷ್ಟಿಯಾಗಿರುವುದು ಎಂತಹ ರಾಜ್ಯ? ಇಂದು ನಾವು ಯಾವುದಕ್ಕೆ, ಎಂತಹ ಅನಾಹುತಕ್ಕೆ ಲೈಸೆನ್ಸ್ ನೀಡಿರುವ ರಾಜ್ಯದಲ್ಲಿ ಬದುಕುತ್ತಿದ್ದೇವೆ? ಇಂದು ಎಂತೆಂತಹ ಹೊಸ ಹೊಸ ವೈಯುಕ್ತಿಕ, ಕೌಟುಂಬಿಕ, ವೃತ್ತೀಯ ಮತ್ತು ಸಾಮಾಜಿಕ ಹಿಂಸೆಗಳು ನಮ್ಮ ದಿನ ಬದುಕಿನಲ್ಲಿ ಆವಿಷ್ಕಾರಗೊಂಡಿವೆ ಎಂಬುದನ್ನು ಯಾರಾದರೂ ಗಮನಿಸಿದ್ದಾರಾ? ಇತ್ತೀಚೆಗೆ ತಾನೇ ಜಗತ್‌ಭೀಕರ ದುರಂತಕ್ಕೀಡಾದ ಜಪಾನ್‌ನ ಘುಕೋಶಿಮಾದ ಅಣು ಸ್ಥಾವರವನ್ನು ಕಟ್ಟಿದ ಸಮಾಜದ ಜೀವನ ಶೈಲಿ, ಗುರಿ ಮತ್ತು ಗತಿಯಾದರೂ ಯಾವುದು ಮತ್ತು ಈ ದುರಂತದ ಪರಿಣಾಮಗಳ ಸ್ವರೂಪವಾದರೂ ಏನು; ಮತ್ತೂ ಮುಖ್ಯವಾಗಿ, ಈ ಶೈಲಿ, ಗುರಿ, ಗತಿ ಹಾಗೂ ಪರಿಣಾಮಗಳಿಂದ ನಾವು ನಿಜವಾಗಿ ಎಷ್ಟು ದೂರದಲ್ಲಿದ್ದೇವೆ ಎಂಬುದರ ಕಡೆಗೆ ನಮ್ಮ ಗಮನ ಕೊಂಚವಾದರೂ ಹರಿದಿದೆಯೇ? ಗಮನಿಸುವಷ್ಟು ಸಂವೇದನಾ ಶೀಲತೆ ಇರಲಿ, ವ್ಯವಧಾನವಾದರೂ ಯಾರಿಗಾದರೂ ಇದೆಯಾ?

ಆಯಿತು ಗಮನಿಸುವ ಸೂಕ್ಷ್ಮತೆಗಳ ಈ ಗೋಜಲೇ ಬೇಡ, ಈ ಬಗ್ಗೆ ಎಲ್ಲವನ್ನೂ ಸಾರಾಂಶ ರೂಪದಲ್ಲಿ ಹೇಳುವ ಒಂದು ಗಟ್ಟಿ ಅಂಕಿ ಅಂಶವೇ ಇಲ್ಲಿದೆ ನೋಡಿ: ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇಟ್ಟಿರುವ ಕಳ್ಳಹಣದ ಮೂರನೇ ಎರಡು ಭಾಗ ಜಮಾ ಅಗಿರುವುದು ಕಳೆದ ಇಪ್ಪತ್ತು ವರ್ಷಗಳಿಂದ ಜಾರಿಗೆ ಬಂದಿರುವ ಈ 'ಹೊಸ ಲೈಸೆನ್ಸ್ ರಾಜ್ಯ'ದ ಅವಧಿಯಲ್ಲಿ ಎಂದು Global Financial Integrity ಪ್ರಕಟಿಸಿದೆ. ಇದು ಜಾಗತಿಕ ಕಪ್ಪು ಹಣದ ಹಾವಳಿಯ ವಿರುದ್ಧ ಹೋರಾಡುತ್ತಿರುವ ಒಂದು ಸ್ವತಂತ್ರ ಸೇವಾ ಸಂಸ್ಥೆ. ಈಗಲಾದರೂ ಇದು ನಿಜವಾಗಿ ಯೋಚಿಸಬೇಕಾದ ವಿಚಾರ ಅನ್ನಿಸುತ್ತದೆಯೇ?

ಹಾಗಾಗಿ ಈ ಎರಡೂ ರೀತಿಯ ಲೈಸೆನ್ಸ್ ರಾಜ್ಯಗಳ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು, ಹೊಸ ಮಧ್ಯಮ ಮಾರ್ಗವೊಂದನ್ನು ನಾವು ರಾಜಕೀಯ ನೆಲೆಯಲ್ಲಿ ಕಂಡುಕೊಳ್ಳಲು ಸಾಧ್ಯವೇ? ಈ ಪ್ರಶ್ನೆ ಕುರಿತು ಗಂಭೀರವಾಗಿ ಯೋಚಿಸುವ ಕಾಲ ಈಗ ಬಂದಿದೆ ಎನಿಸುತ್ತದೆ. ಹಾಗಾಗಿಯೇ ಏನೋ-ಕಾಲದ ಈ ಒತ್ತಡಕ್ಕೆ ಸಿಕ್ಕಿಯೇ ಏನೋ-ಹೀಗೆ ಆಲೋಚಿಸಲು ಪ್ರೇರೇಪಿಸುವಂತಹ ನಮ್ಮ ಇತ್ತೀಚಿನ ಇತಿಹಾಸದ ನಿರ್ಲಕ್ಷಿತ ಅಧ್ಯಾಯಗಳಲ್ಲಿ ಹುದುಗಿರುವ ವೈಚಾರಿಕ ವಿನ್ಯಾಸಗಳು ಮತ್ತು ಅನುಭವ ಸಾಮಗ್ರಿಗಳ ಉತ್ಖನನ ಹೊಸ ಉತ್ಸಾಹದೊಂದಿಗೆ ಆರಂಭವಾಗಿದೆ. ಅದರತ್ತ ನಾವೀಗ ತುರ್ತು ಗಮನ ಮತ್ತು ಹೊಸ ನೋಟ ಬೀರಬೇಕಿದೆ. ಇಂತಹ ಸಂದರ್ಭದಲ್ಲಿ, ಈ ಮೇಲಿನ ಪ್ರಶ್ನೆಯನ್ನು ಮುಖಾಮುಖಿ ಮಾಡಿಕೊಳ್ಳುವ ರೀತಿಯಲ್ಲಿ ಸದ್ಯದ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಲೋಕಪಾಲ ಮಸೂದೆಯ ರಚನೆಯ ಆಚೆಗೂ ವಿಸ್ತರಿಸಿ ಬೆಳೆಸಬಲ್ಲವಾದರೆ ಮಾತ್ರ ಅಣ್ಣ ಹಜ಼ಾರೆ ಅವರ ನೇತೃತ್ವದ ಸಮಿತಿ ಕುರಿತು ನಮ್ಮ ಆಕ್ಷೇಪಣೆಗಳನ್ನು ದಾಖಲಿಸುವ ನೈತಿಕ ಅಧಿಕಾರ ನಮಗೆ ಬಂದೀತು. □

> **ಹಣ ಕೆಲವರ ಕೈಸೇರಿ, ಅವರನ್ನು ತೀರದ ದಾಹಕ್ಕೆ ಬಲಿ ಕೊಡುವಂತಹ ರಾಕ್ಷಸ ವ್ಯವಸ್ಥೆ ಸೃಷ್ಟಿಯಾದಾಗ, ನೈತಿಕತೆ, ಮೌಲ್ಯಗಳನ್ನು ವ್ಯಾಖ್ಯಾನಿಸಬಲ್ಲ ಬಗೆಯಾದರೂ ಯಾವುದು? ಅದಕ್ಕೆ ಬೇಕಾದ ಭಾಷೆಯಾದರೂ ಎಲ್ಲಿ, ಹೇಗೆ ಉಳಿದಿರುತ್ತದೆ? ನಿಮ್ಮ ನೈತಿಕ ಪುನರುತ್ಥಾನದ ಬೋಧೆಯನ್ನು ಎಲ್ಲಿಂದ, ಹೇಗೆ ಆರಂಭಿಸುವಿರಿ? ರವಿಶಂಕರ್, ನಿತ್ಯಾನಂದರ ಮಠಗಳಿಂದಲೇ? ಅಥವಾ ನಮ್ಮ ವೀರಶೈವ ಮಠಗಳಿಂದಲೇ?**

ಬಣ್ಣಗಳ ಬಡಿವಾರ



ಬಹಳ ಹಿಂದೆ:
ಬಣ್ಣಗಳಿಗೆ ಬೆಲೆಯಿರಲಿಲ್ಲ
ಹಾಲಿಗೆ ಬಿಳುಪು
ಕಲ್ಲಿಗೆ ಕಪ್ಪು
ಮರಗಿಡಗಳಿಗೆ ಹಸಿರು
ಆಕಾಶಕೆ ನೀಲಿಯ ಉಸಿರು
ಇದ್ದವೆಂಬುದನ್ನು ಬಿಟ್ಟರೆ
ಬಣ್ಣಗಳಿಗೆ ಅಹಂಕಾರಗಳಿರಲಿಲ್ಲ
ಜನರಿಗೂ ಅವುಗಳ ಮೇಲೆ ಅಂತಾ
ಅಕ್ಕರೆಯೇನಿರಲಿಲ್ಲ!
ಮನುಷ್ಯರೆಲ್ಲರ ರಕ್ತದ ಬಣ್ಣವೊಂದೇ
ಕೆಂಪು
ಎಂಬ ಸತ್ಯ ಗೊತ್ತಿದ್ದರಿಂದ
ಬಣ್ಣದ ಕಾರಣಕ್ಕೆ ಬಡಿದಾಡುತ್ತಿರಲಿಲ್ಲ:

ಆದರೀಗ:
ಬಣ್ಣಗಳಿಗೆ ಬೆಲೆ ಬಂದಿದೆ
ಎಲ್ಲ ಧರ್ಮಗಳೂ ತಮಗೆ ಬೇಕಾದ
ಬಣ್ಣವನ್ನಾರಿಸಿಕೊಂಡು ಮಂದಿಯ ಮುಖಗಳಿಗೆ
ಬಳಿದು
ಬಡಿವಾರದ ಮಾತುಗಳನ್ನಾಡುತ್ತಿವೆ.
ಬದುಕಿನ ಭಾಗವಾಗಿದ್ದ ಬಣ್ಣಗಳು
ಬದುಕೇ ಆಗಿ ಬಡಿದಾಟದ ಬಡಿಗೆಗಳಾಗಿವೆ;
ಭವಿಷ್ಯದಲ್ಲಿ:
ಬಣ್ಣಗಳ ಭ್ರಮಾಧೀನ ಬಡಿದಾಟದಲ್ಲಿ
ಉಳಿಯುವುದೊಂದೇ
ಬಣ್ಣ ಕೆಂಪು!
ಮನುಷ್ಯರ ರಕ್ತ
ಶೂನ್ಯ ಸಂಪಾದನೆಕಾರರಾಗುತ್ತಿದ್ದೇವೆ!

○ ಮಧುಸೂಧನ್ ತರೀಕೆರೆ

ಒಕ್ಕೂಟ ವ್ಯವಸ್ಥೆ ಮತ್ತು ಪ್ರಾದೇಶಿಕ ಪಕ್ಷಗಳು

ಡಾ. ವಿಠ್ಠಲ ಭಂಡಾರಿ ಕೆರೆಕೋಣ

ಖರೇ ಅಂದ್ರೆ ಪ್ರಾದೇಶಿಕ ಪಕ್ಷಗಳಿಗೂ ಒಕ್ಕೂಟ ವ್ಯವಸ್ಥೆಗೂ ನೇರವಾದ ಮತ್ತು ಅನಿವಾರ್ಯ ಸಂಬಂಧವೇನೂ ಇಲ್ಲ. ಕೇಂದ್ರಕ್ಕೂ ರಾಜ್ಯಗಳಿಗೂ ನೇರ ಸಂಬಂಧ ಇದೆ. ಒಕ್ಕೂಟದ ಪರಿಕಲ್ಪನೆಯೇ ರಾಜ್ಯದ ಅಧಿಕಾರ ಮತ್ತು ಕೇಂದ್ರದ ಪ್ರಭುತ್ವಗಳಿಗೆ ಸಂಬಂಧಿಸಿದ ಸಂವಿಧಾನಿಕ ವ್ಯವಸ್ಥೆ. ಪ್ರಾದೇಶಿಕ ಪಕ್ಷಗಳಿಗೂ, ರಾಜ್ಯಗಳಿಗೂ ಇರುವ ಸಂಬಂಧಗಳ ಹಿನ್ನೆಲೆಯಲ್ಲಿ ಒಕ್ಕೂಟ ವ್ಯವಸ್ಥೆಯೊಂದಿಗೆ ಸಂಬಂಧ ಪಡೆದುಕೊಂಡಿದೆ. ಒಂದರ್ಥದಲ್ಲಿ ಸುತ್ತುಬಳಕೆಯ ಸಂಬಂಧ.

ನಮ್ಗೆ ಸ್ವಾತಂತ್ರ್ಯ ಬಂದು 63 ವರ್ಷ ಆಯ್ತು ಅನ್ನೋದಕ್ಕಿಂತ 63 ವರ್ಷ ಕಳೆದುಹೋಯ್ತು ಅನ್ನೋದು ವಾಸಿ. ಸಂವಿಧಾನ ಸ್ವೀಕಾರವಾಗಿಯೂ ಬರೋಬ್ಬರಿ ಆರು ದಶಕಗಳೇ ಆಯ್ತು. ಒಮ್ಮೆ ಹಿಂತಿರುಗಿ ನೋಡಿದರೆ ಸ್ವಾತಂತ್ರ್ಯ ಚಳವಳಿಯಲ್ಲಿ ಹಿತಾತ್ಮರಾದವರ ಕನಸು, ಆಶಯಗಳು ಈಡೇರಿದೆಯಾ ಎಂದು ಕೇಳಿದರೆ ನಮ್ಮಲ್ಲಿ ಉತ್ತರ ಇಲ್ಲ. ಭ್ರಷ್ಟಾಚಾರದಲ್ಲಿ ಮುಂದಿದ್ದೇವೆ; ರೈತರ ಅತ್ಮಹತ್ಯೆಗಳು ನಮ್ಗೆ ದಿನ ನಿತ್ಯದ ಸತ್ಯಗಳಾಗಿವೆ; ದೇಸದ ಸಾರ್ವಜನಿಕ ಆಸ್ತಿ, ಭೂಮಿ ಮಾರೋದು ರಾಜಕಾರಣದ ಭಾಗ ಆಗ್ಬಿಟ್ಟಿದೆ; ದೇಶದ 70% ಜನರಿಗೆ ದಿನನಿತ್ಯ 20 ರೂಪಾಯಿ ಸಾಮಗ್ರಿ ಖರೀದಿ ಮಾಡುವ ಸಾಮರ್ಥವೂ ಇಲ್ಲ; ಜನರ ಹಸಿವಿನ ಕೂಗು ಸರ್ಕಾರವನ್ನು ಮಟ್ಟುತ್ತಿಲ್ಲ. ಪ್ರಜಾಪ್ರಭುತ್ವ ಅಂದ್ರೆ ಇದೇನಾ? ಎಂದು ಜನಾನೇ ಕೇಳ್ತಿದಾರೆ. ಕೆಲವರಂತೂ ಇನ್ನೂ ಮುಂದೆ ಹೋಗಿ ಬ್ರಿಟೀಶ್ ಕಾಲಾನೇ ಚೆನ್ನಾಗಿತ್ತು ಅಂತಿದ್ದಾರೆ. ಇದೇ ಸಂದರ್ಭ ಎಂದು ಕೆಲವು ರಾಜಕೀಯ ಪಕ್ಷಗಳು ಅಧ್ಯಕ್ಷೀಯ ಪ್ರಜಾಪ್ರಭುತ್ವದ ಬಗ್ಗೆ, ದ್ವಿಪಕ್ಷೀಯ ಸಂಸದೀಯ ವ್ಯವಸ್ಥೆ ಬಗ್ಗೆ ತಮ್ಮ ಆಲೋಚನೆ ಹರಿಬಿಡ್ತಿದಾರೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳೋಕೆ ಬಲಪಂಥದ ರಾಜಕಾರಣ ಆಡೋ ನಾಟಕ ಇದು. ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ದುರದ್ದೇಶಪೂರಿತ ತಂತ್ರ ಇದು.

ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯ ಚರ್ಚೆ ಪ್ರಾರಂಭ ಆಗಿದ್ದು ಸ್ವಾತಂತ್ರ್ಯಪೂರ್ವದಲ್ಲಿ. ನಮ್ಮ ಸಂವಿಧಾನದ ಮೂಲ ಬ್ರಿಟಿಷ್ ಸಂವಿಧಾನ. ಇದು ಭಾರತದಲ್ಲಿ 1935 ರಲ್ಲಿ ಜಾರಿಗೆ ಬಂತು. ಇದನ್ನು ಅನುಸರಿಸಿಯೇ ಸ್ವಾತಂತ್ರ್ಯ ಬಂದಾಗ ನಮ್ಮದು 'ಫೆಡರಲ್ ಸಿಸ್ಟಮ್'–ಒಕ್ಕೂಟ ವ್ಯವಸ್ಥೆ–ಎಂದು ಭಾರತ ಘೋಷಿಸಿತು. ಇದು ಭಾಷಾವಾರು ಪ್ರಾಂತ ರಚನೆಗೊಳ್ಳುವ ಮೊದಲೇ, ವಿವಿಧ ರಾಜಮನೆತನಗಳು ಭಾರತ ಸರ್ಕಾರಕ್ಕೆ ಸೇರುವ ಮೊದಲೇ ಘೋಷಣೆ ಆಗಿದೆ. ಆಮೇಲೆ ಸಂವಿಧಾನ ಅಂಗೀಕಾರ ಆಗಿದ್ದು.

ಸ್ವಾತಂತ್ರ್ಯಪೂರ್ವದಲ್ಲಿ ದೇಶೀಯ ರಾಜರೆಲ್ಲಾ ಸೇರಿ 'ಸ್ಥಳೀಯ ರಾಜರುಗಳ ಒಕ್ಕೂಟ' (ಛೇಂಬರ್ ಆಫ್ ಪ್ರಿನ್ಸಸ್) ರಚಿಸಿ ಕೊಂಡು ಸ್ವಾತಂತ್ರ್ಯಾನಂತರದಲ್ಲಿ ತಮಗೆ ಪ್ರತ್ಯೇಕತೆ ಬೇಕು ಎಂದು ಹೋಗಿದ್ರು, ಆಮೇಲೆ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನ ಆಗುವ ತೀರ್ಮಾನ ತೆಗೆದುಕೊಂಡ್ರು ಅನ್ನೋದು ಬೇರೆ ವಿಷಯ.

ಆದ್ರೆ ಸ್ವಾತಂತ್ರ್ಯಾನಂತರ ಒಕ್ಕೂಟ ವ್ಯವಸ್ಥೆ ನಿರ್ಮಾಣ ಆಗೋವರೆಗೆ ಒಂದು ಚಳವಳಿ ನಡೆದಿತ್ತು ಅನ್ನೋದನ್ನು ಮರೆಯಬಾರದ ಸಂಗತಿ. ಸ್ವಾತಂತ್ರ್ಯ ಚಳವಳಿಯ ಆಶಯದ ಭಾಗವಾಗಿಯೇ ನಡೆದ ಭಾಷಾವಾರು ಪ್ರಾಂತ ರಚನೆಯ ಚಳವಳಿ, ದ್ರಾವಿಡ ಚಳವಳಿ, ಹಿಂದುಳಿದ ವರ್ಗಗಳ ಚಳವಳಿ, ಭೂಸುಧಾರಣ ಚಳವಳಿ ಇತ್ಯಾದಿ ಗಮನಾರ್ಹವಾದದ್ದು. ಹಾಗೆ ನೋಡಿದ್ರೆ ರಾಜಕೀಯ ಪ್ರಜ್ಞೆ ಕೂಡ ದಕ್ಷಿಣ ಭಾರತದಲ್ಲಿ ಹೆಚ್ಚಾಗಿತ್ತು. ಬೆಂಗಾಲವನ್ನು ಹೊರತುಪಡಿಸಿ ಈ ಮಾತು ಹೇಳುತ್ತಿದ್ದೇನೆ.

ಸ್ವಾತಂತ್ರ್ಯಪೂರ್ವದ ರಾಜ್ಯ ಭಾಷಾವಾರು ಆಗಿರಲಿಲ್ಲ ಅನ್ನೋದು ನಮಗೆಲ್ಲಾ ತಿಳಿದ ಸಂಗತಿ. ಆದ್ರೆ 1920ರಷ್ಟೊತ್ತಿಗೆ ಕಾಂಗ್ರೆಸ್ ಪ್ರದೇಶವಾರು ತನ್ನ ಕಮಿಟಿಯನ್ನು ರಚಿಸಿತು. ಈ ಪ್ರಾದೇಶಿಕ ಕಮಿಟಿ ಹೆಚ್ಚು ಕಡಿಮೆ ಭಾಷಾವಾರು ಭೌಗೋಳಿಕ ಸ್ವರೂಪವನ್ನು ಒಳಗೊಂಡಿತ್ತು. ಅನಂತರದಲ್ಲಿ ಕಾಂಗ್ರೆಸ್‌ನ್ನು ನಿಯಂತ್ರಿಸುವ ವರ್ಗಕ್ಕೆ ಭಾಷಾವಾರು ಪ್ರಾಂತ ರಚಿಸುವ ಮನಸ್ಸಿಲ್ಲದಿದ್ದರೂ ಒಂದು ಹಂತದಲ್ಲಿ ಅದು ಅನಿವಾರ್ಯ ಆಯ್ತು. ಇದು ಈ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿತು. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಮೊದಲ ಪ್ರಯತ್ನ ಇದು. ಪ್ರಾದೇಶಿಕವಾದ ಸಾಂಸ್ಕೃತಿಕ, ಸಾಮಾಜಿಕ ಅನನ್ಯತೆಯನ್ನು, ವೈವಿಧ್ಯತೆಯನ್ನು ಕಾಯ್ದುಕೊಳ್ಳುವಲ್ಲಿ, ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿತ್ತು. ಹಾಗಾಗಿಯೇ ರಾಜ್ಯದ ಉಗಮದ ಹಿಂದೆ ಜನರ ಆಶೋತ್ತರ ಪ್ರಬಲವಾಗಿತ್ತು ಅನ್ನೋದು.

ಒಕ್ಕೂಟ ಅಂದ್ರೇ ಪ್ರಬಲ ಕೇಂದ್ರ ಮತ್ತು ಪ್ರಬಲ ರಾಜ್ಯ. ಇವರೆಡರ ಪೂರಕ ಕೆಲಸದಿಂದಾಗಿ ಬಲಿಷ್ಠ ಒಕ್ಕೂಟ ರಚನೆ ಆಗ್ಬೇಕು ಅನ್ನೋದು. ಆದರೆ ಇಲ್ಲಿ ಹಾಗಾಗಲಿಲ್ಲ. ಕೇಂದ್ರ ಬಲಿಷ್ಠ–ರಾಜ್ಯ ದುರ್ಬಲ ಆಯ್ತು. ಇದರಿಂದ ದುರ್ಬಲ ಒಕ್ಕೂಟ ವ್ಯವಸ್ಥೆ ನಿರ್ಮಾಣ ಆಯ್ತು. ಹೀಗೆ ದುರ್ಬಲ ಆಗೋದಕ್ಕೆ ಹಿಂದೆ ಹೇಳಿದ ಹಾಗೆ ಬ್ರಿಟೀಷ ಆಡಳಿತಗಾರರು ಕಾರಣ. ಅವರಿಗೆ ನಿಜವಾದ ಪ್ರಜಾಪ್ರಭುತ್ವವನ್ನು ಕೊಡುವ ಮನಸ್ಸಿರಲಿಲ್ಲ. ಪ್ರಜಾಪ್ರಭುತ್ವದ ಅಣಕನ್ನು ಮಾತ್ರ ಕೊಡಬೇ ಕಾಗಿತ್ತು. ಒಕ್ಕೂಟದ ವ್ಯವಸ್ಥೆಯ ಪ್ರಮುಖ ಲಕ್ಷಣವಾದ ಅಧಿಕಾರ ಮತ್ತು ಆರ್ಥಿಕ ವಿಕೇಂದ್ರಿಕರಣವನ್ನು ಜಾರಿಗೆ ತರುವುದು ಬೇಕಿರಲಿಲ್ಲ. ಅವರಿಗೆ ಘೋಷಣೆಯಷ್ಟೇ ಮುಖ್ಯ ಆಗಿತ್ತು. ಹಾಗಾಗಿ 1935ರಲ್ಲಿ ಅವರು ಹೆಸರಿಗೆ ಒಕ್ಕೂಟ, ಬಸಿರಲ್ಲಿ ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು.

"ಅನಂತರದ ದಿನಗಳಲ್ಲಿ ನಮ್ಮ ಪ್ರಭುತ್ವದ ರಚನೆಯು ಒಂದು ಸ್ವಯಂ ಆಡಳಿತದ ರಾಜ್ಯಗಳ ಒಕ್ಕೂಟ (ಫೆಡರಲ್) ಎಂದು ಪರಿಗಣಿಸಲ್ಪಟ್ಟರೂ ಎಲ್ಲಾ ಶಕ್ತಿ ಹಾಗೂ ಅಧಿಕಾರ ಪ್ರಾಯೋಗಿಕವಾಗಿ ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕೃತ ಆಗಿದೆ. ಭಾರತದ ಒಕ್ಕೂಟ ಅಂಗ ರಾಜ್ಯಗಳಿಗೆ ಬಹಳ ಸೀಮಿತವಾದ ಅವಕಾಶಗಳೂ, ಅಧಿಕಾರಗಳೂ ಉಳಿದಿವೆ. ಅವುಗಳ ಸ್ವಾಯತ್ತತೆ ತೀರಾ ಔಪಚಾರಿಕವಾದದ್ದು. ಇದರಿಂದಾಗಿ ರಾಜ್ಯಗಳು ಕೇಂದ್ರ ಸರಕಾರವನ್ನು ವಿಪರೀತವಾಗಿ ಅವಲಂಬಿಸುವಂತಾಗಿ ಅವುಗಳ ಅಭಿವೃದ್ಧಿಯನ್ನು ತಡೆಯುತ್ತವೆ."

(ಆಧಾರ)

ಅಂದ್ರೆ ನಿಜವಾದ ಅರ್ಥದಲ್ಲಿ ಭಾರತದಲ್ಲಿ ಒಕ್ಕೂಟ ವ್ಯವಸ್ಥೆ ಜಾರಿ ಆಗ್ಲಿಲ್ಲ. ರಾಜ್ಯವಾರು ಅಧಿಕಾರದ ವಿಕೇಂದ್ರೀಕರಣ ಬದಲು ವಿಪರೀತ ಅಧಿಕಾರದ ಕೇಂದ್ರೀಕರಣ ರಾಜ್ಯಗಳ ವೈವಿಧ್ಯತೆಗೆ, ಅನನ್ಯತೆಗೆ ಧಕ್ಕೆ ತಂದಿದೆ. ಇದು ಇಡೀ ಒಕ್ಕೂಟ ವ್ಯವಸ್ಥೆಗೆ ಮಾರಕ ಕೂಡ.

ಈ ಹಿಂದೆ ರಾಷ್ಟ್ರೀಯತೆಯ ಪ್ರಶ್ನೆ ಬಂದಾಗಲೂ ಹೀಗೇ ಆಗಿತ್ತು. ಅತಿಯಾದ ರಾಷ್ಟ್ರೀಯತೆ ಪ್ರತಿಪಾದನೆಯಿಂದಾಗಿ ಭಾಷೆ, ಸಂಸ್ಕೃತಿ, ಕಲೆ, ಆಹಾರ, ನಂಬಿಕೆಗಳಲ್ಲಿಯ ಅನನ್ಯತೆಗೆ ಪೆಟ್ಟು ಬಿದ್ದಿತು. ಆ ಒಂದು ದನಿಗಾಗಿ ನೂರು ದನಿಗಳು ಗೌಣವಾಗಿದ್ದವು. ಇಂಗ್ಲೀಷ್ ಎದುರು ಹಿಂದಿ, ಉತ್ತರ ಭಾರತದ ನೂರಾರು ಸ್ಥಳೀಯ ಭಾಷೆಯನ್ನು ಗೌಣವಾಗಿಸಿತು. ಸಮಗ್ರ ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಹಲವು ಉಪಸಂಸ್ಕೃತಿಗಳು, ಶ್ರಮಜೀವಿ ಸಂಸ್ಕೃತಿಗಳು ಮರೆಯಾದವು. ರಾಮ, ಕೃಷ್ಣ ರಂತಹ ದೇವರ ಆರ್ಭಟದಲ್ಲಿ ಜಟಕ, ಮಾಸ್ತಿ, ಚೌಡಿ ಇತ್ಯಾದಿಗಳು ಮೂಲೆಗೆ ಬಿದ್ದವು.

ಒಕ್ಕೂಟ ಅಂದ್ರೇ ಪ್ರಬಲ ಕೇಂದ್ರ ಮತ್ತು ಪ್ರಬಲ ರಾಜ್ಯ. ಇವರೆಡರ ಪೂರಕ ಕೆಲಸ ದಿಂದಾಗಿ ಬಲಿಷ್ಠ ಒಕ್ಕೂಟ ರಚನೆ ಆಗ್ಬೇಕು ಅನ್ನೋದು. ಆದರೆ ಇಲ್ಲಿ ಹಾಗಾಗಲಿಲ್ಲ. ಕೇಂದ್ರ ಬಲಿಷ್ಠ -ರಾಜ್ಯ ದುರ್ಬಲ ಆಯ್ತು. ಇದರಿಂದ ದುರ್ಬಲ ಒಕ್ಕೂಟ ವ್ಯವಸ್ಥೆ ನಿರ್ಮಾಣ ಆಯ್ತು. ಹೀಗೆ ದುರ್ಬಲ ಆಗೋದಕ್ಕೆ ಬ್ರಿಟೀಷ್ ಆಡಳಿತಗಾರರು ಕಾರಣ. ಅವರಿಗೆ ನಿಜವಾದ ಪ್ರಜಾಪ್ರಭುತ್ವವನ್ನು ಕೊಡುವ ಮನಸ್ಸಿರಲಿಲ್ಲ. ಪ್ರಜಾಪ್ರಭುತ್ವದ ಅಣಕನ್ನು ಮಾತ್ರ ಕೊಡಬೇಕಾಗಿತ್ತು. ಒಕ್ಕೂಟದ ವ್ಯವಸ್ಥೆಯ ಪ್ರಮುಖ ಲಕ್ಷಣವಾದ ಅಧಿಕಾರ-ಆರ್ಥಿಕ ವಿಕೇಂದ್ರಿಕರಣವನ್ನು ಜಾರಿಗೆ ತರುವುದು ಬೇಕಿರಲಿಲ್ಲ. ಅವರಿಗೆ ಘೋಷಣೆಯಷ್ಟೇ ಮುಖ್ಯ ಆಗಿತ್ತು.

ಒಕ್ಕೂಟ ವ್ಯವಸ್ಥೆಯಲ್ಲೂ ಹೀಗೆ ಕೇಂದ್ರವೊಂದೇ ಬಲಿಷ್ಠವಾದಾಗ ಅದು ತನ್ನ ಪ್ರಜಾಸತ್ತಾತ್ಮಕತೆಯನ್ನು ಕಳೆದುಕೊಳ್ಳುತ್ತದೆ. ಅಧಿಕಾರದ ಕೇಂದ್ರೀಕರಣ ಪ್ರಭುತ್ವದ ವ್ಯಸನವಾಗಿ ಬಿಡುತ್ತದೆ; ಸರ್ವಾಧಿಕಾರತ್ವದ ಪ್ರತಿಷ್ಠಾಪನೆಯಾಗ್ತದೆ. "ನಿಜವಾದ ರಾಷ್ಟ್ರೀಯ ಸಮಗ್ರತೆಯ ಸಂವೇದನೆ, ಪ್ರಾದೇಶಿಕ ಭಾವನೆಗಳ ಬೇರನ್ನು ಶೋಧಿಸುತ್ತಲೇ ಒಟ್ಟು ಸಮಾನತೆಯ ಸಮಾಜಕ್ಕಾಗಿ ದುಡಿಯಬೇಕು. ರಾಷ್ಟ್ರದ ಅಸಮಾನತೆಯನ್ನು ನಾಶಪಡಿಸುವ ತೀವ್ರ ಪ್ರಯತ್ನದ ಮೂಲಕ ಪ್ರಾದೇಶಿಕ ಅಸಮತೋಲನವನ್ನು ತೊಡೆಯಬೇಕು" (1990; ಬರಗೂರು ರಾಮಚಂದ್ರಪ್ಪ-ರಾಜಕೀಯ ಚಿಂತನೆ; ಪು.44) ಸ್ವಾತಂತ್ರ್ಯ ಬರುವಾಗಲೇ ಇಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಅಸಮಾನತೆ ತಾಂಡವ ಆಡುತ್ತಿರುವುದರಿಂದ ಮತ್ತು ಬ್ರಿಟೀಷ ಅರಸರು ಪ್ರಾದೇಶಿಕ ಅನನ್ಯತೆಯನ್ನೇ ನಾಶ ಮಾಡಿರುವುದರಿಂದ ಸ್ವಾತಂತ್ರ್ಯಾನಂತರದ ಪ್ರಭುತ್ವಕ್ಕೆ ಇದನ್ನು ಸರಿಪಡಿಸುವ ದೊಡ್ಡ ಜವಾಬ್ದಾರಿ ಇತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ 'ಕಾಂಗ್ರೆಸ್' ತಾನೇ ಎನ್ನುವ ಜಾಹೀರಿನೊಂದಿಗೆ ರಾಷ್ಟ್ರೀಯ ಪಕ್ಷವಾಗಿ ಹೊರ ಚಿಮ್ಮಿ ಭಾರತದ ಒಕ್ಕೂಟ ವ್ಯವಸ್ಥೆಯ ಅಧಿಕಾರ ವಹಿಸಿಕೊಂಡಿತು, ಮಾತ್ರವಲ್ಲ ಒಕ್ಕೂಟ ವ್ಯವಸ್ಥೆಯ ಅಂದಿನ ಆಶಯವನ್ನೇ ಕಡೆಗಣಿಸಿತು. ಬಲಪಂಥೀಯ ಪಕ್ಷಗಳ ಗುಣವೇ ಇದು.

ಯಾವಾಗಲೂ ಬಂಡವಾಳಶಾಹಿ ಅಭಿವೃದ್ಧಿ ಹಾಗೆಯೇ. ಪ್ರಾದೇಶಿಕ ಅಸಮಾನತೆಯನ್ನು, ಅಸಮಾನ ಬೆಳವಣಿಗೆಯನ್ನು ಸೃಷ್ಟಿಸುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಭುತ್ವವು ಅಂಗೀಕರಿಸಿದ ಆರ್ಥಿಕ ನೀತಿ, ರೂಪಿಸಿದ ಯೋಜನೆಗಳು, ಮತ್ತು ಅದರ ಜಾರಿ ಮೊದಲೇ ಇದ್ದ ಪ್ರಾದೇಶಿಕ ಅಸಮತೋಲನ, ಅಸಮಾನ ಹಂಚಿಕೆಯನ್ನು ಸರಿಪಡಿಸುವ ಬದಲು ಇನ್ನಷ್ಟು ಬೆಳೆಸಿತು. ಬಹುಸಂಖ್ಯಾತ ಜನವರ್ಗವನ್ನು ತಲುಪುವ ಮೂಲಕ ಅವರ ಅಗತ್ಯವನ್ನು ಪ್ರಾಮಾಣಿಕವಾಗಿ ಪೂರೈಸುವ ಬದಲು ನಿರ್ದಿಷ್ಟ ವರ್ಗ ಕೇಂದ್ರಿತವಾದ-ಬಂಡವಾಳಗಾರ, ಪಾಳೇಗಾರಿಕೆ ಪರವಾದ- ಬಂಡವಾಳಶಾಹಿ ಅಭಿವೃದ್ಧಿ ಪಥ ಸಾಮಾಜಿಕ ಆರ್ಥಿಕ ಬದಲಾವಣೆಯನ್ನು ತೀವ್ರಗೊಳಿಸುವಲ್ಲಿ ವಿಫಲವಾಯಿತು. ಯಥಾಸ್ಥಿತಿ ಮುಂದುವರಿಯಿತು. ಸುಧಾರಣೆಯ ಕನಸು ಕಂಡವರು ಭ್ರಮನಿರಸನಗೊಂಡರು.

ಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ಮತ್ತು ಅಧಿಕಾರಶಾಹಿ ಧೋರಣೆಯಿಂದ ಈ ದೇಶದ ಬಂಡವಾಳಗಾರರ ಬಾಯಾಗಿ ಬಡವರಿಗೆ ಬಣ್ಣದ ಬಲೂನಾಗಿ, ಸಾಮಾನ್ಯ ಜನತೆಯ ಸಂವೇದನೆಯನ್ನೇ ಹಾಳುಗೆಡವಿ ಶರಣ ಸ್ಥಿತಿಗೆ ತಂದ ಕೇಂದ್ರದ ರಾಜಕೀಯ ಪ್ರಾದೇಶಿಕ ಅಸಮತೋಲನಕ್ಕೂ ಕಾರಣವಾಗಿದೆ.

ಇಂತಹ ಒಂದು ಸನ್ನಿವೇಶದಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರ್ಕಾರಗಳ ನಡುವಿನ ವೈರುಧ್ಯಗಳು ಸಹಜವಾಗಿಯೇ ಬೆಳೆದಿದೆ. ಈ ವೈರುಧ್ಯಗಳ ಹಿಂದೆ ಅನೇಕ ಬಾರಿ ಒಂದೆಡೆ ದೊಡ್ಡ ಬಂಡವಾಳಶಾಹಿಗಳು ಮತ್ತು ಇನ್ನೊಂದೆಡೆ ರಾಜ್ಯ ಅಥವಾ ಆ ರಾಜ್ಯಗಳ ಬಂಡವಾಳಶಾಹಿಗಳು ಸೇರಿದಂತೆ ಬಹುಪಾಲು ಜನತೆಯ ನಡುವಿನ ಆಳವಾದ ವೈರುಧ್ಯವೂ ಇರುತ್ತದೆ.

ಈ ವೈರುಧ್ಯವು ಬಂಡವಾಳವಾದದಡಿಯಲ್ಲಿ ತೀವ್ರಗೊಳ್ಳುತ್ತಿರುವ ಅಸಮಾನ ಆರ್ಥಿಕ ಬೆಳವಣಿಗೆಯಿಂದಾಗಿ ಸತತವಾಗಿ ಉಲ್ಬಣಗೊಳ್ಳುತ್ತಿದೆ. ಪ್ರಾದೇಶಿಕ ರಾಜಕೀಯ

ಕೇಂದ್ರ ಸರ್ಕಾರದಿಂದ ಚುನಾಯಿತ ರಾಜ್ಯ ಸರಕಾರಗಳನ್ನು ವಜಾಮಾಡಲು ಮತ್ತು ಚುನಾಯಿತ ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸಲು ಮತ್ತೆ ಮತ್ತೆ ಸಂವಿಧಾನದ 356ನೇ ಕಲಮಿನಲ್ಲೇ ಅಡಕವಾಗಿರುವ ಪ್ರಜಾ ಪ್ರಭುತ್ವ ವಿರೋಧಿ ಅವಕಾಶಗಳ ಬಳಕೆಯು ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವಲ್ಲಿ ಮತ್ತು ರಾಜ್ಯಗಳ ಸಂಯುಕ್ತತೆಯ ಮೇಲೆ ದಾಳಿ ಮಾಡುವಲ್ಲಿ ಒಂದು ಪ್ರಮುಖ ಸಾಧನವಾಗಿದೆ. (ವಿವಿಧ ಕಾರ್ಯಕ್ರಮ) ಅಂದರೆ ಯಾವುದೇ ಪ್ರಾದೇಶಿಕ ಪಕ್ಷದ ಹುಟ್ಟು ಒಕ್ಕೂಟ ವ್ಯವಸ್ಥೆಯ ಋಣಾತ್ಮಕ ಮೌಲ್ಯದ ವಿರುದ್ಧದ ಪ್ರತಿಭಟನೆಯೇ ಆಗಿದೆ ಎನ್ನಬಹುದು.

ಪಕ್ಷಗಳ ಉದಯವು ಇದರ ಒಂದು ರಾಜಕೀಯ ಅಭಿವ್ಯಕ್ತಿಯಾಗಿದೆ. (ಪಾರ್ಟಿ ಕಾರ್ಯಕ್ರಮ)

ಹಲವು ದಶಕಗಳ ಕಾಲ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರದ ದಮನಕಾರಿ ಕೇಂದ್ರೀಕೃತ ನೀತಿಯ ವಿರುದ್ಧದ ದನಿ, ವಿಕೇಂದ್ರೀಕೃತ ವ್ಯವಸ್ಥೆಯನ್ನು ಇಷ್ಟಪಡುವವರ ದನಿ ಪಡೆದ ರಾಜಕೀಯ ಪ್ರಜ್ಞೆ ಮತ್ತು ಅದು ರೂಪಿಸಿದ ರಾಜಕೀಯ ಪ್ರತ್ಯುತ್ತರವೇ ಪ್ರಾದೇಶಿಕ ಪಕ್ಷಗಳ ಉಗಮಕ್ಕೆ ಕಾರಣ ಆಯಿತು.

ಕೇಂದ್ರ ಸರ್ಕಾರದಿಂದ ಚುನಾಯಿತ ರಾಜ್ಯ ಸರಕಾರಗಳನ್ನು ವಜಾಮಾಡಲು ಮತ್ತು ಚುನಾಯಿತ ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸಲು ಮತ್ತೆ ಮತ್ತೆ ಸಂವಿಧಾನದ 356ನೇ ಕಲಮಿನಲ್ಲೇ ಅಡಕವಾಗಿರುವ ಪ್ರಜಾಪ್ರಭುತ್ವ ವಿರೋಧಿ ಅವಕಾಶಗಳ ಬಳಕೆಯು ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವಲ್ಲಿ ಮತ್ತು ರಾಜ್ಯಗಳ ಸಂಯುಕ್ತತೆಯ ಮೇಲೆ ದಾಳಿ ಮಾಡುವಲ್ಲಿ ಒಂದು ಪ್ರಮುಖ ಸಾಧನವಾಗಿದೆ. (ವಿವಿಧ ಕಾರ್ಯಕ್ರಮ) ಅಂದರೆ ಯಾವುದೇ ಪ್ರಾದೇಶಿಕ ಪಕ್ಷದ ಹುಟ್ಟು ಒಕ್ಕೂಟ ವ್ಯವಸ್ಥೆಯ ಋಣಾತ್ಮಕ ಮೌಲ್ಯದ ವಿರುದ್ಧದ ಪ್ರತಿಭಟನೆಯೇ ಆಗಿದೆ ಎನ್ನಬಹುದು. ಶೂದ್ರ-ದಲಿತ ಕೇಂದ್ರಿತ ಪ್ರತಿಭಟನೆ, ಉಪಸಂಸ್ಕೃತಿ ಕೇಂದ್ರಿತ ಪ್ರತಿಭಟನೆ, ಭಾಷಿಕ ಪ್ರತಿಭಟನೆ, ಪ್ರಾದೇಶಿಕ ವೈವಿಧ್ಯತೆ ಕೇಂದ್ರಿತ ಪ್ರತಿಭಟನೆಗಳೆಲ್ಲದರ ಮೊತ್ತ ರಾಜಕೀಯ ಸ್ವರೂಪ ಪಡೆದುಕೊಂಡಿದೆ.

ಆದ್ರೆ ಪ್ರಶ್ನೆ ಇರೋದು ಹೀಗೆ ಪ್ರತಿಭಟನೆಯ ಬೀಜವನ್ನು ಒಡಲಲ್ಲಿಟ್ಟುಕೊಂಡು ಬಂದ ಪ್ರಾದೇಶಿಕ ಪಕ್ಷ ಭಾರತದ ರಾಜಕಾರಣದಲ್ಲಿ ಆಡಿದ ಆಟ ಯಾವುದು ಅನ್ನೋದು. ಈ ಪ್ರತಿಭಟನೆಯ ಬೀಜ ಮೊಳೆತು ಮರವಾಯ್ತಾ? ಇಲ್ವಾ? ಅನ್ನೋದು.

ಅಧಿಕಾರ ಮತ್ತು ಆರ್ಥಿಕ ಕೇಂದ್ರೀಕರಣದ ಭರಾಟೆಯಲ್ಲಿ ಹತ್ತಿಕ್ಕಲ್ಪಟ್ಟ ಪ್ರಾದೇಶಿಕತೆ ವಿವಿಧ ರೂಪದಲ್ಲಿ ಹೊರಹೊಮ್ಮಿದೆ. ಈ ಪ್ರತಿಭಟನೆ ಉಗ್ರರೂಪ ತಾಳಿ ಪ್ರಜಾಸತ್ತಾತ್ಮಕ ಸ್ವರೂಪ ಕಳೆದುಕೊಂಡಾಗ ಅದು ಪ್ರತ್ಯೇಕವಾದಿ ಹೋರಾಟವಾಗಿ ರೂಪಗೊಂಡಿವೆ. ಅಕಾಲಿದಳದ ಪ್ರತ್ಯೇಕ ಖಲಿಸ್ಥಾನ ಹೋರಾಟ, ಗೂರ್ಖಾಲ್ಯಾಂಡ ಚಳವಳಿ, ಉಲ್ಫಾಚಳವಳಿ ಇತ್ಯಾದಿ. ಮರಾಠಿಕೇಂದ್ರಿತವಾಗಿ ನಡೆದ ಶಿವ ಪ್ರತಿಭಟನೆ ಒಂದು ಅಲೆಗೆ ಹೋಗಿ ಭಾಷಾಂಧತೆ ಮತ್ತು ಹಿಂದುತ್ವವಾದಿ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಬೆಳೆದ ಶಿವಸೇನೆ, ಹಿಂಸೆಯ ರೂಪ ತಾಳಿದ ನಕ್ಸಲ್‌ವಾದಿ ಹೋರಾಟ, ಪ್ರತ್ಯೇಕ ರಾಷ್ಟ್ರಕ್ಕಾಗಿ ಒತ್ತಾಯಿಸುವ ಕಾಶ್ಮೀರ ಪ್ರತ್ಯೇಕವಾದಿ ಹೋರಾಟ ಇವೆಲ್ಲವೂ ಅನಪೇಕ್ಷಿತವಾದ ದಿಕ್ಕನ್ನು ಹಿಡಿದಿದೆ. ಇದು ಒಕ್ಕೂಟವಾದಿ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಪ್ರವೃತ್ತಿಯಾಗಿದೆ. ಇವನ್ನು ಋಣಾತ್ಮಕ ಬೆಳವಣಿಗೆ ಎಂದೇ ಪರಿಗಣಿಸಿ ತಿರಸ್ಕರಿಸಬೇಕಾಗಿದೆ.

ಆದ್ರೆ ಇದರ ಹೊರತಾಗಿ ಪ್ರಾದೇಶಿಕ ಪಕ್ಷಗಳು ಭಾರತದಲ್ಲಿ ಒಂದು ಧನಾತ್ಮಕ ರೋಲ್‌ನ್ನು ಪ್ಲೇಮಾಡಿವೆ. ತಮ್ಮ ಆದೇಶವನ್ನು ಮಾತ್ರ ಪಾಲಿಸುವ ನಿರ್ವೀರ್ಯ ಸ್ಥಿತಿಗೆ ರಾಜ್ಯಸರಕಾರವನ್ನು ಇಳಿಸಿದ್ದ ಕಾಂಗ್ರೆಸ್ ಸರ್ಕಾರದ ಏಕಸ್ವಾಮ್ಯವನ್ನು ಮುರಿಯುವುದರಲ್ಲಿ ಪ್ರಾದೇಶಿಕ ಪಕ್ಷಗಳು ಮಹತ್ವದ ಕೆಲಸ ಮಾಡಿವೆ. ಸ್ವತಃ ಪ್ರಾದೇಶಿಕ ಪಕ್ಷಗಳ ಉಗಮ ಮತ್ತು ನೀಡಿದ ಸ್ಪರ್ಧೆ ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ರಾಜಕೀಯ ಪಾಠವೇ ಆಗಿದೆ.

ಕಾಂಗ್ರೆಸ್ ಬಗ್ಗೆ ಹೇಳುವಾಗ BJP ಖುಷಿಪಡಬೇಕಾಗಿಲ್ಲ. ಇದು ತಾಂತ್ರಿಕವಾಗಿ ರಾಷ್ಟ್ರೀಯ ಪಕ್ಷವಾಗಿದೆ. (ಎಂದೂ ಸ್ವಂತಬಲದಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸಿಲ್ಲ) ಅದರ ಮನೋಭಾವದಲ್ಲಿ, ಆಡಳಿತದ ಪ್ರವೃತ್ತಿಯಲ್ಲಿ ರಾಷ್ಟ್ರೀಯ ಪಕ್ಷದಂತೆ ವರ್ತಿಸುತ್ತಿದೆ ಕೂಡ. ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗಲೂ ದೇಶದ ಭಿನ್ನತೆಯನ್ನು ಎಂದೂ ಅದು ಸಹಿಸಿಲ್ಲ; ಗೌರವಿಸಿಲ್ಲ. ಅಮೇರಿಕನ್ ಸಾಮ್ರಾಜ್ಯ ಶಾಹಿಯೊಂದಿಗೆ ಸಖ್ಯ ಬೆಳೆಸಿ ಭಾರತದ ಬಹು ಸಂಸ್ಕೃತಿಯ ಬೇರುಗಳನ್ನೇ ನಾಶಮಾಡಲು ಮುಂದಾಗಿತ್ತು. ಪ್ರಾದೇಶಿಕ ಪಕ್ಷಗಳು ಕೊಟ್ಟ ಏಟಿನಿಂದ ಸ್ವಲ್ಪವಾದರೂ ವಿಕೇಂದ್ರಿಕೃತ ವ್ಯವಸ್ಥೆಯ ಬಗ್ಗೆ ಆಲೋಚಿಸಿದ ಕಾಂಗ್ರೆಸ್ಸಿನ ನೀತಿಯನ್ನು ಕೈಬಿಟ್ಟು ಇನ್ನಷ್ಟು ಕೇಂದ್ರೀಕೃತ ವ್ಯವಸ್ಥೆಗೆ ಮುಂದಾಗಿದ್ದು ಈಗ ಇತಿಹಾಸ.

ಹಾಗೆ ನೋಡಿದರೆ ಹಲವು ಪ್ರಾದೇಶಿಕ ಪಕ್ಷಗಳ ರಂಗವಾದ ಜನತಾದಳ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಕೆಲವು ಹೆಜ್ಜೆಯನ್ನಾದರೂ ಇಟ್ಟಿತ್ತು. ಆದರೆ ಅದು ಅಲ್ಪಾಯುಷಿಯಾಗಿತ್ತು. ಜನತಾದಳ ಸರ್ಕಾರದಲ್ಲಿ ಮೊದಲಬಾರಿಗೆ ಟಿ. ಡಿ. ಪಿ, ಡಿ. ಎಂ. ಕೆ, ಎ. ಜಿ. ಪಿಯಂತಹ ಪ್ರಾದೇಶಿಕ ಪಕ್ಷ ಸೇರಿಕೊಂಡಿತು. ಪರಿಣಾಮವಾಗಿ ಇದು 1990ರಲ್ಲಿ ಇಂಟರ್ ಸ್ಟೇಟ್ ಕೌನ್ಸಿಲ್ ಹುಟ್ಟುಹಾಕಿತು. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡುವ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತ ಪಡಿಸಿತು. ಪ್ರಾರಂಭದಿಂದಲೂ ಕೇಂದ್ರ-ರಾಜ್ಯಗಳ ಸಂಬಂಧಗಳ ಪುನರಂಘಟನೆಯ ಅಗತ್ಯತೆಯನ್ನು, ಮತ್ತು ಅಧಿಕಾರ-ಆರ್ಥಿಕ ವಿಕೇಂದ್ರೀಕರಣದ ಅಗತ್ಯತೆಯನ್ನು ಎಡಪಕ್ಷಗಳು ಪ್ರತಿಪಾದಿಸುತ್ತಿದ್ದವು. ಒಕ್ಕೂಟ ವ್ಯವಸ್ಥೆಯನ್ನು ಜನಪರವಾಗಿ ಅರ್ಥೈಸುವಲ್ಲಿ ಸಿ. ಪಿ ಐ(ಎಂ) ಪಕ್ಷದ ಜ್ಯೋತಿ ಬಸು ಅವರ ಕೊಡುಗೆ ಮಹತ್ವದ್ದು. 1977ರಲ್ಲಿ ಎಡರಂಗದ ಪರವಾಗಿ ಒಂದು ಮನವಿಯನ್ನು ಕೊಡುತ್ತಾರೆ. 1983ರಲ್ಲಿ ಶ್ರೀನಗರದಲ್ಲಿ ಕಾಂಗ್ರೇಸ್ಸೇತರ ಮುಖ್ಯಮಂತ್ರಿಗಳ ಸಭೆ ಸಂಘಟಿಸಿ ಅಂತ

ರ್ಯಾಜ್ಯ ಮಂಡಳಿಯನ್ನು ರಚಿಸಲು ಒತ್ತಾಯಿಸುತ್ತಾರೆ. ಹಾಗೆಯೇ ನೆಹರು ಸರ್ಕಾರ ಇರುವಾಗ ಲೋಹಿಯಾ ಅವರು ನಡೆಸಿದ ಪ್ರಯತ್ನವನ್ನು ಕಡೆಗಣಿಸುವಂತಿಲ್ಲ.

ಉದಾರೀಕೃತ ಹೊಸ ಆರ್ಥಿಕ ನೀತಿಯ ಜಾರಿಯ ನಂತರ ಕೇಂದ್ರ ರಾಜ್ಯದ ಸಂಬಂಧಗಳು ಒಂದು ಹೊಸ ಆಯಾಮವನ್ನು ಪಡೆದುಕೊಂಡಿದೆ. ಕೇಂದ್ರದ ಮಧ್ಯಪ್ರವೇಶ ಮತ್ತು ರಾಜ್ಯದ ಹಕ್ಕುಗಳನ್ನು ಅತಿಕ್ರಮಣ ಮಾಡಿಕೊಳ್ಳುವ ಸ್ವರೂಪ ಈ ಹಿಂದಿನ ಅವಧಿಗಿಂತ ಬದಲಾಗಿದೆ. ಒಂದೆಡೆ ಆರ್ಥಿಕ ಮತ್ತು ಬಂಡವಾಳ ಹೂಡಿಕೆಯ ಚಟುವಟಿಕೆಗಳಿಂದ ಕೇಂದ್ರ ಹಿಂದೆ ಸರಿಯುತ್ತಿದ್ದರೆ ಇನ್ನೊಂದೆಡೆ ರಾಜ್ಯಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸಲು ಷರತ್ತುಗಳನ್ನು ಹೇರುವ ಮೂಲಕ ಕೇಂದ್ರವು ನವ ಉದಾರವಾದಿ ಸುಧಾರಣೆಗಳನ್ನು ಮುಂದೊಯ್ಯುಲು ಯತ್ನಿಸುತ್ತಿದೆ. ಯಾಕೆಂದರೆ ಬಹುರಾಷ್ಟ್ರೀಯ ಕಂಪನಿಗಳ ಒತ್ತಾಯವೂ ಇದಕ್ಕೆ ಕಾರಣವಾಗಿದೆ. ಇದಕ್ಕೆ ಪ್ರತಿ ರಾಜ್ಯ ಸರ್ಕಾರಗಳೊಂದಿಗೆ ಮಾತು ಕತೆ ಮಾಡುವುದಕ್ಕಿಂತ ಕೇಂದ್ರದೊಂದಿಗೆ ಮಾತನಾಡುವುದು ಹೆಚ್ಚು ಸರಳ. ಪ್ರತಿಯೊಂದು ಕೇಂದ್ರದ ಅನುದಾನ ಮತ್ತು ಸಂಪನ್ಮೂಲ ಹಂಚಿಕೆಯು ಷರತ್ತುಗಳನ್ನು ಹೊಂದಿದೆ. ರಾಜ್ಯಗಳು ಅಗತ್ಯ ಸಂಪನ್ಮೂಲಗಳನ್ನು ಪಡೆಯಬೇಕಾದರೆ ಎಲ್ಲಾ ಷರತ್ತನ್ನು ಒಪ್ಪಿ ಕೇಂದ್ರದ ಅಡಿ ಯಾಳಾಗಬೇಕಾಗಿದೆ.

1948ರಲ್ಲಿ ವಿದ್ಯುತ್ ಉತ್ಪಾದನೆ ಕುರಿತು ಬಿ. ಆರ್. ಅಂಬೇಡ್ಕರ್ ಒಂದು ನಿಯಮ ರೂಪಿಸಿದ್ದರು. ರಾಜ್ಯವು ತನಗೆ ಅಗತ್ಯವಾದ ಪ್ರಮಾಣದ ವಿದ್ಯುತ್ ಯೋಜನೆ, ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಅದರ ಸ್ವರೂಪ, ವಿತರಣೆ ಇತ್ಯಾದಿಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಸಿದ್ಧಪಡಿಸುವ ಅಧಿಕಾರ ರಾಜ್ಯಗಳಿಗಿತ್ತು. ಅದಕ್ಕೆ ಅಗತ್ಯವಾದ ಆರ್ಥಿಕ ಅನುದಾನವನ್ನು ಕೊಡುವ ಜವಾಬ್ದಾರಿ ಮಾತ್ರ ಕೇಂದ್ರದ್ದಾಗಿತ್ತು. ಆದರೆ ಕೇಂದ್ರ ಸರ್ಕಾರ 2003ರಲ್ಲಿ ವಿದ್ಯುತ್ ಕಾನೂನಿಗೆ ಒಂದು ತಿದ್ದುಪಡಿ ತಂದು (ಐ. ಎಂ. ಎಫ್& ವರ್ಲ್ಡ್ ಬ್ಯಾಂಕ್ ನಿರ್ದೇಶನದ ಮೇರೆಗೆ) ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಇದು ಒಂದು ಉದಾಹರಣೆ ಮಾತ್ರ.

ಪ್ರಾದೇಶಿಕ ಪಕ್ಷದ ಸ್ವರೂಪ

ಈ ಹಿಂದೆ ನಾನು ಪ್ರಸ್ತಾಪ ಮಾಡಿದಂತೆ ಕೇಂದ್ರದ ಸರ್ವಾಧಿಕಾರಿ ಧೋರಣೆಯನ್ನು ಮುರಿಯುವಲ್ಲಿ ಪ್ರಾದೇಶಿಕ ಪಕ್ಷ ಒಂದು ಹಂತದ ಯಶಸ್ಸನ್ನೂ ಪಡೆದಿತ್ತು. ಹಾಗೆ ನೋಡಿದರೆ ರಾಷ್ಟ್ರೀಯ ಪಕ್ಷಗಳಿಗೆ ವಿರೋಧ ಪಕ್ಷವಾಗಿ ಸಂಸದೀಯ ಪ್ರಜಾಸತ್ತೆಯನ್ನು ಸ್ವಲ್ಪಮಟ್ಟಿಗೆ ಸಹ್ಯಗೊಳಿಸಿದ್ದು ಇದರ ಮಹತ್ವವನ್ನು ತಿಳಿಸುತ್ತದೆ. ಇವತ್ತೂ ಕೂಡ ಕೇಂದ್ರದಲ್ಲಿ ಎನ್.ಡಿ.ಎ., ಯು.ಪಿ.ಎ. ಸರ್ಕಾರಳಿದ್ದಾಗ ಅದರ ಅಂಗಪಕ್ಷವಾಗಿದ್ದ ಪ್ರಾದೇಶಿಕ ಪಕ್ಷಗಳು ಮತ್ತು ವಿರೋಧ ಸ್ಥಾನದಲ್ಲಿರುವ ಪ್ರಾದೇಶಿಕ ಪಕ್ಷಗಳು ಸಾರ್ವಜನಿಕರಂಗದ ಉದ್ದಿಮೆಯ ಶೇರು ವಿಕ್ರಯದ ಸಂದರ್ಭದಲ್ಲಿ, ಅಮೇರಿಕಾದ ಜೊತೆಗಿನ ಒಪ್ಪಂದ, ಸಿ.ಟಿ.ಬಿ.ಟಿ. ಒಪ್ಪಂದದ ಪಾಕಿಸ್ತಾನದ ಜೊತೆಗಿನ ದ್ವಿಪಕ್ಷೀಯ ಮಾತುಕತೆ, ಹೊಸ ಶಿಕ್ಷಣ ಮಸೂದೆಯ ಜಾರಿ, ಆರ್ಥಿಕ ಉದಾರೀಕರಣ, ಮುಕ್ತ ಆರ್ಥಿಕತೆ ಜಾರಿ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಳ, ಸಣ್ಣ ಉಳಿತಾಯದ ಬಡ್ಡಿ ಕಡಿತ, ಬೆಲೆ ಏರಿಕೆ, ನದಿ ನೀರು ಹಂಚಿಕೆ..ಹೀಗೆ ಹತ್ತು ಹಲವು ಜನವಿರೋಧಿ ತೀರ್ಮಾನಗಳ ಜಾರಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಉತ್ಸುಕತೆಗೆ ಬ್ರೇಕ್ ಹಾಕುವಲ್ಲಿ ಪ್ರಾದೇಶಿಕ ಪಕ್ಷದ ಸ್ಥಾನ ಗೌಣವೇನಲ್ಲ.

ಆಂಧ್ರದ ತೆಲುಗುದೇಶಂ, ತಮಿಳುನಾಡಿನ ಡಿ.ಎಂ.ಕೆ., ಎ.ಐ.ಡಿ.ಎಂ.ಕೆ ಉತ್ತರಪ್ರದೇಶದ ಬಿ.ಎಸ್.ಪಿ. ಕರ್ನಾಟಕದ ಜಾತ್ಯಾತೀತ ಜನತಾದಳ, ಸರ್ವೋದಯ ಪಕ್ಷ, ಕನ್ನಡ ವಾಟಾಳ್ ಪಕ್ಷ, ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ, ಬಿಜು ಜನತಾದಳ, ಆರ್.ಜೆ.ಡಿ. ಹೀಗೆ ಸ್ಥಳೀಯವಾಗಿ ಪ್ರಬಲವಾದ/ಅಷ್ಟೇನೂ ಪ್ರಬಲ ಅಲ್ಲದ ಪ್ರಾದೇಶಿಕ ಸ್ವರೂ ಪದ ಪಕ್ಷಗಳು ಆಯಾ ರಾಜ್ಯದ ಸಾಂಸ್ಕೃತಿಕ, ಸಾಮಾಜಿಕ ನೆಲೆಗಟ್ಟಿನ ಮೇಲೆಯೇ ತನ್ನ ಅಸ್ತಿತ್ವವನ್ನು ನೆಟ್ಟಿದೆ. ಮತ್ತು ಕೇಂದ್ರದೊಂದಿಗೆ ಸಾಕಷ್ಟು ಗುದ್ದಾಟ ನಡೆಸಿ ಸ್ಥಳೀಯ ಅಭಿವೃದ್ಧಿಗೆ ಶ್ರಮಿಸಿದೆ. ಕಳೆದು ಹೋದ ಅನನ್ಯತೆಯನ್ನು, ಸ್ವಾಭಿಮಾನವನ್ನು ಮರು ಪ್ರತಿಷ್ಠಾಪಿಸಲು ಪ್ರಯತ್ನಿಸಿದೆ. ಹಾಗಾಗಿ ಜನ ಬೆಂಬಲವನ್ನು ಅದು ಹೊಂದಿತ್ತು.

ಹಲವು ಪ್ರಾದೇಶಿಕ ಪಕ್ಷಗಳು ತಮ್ಮ ಮೂಲ ಸ್ವರೂಪದಲ್ಲಿಯೇ ಇಂದು ಉಳಿದಿಲ್ಲ. ಕೆಲವು ಪ್ರಾದೇಶಿಕ ಪಕ್ಷವಾಗಿಯೇ ಹುಟ್ಟಿದವು. ಇನ್ನು ಕೆಲವು ಪ್ರಾದೇಶಿಕ ಪಕ್ಷವಾಗಿ ಹುಟ್ಟಿ ರಾಷ್ಟ್ರೀಯ ವ್ಯಾಪ್ತಿಯಲ್ಲಿ ವಿಸ್ತರಣೆ ಬಯಸುತ್ತಿವೆ. ಇನ್ನು ಕೆಲವು ರಾಷ್ಟ್ರೀಯ ಪಕ್ಷವಾಗಿ ಹುಟ್ಟಿ ಪ್ರಾದೇಶಿಕ ಸ್ವರೂಪ ಪಡೆದುಕೊಂಡಿದೆ.

ಆದರೆ ಪ್ರಾದೇಶಿಕ ಪಕ್ಷಗಳು ತನ್ನ ಮೂಲ ಸ್ವರೂಪದಿಂದ ಹಿಂದೆ ಸರಿಯುತ್ತಿದೆಯೇ? ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. 'ಹೌದು' ಎನ್ನುವ ಉತ್ತರ ಅದು ಆಯಾ ಪಕ್ಷದ ದುರಂತ ಮಾತ್ರವಲ್ಲ, ಒಕ್ಕೂಟ ವ್ಯವಸ್ಥೆಯ ದುರಂತ ಎನ್ನದೇ ಗತಿಯಿಲ್ಲ.

ಅಸ್ತಿತ್ವದಲ್ಲಿರುವ ತಮ್ಮ ಪಾಲಿನ ಹಕ್ಕುಗಳನ್ನು ತಾವು ಪಡೆಯುತ್ತಾ, ಹಕ್ಕಿನ ವಿಸ್ತರಣೆಗಾಗಿ ಸಮಾನಾಸಕ್ತ ಪಕ್ಷಗಳೊಂದಿಗೆ ಹೋರಾಟ ನಡೆಸಬೇಕಾದ ಪ್ರಾದೇಶಿಕ ಪಕ್ಷ ಇಂದು ಕೇಂದ್ರ ಸರ್ಕಾರದ ಬಾಲಂಗೋಚಿ ಆಗುತ್ತಿದೆ. ಮತ್ತೆ ಸ್ವಾಭಿಮಾನವನ್ನು, ರಾಜ್ಯದ ಹಿತವನ್ನು, ಅಧಿಕಾರದ ಲಾಲಸೆಗಾಗಿ ಬಲಿಕೊಡುವ ಕ್ರಿಯೆ ನಡೆಯುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಗಮನ ಕೊಡುವ ಬದಲು ತನ್ನ ಪ್ರಾದೇಶಿಕ ಸೊಗಡನ್ನು ಅಧಿಕಾರದ ಹಂಬಲಕ್ಕಾಗಿ ಧಾರೆ ಎರೆಯುತ್ತಿವೆ. ಪಕ್ಷದ ಮುಖಂಡರು ಪ್ರಾದೇಶಿಕತೆಯ ಅರ್ಥವನ್ನೂ ಮರೆತು ಸ್ಥಳೀಯ ಉಪಭಾಷೆ, ಉಪ ಸಂಸ್ಕೃತಿಗಳಿಗೂ ಗೌರವ ಕೊಡದೇ ಪ್ರಾದೇಶಿಕ ಸರ್ವಾಧಿಕಾರಿಗಳಾಗುತ್ತಿದ್ದಾರೆ. ಸ್ವತಃ ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಇದರಿಂದ ಪಕ್ಷ ಜನರಿಂದ ಅದು ದೂರವಾಗುತ್ತಿದೆ ಕೂಡಾ. ಹೀಗೆ ತನ್ನ ನೆಲೆ ಕಳೆದುಕೊಳ್ಳುತ್ತಾ ಹೋದಾಗ ಅದಕ್ಕೇ ರಾಷ್ಟ್ರೀಯ ಪಕ್ಷದ ಬೆಂಬಲ ಅನಿವಾರ್ಯವಾಗು ತ್ತದೆ. ಅದೇ ಸಂದರ್ಭದಲ್ಲಿ ರಾಷ್ಟ್ರೀಯ ಪಕ್ಷಗಳು ಪ್ರಾದೇ ಶಿಕ ಪಕ್ಷಗಳ ದೌರ್ಬಲ್ಯವನ್ನು ತನ್ನ ವಿಸ್ತರಣೆಗಾಗಿ ಬಳಸಿಕೊಳ್ಳಲು ಇನ್ನಿಲ್ಲದಂತೆ ಪ್ರಯತ್ನಿಸುತ್ತದೆ.

ಅಸ್ತಿತ್ವದಲ್ಲಿರುವ ತಮ್ಮ ಪಾಲಿನ ಹಕ್ಕುಗಳನ್ನು ತಾವು ಪಡೆಯುತ್ತಾ, ಹಕ್ಕಿನ ವಿಸ್ತರಣೆಗಾಗಿ ಸಮಾನಾಸಕ್ತ ಪಕ್ಷಗಳೊಂದಿಗೆ ಹೋರಾಟ ನಡೆಸಬೇಕಾದ ಪ್ರಾದೇಶಿಕ ಪಕ್ಷ ಇಂದು ಕೇಂದ್ರ ಸರ್ಕಾರದ ಬಾಲಂಗೋಚಿ ಆಗುತ್ತಿದೆ. ಮತ್ತೆ ಸ್ವಾಭಿಮಾನವನ್ನು, ರಾಜ್ಯದ ಹಿತವನ್ನು, ಅಧಿ ಕಾರದ ಲಾಲಸೆಗಾಗಿ ಬಲಿಕೊಡುವ ಕ್ರಿಯೆ ನಡೆಯುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಗಮನ ಕೊಡುವ ಬದಲು ತನ್ನ ಪ್ರಾದೇಶಿಕ ಸೊಗಡನ್ನು ಅಧಿಕಾರದ ಹಂಬಲಕ್ಕಾಗಿ ಧಾರೆ ಎರೆಯುತ್ತಿವೆ.

ಇದು ರಾಷ್ಟ್ರೀಯ ಮುನ್ನೋಟ ಇಲ್ಲದ ಕೇವಲ ಸಮಕಾಲೀನ ತುರ್ತಿಗೆ ಸ್ಪಂದಿಸಿ ತನ್ನ ಅಸ್ತಿತ್ವ ಕಾಯ್ದುಕೊಳ್ಳುವ ಪ್ರಯತ್ನವಷ್ಟೇ ಆಗಿದೆ. ಇದರಿಂದಾಗಿ ಹಿಂದೆ ರಾಷ್ಟ್ರೀಯ ಪಕ್ಷ ಮತ್ತು ಪ್ರಾದೇಶಿಕ ಪಕ್ಷಗಳ ನಡುವೆ ಸ್ಪರ್ಧೆ ಪೈಪೋಟಿ ಇತ್ತು. ಆದರೆ ಈಗ ಹಲವು ಪ್ರಾದೇಶಿಕ ಪಕ್ಷಗಳ ನಡುವೆಯೇ ಸ್ಪರ್ಧೆ ನಡೆಯುವ ಸ್ಥಿತಿ ಬಂದಿದೆ.

ಪ್ರಾದೇಶಿಕ ಪಕ್ಷಗಳು ಎಷ್ಟು ನಿತ್ರಾಣ ಆಗಿ ಬಿಡುತ್ತವೆಂದರೆ ಕೇಂದ್ರದ ನೀತಿಗೆ ಶರಣಾಗಿ ಬಿಡುತ್ತವೆ. ಇದು ಅಮೇರಿಕಾದ ಜೊತೆಗಿನ ಪರಮಾಣು ಒಪ್ಪಂದ ಸಂದರ್ಭದ ಸಂಘರ್ಷದಲ್ಲಿ, ಲಿಬ್ರಾನ್ ವರದಿಯು ಬಹಿರಂಗದ ಸಂದರ್ಭದಲ್ಲಿ, ಉದ್ದಿಮೆಯ ಖಾಸಗೀಕರಣದ ಸಂದರ್ಭದಲ್ಲಿ ನಿಚ್ಚಳವಾಗಿ ಎದ್ದು ಕಾಣುತ್ತಿದೆ. ರಾಜ್ಯದ ಹಿತಕ್ಕಿಂತ ಡಿ.ಎಂ.ಕೆ.ಗೆ ಎ.ಐ.ಡಿ.ಎಂ.ಕೆ.ಯನ್ನು ವಿರೋಧಿಸುವುದು, ಶಿವಸೇನೆಗೆ ಎನ್.ಸಿ.ಪಿ.ಯನ್ನು ವಿರೋಧಿಸುವುದು ಟಿ.ಎಂ.ಸಿ.ಗೆ ಸಿ.ಪಿ.ಐ.(ಎಂ.) ನ್ನು ವಿರೋಧಿಸುವುದು, ತೆಲುಗುದೇಶಂಗೆ ತೆಲಂಗಾಣ ಪಕ್ಷವನ್ನು ವಿರೋಧಿಸುವುದು, ಜಾರ್ಖಂಡ ಮುಕ್ತಿ ಮೋರ್ಚಾಕ್ಕೆ ಸ್ಥಳೀಯ ಇನ್ಯಾವುದೋ ಪಕ್ಷವನ್ನು ವಿರೋಧಿಸುವುದು, ಎಸ್.ಪಿ. ಗೆ ಬಿ.ಎಸ್.ಪಿ.ಯನ್ನು ವಿರೋಧಿಸುವುದು. ಮುಖ್ಯವಾಗಿ ಬಿಡುತ್ತವೆ. ಹಾಗಾಗಿ ಕೇಂದ್ರಕ್ಕೆ ಕೊಡುವ ಬೆಂಬಲ ಸೈದ್ಧಾಂತಿಕ ಭಿನ್ನಾಭಿಪ್ರಾಯವನ್ನು ಕಡೆಗಣಿಸಿ ದ್ವೇಷದ, ಬಾಲಿಶ ಬೆಂಬಲವಾಗಿಯಷ್ಟೇ ನಿಲ್ಲುತ್ತದೆ.

ಇದಕ್ಕೆ ಆಯಾ ಪಕ್ಷವನ್ನಷ್ಟೇ ಹೊಣೆಗಾರರನ್ನಾಗಿಸಿದರೆ ಸಾಲದು. ಹಾಗೆ ಮಾಡಿದರೆ ಪ್ರಾದೇಶಿಕ ಪಕ್ಷಗಳ ರಚನೆಯ ಮತ್ತು ಕಾರ್ಯವೈಖರಿಯ ಹಿಂದಿರುವ ಆರ್ಥಿಕ ಕಾರಣವನ್ನೇ ಮರೆತಂತಾಗುತ್ತದೆ. ಸ್ಥಳೀಯ ಬೇರುಗಳ ಕುರಿತು ಇರುವ ಕಾಳಜಿ ಒಂದು ಕಾರಣವಾಗಿದ್ದರೆ ಪ್ರಾದೇಶಿಕ ಹಿರಿಯ ಬಂಡವಾಳಗಾರರ (ಭೂಜ್ವಾಸಿ) ಹಿತ ಕಾಪಾಡುವುದು ಇನ್ನೊಂದು ಪ್ರಮುಖ ಕಾರಣವಾಗಿದೆ.

ಬಹುತೇಕ ರಾಷ್ಟ್ರೀಯ ಪಕ್ಷಗಳು (ಎಡಪಕ್ಷಗಳನ್ನು ಹೊರತುಪಡಿಸಿ)ಏಕಸ್ವಾಮ್ಯ ಬಂಡವಾಳಗಾರರ ಬೆಂಬಲದೊಂದಿಗೆ (ಆರ್ಥಿಕ ಬೆಂಬಲ) ನಡೆಯುತ್ತಿವೆ. ಹಾಗಾಗಿ ಅವರ ಬಹುತೇಕ ನೀತಿಗಳು ಹಿರಿಯ ಬಂಡವಾಳಗಾರ ಭೂಮಾಲಿಕರಿಗಾಗಲೀ ಸಂಪೂರ್ಣವಾಗಿ ಒಪ್ಪಿತವಲ್ಲ. ಹಾಗಾಗಿ ಪ್ರಾದೇಶಿಕ ಬಂಡವಾಳಗಾರರಿಗೆ ತಮ್ಮ ಹಿತ ಕಾಯುವ ಒಂದು ರಾಜಕೀಯ ಪಕ್ಷದ ಅಗತ್ಯತೆ ಇದೆ.

ಭಾರತದ ಏಕಸ್ವಾಮ್ಯ ಬಂಡವಾಳಗಾರರ ಎದುರು ನಿಂತು ತಮ್ಮ ನೆಲೆಯನ್ನು ರಾಜ್ಯವಾರು ಕಾಪಾಡಿಕೊಳ್ಳುವ ಕಾರಣಕ್ಕಾಗಿಯೇ ಅವರು ಪ್ರಾದೇಶಿಕ ಪಕ್ಷಗಳ ಬೆಳವಣಿಗೆಗೆ ಬೇಕಾದ ಆರ್ಥಿಕ ನೆರವು ನೀಡುತ್ತಾರೆ. ಎಸ್.ಪಿ., ಡಿ.ಎಂ.ಕೆ., ಟಿ.ಡಿ.ಪಿ. ಜಾರ್ಖಂಡ್ ಮುಕ್ತಿ ಮೋರ್ಚಾದ ಹಿಂದೆ ಇಂತಹ ದೊಡ್ಡ ಬೆಂಬಲ ಇದೆ.

ಆದ್ದರಿಂದಲೇ ಈ ಪ್ರಾದೇಶಿಕ ಪಕ್ಷಗಳು ಜನತಾ ಪ್ರಜಾಪ್ರಭುತ್ವವನ್ನು ಜಾರಿಗೊಳಿಸುವ ಬದಲು ಬಂಡವಾಳಗಾರ ಹಿತ ಕಾಪಾಡುವಲ್ಲಿ ತಲ್ಲೀನರಾಗಿದ್ದಾರೆ. ಇವರ ಅಭಿವೃದ್ಧಿ ಪಥವೂ ರಾಷ್ಟ್ರೀಯ ಪಕ್ಷಗಳಿಗೆ ಒಂದು ಪರ್ಯಾಯ ರೂಪಿಸುವ ಬದಲು ಬಂಡವಾಳಶಾಹಿ ಅಭಿವೃದ್ಧಿ ಪಥವೇ ಆಗುತ್ತಿದೆ.

ಎಲ್ಲಾ ಪ್ರಾದೇಶಿಕ ಪಕ್ಷಗಳು ಮಧ್ಯಮ ಮಾರ್ಗೀಯ ಸುಧಾರಣ ಕ್ರಮಗಳನ್ನು ಅಳವಡಿಸಿಕೊಂಡಿದೆ. ರಾಷ್ಟ್ರೀಯ ಪಕ್ಷಗಳ ಪಾಳೆಗಾರಿ-ಬಂಡವಾಳಶಾಹಿಪರ ಆರ್ಥಿಕ, ಅಭಿವೃದ್ಧಿ ನೀತಿಯಿಂದ ಬೇಸತ್ತ ರೈತರು, ಕಾರ್ಮಿಕರು ಎಡ ಸಿದ್ಧಾಂತದಡಿಯಲ್ಲಿ ಸಂಘಟಿತರಾಗುತ್ತಿದ್ದರು. ಚಳವಳಿ ನಿರತರಾದರು. ಇಡೀ ವ್ಯವಸ್ಥೆಯನ್ನೇ ಪರಿವರ್ತಿಸುವ ಕಾರ್ಯಸೂಚಿ ಇವರದಾಗಿತ್ತು. ಆದರೆ ಇಲ್ಲಿಯ ಬಂಡವಾಳಗಾರರಿಗೆ ಇದು ಬೇಕಿರಲಿಲ್ಲ. ಆದಷ್ಟು ಬೇಗ ಜನರ ಗಮನವನ್ನು ಬೇರೆಡೆಗೆ ಸೆಳೆಯದಿದ್ದರೆ ತಮ್ಮ ಅಸ್ತಿತ್ವವೇ ನಾಶವಾಗುವ ಅಪಾಯದಿಂದ ಹೊರಬರಲು ಮಧ್ಯಮ ಮಾರ್ಗೀಯ ಪಕ್ಷವೊಂದನ್ನು ಬೆಳಸಲು ಅವರು ಮುಂದಾದರು. ಹೀಗಾಗಿ ಬೆಂಗಾಲದಲ್ಲಿ ಟಿ.ಎಂ.ಸಿ. ಹುಟ್ಟಿತು. ಆಂಧ್ರದಲ್ಲಿ ಟಿ.ಡಿ.ಪಿ ಹುಟ್ಟಿತು..

ಇದನ್ನು ಇನ್ನಷ್ಟು ಹೆಚ್ಚು ಸ್ಪಷ್ಟಗೊಳ್ಳಬೇಕಾದರೆ ಕರ್ನಾಟಕದ ರಾಜಕಾರಣವನ್ನು ನೋಡಬೇಕು. ಇಲ್ಲಿ ಈವರೆಗೆ ಯಾವುದೇ ಒಂದು ಪ್ರಾದೇಶಿಕ ಪಕ್ಷ ಬಲವಾಗಿ ಬೇರೂರಲೇ ಇಲ್ಲ. ಬಂಗಾರಪ್ಪನವರ ಕ್ರಾಂತಿರಂಗ, ಕರ್ನಾಟಕ ಕಾಂಗ್ರೆಸ್, ವಾಟಾಳ್ ಪಕ್ಷ, ಲಂಕೇಶರ ಪ್ರಗತಿ ರಂಗ, ಈಗ ಸರ್ವೋದಯ ಪಕ್ಷ.. ಹೀಗೆ ಅಲ್ಪ ಯಶಸ್ಸಿನೊಂದಿಗೆ ತಮ್ಮ ಯಾತ್ರೆ ಮುಗಿಸಿದೆ. ಜನತಾದಳ ಮಾತ್ರ ಹಲವು ಭಾಗವಾಗಿ ಕರ್ನಾಟಕದೊಳಗೂ ಪ್ರಾದೇಶಿಕವಾಗಿ ಅಸ್ತಿತ್ವದಲ್ಲಿ ಇದೆ. ಹಾಗೆ ನೋಡಿದರೆ ಮೊದಲಿನಿಂದಲೂ ಕರ್ನಾಟಕ ದಟ್ಟವಾದ ರಾಜಕೀಯ ಪ್ರಜ್ಞೆಯನ್ನು, ಹತ್ತು ಹಲವು ಸಾಮಾಜಿಕ ಚಳವಳಿಗಳನ್ನು ಹುಟ್ಟುಹಾಕಿದ ರಾಜ್ಯ. ಮೈಸೂರಿನಲ್ಲಿ ನಡೆದ ಹಿಂದುಳಿದ ವರ್ಗದ ಹೋರಾಟ, ಉದ್ಯೋಗಕ್ಕಾಗಿ ಮೀಸಲಾತಿ ಹೋರಾಟ, ದಲಿತ ಹೋರಾಟ ಇತ್ಯಾದಿಗಳನ್ನು ನೆನಪಿಸಬಹುದು. ಮೊದಲ ಬಾರಿಗೆ ಪ್ರಜಾಪ್ರತಿನಿಧಿ ಸಭೆಗೆ ಸ್ಪರ್ಧಿಸಿದ್ದು ಕೂಡ ಇಲ್ಲಿಂದಲೇ. ಇಷ್ಟೊಂದು ದಟ್ಟವಾದ ರಾಜಕೀಯ ಪ್ರಜ್ಞೆ ಇದ್ದರೂ ಯಾಕೆ ಒಂದು ಪ್ರಾದೇಶಿಕ ಪಕ್ಷ ಕರ್ನಾಟಕವನ್ನು ನಿಜವಾಗಿ ಪ್ರತಿನಿಧಿಸಲು ಸಾಧ್ಯ ಆಗಿಲ್ಲ?

ಕರ್ನಾಟಕ ಆಂಧ್ರದಂತೆಯೇ, ತಮಿಳುನಾಡು-ಮಹಾರಾಷ್ಟ್ರದಂತೆಯೇ ಕೈಗಾರೀಕರಣಗೊಂಡ ರಾಜ್ಯವಾಗಿರಲಿಲ್ಲ ಮತ್ತು ಇಲ್ಲಿ ಮೊದಲಿನಿಂದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳೇ ಬೆಳೆದವು ಹೊರತಾಗಿ ಖಾಸಗೀ ವಲಯ ಗಣನೀಯವಾಗಿ ಬೆಳೆದಿಲ್ಲ. ಹಾಗಾಗಿ ರಾಜ್ಯದಲ್ಲಿ ಏಕಸ್ವಾಮ್ಯ ಬಂಡವಾಳಗಾರರಿಗೆ ಎದುರಾಗಿ ನಿಲ್ಲಬಲ್ಲ ಹಿರಿಯ ಬಂಡವಾಳಗಾರರು ದೊಡ್ಡ ಪ್ರಮಾಣದಲ್ಲಿ ಇಲ್ಲದಿರುವುದರಿಂದ ಯಾವುದೇ ಪ್ರಾದೇಶಿಕ ಪಕ್ಷಕ್ಕೆ ಆರ್ಥಿಕ ಬೆಂಬಲ ನೀಡುವ ಪ್ರಶ್ನೆ ಉದ್ಭವಿಸಿಲ್ಲ. ಇದ್ದ ಕೆಲವು ಕೈಗಾರಿಕೆಗಳು ಬೇರೆ ರಾಜ್ಯದ ಮೂಲದವರಾದ್ದರಿಂದ ಅಲ್ಲಿಂದಲೇ ತಮಗೆ ಬೇಕಾದ ಅನುಕೂಲತೆಯನ್ನು ಮಾಡಿಕೊಳ್ಳಲು ಸಮರ್ಥರಾಗಿದ್ದರು.

ಹೀಗೆ ದೊಡ್ಡಪ್ರಮಾಣದ ಹಣಕಾಸಿನ ಕೊರತೆಯಿಂದಾಗಿ ಇಲ್ಲಿಯ ಬಹುತೇಕ ಪಕ್ಷಗಳು ಭ್ರಷ್ಟತೆ, ಲಂಚಗುಳಿತನ, ಸ್ವಜನ ಪಕ್ಷಪಾತಕ್ಕೆ ಇಳಿದು ಜನ ಬೆಂಬಲ ಕಳೆದುಕೊಳ್ಳುವಂತಾಗಿರಬೇಕು ಎನ್ನಿಸುತ್ತದೆ.

ಒಕ್ಕೂಟ ವ್ಯವಸ್ಥೆ ಬಲಪಡಿಸಲು ಅಗತ್ಯ ಕ್ರಮ :

* ಸಂವಿಧಾನದ 355 ಮತ್ತು 356 ನೇ ನಿಯಮದ ದುರುಪಯೋಗ ಆಗದಂತೆ ತಡೆಯಬೇಕು.
* ರಾಜ್ಯಗಳ ಅಭಿವೃದ್ಧಿಗೆ ಸ್ವಾಯತ್ತತೆ ನೀಡಬೇಕು.
* ಕೇಂದ್ರದಲ್ಲಿ ಸಂಗ್ರಹವಾದ ತೆರಿಗೆಯಲ್ಲಿ 50% ರಾಜ್ಯಗಳಿಗೆ ನೀಡಬೇಕು.
* ಅಂತರ್‌ರಾಜ್ಯ ಮಂಡಳಿಯ ತೀರ್ಮಾನಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿರ ಬೇಕು.
* ಸ್ಥಳೀಯ ಸಂಸ್ಥೆಗಳಿಗೆ ಕೊಡುವ ಹಣ ರಾಜ್ಯ ಸರ್ಕಾರಗಳ ಮೂಲಕ ವಿತರಣೆ ಆಗಬೇಕು
* ಇನ್ನಿತರ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಕೇಂದ್ರ ರಾಜ್ಯ ಸಂಬಂಧಗಳ ಪುನರ್ ನಿರ್ಮಾಣಕ್ಕೆ ಅನುಕೂಲ ಆಗುವಂತೆ ಒಂದು ಆಯೋಗ ನೇಮಿಸಿ ವರದಿ ತಯಾರಿಸಬೇಕು. ಇತ್ಯಾದಿ

ಇಂತಹ ಪ್ರಾದೇಶಿಕ ಪಕ್ಷವನ್ನು ನಿರಂತರವಾಗಿ ದುರ್ಬಲಗೊಳಿಸುವ ತಂತ್ರವನ್ನು ರಾಷ್ಟ್ರೀಯ ಪಕ್ಷಗಳು ಕಾರ್ಯಗತಗೊಳಿಸುತ್ತಿವೆ. ವಿವಿಧ ಆಮಿಷಗಳೊಡ್ಡಿ ಅದು ಅಂತಹ ಪಕ್ಷವನ್ನು ಒಡೆಯುತ್ತಿವೆ. ಉದಾಹರಣೆಗೆ ಆಂಧ್ರದ ತೆಲುಗುದೇಶಂ ಒಡೆದು ಎರಡಾದದ್ದು, ಡಿ.ಎಂ.ಕೆ.-ಎ.ಐ.ಡಿ.ಎಂ.ಕೆ. ಆಗಿದ್ದು, ಜನತಾದಳ ಹಲವು ಭಾಗವಾಗಿದ್ದು ಇಲ್ಲಿ ನೋಡಬಹುದು. ಇಂತಹ ಪಕ್ಷಗಳ ಬಲವನ್ನು ಕುಗ್ಗಿಸಿದಷ್ಟು ರಾಷ್ಟ್ರೀಯ ಪಕ್ಷಗಳ ಅಧಿಕಾರದ ದಾರಿ ಸುಗುಮವಾಗುವುದರಲ್ಲಿ ಸಂಶಯವಿಲ್ಲ.

ಆದ್ದರಿಂದ ಪ್ರಾದೇಶಿಕ ಪಕ್ಷಗಳು ಕೇವಲ ಭಾವನಾತ್ಮಕ ಹಂತದಲ್ಲಿ ಮಾತ್ರ ಕಾರ್ಯಕ್ರಮ ರೂಪಿಸುವ ಬದಲು ಅದರ ಕಾರ್ಯತಂತ್ರವನ್ನು ಬದಲಾಯಿಸಿಕೊಳ್ಳಬೇಕು. ಪ್ರಾದೇಶಿಕತೆಯ ಬೇರುಗಳನ್ನು ಹುಡುಕುವ ಮತ್ತು ರಾಜ್ಯದೊಳಗಡೆಯೂ ಅಲ್ಪಸಂಖ್ಯಾತವಾಗಿರುವ, ಕಡೆಗಣಿಸಿಲ್ಪಟ್ಟ ವಿಭಾಗವನ್ನು ಅರ್ಥೈಸಿಕೊಳ್ಳುವ, ಸ್ಪಂದಿಸುವ ಕೆಲಸ ಮಾಡಬೇಕಾಗಿದೆ. ರಾಷ್ಟ್ರೀಯ ಪಕ್ಷವೊಂದು ತಾನು ಪ್ರಾದೇಶಿಕ ಪಕ್ಷವಲ್ಲದಿದ್ದರೂ ಅಧಿಕಾರ ನಡೆಸುವಲ್ಲಿ ಪ್ರಾದೇಶಿಕ ಅನನ್ಯತೆಗೆ ಚ್ಯುತಿ ಬರದಂತೆ ಅಧಿಕಾರ ನಡೆಸಲು ಮುಂದಾಗಬೇಕು. ಇದಕ್ಕೆ ಎಡಪಕ್ಷಗಳ ನೀತಿ ಇಂದು ಹೆಚ್ಚು ಪ್ರಸ್ತುತ ಆಗಿದೆ.

ಹಾಗಾಗಿ ಒಕ್ಕೂಟ ವ್ಯವಸ್ಥೆ ಬಲಗೊಳ್ಳಬೇಕಾದರೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಬೆಳವಣಿಗೆಯನ್ನು ಅರ್ಥೈಸುವ ಪ್ರಾದೇಶಿಕ ಪಕ್ಷಗಳ ಮತ್ತು ಪ್ರಾದೇಶಿಕ ಭಾವನೆಯನ್ನು ಗೌರವಿಸುವ, ಪೊರೆವ ರಾಷ್ಟ್ರೀಯ ಪಕ್ಷಗಳ ಸೈದ್ಧಾಂತಿಕವಾದ ರಾಜಕಾರಣ ಇಂದು ಅಗತ್ಯವಾಗಿದೆ. ಒಂದು ರಾಜಕೀಯ ಪಕ್ಷ ಪ್ರಾದೇಶಿಕವೇ, ರಾಷ್ಟ್ರೀಯವೇ ಅನ್ನುವುದಕ್ಕಿಂತ ಅದು ಜನತಾ ಪ್ರಜಾಪ್ರಭುತ್ವವನ್ನು ಜಾರಿಗೊಳಿಸುತ್ತದೆಯೇ? ಇಲ್ಲವೇ? ಎನ್ನುವುದು ಮುಖ್ಯವಾಗಬೇಕು. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

70ಕ್ಕೆ 40ವರ್ಷ
ಒಂದು ಚಳವಳಿಯ ಶ್ರದ್ಧಾಂಜಲಿ

ಎನ್. ಕೆ. ಮೋಹನ್‌ರಾಂ

೧

ನಮ್ಮ ಸಮಕಾಲೀನರಿಗೆ ಪದ್ಮಶ್ರೀ ಬರಲು ಆರಂಭವಾಗುತ್ತಿದ್ದಂತೆ 70ರ ದಶಕದ ನೆನಪು ಕಾಡ ತೊಡಗಿದವು. ಪ್ರಶಸ್ತಿ ಪಡೆಯುವುದೇ ಅವಮಾನ ಎಂದು ಕೆಲವರಾದರೂ ನಂಬಿದ್ದ ದಿನಗಳು ಅವು. ಆಕಾಶವಾಣಿಯಲ್ಲಿ ಕಾವ್ಯ, ಕವನ ಓದುವವರನ್ನು ಸರಕಾರಿ ಕವಿಗಳು ಎಂದೋ, ಅಕಾಡೆಮಿ ಪ್ರಶಸ್ತಿಗರನ್ನು ಆಸ್ಥಾನ ಕವಿಗಳೆಂದೋ, ಪರಿಷತ್ತಿನ ಪೀಠಗಳನ್ನು, ಸ್ವಾಮಿ-ಮಠಗಳ ಆಶೀರ್ವಾದಗಳನ್ನು ಗೇಲಿ ಮಾಡುವುದು, ದೊಡ್ಡಸ್ತಿಕೆಯ ವಿಷಯವಾಗಿತ್ತು. ಎಂಥಾ ಕಾಲವಯ್ಯ ಅದು ಎಂದರೆ, ನೀತಿಲ್ಲ ಮುದಿಗೂಬೆಗಳು ಎಂದು ಗೇಲಿ ಮಾಡುವವರೂ ಈವತ್ತು ಇರುವ ಹಾಗೆ ಕಾಣೆ.

ಕರ್ನಾಟಕ ಸಾಂಸ್ಕೃತಿಕ ಇತಿಹಾಸವನ್ನು ಸ್ವಾತಂತ್ರ ಪೂರ್ವ ಮತ್ತು ಸ್ವಾತಂತ್ರೋತ್ತರ ಎಂದು ವರ್ಗೀಕರಿಸಬಾರದು. 70ರ ಪೂರ್ವ ಮತ್ತು 70ತೋತ್ತರ ಎಂದು ಗೆರೆ ಹಾಕಬೇಕು. ರಾಜಕೀಯ, ಸಾಹಿತ್ಯ, ರಂಗಭೂಮಿ, ಚಿತ್ರಕಲೆ, ಸಂಗೀತ, ಸಾಮಾಜಿಕ-ದಲಿತ-ಬಂಡಾಯ, ಸಿನಿಮಾ, ಸಮಾಜವಾದ, ಮಾರ್ಕ್ಸ್‌ವಾದ, ಕಾರ್ಮಿಕ ಚಳವಳಿ, ಜಾತಿ ವಿನಾಶ, ಪುಸ್ತಕ ಪ್ರಕಟಣೆ, ಪತ್ರಿಕೋದ್ಯಮ, ಕಲೆ, ವಾಸ್ತು ಶಿಲ್ಪ-ಭುಗಿಲೆದ್ದದ್ದು ಜ್ವಾಲಾಮುಖಿ. ಒಂದು ರೀತಿಯಲ್ಲಿ ವಚನ ಕ್ರಾಂತಿಯ ನಂತರದ ಕ್ರಾಂತಿ, ಈ 70ರ ದಶಕ. ಸಾವಿರಾರು ನದಿಗಳು ಇದ್ದವೂ ಇಲ್ಲವೋ, ನೂರಾರು ನದಿಗಳಂತೂ ಇದ್ದೇ ಇದ್ದವು.



೨

1957ರಲ್ಲಿ ಕಾಂಗ್ರೆಸ್‌ಗೆ ಲಘು ಕಂಪನವಾಗಿತ್ತು. ಎರಡನೇ ಮಹಾ ಚುನಾವಣೆಯಲ್ಲಿ ಕೇರಳ ವಿಶ್ವ ದಾಖಲೆಯಾಯಿತು. ಈ ಭೂಗೋಳದ ಪ್ರಪ್ರಥಮ ಚುನಾಯಿತ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂತು. ಆಂಧ್ರದಲ್ಲಿ ಕಮ್ಯುನಿಸ್ಟ್ ಪಕ್ಷ ಸುಮಾರು ಶೇ. 45ರಷ್ಟು ಮತವನ್ನು ಗಳಿಸಿತ್ತು. ತಮಿಳುನಾಡು, ಮಹಾರಾಷ್ಟ್ರ, ಮಧ್ಯ ಭಾರತದಲ್ಲಿ ಡಿಎಂಕೆ, ಪಿಡಬ್ಲುಪಿ, ಜನಸಂಘ, ಬಿಹಾರದಲ್ಲಿ ಸಂಯುಕ್ತ ಸೋಷಲಿಸ್ಟ್ ಪಕ್ಷ ಕೈ ಎತ್ತಿದ್ದವು. ನೆಹರೂ ನಡುಗಿದ್ದರು. ಸ್ವಾತಂತ್ರ ಬಂದ ಐದು ವರ್ಷಗಳ ನಂತರ ವಿರೋಧ ಪಕ್ಷವೆಂಬುದು ದನಿ ಎತ್ತಿತ್ತು.

ಆದರೆ ಕರ್ನಾಟಕದಲ್ಲಿ 1967ರವರೆಗೆ ವಿರೋಧ ಪಕ್ಷವೆಂಬುದೇ ಇರಲಿಲ್ಲ. ಯಾವ ಸಾಮಾಜಿಕ ತುಡಿತವೂ ಇರಲಿಲ್ಲ. ಬ್ರಾಹ್ಮಣ ವಿರೋಧಿ ಚಳವಳಿ, ಕರ್ನಾಟಕ ಏಕೀಕರಣದಿಂದಾಗಿ, ವಿಧಾನ ಸೌಧ ಲಿಂಗಾಯಿತರ ಖಾನಾವಳಿಯಾಗಿತ್ತು. ಉಳ್ಳಾಗಡ್ಡಿ ವಾಸನೆ ದಟ್ಟವಾಗಿ ಹರಡುತ್ತಿತ್ತು. ಲಿಂಗಾಯಿತರು ತಮ್ಮ ಜಾತಿಗಾಗಿ ದಾಸೋಹ ಆರಂಭಿಸಿದ್ದರು. ಒಕ್ಕಲಿಗರು ಕೊಬ್ಬಿದ ಕುರಿ ತಮಗಾಗಲಿಲ್ಲ ಎಂದು ದಿಗಿಲು ಬಿದ್ದರು. ಹಳ್ಳಿಗಳಿಂದ ಗುಳೇ ಹೊರಟ ಬ್ರಾಹ್ಮಣರಿಗೆ ಕೇಂದ್ರ ಸರಕಾರ, ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕುಗಳು, ರಾಷ್ಟ್ರಮಟ್ಟದ ಕೆಲಸಗಳು ನಿರಾಶ್ರಿತರ ಕ್ಯಾಂಪುಗಳಾಗಿದ್ದವು. ಹಳೇ ಮೈಸೂರು, ಹೊಸಾ ಕರ್ನಾಟಕ ನಡುವಿನ ಬಿರುಕು ಅಗಲವಾಗಿತ್ತು. ಜಸ್ಟಿಸ್ ಪಾರ್ಟಿಯಿಂದ ರಾತ್ರೋ ರಾತ್ರಿ ಜಿಗಿದು ಕಾಂಗ್ರಸ್ಸಿಗರಾಗಿದ್ದ ಒಕ್ಕಲಿಗರಿಗೆ ವಿರೋಧ ಪಕ್ಷದ ಅಗತ್ಯ ಅನಿವಾರ್ಯವಾಯಿತು.

ಆಗ ಕರ್ನಾಟಕದಲ್ಲಿ ಇದ್ದ ಕಾಂಗ್ರೆಸ್ಸೇತರ ಪಾರ್ಟಿಗಳು ಎರಡೇ-ರಾಜಾಜಿಯವರ ನಕ್ಷತ್ರ ಗುರ್ತಿನ ಸ್ವತಂತ್ರ ಪಕ್ಷ, ಇನ್ನೊಂದು ಗುಡಿಸಲು ಗುರ್ತಿನ ಪ್ರಜಾ ಸೋಷಲಿಸ್ಟ್ ಪಕ್ಷ. ರಾಜಾಜಿ ಸ್ವಲ್ಪ ಶಿಸ್ತಿನ ಮನುಷ್ಯ. ಅವರಿಗೆ ಹಳೆ ಮೈಸೂರು ಪರಿಚಯ ಚೆನ್ನಾಗಿಯೇ ಇತ್ತು. ಅವರು ಸೇಲಂ ಕಡೆಯವರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿದ್ದು. ಸ್ವಲ್ಪ ಕನ್ನಡವೂ ಬರುತ್ತಿತ್ತು. ಶ್ರೀಮಂತ ಒಕ್ಕಲಿಗರು ಸ್ವತಂತ್ರರಾದರು. ಬಯಲು ಸೀಮೆಯ-ತುಮಕೂರು ಚಿತ್ರದುರ್ಗ ಅಶಿಸ್ತಿನ ಒಕ್ಕಲಿಗರು ಪ್ರಜಾ ಸೋಷಲಿಸ್ಟ್ ಪಾರ್ಟಿ ಸೇರಿದರು. ಲಂಗು ಲಗಾಮಿಲ್ಲದ ಪಿಎಸ್‌ಪಿಗೆ ಯಾರು ಬೇಕಾದರೂ ಸೇರಬಹುದಿತ್ತು. ಸದಾ ತೆರೆದ ಬಾಗಿಲು. ಕೆಂಪು ಟೋಪಿ, ಕೆಂಪು ಬಾವುಟ, ಕೆಂಪು ಗೋಡೆ ಪೋಸ್ಟರ್‌ಗಳು ರಾಜ್ಯದಲ್ಲಿ ಅಲ್ಲಲ್ಲಿ ಕಂಡವು.

1962ರ ಮಹಾಚುನಾವಣೆಯಲ್ಲಿ ಹೊಸಕೋಟೆಯಿಂದ ಚೆನ್ನ ಭೈರೇಗೌಡ, ಚಿತ್ರದುರ್ಗದಿಂದ ಜಗಳೂರು ಇಮಾಮ್, ಮಂಗಳೂರಿನಿಂದ ಲೋಬೊ ಪ್ರಭು, ರಾಯಚೂರಿನಿಂದ ರಾಜಾ ವೆಂಕಟಪ್ಪ ನಾಯಕ-ಇವರೆಲ್ಲ ಸ್ವತಂತ್ರ ಪಕ್ಷದಿಂದ ಲೋಕಸಭೆಗೆ ಗೆದ್ದಿದ್ದರು. ಇನ್ನೂ ಒಂದಿಬ್ಬರು ವಿರೋಧ ಪಕ್ಷದಿಂದ ಗೆದ್ದಿದ್ದರು. ಆದರೂ ರಾಜ್ಯ ವಿಧಾನ ಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವೇ ಇರಲಿಲ್ಲ. ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ತತ್ತರಗೊಂಡಿತ್ತು.

ಭಾರತದ ರಾಜಕೀಯದ ಅಲ್ಲೋಲ-

ಕರ್ನಾಟಕದಲ್ಲಿ ೧೯೬೭ರವರೆಗೆ ವಿರೋಧ ಪಕ್ಷವೆಂಬುದೇ ಇರಲಿಲ್ಲ. ಯಾವ ಸಾಮಾಜಿಕ ತುಡಿತವೂ ಇರಲಿಲ್ಲ. ಬ್ರಾಹ್ಮಣ ವಿರೋಧಿ ಚಳವಳಿ, ಕರ್ನಾಟಕ ಏಕೀಕರಣದಿಂದಾಗಿ, ವಿಧಾನ ಸೌಧ ಲಿಂಗಾಯಿತರ ಖಾನಾವಳಿಯಾಗಿತ್ತು. ಉಳ್ಳಾಗಡ್ಡಿ ವಾಸನೆ ದಟ್ಟವಾಗಿ ಹರಡುತ್ತಿತ್ತು. ಲಿಂಗಾಯಿತರು ತಮ್ಮ ಜಾತಿಗಾಗಿ ದಾಸೋಹ ಆರಂಭಿಸಿದ್ದರು. ಒಕ್ಕಲಿಗರು ಕೊಬ್ಬಿದ ಕುರಿ ತಮಗಾಗಲಿಲ್ಲ ಎಂದು ದಿಗಿಲು ಬಿದ್ದರು. ಹಳ್ಳಿಗಳಿಂದ ಗುಳೇ ಹೊರಟ ಬ್ರಾಹ್ಮಣರಿಗೆ ಕೇಂದ್ರ ಸರಕಾರ, ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕುಗಳು, ರಾಷ್ಟ್ರಮಟ್ಟದ ಕೆಲಸಗಳು ನಿರಾಶ್ರಿತರ ಕ್ಯಾಂಪುಗಳಾಗಿದ್ದವು. ಹಳೇ ಮೈಸೂರು, ಹೊಸಾ ಕರ್ನಾಟಕ ನಡುವಿನ ಬಿರುಕು ಅಗಲವಾಗಿತ್ತು.

ಕಲ್ಲೋಲ ಆರಂಭವಾಗಿದ್ದು, ರಾಜಕೀಯ ಇತಿಹಾಸ ಬದಲಾಗಿದ್ದು 1967ರ ಮಹಾ ಚುನಾವಣೆಯಲ್ಲಿ. ಜನ ವಿರೋಧ ಪಕ್ಷವನ್ನು ಸೃಷ್ಟಿಸಿದರು. ನೆಹರೂ ಬದುಕಿರಲಿಲ್ಲ. ಬದುಕಿದ್ದರೂ, ಗೋಪಾಲ ಕೃಷ್ಣ ಅಡಿಗರು ಬಯಸಿದಂತೆ ನೆಹರೂ ಬಲಾತ್ಕಾರದ ನಿವೃತ್ತಿಯನ್ನು ಒಪ್ಪಿಕೊಳ್ಳಬೇಕಾಗುತ್ತಿತ್ತು.

1962ರಿಂದ 67ರ ಕಾಲ, ಭಾರತ ಕಂಡ ಅತ್ಯಂತ ದುರ್ದಿನಗಳು. ನೆಹರೂನ ಕನಸಿನ ಪ್ರಯೋಗಗಳಾದ ಸಾರ್ವಜನಿಕ ಉದ್ದಿಮೆಗಳು, ಬೃಹತ್ ಅಣೆಕಟ್ಟುಗಳು ಇನ್ನೂ ಫಲ ಕೊಟ್ಟಿರಲಿಲ್ಲ. 1962ರ ಭಾರತ-ಚೀನಾ ಯುದ್ಧದಲ್ಲಿ ಆದ ಹೀನಾಯ ಸೋಲು, ದೇಶದುದ್ದಕ್ಕೂ ಹರಡಿದ ಬರಗಾಲ, ಕುಡಿಯಲು ನೀರೂ ಇಲ್ಲದ, ಮನುಷ್ಯ ಮಾಂಸವನ್ನೇ ಮನುಷ್ಯ ತಿನ್ನುವಂಥ ಭೀಕರ ಹಸಿವು, ಕಜ್ಜಿ-ತುರಿ, ಪ್ಲೇಗು, ಮಲೇರಿಯಾ, ಕಾಲರಾಗಳ ಕೊನೆಗಾಣದ ಕಾಟ, ಮುಂಬೈ-ಕಲ್ಕತ್ತಗಳಲ್ಲಿ ಮುಚ್ಚಿದ ನೂರಾರು ಕೈಗಾರಿಕೆಗಳು, ತುತ್ತತುದಿಗೇರಿದ ಕಾರ್ಮಿಕರ ಮುಷ್ಕರ, ಆಗಲೇ ಆರಂಭ ಕಂಡುಕೊಂಡಿದ್ದ ನಕ್ಸಲೀಯರ ಸಶಸ್ತ್ರ ಹೋರಾಟ, ನಿರುದ್ಯೋಗ, ನೆಹರೂ-ಶಾಸ್ತ್ರಿಯ ನಿಧನದಿಂದಾಗಿ ನಾಯಕತ್ವವಿಲ್ಲದ ರಾಜಕೀಯ ಸ್ಥಿತಿ, ಸ್ಪಷ್ಟ ನೀತಿ ಇಲ್ಲದ ಆರ್ಥಿಕ ನೀತಿ- ಭುಗಿಲ ಬೆಂಕಿ ಹರಡಿತ್ತು. 1967ರ ಚುನಾವಣೆಯಲ್ಲಿ ಕಾಂಗ್ರೆಸ್ ಧೂಳಿಪಟವಾಯಿತು.

ಲೋಕಸಭೆಯಲ್ಲಿ ಅತಿ ಕಡಿಮೆ ಅಂತರದಲ್ಲಿ ಕಾಂಗ್ರೆಸ್ ಕುರ್ಚಿಯಲ್ಲಿ ಕೂತರೂ, ಕೇರಳ, ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ, ಪಂಜಾಬ್, ಒರಿಸ್ಸಾ, ಪಶ್ಚಿಮ ಬಂಗಾಳಗಳಲ್ಲಿ ಕಾಂಗ್ರೆಸ್ಸೇತರ ಸಂಯುಕ್ತ ವಿಧಾಯಕ ದಳಗಳು ಅಧಿಕಾರಕ್ಕೆ ಬಂದುವು. ಕೇರಳ, ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರು, ತಮಿಳುನಾಡಿನಲ್ಲಿ ಡಿಎಂಕೆ, ಸ್ವತಂತ್ರ ಪಂಜಾಬ್‌ನಲ್ಲಿ ಅಕಾಲಿದಳ, ಉಳಿದ ಕಡೆ ಸಂಯುಕ್ತ ಸೋಷಲಿಸ್ಟ್, ಪ್ರಜಾ ಸೋಷಲಿಸ್ಟ್, ಜನಸಂಘಗಳು ಅಧಿಕಾರಕ್ಕೆ ಬಂದವು.

ಲೋಕಸಭೆಯಲ್ಲಿ ಕಮ್ಯುನಿಸ್ಟ್, ಸಮಾಜವಾದಿ, ಜನಸಂಘ ದೊಡ್ಡ ದನಿಯಾದವು. ಇನ್ನೊಂದು ದಾಖಲೆಯೆಂದರೆ, ಜಾತಿ-ದುಡ್ಡು ಏನೂ ಇಲ್ಲದ ಮಂಗಳೂರಿನ ಹುಡುಗನೊಬ್ಬ, ಮುಂಬೈನಲ್ಲಿ ಕಾಂಗ್ರೆಸ್‌ನ ಅತಿ ದೊಡ್ಡ ನಾಯಕ ಸದೋಬಾ ಪಾಟೀಲರನ್ನು ಸೋಲಿಸಿದ್ದು. ಅದು "ದೈತ್ಯ ಸಂಹಾರ" ಜಾರ್ಜ್ ಫರ್ನಾಂಡೀಸ್ ಲೋಕಸಭೆಗೆ ಗೆದ್ದಿದ್ದರು. ಎಸ್.ಜಿ.ಗೋರೆ, ಮಧು ದಂಡವತೆ, ಮಧು ಲಿಮಯೆ, ಮೋಹನ್ ಧಾರಿಮ, ಚಂದ್ರಶೇಖರ್, ಬಿಹಾರ, ಉ.ಪ್ರಗಳಿಂದ ಸಮಾಜವಾದಿ ಘಟಾನುಘಟಿಗಳು ಲೋಕಸಭೆ ಪ್ರವೇಶಿಸಿದ್ದರು. ಮಧ್ಯ ಪ್ರದೇಶದಿಂದ ಎಚ್. ವಿ. ಕಾಮತ್, ಭೂಪಾಲ್/ಗ್ವಾಲಿಯರ್‌ನಲ್ಲಿ ಜನಸಂಘ ದಿಂದ ಕನ್ನಡಿಗ ಜಗನ್ನಾಥ ರಾವ್ ಜೋಷಿ ಸಹ ಗೆದ್ದಿದ್ದರು. ಶಿವಮೊಗ್ಗದಿಂದ ಜೆ. ಎಚ್. ಪಟೇಲರು ಗೆದ್ದರು. ಸಂಯುಕ್ತ ಸೋಷಲಿಸ್ಟ್ ಪಕ್ಷದ ಮೊದಲ-ಕೊನೆಯ ಲೋಕಸಭಾ ಗೆಲುವು ಇದೊಂದೇ.

೩

ಲಿಂಗಾಯಿತ ವಿರೋಧ ಫಲ ಕೊಟ್ಟಿತ್ತು. ಉಳ್ಳಾಗಡ್ಡಿ ವಿರುದ್ಧ ಬಾಡೂಟ ಗೆಲುವು ಸಾಧಿಸಿತ್ತು. 1967ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ, ಅದರ

ಕಾಗೋಡು ಸತ್ಯಾಗ್ರಹಕ್ಕೆ 50 ವರ್ಷ ಅಂತ, ಈಚೆಗೆ ಪ್ರತಿಕೆಗಳು ಧಾರಾಳವಾಗೇ ಪ್ರಕಟಿಸಿದವು. ಈ ಕಾಗೋಡು ಸತ್ಯಾಗ್ರಹ ಎಂಬುದು ಕಾಗದದ ಹುಲಿ. ಇದರ ಪ್ರಭಾವ ರಾಜ್ಯದಲ್ಲಿರಲಿ, ಸಾಗರ ಮುನಿಸಿಪಾಲಿಟಿಗೂ ತಾಗಲಿಲ್ಲ. ಅದು ದೀವರ ರೈತರುಗಳು ಮತ್ತು ಭೂಮಾಲೀಕ ಲಿಂಗಾಯಿತರ ವಿರುದ್ಧದ ಜಾತಿ ಜಗಳ. ಲೋಹಿಯಾ ಬಂದಿದ್ದರು. ಅರೆಸ್ಟ್ ಆಗಿದ್ದರು. ಅಂದಿನ ಪತ್ರಕರ್ತರಲ್ಲಿ ಖಾದ್ರಿ ಶಾಮಣ್ಣ, ಬಾಸು ಕೃಷ್ಣಮೂರ್ತಿ, ಅಗರಂ ನರಸಿಂಹನ್-ಇವರೆಲ್ಲಾ ಸಮಾಜವಾದಿ ಲೇಬಲ್ಲಿನವರು. ಇವರಿಂದಾಗಿ, ಪತ್ರಿಕೆಗಳಲ್ಲಿ 'ಕಾಗೋಡು' ಸುದ್ದಿಯಾಯಿತು. ಕಾಗೋಡು ಹೋರಾಟ ಆಯಿತು.

ಸಾವು ಖಚಿತವಾಗಿತ್ತು. ಮುಖ್ಯಮಂತ್ರಿ ನಿಜಲಿಂಗಪ್ಪ, ಹೊಸದುರ್ಗದಲ್ಲಿ ಕೇವಲ 'ರಂಗಪ್ಪ' ಎಂದು ಅತಿ ಕಷ್ಟದಿಂದ ಮೂರು ಅಕ್ಷರ ಬರೆಯುವವನಿಂದ ಸೋತರು. ಮತ್ತೆ ಗೆದ್ದು ಮುಖ್ಯಮಂತ್ರಿಯಾದರೂ, ಉಪಯೋಗಕ್ಕೆ ಬರಲಿಲ್ಲ.

ಚುನಾವಣೆಗೆ ಸ್ವಲ್ಪ ದಿನದ ಮೊದಲು ಒಕ್ಕಲಿಗರು ಬಂಡೆದ್ದು ಹುಚ್ಚಮಾಸ್ತಿಗೌಡ, ವೀರಣ್ಣಗೌಡ, ಸಾಹುಕಾರ್ ಚೆನ್ನಯ್ಯ-ಇವರೆಲ್ಲ ಕಾಂಗ್ರೆಸ್‌ನಿಂದ ಆಚೆ ಬಂದಿದ್ದರು. ಜನತಾ ಪಕ್ಷ ಕಟ್ಟಿಕೊಂಡರು. ಪ್ರಸೋಪ ಅಧಿಕೃತ ವಿರೋಧ ಪಕ್ಷವಾಯಿತು. 28-30 ಜನ ಶಾಸಕರಿದ್ದರು. ಕಾಂಗ್ರೆಸ್ ವಿರೋಧ ಎಷ್ಟಿತ್ತೆಂದರೆ, ಜಯಪ್ರಕಾಶ್ ನಾರಾಯಣ ಎಂಬುವರು ಕಾರವಾರ/ಶಿರ್ಸಿಯಿಂದ ಪ್ರಸೋಪದಿಂದ ವಿಧಾನಸಭೆಗೆ ಗೆದ್ದಿದ್ದರು. ಇವರು ದಲಿತರು. ತುಮಕೂರು ಕಡೆಯ ಕೊರಟಗೆರೆ ಸುತ್ತಮುತ್ತಲಿನವರು. ಇವರು ಹೆಸರು ಬದಲಿಸಿಕೊಂಡಿದ್ದರು. ಪ್ರಾಮಾಣಿಕ. ಸಜ್ಜನ. ದುಡ್ಡಂತೂ ಇಲ್ಲವೇ ಇಲ್ಲ. ಕೊಂಕಣಿ ಸಹ ಬರುತ್ತಿರಲಿಲ್ಲ. ನಿಜವಾದ ಅನಾಮಧೇಯ. ಆದರೂ ಜನ ಗೆಲ್ಲಿಸಿದರು. ಪ್ರಥಮವಾಗಿ ಕಮ್ಯುನಿಸ್ಟ್ ಪಕ್ಷ ಸಹ ವಿಧಾನ ಸಭೆ ಪ್ರವೇಶಿಸಿತು. ಮಲ್ಲೇಶ್ವರದಿಂದ ಎಂ.ಎಸ್. ಕೃಷ್ಣನ್ ಗೆದ್ದಿದ್ದರು. ಕನ್ನಡ ಚಳವಳಿ ಸಹ ಗೆದ್ದಿತ್ತು. ವಾಟಾಳ್ ಸಹ ಗೆದ್ದರು.

ಲೋಕಸಭೆಗೆ ಹಾಸನದಿಂದ ಸ್ವತಂತ್ರ ಪಕ್ಷದಿಂದ ನುಗ್ಗೇಹಳ್ಳಿ ಶಿವಪ್ಪ, ಮಂಗಳೂರಿನಿಂದ ಲೋಬೊ ಪ್ರಭು, ಸುರಪುರದ ರಾಜಾ ವೆಂಕಟಪ್ಪ ನಾಯಕ, ಕಾರವಾರದಿಂದ ಕವಿ ದಿನಕರ ದೇಸಾಯಿ, ತುಮಕೂರಿನಲ್ಲಿ ಕೆ. ಲಕ್ಕಪ್ಪ, 1968ರ ಉಪ ಚುನಾವಣೆಯಲ್ಲಿ ಎಸ್. ಎಂ. ಕೃಷ್ಣ, ಇವರೆಲ್ಲಾ ಗುಡಿಸಲು ಗುರ್ತಿನಲ್ಲಿ ಗೆದ್ದರು. ಜೆ.ಎಚ್. ಪಟೇಲರೂ ಗೆದ್ದು, ಲೋಕಸಭೆಯಲ್ಲಿ ಕನ್ನಡ ಮಾತನಾಡಿ ಇತಿಹಾಸ ಬರೆದರು. ಕೊನೆಗೂ ಸಂಯುಕ್ತ ಸೋಷಲಿಸ್ಟ್ ಪಕ್ಷದಿಂದ, ತೀರ್ಥಹಳ್ಳಿಯಲ್ಲಿ ಗೋಪಾಲಗೌಡ, ಸೊರಬದಿಂದ ಬಂಗಾರಪ್ಪ ವಿಧಾನ ಸಭೆಗೆ ಬಂದರು. ಇಬ್ಬರೂ ಶಾಸಕರಾದರು. ಮಂಡ್ಯದ ನಾಗಪ್ಪ ರಾಯಚೂರಿನ ನಾಗಪ್ಪ ಇವರ ಪಕ್ಷದ ನೆನಪಿಲ್ಲ. ಸಮಾಜವಾದಿಗಳೆಂಬ ನೆನಪು, ಅಷ್ಟೆ

೪

ಮಾಡಿದ್ದಕ್ಕಿಂತಲೂ, ಆಡಿದ್ದೇ ಹೆಚ್ಚು ಎನ್ನುವಂತೆ ಲೋಹಿಯವಾದ, ಲೋಹಿಯಾ ವಾದಿಗಳು ಎನ್ನುವ ಕೂಗಾಟಗರ ಚೀರಾಟಗರ ಸಮಾಜವಾದ ಕರ್ನಾಟಕದಲ್ಲಿ ಎಲ್ಲಿತ್ತು? ಬೆಂಗಳೂರಿನ ಸುಬೇದಾರ್ ಛತ್ರಂ ರಸ್ತೆಯ, ಮೆಜೆಸ್ಟಿಕ್ ಬಳಿಯ ಅಣ್ಣಮ್ಮ ದೇವಸ್ಥಾನ ಎದುರಿನ ಒಂದು ಹಳೆ ಕಟ್ಟಡದಲ್ಲಿ. ಮೊದಲನೆ ಮಹಡಿಯಲ್ಲಿ. ಅಲ್ಲಿ, ಅರ್ಧಂಬರ್ಧ ಕಿತ್ತು ಹೋದ ಮೂರು ಬೋರ್ಡುಗಳು ನೇತಾಡುತ್ತಿದ್ದವು 'ಸಂಯುಕ್ತ ಸಮಾಜವಾದಿ ಪಕ್ಷ' ಎಂಬ ಸ್ವಲ್ಪ ದೊಡ್ಡದಾದ ಬೋರ್ಡ್ ಅದರ ಜೊತೆಯಲ್ಲೇ 'ಹಿಂದ್ ಮಜ್ದೂರ್ ಸಭಾ' ಎಂಬ - ಚಿಕ್ಕ ಬೋರ್ಡ್ ಮತ್ತು 'ಸಮಾಜವಾದಿ ಯುವ ಜನ ಸಭಾ' ಎಂಬ ಕಂಡೂ ಕಾಣದಂತಿದ್ದ ಮೂರನೆಯ ಚಿಕ್ಕ ಬೋರ್ಡ್. ಈ ಬೋರ್ಡ್‌ಗಳ ಜತೆಯಲ್ಲೇ ಕೆ.ಜಿ. ಮಹೇಶ್ವರಪ್ಪ, ಪರಮೇಶ್ವರಪ್ಪ, ಬಾಪೂ ಹೆದ್ದೂರ ಶೆಟ್ಟಿ ಎಂಬ ವಕೀಲರುಗಳ ಬೋರ್ಡ್. ಅಲ್ಲಿತ್ತು. ಈ ಟು-ಇನ್-ಒನ್ ಆಫೀಸಿನಲ್ಲಿ ಸಮಾಜವಾದಿ ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್. ವೆಂಕಟ್ರಾಂ, ಎಚ್ ಎಂ ಎಸ್‌ನ ಮಾಧವನ್ ಮತ್ತು ಸಮಾಜವಾದಿ ಯುವಜನಾ ಸಭಾದ ರಮೇಶ್ ಬಂದಗದ್ದೆ ಇರುತ್ತಿದ್ದರು. ವಕೀಲರುಗಳಲ್ಲಿ ಬಾಪೂ ಹೆದ್ದೂರಶೆಟ್ಟಿ ಮಾತ್ರ ಆಗಾಗ್ಗೆ ಕರಿ ಕೋಟು ಹಾಕಿಕೊಂಡು ಕೋರ್ಟ್‌ಗಳಿಗೆ ಹೋಗುತ್ತಿದ್ದರು. ಉಳಿದವರು ಕಾಣುತ್ತಿದ್ದದ್ದು ಅಪರೂಪ.

ಎಸ್. ವೆಂಕಟ್ರಾಂ ಯಾವಾಗಲೂ ಓದುತ್ತಾ ಕೂರುತ್ತಿದ್ದರು. ಲಂಕೇಶ್ ಇವರೊಡನೆ ಚರ್ಚಿಸಲು ಆಗಾಗ್ಗೆ ಹೋಗುತ್ತಿದ್ದರು ಎಂ. ಡಿ. ನಂಜುಂಡಸ್ವಾಮಿ ವೆಂಕಟ್ರಾಂರನ್ನು ಭಯಂಕರವಾಗಿ ದ್ವೇಷಿಸುತ್ತಿದ್ದರು. ಅವರನ್ನು ಎಂಡಿಎನ್ ಗುಮಾಸ್ತ ಎಂದು ಕರೆಯುತ್ತಿದ್ದರು. ವೆಂಕಟ್ರಾಂ ಬ್ರಾಹ್ಮಣರಾಗಿದ್ದೇ ಅದಕ್ಕೆ ಕಾರಣ. ಮಾಧವನ್ ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ನಿನ ಅಧ್ಯಕ್ಷರಾಗಿದ್ದರು. ಆಗ ಬೆಂಗಳೂರಲ್ಲಿದ್ದದ್ದು 10-15 ಟ್ಯಾಕ್ಸಿಗಳು ಮಾತ್ರ. ಇನ್ನು ಯುವಜನಾ ಸಭಾದಲ್ಲಿ ರಮೇಶನ ನಂತರ ಎರಡನೆಯ ಸದಸ್ಯರೇ ಇರಲಿಲ್ಲ. ಮೈಸೂರಿನ ಗಂಗೋತ್ರಿಯಲ್ಲಿ ದೇವನೂರು ಮಹಾದೇವರಂಥ 8-10 ಹುಡುಗರು ಸಂಯುಸಲ್ಲಿದ್ದರು. ವೆಂಕಟ್ರಾಂ ಓದುತ್ತಾ ಕೂರುತ್ತಿದ್ದರೆ, ರಮೇಶ ಒಂದೇ ಸಮನೆ ಮಾತನಾಡುತ್ತಿದ್ದರು. ಮಲೆಯಾಳಿಯಾಗಿದ್ದ ಮಾಧವನ್ ಯಾವಾಗಲೂ ಮಾತನಾಡಲೇ ಇಲ್ಲ. ಈ ಮೂವರೂ ಈಗ ತಿರಿಕೊಂಡಿದ್ದಾರೆ. ಪಕ್ಷದ ಕಟ್ಟಡ ಒಡೆದು, ಹೊಸ ಕಟ್ಟಡ ಬಂದಿದೆ. ಸಂಸೋಪದ ಶ್ರದ್ಧಾಂಜಲಿ ಬರೆದು 35 ವರ್ಷ ಆಗಿದೆ.

೫

ಕಾಗೋಡು ಸತ್ಯಾಗ್ರಹಕ್ಕೆ 50 ವರ್ಷ ಅಂತ, ಈಚೆಗೆ ಪ್ರತಿಕೆಗಳು ಧಾರಾಳವಾಗೇ ಪ್ರಕಟಿಸಿದವು. ಈ ಕಾಗೋಡು ಸತ್ಯಾಗ್ರಹ ಎಂಬುದು ಕಾಗದದ ಹುಲಿ. ಇದರ ಪ್ರಭಾವ ರಾಜ್ಯದಲ್ಲಿರಲಿ, ಸಾಗರ ಮುನಿಸಿಪಾಲಿಟಿಗೂ ತಾಗಲಿಲ್ಲ. ಅದು ದೀವರ ರೈತರುಗಳು ಮತ್ತು

ಭೂ ಮಾಲೀಕ ಲಿಂಗಾಯಿತರ ವಿರುದ್ಧದ ಜಾತಿ ಜಗಳ. ಲೋಹಿಯಾ ಬಂದಿದ್ದರು. ಅರೆಸ್ಟ್ ಆಗಿದ್ದರು. ಅಂದಿನ ಪತ್ರಕರ್ತರಲ್ಲಿ ಖಾದ್ರಿ ಶಾಮಣ್ಣ, ಬಾಸು ಕೃಷ್ಣಮೂರ್ತಿ, ಅಗರಂ ನರಸಿಂಹನ್-ಇವರೆಲ್ಲಾ ಸಮಾಜವಾದಿ ಲೇಬಲ್ಲಿನವರು. ಇವರಿಂದಾಗಿ, ಪತ್ರಿಕೆಗಳಲ್ಲಿ 'ಕಾಗೋಡು' ಸುದ್ದಿಯಾಯಿತು. ಕಾಗೋಡು ಹೋರಾಟ ಆಯಿತು. ಕಾಗೋಡು ಸತ್ಯಾಗ್ರಹ ಇದ್ದರೂ ಸಾಗರದಲ್ಲಿ ಸಂಸೋಪ ಗೆಲ್ಲಲ್ಲು 20 ವರ್ಷ ಕಾಯಬೇಕಾಯಿತು-ಅದು 1971ರಲ್ಲಿ ಕಾಗೋಡು ತಿಮ್ಮಪ್ಪ ಗೆದ್ದಾಗ. ಕಾಗೋಡು ಏನು ಇವರ ಬೆಂಬಲಕ್ಕೆ ಇರಲಿಲ್ಲ.

ಯಾವ ಸಮಾಜವಾದ? ಯಾವ ಲೋಹಿಯಾವಾದ? ಯಾವ ಲೋಹಿಯಾವಾದಿಗಳು? ಕರ್ನಾಟಕದಲ್ಲಿ ಯಾವ ಲೋಹಿಯಾವಾದವೂ ಎಂದಿಗೂ ಇರಲಿಲ್ಲ. ಲೋಹಿಯಾವಾದಿಗಳು ಎಲ್ಲಿಂದ ಬರಬೇಕು? ಶೋಕಿಲಾಲರ, ಕೆಲವು ಕಾಂಗ್ರೆಸ್ ವಿರೋಧಿಗಳ, ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದಿದ್ದವರ, ನಾಲಗೆ ತೆವಲಿದ್ದವರ, ಆಗ ತಾನೇ ಕಾಲೇಜಿನಿಂದ ಹೊರಬಂದ ಲಿಂಗಾಯಿತೇತರ ಶೂದ್ರರ ಪಕ್ಷವೇ, ಈ ಸಮಾಜವಾದಿ ಚಳವಳಿ.

ಯಾರು ಕೇಳಿದರೂ, ಚುನಾವಣೆಗಳಲ್ಲಿ ಆಲದ ಮರ-ಗುಡಿಸಲುಗಳ ಟಿಕೆಟ್ ಸಿಗುತ್ತಿತ್ತು. ನಮ್ಮೂರಿನಲ್ಲಿ ಹೋಟೆಲ್ ಇಟ್ಟವರೊಬ್ಬರು 1962ರಲ್ಲೋ 1957ರಲ್ಲೋ ಸಂಸೋಪದ ಆಲದ ಮರ ಗುರ್ತಿನಲ್ಲಿ ಚುನಾವಣೆಗೆ ನಿಂತು ನೂರೋ ಇನ್ನೂರೋ ಓಟು ಪಡೆದಿದ್ದರು. ಇನ್ನೊಮ್ಮೆ ವೈಶ್ಯರೊಬ್ಬರು ಗುಡಿಸಿಲ ಗುರ್ತಿನ ಪ್ರಸೋಪದಿಂದ ನಿಂತಾಗ, ನಮ್ಮೂರಿನ ಬಡ್ಡಿ ವ್ಯಾವಹಾರದ ಶೆಟ್ಟರ ಹುಡುಗರೆಲ್ಲಾ ಕೆಂಪು ಟೋಪಿ ಹಾಕಿಕೊಂಡರೆ, ಲಿಂಗಾಯಿತ-ಬ್ರಾಹ್ಮಣ ಹುಡುಗರೆಲ್ಲಾ ಬಿಳೀಟೋಪಿ ಹಾಕಿಕೊಂಡು ಚೀಟಿ ಹಂಚಿದ್ದರು. 1967ರವರೆಗೆ, ಯಾರೋ ಒಂದಿಷ್ಟು ಜನ ತಮ್ಮ ವೈಯಕ್ತಿಕ ವರ್ಚಸ್ಸಿನ ಮೇಲೆ, ಜಾತಿಯ ಮೇಲೆ ಪ್ರಸೋಪ, ಸಂಸೋಪಗಳಿಂದ ಗೆಲ್ಲುತ್ತಿದ್ದರು. ಯಾವ ಷರತ್ತೂ, ನಿಯತ್ತೂ ಕಾಡಿರದ ಪಕ್ಷಗಳು, ಇವು. ಇದನ್ನು ಅಧ್ಯಯನ ಮಾಡಲು ಲೋಹಿಯಾ ಅಧ್ಯಯನ ಪೀಠ, ವಿಚಾರ ಮಂಚ್, ವಿಶ್ವ ವಿದ್ಯಾಲಯಗಳು ಮೈಗಳ್ಳರನ್ನು ನೇಮಿಸಿವೆ. ಇವೆಲ್ಲಾ ಮೈಗಳ್ಳರ ಅಡ್ಡೆಗಳು.

1967ರಲ್ಲಿ ಕೊನೆಗೂ ಗೋಪಾಲಗೌಡ ಮತ್ತು ಬಂಗಾರಪ್ಪ ವಿಧಾನಸಭೆಗೆ ಗೆದ್ದದ್ದು ಸಹ-ಕಾಂಗ್ರೆಸ್ ವಿರೋಧಿ ಅಲೆ ಎಂಬುದಕ್ಕಿಂತ ಹೆಚ್ಚಾಗಿ ಜಾತಿ ಓಟುಗಳಿಂದ. ಗೋಪಾಲಗೌಡರಿಗೆ ಸಾಗರದಿಂದ ಗೆಲ್ಲಲು ಆಗಲೇ ಇಲ್ಲ. ತೀರ್ಥಹಳ್ಳಿಯ ಒಕ್ಕಲಿಗರ ಆಶ್ರಯ ಬೇಕಾಯಿತು. ಬಂಗಾರಪ್ಪ ಗೆದ್ದದ್ದು, ಇಂದಿಗೂ ಗೆಲ್ಲುತ್ತಿರುವುದು ಅವರ ಜಾತಿಯ ಓಟುಗಳಿಂದಲೇ.

ಇದಕ್ಕೆ ಒಂದು ಘಟನೆ ನೆನಪಿಸಬಹುದು. ತೀರ್ಥಹಳ್ಳಿಯಿಂದ ಅಪ್ಪಣ್ಣಗೌಡ ಎಂಬುವರು ಎರಡು ಬಾರಿ ಸಿಪಿಎಂನಿಂದ ಸ್ಪರ್ಧಿಸಿದ್ದರು. 20-22 ಸಾವಿರ ಓಟೂ ತೆಗೆದಿದ್ದರು. ತೀರ್ಥಹಳ್ಳಿಯಲ್ಲಿ ಸಿಪಿಎಂ ಸದಸ್ಯರ ಸಂಖ್ಯೆ ಐದನ್ನೂ ದಾಟಿರಲಿಲ್ಲ. ಸಿಪಿಎಂ ಬೆಂಬಲಿಗರು ಐವತ್ತೂ ಇರಲಿಲ್ಲ. ಅಪ್ಪಣ್ಣ ಗೌಡರ 20-22 ಸಾವಿರ ಓಟು ಒಕ್ಕಲಿಗರ ಓಟು. ಅದೇ ರೀತಿ ಕೋಲಾರ ಜಿಲ್ಲೆಯಿಂದ, ಭೈರೇಗೌಡರು ಸಿಪಿಎಂ ಬೆಂಬಲದಿಂದ ಗೆದ್ದರು. ಅಲ್ಲೂ ಸಹ ಪಕ್ಷದ ಓಟು ಒಂದು ಸಾವಿರದ ಮೇಲೆ ಇರಲಿಲ್ಲ. 1971ರ ಇಂದಿರಾ ಬಿರುಗಾಳಿಯಲ್ಲೂ, ಕೊಣಂದೂರು ಲಿಂಗಪ್ಪ ಗೆದ್ದದ್ದು ದಾಖಲೆ. ಲಿಂಗಪ್ಪನವರೇ ಹೇಳುವ ಪ್ರಕಾರ, ಗೌಡರ ಪೋಟೋ ಹಿಡಿದುಕೊಂಡೇ ಓಟು ಕೇಳಿದ್ದರು. ಇದು ಲೋಹಿಯಾವಾದ!!!

೬

ಸುನಾಮಿ ಎಂಬ ಪದ 1971ರಲ್ಲಿ ಗೊತ್ತಿರಲಿಲ್ಲ. ಇಲ್ಲವಾದಲ್ಲಿ 1971ರ ಲೋಕಸಭಾ ಚುನಾವಣೆಯಲ್ಲಿ ಬಳಕೆಯಾದ ಪದ ಇಂದಿರಾ ಬಿರುಗಾಳಿ, ಸುನಾಮಿಯ ಮುಂದೆ ಪೇಲವವೇ. ರಾತ್ರೋರಾತ್ರಿ, ಪ್ರಸೋಪದ ಗುಡಿಸಲೂ, ಸಂಸೋಪದ ಪ್ಲೈವುಡ್ಡಿನ ಆಲದಮರವೂ ಕೊಚ್ಚಿ ಹೋಯಿತು. ಎಲ್ಲೆಲ್ಲೂ ಇಂದಿರಾ. ಬ್ಯಾಂಕ್ ರಾಷ್ಟ್ರೀಕರಣ, ಭೂ ಸುಧಾರಣೆ, ರಾಜಧನ ರದ್ದತಿ, ಗರೀಬಿ ಹಠಾವೊಗಳಲ್ಲಿ ಕಮ್ಯುನಿಸ್ಟರ ಟೆಂಟೂ ಕಿತ್ತು ಛಿದ್ರವಾಯಿತು.

ಕರ್ನಾಟಕದಲ್ಲೂ ಲಿಂಗಾಯಿತರು ಮಣ್ಣಾದರು. ಸಂಸೋಪದ ರಾಜ್ಯಾಧ್ಯಕ್ಷ ಅಜೀಜ್ ಸೇಠರು ರಾತ್ರೋ-ರಾತ್ರಿ ಇಂದಿರಾ ಕಾಂಗ್ರೆಸ್ ಆದರು. ಒಂದಿಷ್ಟು ದಿನಗಳಲ್ಲೇ ಪ್ರಸೋಪ ಸಾಮೂಹಿಕವಾಗಿ ಕಾಂಗ್ರೆಸ್‌ನೊಂದಿಗೆ ವಿಲೀನ ಆಯಿತು. ಆ ಪ್ರಸೋಪದ ಪಳೆಯುಳಿಕೆ ಎಸ್.ಎಂ. ಕೃಷ್ಣ, ಇನ್ನೂ ಅಧಿಕಾರ ಮೆಲ್ಲುತ್ತಿದ್ದಾರೆ.

1971ರ ಸುನಾಮಿಯಲ್ಲೂ ಸಂಸೋಪದ ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ಸಾರೇಕೊಪ್ಪ ಬಂಗಾರಪ್ಪ ಗೆದ್ದರು. ಕೊಣಂದೂರು ಒಟ್ಟು ಉಳಿದಿಬ್ಬರು ಕಾಂಗ್ರೆಸ್ ಪಾಲಾದರು. ಅಲ್ಲಲ್ಲಿ ಉಳಿದಿದ್ದ, ಮುನಿಸಿಪಾಲಿಟಿ ಮಟ್ಟದ ಸೋಷಲಿಸ್ಟರು-ವೇದಾಂತ ಹೆಮ್ಮಿಗೆ, ಶ್ರೀಕಂಠ ಶರ್ಮ, ಕುಸುಮಾಕರ ದೇಸಾಯಿ ಮುಂತಾದ ಚಿಲ್ಲರೆ ನಾಯಕರು 1977ರಲ್ಲಿ ಜನತಾ ಪಕ್ಷ ಆದರು. ಇಲ್ಲಿಗೆ ಲೋಹಿಯಾವಾದ ಗಲ್ಲು ಕಂಡುಕೊಂಡಿತು. ಲೋಹಿಯಾವಾದದ ಮರಣಗಲ್ಲು, ವೀರಗಲ್ಲುಗಳಿರಲಿ, ಕರ್ನಾಟಕದಲ್ಲಿ ಅದರ ಅಡಿಗಲ್ಲೂ ಇರಲಿಲ್ಲ.

೭

ಗೋಪಾಲಗೌಡರ ಕಳಕಳಿ, ನಿಸ್ಪೃಹತೆ, ಪ್ರಾಮಾಣಿಕತನಗಳ ಬಗ್ಗೆ ಮತ್ತೊಂದು ಮಾತಿಲ್ಲ. ಈ ಸೋಷಲಿಸ್ಟರ ಸಮಸ್ಯೆ ಏನೆಂದರೆ-ಸದಾ ಮಾತನಾಡುತ್ತಾ, ಜಗಳವಾಡುತ್ತಾ, ಒಡೆಯುತ್ತಾ ಹೋಗುತ್ತಾ, ಅದಕ್ಕೊಂದು ಸಿದ್ಧಾಂತ ಸೃಷ್ಟಿಸುತ್ತಾ ತಮ್ಮನ್ನು ತಾವೇ ಮೋಹಿಸಿಕೊಳ್ಳುತ್ತಾ ಇರುವ ವ್ಯಥೆ ಅವರದು. ಒಳ್ಳೆಯ ಜೀವನ ಶೈಲಿ ಇವರ ಅನಿವಾರ್ಯತೆ. ರಸಿಕತೆ, ರಂಜನೆ, ಮನರಂಜನೆ ಇವರ ಅತ್ಯವಶ್ಯಕತೆ. ಜೆ.ಎಚ್ ಪಟೇಲರು ಎಲ್ಲ ಲೋಹಿಯಾವಾದಿಗಳ ರೂಪಕ.

ಸೋಷಲಿಸ್ಟರ ಸಮಸ್ಯೆ ಏನೆಂದರೆ ಪಕ್ಷದ ಹೆಸರಿನಲ್ಲಿ ಸುಮಾರು ಜನರನ್ನ ಸಾಕಬೇಕಾಗುತ್ತಿತ್ತು. ಜಾರ್ಜ್, ರಮಾನಂದ ತಿವಾರಿ ಮುಂತಾದವರುಗಳು ಪ್ರತಿ ರಾಜ್ಯದಲ್ಲೂ ಒಂದಿಷ್ಟು ಜನರನ್ನು ಸಾಕುತ್ತಲೇ ಬಂದಿದ್ದರು. ಗೋಪಾಲಗೌಡರದ್ದೂ ಅದೇ ಸಮಸ್ಯೆ. ಬೆಂಗಳೂರಲ್ಲೇ ಪಾರ್ಟಿಗೆ ಸಂಬಂಧಿಸಿದಂತೆ 7-8 ಕುಟುಂಬಗಳನ್ನು ಸಾಕಬೇಕಿತ್ತು. ಇನ್ನು ಶಿವಮೊಗ್ಗ ಸಾಗರ, ತೀರ್ಥಹಳ್ಳಿಗಳಲ್ಲಿ ಎಷ್ಟೆಷ್ಟು ಸಮಸ್ಯೆಯಿತ್ತೋ ಗೊತ್ತಿಲ್ಲ. ಅವರ ಶಾಸಕರ ಸಂಬಳ ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಪಟೇಲ್, ಸೇಠ್, ಪಟ್ಟಾಭಿ ರಾಮರೆಡ್ಡಿ ಮುಂತಾದ ಶ್ರೀಮಂತರಿದ್ದರೂ ಕಷ್ಟವೇ ಇತ್ತು. ಹೀಗಾಗಿ ಸುಮಾರು ಜನ ಶೋಕಿಲಾಲರನ್ನು ಸಮಾಜವಾದಿಗಳನ್ನಾಗಿಸಿದ್ದರು. ಅನೇಕ ಜನ ಶ್ರೀಮಂತರನ್ನು ಅವರು, ಕಾಂಗ್ರೆಸ್ ವಿರೋಧದ ಹೆಸರಿನಲ್ಲಿ ಬೆಂಬಲಿಸುತ್ತಿದ್ದರು. ಅವರ ಒಡನಾಟ ಅನಿವಾರ್ಯವಾಗಿತ್ತು.

ಸೋಷಲಿಸ್ಟರ ಸಮಸ್ಯೆ ಏನೆಂದರೆ ಪಕ್ಷದ ಹೆಸರಿನಲ್ಲಿ ಸುಮಾರು ಜನರನ್ನ ಸಾಕಬೇಕಾಗುತ್ತಿತ್ತು. ಜಾರ್ಜ್, ರಮಾನಂದತಿವಾರಿ ಮುಂತಾದವರುಗಳು ಪ್ರತಿ ರಾಜ್ಯದಲ್ಲೂ ಒಂದಿಷ್ಟು ಜನರನ್ನು ಸಾಕುತ್ತಲೇ ಬಂದಿದ್ದರು. ಗೋಪಾಲ ಗೌಡರದ್ದೂ ಅದೇ ಸಮಸ್ಯೆ. ಬೆಂಗಳೂರಲ್ಲೇ ಪಾರ್ಟಿಗೆ ಸಂಬಂಧಿಸಿದಂತೆ 7-8 ಕುಟುಂಬಗಳನ್ನು ಸಾಕಬೇಕಿತ್ತು. ಇನ್ನು ಶಿವಮೊಗ್ಗ ಸಾಗರ, ತೀರ್ಥಹಳ್ಳಿಗಳಲ್ಲಿ ಎಷ್ಟೆಷ್ಟು ಸಮಸ್ಯೆ ಯಿತ್ತೋಗೊತ್ತಿಲ್ಲ. ಅವರ ಶಾಸಕರ ಸಂಬಳ ಯಾವುದಕ್ಕೂ ಸಾಕಾಗುತ್ತಿರಲಿಲ್ಲ.

ಇದು ಯಾವ ಅತಿರೇಕಕ್ಕೆ ಹೋಯಿತೆಂದರೆ, 1971ರ ಲೋಕಸಭಾ ಚುನಾವಣೆಯ ನಂತರ, ಬಹುಮತ ಕಳೆದುಕೊಂಡು ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ರಾಜೀನಾಮೆ ನೀಡಿದಾಗ, ಗೋಪಾಲಗೌಡರು ಅಳಿದುಳಿದ ಶಾಸಕರೊಂದಿಗೆ ತಮ್ಮ ನೇತೃತ್ವದಲ್ಲಿ ಸರಕಾರ ರಚನೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಜನ ನಕ್ಕರು. ಗೋಪಾಲಗೌಡರ ವಾದ-ರಾಷ್ಟ್ರಪತಿ ಆಡಳಿತ ಪ್ರಜಾಪ್ರಭುತ್ವದ ವಿರೋಧಿ. ಇದನ್ನು ಯಾರೂ ಒಪ್ಪಲಿಲ್ಲ. ಗೋಪಾಲಗೌಡರ ಹಿಂದೆ ದುಡ್ಡು ಹಿಡಿದ ಅನೇಕ ಶ್ರೀಮಂತರು, ಕಂಟ್ರಾಕ್ಟರುಗಳು ಇದ್ದರು. ಚುನಾವಣೆ ಒಪ್ಪಿಕೊಂಡ ಮೇಲೆ ಅದಕ್ಕೆ ತಕ್ಕ ಬೆಲೆ ತರಲೇಬೇಕು. ಗೋಪಾಲಗೌಡರೂ ಹೊರತಲ್ಲ. ಕಮ್ಯುನಿಸ್ಟರೂ ಅಲ್ಲ. ಗೋಪಾಲಗೌಡರು, 72ರ ಚುನಾವಣೆ ಮುಂಚೆಯೇ ತೀರಿಕೊಂಡರು. ರಂಜಕವಾಗಿ-ಮನರಂಜಕವಾಗಿ, ಮೋದಕವಾಗಿ-ಕುಹಕವಾಗಿ, ರೋಷವಾಗಿ-ವೀರಾವೇಷವಾಗಿ ಮಾತನಾಡಬಲ್ಲರು. ಚಪ್ಪಾಳೆ ಗಿಟ್ಟಿಸಬಲ್ಲರು. ಸಮಾಜವಾದ-ಮಜಾವಾದಗಳನ್ನು ಒಂದಕ್ಕೊಂದು ಕೊಂಡಿ ಹಾಕಬಲ್ಲರು. ಇವರನ್ನು ಲೋಹಿಯಾವಾದಿಗಳೆಂದು ಕರೆಯಬಲ್ಲರು. ಸಂಜೆಯಾಯಿತೆಂದರೆ, ರೇಸ್ ಕೋರ್ಸ್ ಎದುರಿಗಿದ್ದ 'ಸ್ವಿಸ್ ಕಾಟೇಜ್' ಎಂಬ ಬಾರಿನಲ್ಲಿ ಕಾಮಿನಿ ಎಂಬುವಳು ಹಾಡುತ್ತಿದ್ದಳು. ಪಟೇಲ್, ಎಂಡಿಎನ್ ಇತ್ಯಾದಿಗಳು ಅಲ್ಲಿ ರೆಗ್ಯುಲರ್.

೮

70ರ ದಶಕದ ಸಾಂಸ್ಕೃತಿಕ ಪೋತರಾಜರು.

ಕರ್ನಾಟಕದಲ್ಲಿ ಲೋಹಿಯಾವಾದ, ಲೋಹಿಯಾವಾದಿಗಳು ಹುಟ್ಟಿದ್ದು 1971ರ ಚುನಾವಣೆಗಳ ಸಂಸೋಪ ಮತ್ತು ಪ್ರಸೋಪಗಳು ವೀರಗಲ್ಲುಗಳಾದ ನಂತರವೇ. ಕಾರಣ 1960ರ ಮಧ್ಯದಲ್ಲಿ ರಾಷ್ಟ್ರಮಟ್ಟದಲ್ಲಾಗುತ್ತಿದ್ದ ಯಾವುದೇ ರಾಜಕೀಯ ಸಾಮಾಜಿಕ ಚಳವಳಿಗಳ

ಸೋಂಕೂ ಕರ್ನಾಟಕಕ್ಕೆ ತಟ್ಟಿರಲಿಲ್ಲ. ಕೇರಳ, ಆಂಧ್ರ, ಪಶ್ಚಿಮ ಬಂಗಾಳ, ಒರಿಸ್ಸಾಗಳಲ್ಲಿ ನಕ್ಸಲೀಯ ಚಳವಳಿ ಹರಡಿತ್ತು. ಬಿಹಾರ, ಉತ್ತರ ಪ್ರದೇಶಗಳಲ್ಲಿ ಸಮಾಜವಾದಿ ಪಕ್ಷ ಬೆಳೆದಿತ್ತು. ಆಂಧ್ರದಲ್ಲಿ ದಿಗಂಬರ ಕಾವ್ಯ, ಮಹಾರಾಷ್ಟ್ರದಲ್ಲಿ ದಲಿತ್ ಪ್ಯಾಂಥರ್ಸ್, ಬಂಗಾಳದಲ್ಲಿ ಕಮ್ಯುನಿಸಂ ಪ್ರೇರಿತ ಸಾಂಸ್ಕೃತಿಕ ಚಳವಳಿ ತೀವ್ರವಾಗಿ ಬೆಳೆದಿತ್ತು. 1971ರಲ್ಲಿ ಸಹ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ, ಬಾಂಗ್ಲಾದೇಶದ ಬಿಡುಗಡೆ, ಭೂ ಸುಧಾರಣೆ ಘೋಷಣೆಗಳಿಂದ ಇಂದಿರಾ ಗಾಂಧಿ ಕಾಳಿ, ದುರ್ಗ, ಚಂಡಿ–ಚಾಮುಂಡಿ ಆದದ್ದರ ಜೊತೆಗೆ ಬಹು ಭಾರತೀಯರ ಅಮ್ಮನೂ ಆದರೂ.

ಆದರೆ 1971ರ ಚುನಾವಣೆಯಲ್ಲಿ ಕವಿ ಗೋಪಾಲಕೃಷ್ಣ ಅಡಿಗ, ಬೆಂಗಳೂರಲ್ಲಿ ಭಾರತೀಯ ಜನಸಂಘದ ಅಭ್ಯರ್ಥಿ. ಲಂಕೇಶ್, ಕಿರಂ, ಮರುಳುಸಿದ್ದಪ್ಪ, ಇವರೆಲ್ಲಾ ಅಡಿಗರ ಪ್ರಚಾರ ನಡೆಸಿದರು. ನಿರೀಕ್ಷಿಸಿದಂತೆ. ಅಡಿಗರು ಸೋತರು. ಇದು ಕರ್ನಾಟಕದ ಸಾಂಸ್ಕೃತಿಕ ಪರಿಸರ. ಅಡಿಗರು ಕರ್ನಾಟಕದ 'ಸಾಕ್ಷಿ' ಪ್ರಜ್ಞೆ ಆಗಿದ್ದರು. ಜೊತೆಗೆ ಜನ ಸಂಘದ ಮಹಾಮೈತ್ರಿಯಲ್ಲಿ, ಸಂಸ್ಥಾ ಕಾಂಗ್ರೆಸ್, ಸ್ವತಂತ್ರ ಪಕ್ಷಗಳ ಜೊತೆ ಸಂಸೋಪ ಸಹ ಇತ್ತು.

ಭಾರತ ಬಿಟ್ಟರೆ ಸೋಷಲಿಸ್ಟರು ಇದ್ದದ್ದು ಪಶ್ಚಿಮ ಜರ್ಮನಿಯಲ್ಲಿ ಮಾತ್ರ. ಮೈಸೂರಿನಲ್ಲೇ ಪದವಿಯವರೆಗೆ ಓದಿದ್ದರೂ, ಜರ್ಮನಿಯಲ್ಲಿ ಕಾನೂನು ಓದಿದ್ದ ಎಂಡಿ ಎನ್ ಭಾರತಕ್ಕೆ ಬರುವಾಗಲೇ ತಮ್ಮೊಂದಿಗೆ ಬ್ರಾಹ್ಮಣದ್ವೇಷವನ್ನು ಧಾರಾಳವಾಗಿಯೇ ತಂದಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷಗಳನ್ನು ಮತ್ತು ಬ್ರಾಹ್ಮಣ ಮಠಗಳನ್ನು ಪ್ರತ್ಯೇಕಿಸಿ ನೋಡುವ ಪ್ರಮೇಯವೇ ಇಲ್ಲ. ಎರಡೂ ಒಂದೇ. ಜಾತಿ ಹೋರಾಟವಾಗದೆ, ಸಾಮಾಜಿಕ ಹೋರಾಟ ಇಲ್ಲವೇ ಇಲ್ಲ.

೬

ನವ್ಯರ ಸ್ಟಾಕ್ ಮುಗಿಯಲೇ ಬೇಕಿತ್ತು. 1970ರಲ್ಲಿ ಅದು ಶುರುವಾಯಿತು. 'ಸಂಸ್ಕಾರ' ಚಲನಚಿತ್ರ ಬಿಡುಗಡೆ. ಕನ್ನಡ ಚಿತ್ರರಂಗವನ್ನೇ ಅಲ್ಲೋಲ–ಕಲ್ಲೋಲಗೊಳಿಸಿತ್ತು. 1970ರಲ್ಲಿ ಬಿ.ವಿ ಕಾರಂತರು ಬೆಂಗಳೂರಿನಲ್ಲೇ ನೆಲೆಸಲು ಬಂದರು. ಅವರ ಜೊತೆಗೆ ರಂಗಭೂಮಿಗೆ ಹಾಡು–ಕುಣಿತಗಳು ಬಂದವು. ಬರೆಯುವುದಕ್ಕಿಂತ ಹಾಡುವುದರಲ್ಲೇ ಗುಣವಂತರಾದ ಕಂಬಾರರೂ ಬೆಂಗಳೂರಿಗೆ ಬಂದರು. ದೇವನೂರು, ಕೃಷ್ಣ ಆಲನಹಳ್ಳಿ ಕತೆಗಳು, ಲಂಕೇಶರನ್ನು 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಬರೆಯುವಂತೆ ಮಾಡಿತು. ಕಾರಂತರಿಂದಾಗಿ ಏಕಾಂಕಗಳ ಅಸಂಗತೆ ಕೊನೆಗೊಂಡು, ಹಾಡು–ಕುಣಿತಗಳ 'ಸಂಕ್ರಾಂತಿ' ಬಂತು. 'ತೆರೆಗಳು', 'ಸಿದ್ದತೆ', 'ಯಮನ ಪ್ರಶ್ನೆ' ಮುಂತಾದ ಹೆಣ್ಣು ಪಾತ್ರಗಳಿಲ್ಲದ ನಾಟಕಗಳು ಅಂತರ ಕಾಲೇಜು ನಾಟಕ ಸ್ಪರ್ಧೆಗೆ ಮಾತ್ರ ಸೀಮಿತವಾದವು. ಕಂಬಾರರು ಹಾಡಿದರು. ಕಾರಂತರು ಕುಣಿದರು. ತೇಜಸ್ವಿ ಕಾಡು ಸೇರಿದರು. ದಲಿತರು ನೇರವಾಗಿ ಹೊಡಿ–ಬಡಿ, ರಕ್ತ–ಕೀವು ಅಂತೆಲ್ಲ ಬರೆಯುವದರಿಂದ ನವ್ಯರ ಇಂಗ್ಲೀಷ್ ಹಾವಳಿ ಮುಗಿಯಿತು.

1960ರ ಮಧ್ಯದ ವೇಳೆಗೆ ಅಡಿಗರ ಕಾವ್ಯ ಒಂದು ನಿರ್ಧಾರ ಮಟ್ಟವಾಗಿತ್ತು. ಅನಂತಮೂರ್ತಿ, ಲಂಕೇಶ್, ರಾಮಚಂದ್ರ ಶರ್ಮ, ರಾಮಾನುಜನ್–ನವ್ಯರೆಲ್ಲ ಇಂಗ್ಲೀಷ್ ಅಧ್ಯಾಪಕರೇ ಆಗಿದ್ದರು. ಕಾವ್ಯದ ಮಾನದಂಡ ಅಡಿಗ ಪೂರ್ವ, ಅಡಿಗ ಮತ್ತು ಅಡಿಗೋತ್ತರವಾಗಿತ್ತು. ನವ್ಯರಲ್ಲಿ ಬಹುತೇಕರು ಬ್ರಾಹ್ಮಣರು. ಕನ್ನಡದಲ್ಲಿ ಪಾಂಡಿತ್ಯವಿಲ್ಲದ ಕೆಲವು ಬ್ರಾಹ್ಮಣರೇತರ ತರುಣರು ನವ್ಯವನ್ನು ನಂಬಬೇಕಾಯಿತು. ಲಂಕೇಶ್, ತೇಜಸ್ವಿ, ಚಂಪಾ,.. ಇತ್ಯಾದಿ. ಇವರಿಗೆ ಮನ್ನಣೆ ದೊರಕಬೇಕಾದ್ದೆ ನವ್ಯದಿಂದ ಕನ್ನಡ. ಪಂಡಿತರು ಇವರನ್ನು ಒಪ್ಪಲು ಖಡಾಖಂಡಿತವಾಗಿ ನಿರಾಕರಿಸಿದ್ದರು.

ಬ್ರಾಹ್ಮಣೇತರರ ಹಾವಳಿಯಿಂದಾಗಿ, ಬುದ್ದಿವಂತರಾಗಿದ್ದೂ ಕೆಲಸ ಸಿಕ್ಕದ ಪರಿಸ್ಥಿತಿ ಬ್ರಾಹ್ಮಣರಿಗಾಯಿತು. ಕನ್ನಡಿಂಗ್ಲೀಷ್ ಲೇಖಕರಾದ ರಾಮಚಂದ್ರ ಶರ್ಮ, ರಾಮನುಜನ್, ಕಾಮರೂಪಿ, ಸುಮತೀಂದ್ರ ನಾಡಿಗ, ರಾಜೀವ್ ತಾರಾನಾಥ್, ಕುರ್ತುಕೋಟಿ, ಶಂಕರ ಮೊಕಾಶಿ, ಜಿ.ಎಸ್ ಅಮೂರ್, ಎಂ. ಜಿ. ಕೃಷ್ಣಮೂರ್ತಿ ಇವರೆಲ್ಲಾ ರಾಷ್ಟ್ರದ್ಯಂತ ಗುಳೇ ಹೊರಟಿದ್ದರಿಂದ, ಇಲ್ಲೇ ಉಳಿದ ಚಂಪಾ, ಲಂಕೇಶ್, ಪೋಲಂಕಿ ಮುಂತಾದವರಿಗೆ ಇಂಗ್ಲೀಷ್ ಬಲ್ಲವರಲ್ಲೂ ಮನ್ನಣೆ ಇರಲಿಲ್ಲ. ಕನ್ನಡದ ಮಡಿವಂತರು ಇವರ ಬೆನ್ನು ತಟ್ಟಲಿಲ್ಲ. ಲಂಕೇಶರ 'ಬಿರುಕು' ಕಾದಂಬರಿಯ ಖುದ್ದು ಲಂಕೇಶರೇ ಆಗಿದ್ದರು. ಅನಂತಮೂರ್ತಿಗಳು ಮಾತ್ರ ಅಲ್ಲಿಯೂ ಸಲ್ಲುವಂತಿದ್ದರು. ಇಲ್ಲಿಯೂ ಇದ್ದರು. 'ಇಂಗ್ಲೀಷ್ ಬ್ರಾಹ್ಮಣ–ಕನ್ನಡ ಶೂದ್ರ ಅಂತೆಲ್ಲ ರೋಮ್ಯಾಂಟಿಕ್ ಆಗಿ ಬರೆದು ಒಂದು ಜನಾಂಗ ಇಂಗ್ಲಿಷ್ ಕಲಿಯದಂತೆ ಪ್ರೇರೇಪಿಸಿ ಅವರನ್ನು ಹಾಳು ಮಾಡಿದರು.

ಈ ನವ್ಯರ ಓದುಗರ ಸಂಖ್ಯೆ ಎಷ್ಟಿತ್ತೆಂದರೆ, ಅಡಿಗರ 'ಭೂಮಿಗೀತ' 'ಚಂಡ ಮದ್ದಳೆ' ಸಂಕಲನಗಳು ಪ್ರಕಟಗೊಂಡು 10–12 ವರ್ಷಗಳಾದರೂ, ಮಾರಾಟ ಒಂದು ಸಾವಿರ ಪ್ರತಿ ದಾಟಿರಲಿಲ್ಲ. ಲಂಕೇಶರ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', 'ನಾನಲ್ಲ' –200ರ ಮೇಲೆ ಖರ್ಚಾಗಲಿಲ್ಲ. ಅನಂತಮೂರ್ತಿ, ಶರ್ಮ, ನಾಡಿಗ ಇವರ ಪುಸ್ತಕಗಳೂ 200ರ ಗಡಿ ದಾಟಿರಲಿಲ್ಲ. 'ಸಂಸ್ಕಾರಕ್ಕೆ ನವ್ಯದ ಹಣೆ ಪಟ್ಟಿ ಇದ್ದರೂ, ಅದು ವಾಸ್ತವವಾದಿ ಕಾದಂಬರಿಯೇ ಆಗಿದ್ದರಿಂದ ಮತ್ತು ಸಿನಿಮಾ ಆದ್ದರಿಂದ ಸಿನಿಮಾ ಆದಮೇಲೆಯೇ 2 ನೆಯ ಮುದ್ರಣ ಕಂಡದ್ದು. ಈ ನವ್ಯರ ಭ್ರಮೆ, ಆಟಾಟೋಪ ಎಷ್ಟಿತ್ತೆಂದರೆ, ಯೂರೋಪಿನ 2ನೇ ಮಹಾಯುದ್ಧದ ಅನಾಥತೆ, ಒಬ್ಬಂಟಿತನ, ಸಮಾಜವನ್ನು ಸಂಪೂರ್ಣವಾಗಿ ಧಿಕ್ಕರಿಸುವುದನ್ನು, ಬಳೇಪೇಟೆ, ಮೆಜೆಸ್ಟಿಕ್ ಪ್ರದೇಶಗಳಿಗೆ ತರುವ ಹುಂಬತನ ಇವರಲ್ಲಿತ್ತು. ವಿಮರ್ಶೆ ಸಹ ಯುರೋಪಿಯನ್ ಮೀಮಾಂಸೆಗಳ ನಿರ್ಧಾರವಾಗ ಬೇಕಾಗಿತ್ತು. ಲಿವಿಸ್, ಎಲಿಯಟ್ ಅಷ್ಟೇ ಸತ್ಯ. ಪಂಪ, ಕುವೆಂಪು, ತಿನಂಶ್ರೀ ಲೆಕ್ಕಕ್ಕೇ ಇರಲಿಲ್ಲ.

1971ರ ಒಂದು ಘಟನೆ ಈ ನವ್ಯರ ಚಡ್ಡಿ ಬಿಚ್ಚಿಸಿ ಬೀದಿಯಲ್ಲಿ ಅಟ್ಟಾಡಿಸಿತು. ಲಂಕೇಶ್ 'ಅಕ್ಷರ ಹೊಸ ಕಾವ್ಯ' ತಂದರು. ಅಕ್ಷರ ಪ್ರಕಾಶನದ್ದು. ಇದು ಇಂಗ್ಲೆಂಡಿನ ಫೇಬರ್ಸ್ ಪ್ರಕಾಶನದ 'Faber's modern verse' ಎಂಬುದರ ಕೆಟ್ಟ ಕಾಪಿ. ಹೆಸರಿನಲ್ಲೇ ಕಾಪಿ ಹೊಡೆದಿದ್ದರು. ಇದರ ಬಗ್ಗೆ 'ಕನ್ನಡ ಪ್ರಭ'ದ ಕುಹಕಿಗಳು ಒಂದು ಬಹು ಧೀರ್ಘ ಚರ್ಚೆ ನಡೆಸಿ, ಲಂಕೇಶರನ್ನು ಅಟ್ಟಾಡಿಸಿದರು. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ ಸಹ ಇದರಲ್ಲಿ ಭಾಗಿಯಾಗಿದ್ದರು. ಆ ಸಂದರ್ಭದಲ್ಲಿ ಓದುಗರೊಬ್ಬರು, ಲಂಕೇಶರು ತಮ್ಮ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಕಥಾ ಸಂಕಲನದ ಮುಖಪುಟವನ್ನೂ ಸಹ ಇಂಗ್ಲಿಷ್ ಕಥಾ ಸಂಕಲನವೊಂದರಿಂದ ಕದ್ದಿದ್ದಾರೆ ಎಂದು ಬರೆದು, ಎರಡರ ಮುಖಪುಟವನ್ನೂ ಪ್ರಕಟಿಸಿದರು. ಆ ವೇಳೆಗೆ ವಿಶ್ವವಿದ್ಯಾಲಯದ ಅವ್ಯವಹಾರದಲ್ಲಿ ಅವರ ಮೇಲಿನ ಆರೋಪಕ್ಕೆ 'ಪ್ರಜಾವಾಣಿ' ಸಾಕಷ್ಟು ಪ್ರಚಾರ ಕೊಟ್ಟಿದ್ದರು. ಲಂಕೇಶರ ಬ್ರಾಹ್ಮಣ ದ್ವೇಷ ಖಾಯಂ ಆಯಿತು. ಅದಕ್ಕಾಗಿಯೇ ಕಾಯುತ್ತಿದ್ದ, ಅದೇ ಪರಿಸ್ಥಿತಿಯಲ್ಲಿದ್ದ ಚಂಪಾ, ಲಂಕೇಶರ ಪರವಾಗಿ ತೋಳು ಮಡಿಚಿದರು. ಇಂಗ್ಲೀಷ್ ಮೇಷ್ಟರಾಗಿಯೂ, ಇಂಗ್ಲೀಷ್ ಒಗ್ಗದ, ಕೀಳರಿಮೆಗಳಿಂದ ಕೊರಗುತ್ತಿದ್ದ ರಾಜ್ಯದ ವಿಶ್ವವಿದ್ಯಾಲಯದ ಬುದ್ದಿ ಜೀವಿಗಳು ತಮ್ಮ ಭಾರ ತಡೆಯಬಲ್ಲ, ವೇದಿಕೆ ಕಟ್ಟಲಾರಂಭಿಸಿದರು.

ಈ ಸಂದರ್ಭದಲ್ಲೇ ಭೈರಪ್ಪನವರ ಮೂರು ಕಾದಂಬರಿಗಳು ತಲಾ ನಾಲ್ಕೈದು ಮುದ್ರಣ ಕಂಡು ಐದು ಸಾವಿರ ಪ್ರತಿಗಳು ಖರ್ಚಾಗಿದ್ದವು. ಕುವೆಂಪು ಕವಿಯೇ ಅಲ್ಲ ಎಂಬ ಬ್ರಾಹ್ಮಣ ಕನ್ನಡ ಪಂಡಿತರ ತಿರಸ್ಕಾರವನ್ನು ಅಡಿಗ ಅನುಯಾಯಿಗಳು ಮುಂದುವರೆಸಿದ್ದರು. ಕುವೆಂಪು ಅನುಯಾಯಿಗಳಾದ ಹಾಮಾ ನಾಯಕ, ಜವರೇ ಗೌಡರಿಂದಾಗಿ ಕುವೆಂಪು ಒಕ್ಕಲಿಗ ಕವಿಯಾಗಿ ಸನ್ಯಾಸತ್ವ ಸ್ವೀಕರಿಸಿದ್ದರು. ಆಗಲೇ ಕಾಡಿನಿಂದ ತೇಜಸ್ವಿ "ಅಬಚೂರಿನ ಪೋಸ್ಟಾಫೀಸು" ಬರೆದರು.

ಧರೆಗಿಳಿದು ಬಂದ ಪ್ರಭಾವಿ–ಎಂ.ಡಿ. ನಂಜುಂಡ ಸ್ವಾಮಿ:

ಈ ಆತಂಕದ ಪರಿಸ್ಥಿತಿಯಲ್ಲೇ, ಜನತೆ ತತ್ತರಿಸುತ್ತಿರುವಾಗ ದೇವರು ತನ್ನ ಪ್ರವಾದಿಯನ್ನು ಜನರ ಉದ್ಧಾರಕ್ಕಾಗಿ ಭೂಮಿಗೆ ಕಳಿಸಿದನು ಎನ್ನುವಂತೆ ಅವರು ಬಂದರು. ತ್ರೀ ಪೀಸ್ ಸೂಟು, ಬೊ ಟೈ, ಡಿಸೈನರ್ ಮಾದರಿಯ ಗಡ್ಡ, ಪಾಲೀಷಿನಿಂದ ಹೊಳೆಯುವ ಷೂ, ಬಾಯಲ್ಲಿ ಪೈಪ್–ಜರ್ಮನಿಯಿಂದ ಬಂದರು. ಪ್ರವಾದಿಯ ಕನ್ನಡದಂತೆ ಕೇಳುತ್ತಿದ್ದ ಕನ್ನಡವನ್ನು ಅವರು ಆಡುತ್ತಿದ್ದರು. ಇವರೇ ಎಂ.ಡಿ. ನಂಜುಂಡಸ್ವಾಮಿ–1967–68ರಲ್ಲಿರಬೇಕು.

ಭಾರತ ಬಿಟ್ಟರೆ ಸೋಷಲಿಸ್ಟರು ಇದ್ದದ್ದು ಪಶ್ಚಿಮ ಜರ್ಮನಿಯಲ್ಲಿ ಮಾತ್ರ. ಮೈಸೂರಿನಲ್ಲೇ ಪದವಿಯವರೆಗೆ ಓದಿದ್ದರೂ, ಜರ್ಮನಿಯಲ್ಲಿ ಕಾನೂನು ಓದಿದ್ದ ಎಂಡಿಎನ್ ಭಾರತಕ್ಕೆ ಬರುವಾಗಲೇ ತಮ್ಮೊಂದಿಗೆ ಬ್ರಾಹ್ಮಣದ್ವೇಷವನ್ನು ಧಾರಾಳವಾಗಿಯೇ ತಂದಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷಗಳನ್ನು ಮತ್ತು ಬ್ರಾಹ್ಮಣ ಮಠಗಳನ್ನು ಪ್ರತ್ಯೇಕಿಸಿ ನೋಡುವ ಪ್ರಮೇಯವೇ ಇಲ್ಲ. ಎರಡೂ ಒಂದೇ. ಜಾತಿ ಹೋರಾಟವಾಗದೆ, ಸಾಮಾಜಿಕ ಹೋರಾಟ ಇಲ್ಲವೇ ಇಲ್ಲ. ಇದು ಅವರ ಗಾಢ ನಂಬಿಕೆ. ಮೈಸೂರಿನಲ್ಲಿ ತೇಜಸ್ವಿ ಇವರೊಡನೆ ಮುಸುಕು ಹಾಕಿಕೊಂಡು ದನಿ ಕೂಡಿಸಿದರು. ಒಂದು ಸಣ್ಣ ಡೀಲು ಕುದುರಿತು. ತೇಜಸ್ವಿ ಕಾಡಿಗೆ ಹೊರಟ ನಂತರ, ಎಂಡಿಎನ್ ಬೆಂಗಳೂರಿಗೆ ಬಂದರು.

ಅಣ್ಣಮ್ಮ ಗುಡಿಯ ಎದುರಿನ ಸಂಸೋಪದ ಕಛೇರಿ ನೋಡಿ ಅವರಿಗೆ ದೊಡ್ಡ ಶಾಕ್. ಇಲ್ಲಿ ಇದ್ದದ್ದೂ ಬ್ರಾಹ್ಮಣರೆ–ಎಸ್. ವೆಂಕಟ್ರಾಂ, ಬಂದಗದ್ದೆ ರಮೇಶ, ಖಾದ್ರಿ ಶಾಮಣ್ಣ, ಬಾಸು ಕೃಷ್ಣಮೂರ್ತಿ, ಶ್ರೀಕಂಠ ಶರ್ಮ..

ಇತ್ಯಾದಿ. ಅದಕ್ಕಿಂತ ಹೆಚ್ಚಾಗಿ ಪಟೇಲ್, ಶಾಂತವೇರಿ ಗೋಪಾಲ ಗೌಡ, ಮಹೇಶ್ವರಪ್ಪ–ಮುಂತಾದವರು ಬ್ರಾಹ್ಮಣರೊಡನೆ ಪ್ರೀತಿ ವಿಶ್ವಾಸದಿಂದಲೇ ಇದ್ದದ್ದು. ಏನೇನು ಮಾಡಿದರೂ, ಎಂಡಿಎನ್ ತಮ್ಮ ಬ್ರಾಹ್ಮಣ ದ್ವೇಷವನ್ನು ಬಿತ್ತಿ ಬೆಳೆಸುವಲ್ಲಿ ಸೋತು ಸುಣ್ಣವಾದರು. ಅಷ್ಟೇ ಅಲ್ಲ 72ರ ಬಳ್ಳಾರಿ ರಾಜ್ಯ ಮಟ್ಟದ ಅಧಿವೇಷನದಲ್ಲಿ ಪಟ್ಟಾಭಿ ರಾಮರೆಡ್ಡಿ, ಸ್ನೇಹಲತಾ ವಿರುದ್ಧ ಏನೇನೋ ಮಾತನಾಡಿದಕ್ಕೆ, ಪಟೇಲರು ಅವರನ್ನು ಅನಾಮತ್ತಾಗಿ ಎತ್ತಿಸಿ ಹೊರ ಹಾಕಿಸಿದರು. ಎಂಡಿಎನ್‌ಗೆ ಸಂಸೋಪದ ಭ್ರಮೆ ಹೋಯಿತು.

ಎಂಡಿಎನ್‌ಗೆ ಅವರೇ ಒಂದು ಶಕ್ತಿಯಾಗಬೇಕಾದ್ದು ಅನಿವಾರ್ಯವಾಯಿತು. 73–74ರಲ್ಲಿ ಇಡೀ ರಾಜ್ಯದಲ್ಲಿ ಅವರಿಗಿದ್ದದ್ದು ಮೂರುವರೆ ಅನುಯಾಯಿಗಳು. ಮೆಡಿಕಲ್ ವಿದ್ಯಾರ್ಥಿಗಳಾಗಿದ್ದ ಈಗಿನ ಡಾ॥ ಲಕ್ಷ್ಮೀಪತಿ ಬಾಬು ಮತ್ತು ಡಾ॥ ವೆಂಕಟಸ್ವಾಮಿ ಬೆಂಗಳೂರಲ್ಲಿ, ಧಾರವಾಡದಲ್ಲಿ 'ಆಂದೋಲನ'ದ ರಾಜಶೇಖರ್ ಕೋಟಿ. ಇನ್ನು ಉಳಿದ ಅರ್ಧ ಎಂದರೆ ಈಗಿನ ಪ್ರೊ. ರವಿವರ್ಮ ಕುಮಾರ್ ಅವರು ಆಗಿನ್ನೂ ಕಾನೂನು ವಿದ್ಯಾರ್ಥಿ.

1970ರ ದಶಕದ ಶೈಕ್ಷಣಿಕ ಪರಿಸರವನ್ನು ಸ್ವಲ್ಪ ತಿಳಿಯಬೇಕು. ಮೈಸೂರು ವಿಶ್ವ ವಿದ್ಯಾಲಯ ಒಕ್ಕಲಿಗರ ಕೋಟೆಯಾಗಿತ್ತು. ಕರ್ನಾಟಕ ವಿ.ವಿ ಶರಣರ ಅನುಭವ ಮಂಟಪವಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಹು ಸಂಖ್ಯಾತ ರೆಡ್ಡಿ, ಒಕ್ಕಲಿಗ ಮತ್ತು ಅಲ್ಪ ಸಂಖ್ಯಾತ ಲಿಂಗಾಯಿತರ ಹೋರಾಟ ನಡೆದಿತ್ತು. ಈ ಮೂರೂ ವಿಶ್ವವಿದ್ಯಾಲಯಗಳಲ್ಲಿ ಬಹುತೇಕರು ಕೆಲಸ ಗಿಟ್ಟಿಸಿಕೊಂಡದ್ದು ಬ್ರಾಹ್ಮಣೇತರ ಆಧಾರದ ಮೇಲೆಯೇ. ಲಂಕೇಶ್ ಸಹ ಅದೇ ಕೋಟಾದಲ್ಲಿ ಸೆಂಟ್ರಲ್ ಕಾಲೇಜು ಸೇರಿದ್ದು. ಬಹುಶಃ ಇವರು, ಪ್ರಥಮ ಲಿಂಗಾಯಿತ ಇಂಗ್ಲೀಷ್ ಉಪನ್ಯಾಸಕರಾಗಿದ್ದಿರಬಹುದು. ಬೇರೆ ಎಲ್ಲೂ ಲಿಂಗಯಿತರು ಇಂಗ್ಲೀಷ್ ವಿಭಾಗಕ್ಕೆ ಲಗ್ಗೆ ಇಟ್ಟದ್ದು, ನನಗೆ ತಿಳಿಯದು. ಹಿಂದುಳಿದ ವರ್ಗ, ದಲಿತರು ಲೆಕ್ಕಕ್ಕೇ ಇರಲಿಲ್ಲ. 1973ರಲ್ಲಿ ಡಾ॥ ಎಚ್ಚೆನ್ ಕುಲಪತಿ ಆಗುವವರೆಗೆ, ಇವೆಲ್ಲ ನಡದೇ ಇತ್ತು.

ರಾಜಕೀಯ ಯಾರಿಗೂ ಬೇಕಿರಲಿಲ್ಲ. ಮೆರಿಟ್ ಇದ್ದೋ ಇಲ್ಲದೆಯೋ ಕೆಲಸ ಸಿಗುತ್ತಿತ್ತು.–ಇದು ವಿಶ್ವವಿದ್ಯಾಲಯಗಳ ಬುದ್ಧಿ ಜೀವಿಗಳ ಕುರಿತು. ರಾಜಕೀಯ ಪ್ರಜ್ಞೆ ಕಟ್ಟಿಕೊಂಡು ಯಾರಿಗೇನಾಗಬೇಕಿತ್ತು. 1970ರವರೆಗೆ ಕೆಲವು ಮಾರ್ಕ್ಸಿಸ್ಟ್ ಮತ್ತು ಆರ್‌ಎಸ್ಸೆಸ್‌ಗಳನ್ನು ಬಿಟ್ಟರೆ, ಬೇರೆ ಯಾರಿಗೂ ರಾಜಕೀಯದ ಅವಶ್ಯಕತೆಯಿರಲಿಲ್ಲ. ನನಗೆ ನೆನಪಿದ್ದ ಹಾಗೆ, 1970ಕ್ಕೂ ಮೊದಲು ರಾಜಕೀಯದಲ್ಲಿ ಒಂದಿಷ್ಟು ಗೆಳೆಯರಿದ್ದದ್ದು ಅನಂತಮೂರ್ತಿ ಮತ್ತು ಲಂಕೇಶ್‌ಗೆ ಮಾತ್ರ, ಇಬ್ಬರಿಗೂ, ಸಮಾಜವಾದಿ ಪಕ್ಷದ ಮುಖಂಡರ ಪರಿಚಯವಿತ್ತು. ಇಬ್ಬರೂ ಶಿವಮೊಗ್ಗದವರು. ಅನಂತಮೂರ್ತಿಗಳಿಗಂತೂ ಗೋಪಾಲಗೌಡ, ಪಟೇಲರು ಏಕವಚನದ ಸ್ನೇಹಿತರು ಲಂಕೇಶ್‌ಗೆ ಮಲೆನಾಡಿನ ನಂಟು. ಆಗ ಲೋಹಿಯಾ ರಾಜಕಾರಣಿಯಾಗಿ ಮಾತ್ರ ಕಾಣುತ್ತಿದ್ದರು. ಲೋಹಿಯಾವಾದ, ವಾದಿ ಎಂದೆಲ್ಲ ಪ್ರಚಲಿತವಿರಲಿಲ್ಲ. ಒಳ್ಳೆಯ ಮೇಷ್ಟ್ರು, ಕೆಟ್ಟ ಮೇಷ್ಟ್ರು ಎಂದಷ್ಟೇ ಇದ್ದದ್ದು.

1970ರಲ್ಲೇ ಕುವೆಂಪು ಅವರಿಗೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ಬಂತು. ರಾಮಾಯಣ ದರ್ಶನವನ್ನು ಆನೆಯ ಮೆಲಿಟ್ಟು ಮೆರವಣಿಗೆ ನಡೆಯಿತೇ ಹೊರತು, ಅದರ ಶ್ರೇಷ್ಠತೆಯನ್ನು ಶೂದ್ರ ವಿರೋಧಿಗಳು ಒಪ್ಪಲಿಲ್ಲ. ನವ್ಯರಂತೂ ಅದನ್ನು ಅಸಡ್ಡೆಯಿಂದಲೇ ಕಂಡರು. ಜೊತೆಗೆ, ಜ್ಞಾನಪೀಠ ಪ್ರಶಸ್ತಿ, ಈಗಿನಷ್ಟು ಪ್ರಸಿದ್ಧವೂ ಆಗಿರಲಿಲ್ಲ. ಒಂದಿಷ್ಟು ಕರ್ಮಠರು ಕುವೆಂಪು ಒಳ್ಳೆಯ ಕಾದಂಬರಿಕಾರ ಕಣ್ರಯ್ಯ ಎಂದು ಹೇಳಿ, ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಿಗೆ ರಿಯಾಯಿತಿ ತೋರಿಸುತ್ತಿದ್ದರು. ಕುವೆಂಪು ಅವರ ನಾಟಕಗಳನ್ನು ಯಾರೂ ಆಡುತ್ತಿರಲಿಲ್ಲ. ಕಾರಣ ಅವರ ಬ್ರಾಹ್ಮಣ ವಿರೋಧಿ ನಿಲುವು. ಜೊತೆಗೆ ಕಾಲೇಜು ಮೇಷ್ಟ್ರುಗಳು, ಆ ನಾಟಕಗಳಿಗೆ ಕಾಸ್ಟ್ಯೂಮ್ ಬಾಡಿಗೆ ತರಬೇಕ್ರಯ್ಯ, ದುಡ್ಡಿಲ್ಲ ಎನ್ನುತ್ತಿದ್ದರು.

ಆಗಿನ ಸಾಹಿತ್ಯ ಶ್ರೇಷ್ಠರ ಪಟ್ಟಿಯಲ್ಲಿ ಕವಿಯಾಗಿ ಅಡಿಗ, ಬೇಂದ್ರೆ ಜನಪ್ರಿಯತೆಯಲ್ಲಿ ಕೆ.ಎಸ್. ನರಸಿಂಹಸ್ವಾಮಿ, ರಾಜರತ್ನಂ, ಕತೆಯಲ್ಲಿ, ಗದ್ಯದಲ್ಲಿ ಮಾಸ್ತಿ, ಕಾದಂಬರಿಯಲ್ಲಿ ಶಿವರಾಮ ಕಾರಂತ, ರಾವ್ ಬಹಾದ್ದೂರ್, ನಾಟಕದಲ್ಲಿ ಶ್ರೀರಂಗ, ಕೈಲಾಸಂ, ಜನಪ್ರಿಯತೆಯಲ್ಲಿ ಅನಕೃ ತರಾಸು, ತ್ರಿವೇಣಿ, ಎಂ ಕೆ. ಇಂದಿರಾ, ಭೈರಪ್ಪ, ನಿರಂಜನ ಮುಂತಾದವರು ಇದ್ದರು. ಲಂಕೇಶ್ ಒಂದೆರೆಡು ಒಳ್ಳೆಯ ಕತೆಗಳನ್ನು ಬರೆದಿದ್ದಾನಯ್ಯ ಎಂದು ಅಡಿಗರು ಹೇಳಿದ್ದರೇ ಹೊರತು, ತೇಜಸ್ವಿಯ ಬಗ್ಗೆ ಸಹ ಈ ರೀತಿ ಮಾತನಾಡಿದ ನೆನಪಿಲ್ಲ. ಇನ್ನು ಸಂಗೀತ, ಚಲನ ಚಿತ್ರ, ಚಿತ್ರಕಲೆ, ಪತ್ರಿಕೋದ್ಯಮಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ಎನ್ನುವಂತಾಗಿತ್ತು. ದೇಜಗೌ, ಹಾಮಾನ ಇವರುಗಳು ಅಕಡೆಮಿ, ಪ್ರಶಸ್ತಿ ಸಮಿತಿಗಳಿಗೇ ಲಾಯಕ್ಕಾಗಿದ್ದರು. ಪ್ರಶಸ್ತಿಗಳು ಸಹ ನವ್ಯರ ಅಪಹಾಸ್ಯಕ್ಕೆ, ತಿರಸ್ಕಾರಕ್ಕೆ ವಸ್ತುವಾಗಿದ್ದವು. ದೇಜಗೌ ಆಗಲೇ ನಟ ರಾಜಕುಮಾರ್‌ಗೆ ಡಾಕ್ಟರೇಟ್ ಕೊಟ್ಟದ್ದು. ಎಂಡಿಎನ್ ಇವೆಲ್ಲವನ್ನೂ ತೇಜಸ್ವಿಯ ಮೂಲಕ ಅರ್ಥಮಾಡಿಕೊಂಡಿದ್ದರು. ಸರಿಯಾದ ಸಮಯಕ್ಕೆ ಕಾಯುತ್ತಿದ್ದರು.

'ಪ್ರಜಾವಾಣಿ' ವಿರೋಧಿಗಳ ಗುಂಪು, ಬೂಸಾ ಸಾಹಿತ್ಯದ ಪರವಾದ ಗುಂಪು– ಎಲ್ಲರನ್ನೂ ಒಗ್ಗೂಡಿಸಿದವರು ಎಂಡಿಎನ್. ಆಗಲೇ ಹುಟ್ಟಿದ್ದು "ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ" ಇದು ಸಂಪೂರ್ಣ ಬ್ರಾಹ್ಮಣ ವಿರೋಧಿಯಾಗುವಲ್ಲಿ ಎಂಡಿಎನ್ ಗೆದ್ದರು. ಒಳಗೊಳಗೇ ತೇಜಸ್ವಿ ಬೆಂಬಲವೂ ಇತ್ತು. ಒಕ್ಕೂಟದ ಉದ್ಘಾಟನಾ ಸಮಾರಂಭಕ್ಕೆ ಬ್ರಾಹ್ಮಣರನ್ನು ಕರೆಯಲೇ ಬಾರದು ಎಂಬ ನಿಲುವಳಿ ಇತ್ತು. 1974ರಲ್ಲಿ ಮೈಸೂರಿನಲ್ಲಿ ಸಭೆ ನಡೆಯಿತು. ಅನಂತಮೂರ್ತಿಗೆ ಆಹ್ವಾನ ಇರಲಿಲ್ಲ. ಆದರೂ, ಅವರು ಪ್ರೇಕ್ಷಕರ ಮಧ್ಯೆ ಕೂತಿದ್ದರು. ಕುವೆಂಪು ಉದ್ಘಾಟಿಸಿದರು. ಎಂ. ಡಿ. ನಂಜುಂಡಸ್ವಾಮಿ ತಮ್ಮ ಮೊದಲ ವಿಜಯ ಸಾಧಿಸಿದ್ದರು.

1972ರಲ್ಲಿ ಲಂಕೇಶರು ವಿಶ್ವವಿದ್ಯಾಲಯದ ಸಣ್ಣ ದುಡ್ಡಿನ ದುರುಪಯೋಗದ ಅಪಾದನೆಯಲ್ಲಿ ಹೆಸರಾದರು. ಪ್ರಾಥಮಿಕ ತನಿಖೆ ಸಹ ಅವರ ವಿರುದ್ಧವೇ ಇತ್ತು. 'ಪ್ರಜಾವಾಣಿ' ಅದರ ಬಗ್ಗೆ ವರದಿ ಪ್ರಕಟಿಸಿತು. ಲಂಕೇಶ್ ನಡುಗಿ ಹೋದರು. ಕೆಲಸ ಹೋಗುತ್ತದೆ ಎಂಬ ಭಯ ಅವರನ್ನು ಕಾಡತೊಡಗಿತು. 1973ರಲ್ಲಿ ಬಸವಲಿಂಗಪ್ಪನವರು ಬೂಸಾ ಸಾಹಿತ್ಯ ಸೃಷ್ಟಿಸಿದರು. ಲಂಕೇಶರ ಮೇಲೆ, ಆ ಹಿನ್ನಲೆಯಲ್ಲಿ ಹಲ್ಲೆಯ ಯತ್ನವೂ ನಡೆಯಿತು. ಲಂಕೇಶರು ಮತ್ತೂ ತತ್ತರಿಸಿ ಹೋದರು. ಬಸವಲಿಂಗಪ್ಪನವರನ್ನು, ಕುವೆಂಪು ಬೆಂಬಲಿಸುವವರೆಗೆ, ಕನ್ನಡ ಸಾಂಸ್ಕೃತಿಕ ಲೋಕ, ತನಗೂ ಅದಕ್ಕೂ ಸಂಬಂಧವೇ ಇಲ್ಲದಂತೆ ನಿರ್ಲಿಪ್ತವಾಗಿತ್ತು. ಎಲ್ಲರೂ ತಮ್ಮಷ್ಟಿಗೆ ತಾವಿದ್ದರು. ಕುವೆಂಪು ಹೇಳಿಕೆ ಕೊಡಿಸುವಲ್ಲಿ, ಎಂಡಿಎನ್, ತೇಜಸ್ವಿ ಕೈವಾಡವಿತ್ತು. ಕುವೆಂಪು ಬಂದರೆಂದು ಕೆಲವು ಪಂಡಿತರೂ ಬಂದರು.

ಇದೇ ವೇಳೆಯಲ್ಲಿ ಪ್ರೊ. ಜಿ.ಎಸ್. ಶಿವರುದ್ರಪ್ಪನವರ ವಿರುದ್ಧ ಏನೋ ಪ್ರಕಟವಾಯಿತು ಅಂತ ಅವರು 'ಪ್ರಜಾವಾಣಿ'ಯ ಮೇಲೆ ಮುನಿಸಿಕೊಂಡಿದ್ದರು. ಅತ್ತ ಧಾರವಾಡದ ಚಂಪಾ, ತನ್ನ ವಿದೇಶ ಪ್ರವಾಸದ ಬಗ್ಗೆ ತಮ್ಮ ಫೋಟೋ ಪ್ರಕಟಿಸಲಿಲ್ಲ ಎಂದು, ತಮ್ಮ ಕಾವ್ಯ ಪ್ರಕಟಿಸಲಿಲ್ಲ ಎಂದು, ಅವರೂ 'ಪ್ರಜಾವಾಣಿ'ಯ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಈ ದಿನಗಳಲ್ಲೇ ಮರುಳಸಿದ್ದಪ್ಪ, ಬರಗೂರು, ಕಾಳೇಗೌಡ ನಾಗವಾರ ಚುರುಕಾದರು. ಜಿಎಸ್ಸೆಸ್ ಅಸ್ತು ಎಂದಿದ್ದರು. ಆಗಲೇ ಕಾಳೇಗೌಡ ಲೋಹಿಯ ವಾದಿಯಾಗಿದ್ದು.

ಅರಸು ಹಾವನೂರ್ ಆಯೋಗ ರಚಿಸಿದ್ದರು. ಲಿಂಗಾಯಿತ–ಒಕ್ಕಲಿಗರ ಬೇರು ಅಲ್ಲಾಡ ತೊಡಗಿತ್ತು. ಆ ದಿನಗಳಲ್ಲಿ ಧರ್ಮಲಿಂಗಂ ಎಂಬ ಕಾನೂನು ಕಾಲೇಜಿನ ಪ್ರೊಫೆಸರ್ ಮತ್ತು ಸಿ.ಎಂ ಆರ್ಮುಗಂ ಎಂಬ ರಿಪಬ್ಲಿಕನ್ ಪಕ್ಷದ ಎಂಎಲ್ಎ ಸೇರಿ ವಿಚಾರವಾದಿಗಳ ಸಂಘ ನಡೆಸಿದ್ದರು. ಇವರು ಎಂಡಿಎನ್‌ಗೆ ಸ್ನೇಹಿತರು. ಇವರೆಲ್ಲ ಸೇರಿ ವಿಚಾರವಾದಿಗಳ ಚಾವಡಿಯಲ್ಲಿ ಶ್ರೀಲಂಕಾದ ಪ್ರೊ. ಮೊವೂರ್, ತಮಿಳು ನಾಡಿನ ದ್ರಾವಿಡ ಕಳಗಂನ ರಾಮಸ್ವಾಮಿ ನಾಯ್ಕರ್, ತಮಿಳು ನಾಡಿನ ರೈತ ನಾಯಕ ನಾರಾಯಣಸ್ವಾಮಿ–ಇವರನ್ನೆಲ್ಲಾ ಕರೆಸಿದರು. ಡಾ॥ಎಚ್ಚೆನ್, ಸತ್ಯ ಸಾಯಿಬಾಬಾ ವಿರುದ್ಧ ಬಹಿರಂಗ ಯುದ್ಧ ಸಾರಿದ್ದರು. ಪ್ರೊ. ಹಸನ್ ಮನ್ಸೂರ್, ನಗರಿ ಬಾಬಯ್ಯ ಪಿಯುಸಿಎಲ್ ಆರಂಭಿಸಿದ್ದರು. ಆಗಿನ ರಾಜ್ಯ ಸಿಪಿಎಂ ಕಾರ್ಯದರ್ಶಿ ಎಂ. ಕೆ. ಭಟ್ ಮತ್ತು ಮೋಹನ್ ಕೊಂಡಜ್ಜಿ ರಾತ್ರೋ ರಾತ್ರೆ, ಎಲ್ಲರನ್ನೂ ಮಾರ್ಕ್ಸಿಸ್ಟರನ್ನಾಗಿಸಿದರು. ಆಗ ಆದದ್ದೇ ಎರಡು ಗುಂಪು –ಮಾರ್ಕ್ಸಿಸ್ಟರು ಮತ್ತು ಇಂದಿರಾವಾದಿಗಳು.

೧೦

ಕುವೆಂಪು ಅವರಿಗೆ ಆದ ಅನ್ಯಾಯವನ್ನು ಬಳಸಿಕೊಂಡವರು, ಎಂ ಡಿ. ನಂಜುಂಡಸ್ವಾಮಿ. ನವ್ಯರಿಂದ ದೂರವಾದ ತೇಜಸ್ವಿಗೆ ಸಹ, ಕುವೆಂಪುಗೆ ಆದ ಅನ್ಯಾಯದ ಬಗ್ಗೆ ಬೇಜಾರಿತ್ತು. 'ಲೋಹಿಯಾ ಕೆಂಪು ಪುಸ್ತಕ' ತರುವ ವಿಚಾರದಲ್ಲಿ ಎಂಡಿಎನ್, ತೇಜಸ್ವಿ ಭೇಟಿಯಾಗು

ತ್ತಲೇ ಇದ್ದರು. 'ಪ್ರಜಾವಾಣಿ' ವಿರೋಧಿಗಳ ಗುಂಪು, ಬೂಸಾ ಸಾಹಿತ್ಯದ ಪರವಾದ ಗುಂಪು-ಎಲ್ಲರನ್ನೂ ಒಗ್ಗೂಡಿಸಿದವರು ಎಂಡಿಎನ್. ಆಗಲೇ ಹುಟ್ಟಿದ್ದು "ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ" ಇದು ಸಂಪೂರ್ಣ ಬ್ರಾಹ್ಮಣ ವಿರೋಧಿಯಾಗುವಲ್ಲಿ ಎಂಡಿಎನ್ ಗೆದ್ದರು. ಒಳಗೊಳಗೇ ತೇಜಸ್ವಿ ಬೆಂಬಲವೂ ಇತ್ತು.

ಒಕ್ಕೂಟದ ಉದ್ಘಾಟನಾ ಸಮಾರಂಭಕ್ಕೆ ಬ್ರಾಹ್ಮಣರನ್ನು ಕರೆಯಲೇ ಬಾರದು ಎಂಬ ನಿಲುವಳಿ ಇತ್ತು. 1974ರಲ್ಲಿ ಮೈಸೂರಿನಲ್ಲಿ ಸಭೆ ನಡೆಯಿತು. ಅನಂತಮೂರ್ತಿಗೆ ಆಹ್ವಾನ ಇರಲಿಲ್ಲ. ಆದರೂ, ಅವರು ಪ್ರೇಕ್ಷಕರ ಮಧ್ಯೆ ಕೂತಿದ್ದರು. ಕುವೆಂಪು ಉದ್ಘಾಟಿಸಿದರು. ಎಂಡಿ ನಂಜುಂಡಸ್ವಾಮಿ ತಮ್ಮ ಮೊದಲ ವಿಜಯ ಸಾಧಿಸಿದ್ದರು. ಅದೇ ದಿನಗಳಲ್ಲಿ ಅನಂತಮೂರ್ತಿ ತಮ್ಮ 'ಭಾರತಿಪುರ'ದಲ್ಲಿ ಎಂಡಿಎನ್‌ರನ್ನು ಒಂದು ಪಾತ್ರವಾಗಿಸಿ ನಗೆಪಾಟಲಿಗೆ ವಸ್ತುವಾಗಿಸಿದರು. ಎಂಡಿಎನ್ ಮತ್ತೂ ಹಠ ತೊಟ್ಟರು.

ಅದರ ಮುಂದಿನ ಪ್ರತಿಭಟನೆ, ಬ್ರಾಹ್ಮಣೇತರರು ಯಾರೂ 'ಪ್ರಜಾವಾಣಿ' ದೀಪಾವಳಿ ಸಂಚಿಕೆಗೆ ಬರೆಯಕೂಡದು. ತಮ್ಮದೇ ಆದ ದೀಪಾವಳಿ ಸಂಚಿಕೆ ತರಬೇಕು. ಅದರ ಯಶಸ್ವಿನ ನಂತರ, ತಮ್ಮದೇ ಆದ ಶೂದ್ರ ವಾರ ಪತ್ರಿಕೆ ತರಬೇಕು, ಎಂದಾಯಿತು. ವಿಶೇಷ ಸಂಚಿಕೆಗೆ ಲಂಕೇಶ್ ಸಂಪಾದಕರಾದರು. 'ಪಾಂಚಾಲಿ' ಬಂತು ಅದರಲ್ಲಿ ಲಂಕೇಶ್ ತಮಗೆ ಬೇಕಾಗಿದ್ದ, ತಾವು ಅತೀವವಾಗಿ ಪ್ರೀತಿಸುತ್ತಿದ್ದ (ಅದು ಒನ್ ಸೈಡ್ ಲವ್) ಹುಡುಗಿಯೊಬ್ಬಳ ಫೋಟೋ ಹಾಕಿ. ಆಕೆಯನ್ನು "ಭವಿಷ್ಯದ ಊ (ಉ)ರ್ವಶಿ" ಅಂತ ಹಾಡಿ-ಹೊಗಳಿ ಬರೆದರು. ಆಕೆ ಬ್ರಾಹ್ಮಣರ ಹುಡುಗಿ. ಕೃಷ್ಣ ಆಲನಹಳ್ಳಿ ಕೆಂಡಾಮಂಡಲವಾದ. ಲಂಕೇಶ್ ಜೊತೆ ಜಗಳ ಆಡಿದ. ಇನ್ನು ಮುಂದೆ ಅನಂತಮೂರ್ತಿಯವರ ಜೊತೆ ಇರುತ್ತೇನೆ ಎಂದು ಕೂಗಾಡಿ, ಪಾಂಚಾಲಿಯ ಕಟ್ಟುಗಳನ್ನು ಮೈಸೂರಿನ ತನ್ನ ಮನೆಯ ಅಟ್ಟದಲ್ಲಿ ಬಿಸಾಕಿದ. ಅದರ ಪ್ರಸಾರವೇ ಆಗಲಿಲ್ಲ. ಯಾರೂ ಓದಲಿಲ್ಲ. ಆದರೆ 'ಪ್ರಜಾವಾಣಿ'ಯ ಆ ವರ್ಷದ ದೀಪಾವಳಿ ಸಂಚಿಕೆಯಲ್ಲಿ ಅನೇಕ ಶೂದ್ರ ಲೇಖಕರ ಬರಹ ಇತ್ತು. ಬ್ರಾಹ್ಮಣರು ಬಿದ್ದು-ಬಿದ್ದು ನಕ್ಕರು.

ಈ ಮಧ್ಯೆ ಬ್ರಾಹ್ಮಣ ಸಮ್ಮೇಳನ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯಿತು. ಲೇಖಕ-ಕಲಾವಿದರ ಒಕ್ಕೂಟ ಪ್ರತಿಭಟನೆ ನಡೆಸಿತು. ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು. ತೇಜಸ್ವಿ ಪೊಲೀಸ್ ಸ್ಟೇಷನ್‌ಗೆ ಬರದೆ ತಪ್ಪಿಸಿಕೊಂಡರು. ಇದನ್ನು ಲಂಕೇಶ್ ಪದೇ-ಪದೇ ಹೇಳುತ್ತಿದ್ದರು. ಎಂಡಿಎನ್ ಸಹ ಪೊಲೀಸ್ ಠಾಣೆಯಲ್ಲಿದ್ದದ್ದು ನೆನಪಿಲ್ಲ. ಇದ್ದರೂ ಇರಬಹುದು.

ಎಂಡಿಎನ್‌ಗೆ ಈ ಬುದ್ಧಿಜೀವಿಗಳಿಂದ ಭ್ರಮನಿರಸನ ಆಯಿತು. ಅವರಿಂದ ದೂರ ಸರಿದರು. ಅಷ್ಟರಲ್ಲಿ ತುರ್ತು ಪರಿಸ್ಥಿತಿ ಹತ್ತಿರವಾಗುತ್ತಿತ್ತು. ತೇಜಸ್ವಿ ಬ್ರಾಹ್ಮಣರ ಪತ್ರಿಕೆಗಳಾದ "ಕರ್ಮವೀರ" "ಕಸ್ತೂರಿ" "ತರಂಗ" "ತುಷಾರ"ಗಳಿಗೆ ಬರೆಯಲು ಪ್ರಾರಂಭಿಸಿದರು "ಪ್ರಜಾವಾಣಿ'ಗೆ ಬರೆಯಲೇ ಇಲ್ಲ. ಲಂಕೇಶರು, ಈ ಶೂದ್ರರ ಸಹವಾಸವೇ ಬೇಡ ಎಂದು, ದೇಶ ಜೆ.ಪಿ. ಚಳವಳಿಯಲ್ಲಿ ಉರಿಯುತ್ತಿದ್ದಾಗ ಸಿನಿಮಾ ನಿರ್ದೇಶಿಸಲು ಹೊರಟರು. ಚಂಪಾ ಎಂಬ ಒಂಟಿದನಿ, ಬಂಡಾಯ ಸಂಘಟನೆ ಎಂದು ಹೊರಟು, ಈಗ ಕನ್ನಡ ಸಾಹಿತ್ಯ ಪರಿಷತ್ತಿನ

ಚಂಪಾ, ಸಾಹಿತ್ಯ ಪರಿಷತ್ತೆಂಬ ಮಠ ಸೇರಿದರು. ಡಿ.ಆರ್. ನಾಗರಾಜ, ಬೆಂಗಳೂರು, ದೆಹಲಿ ಸಾಲದೆಂದು ಅಮೆರಿಕ ಸೇರಲು ತಯಾರಿ ನಡೆಸುತ್ತಿರುವಾಗಲೇ, ನಮ್ಮಿಂದ ದೂರವಾದರು. ದೇವನೂರು, ಪದ್ಮಶ್ರೀ ದೇವನೂರು ಆದರು. ಬರಗೂರು, ಈಗಲೂ ಭಾಷಣಗಳಲ್ಲಿ ಕೆಂಡ ಕಾರುತ್ತಾ, ಸಿನಿಮಾ ಮಾಡುತ್ತಿದ್ದಾರೆ.

ಸೇವಕರಾಗಿದ್ದಾರೆ. ಏಕೆಂದರೆ, ಈಗ ಅವರೊಬ್ಬರೇ ಆ ದಿನಗಳ ದುರಂತ ನಾಯಕರ ಪೈಕಿ ಅಳಿಯದೆ ಉಳಿದವರು.

ದುರಂತ ಎಂದರೆ, ಬ್ರಾಹ್ಮಣೇತರ ಚಳವಳಿಯ ಎಲ್ಲಾ ನಾಯಕರ ವಲಯದಲ್ಲಿ ಇದ್ದದ್ದೇ ಬ್ರಾಹ್ಮಣರು ಒಕ್ಕೂಟದ ಮೀಟಿಂಗ್ ಆದ ಕೂಡಲೇ, ಲಂಕೇಶರು, ನನ್ನೊಡನೆ ಒಕ್ಕೂಟದ ನಾಯಕರನ್ನೆಲ್ಲಾ ಬೈದು ಜಾಲಾಡುತ್ತಿದ್ದರು. ತೇಜಸ್ವಿ ಕೂಡ ಬ್ರಾಹ್ಮಣ ಪ್ರಿಯರೆ. ಮೈಸೂರಿಗೆ ಭೇಟಿ ನೀಡಿದಾಗಲೆಲ್ಲ, ಅನಂತಮೂರ್ತಿ ಯವರ ಮನೆಗೆ ತಪ್ಪದೆ ಹೋಗುತ್ತಿದ್ದರು. ಇದನ್ನು ಲಂಕೇಶ್, ನನ್ನೊಡನೆ ಅನೇಕ ಬಾರಿ ಹೇಳಿದ್ದುಂಟು. ನಂಜುಂಡಸ್ವಾಮಿಯವರ ಆತ್ಮೀಯ ಮಿತ್ರ, ಅನಂತರಾವ್ ಎಂಬುವರು ಸಹ ಬ್ರಾಹ್ಮಣರೇ ಆಗಿದ್ದರು.

ಇನ್ನು ದಲಿತರು, ಈ ಶೂದ್ರರಿಂದ ತಮಗೆ ಭವಿಷ್ಯವಿಲ್ಲ ಎಂಬುದು ಖಾತ್ರಿ ಮಾಡಿಕೊಂಡರು. ಆ ವೇಳೆಗೆ ಸಿದ್ದಲಿಂಗಯ್ಯ "ಇಕ್ಕರ್ಲಾ ಚೆಚ್ಚರ್ಲಾ" ಅಂತೆಲ್ಲ ಬರೆಯಲು ಆರಂಭಿಸಿದ್ದರು. ಪ್ರೊ. ಬಿ. ಕೃಷಪ್ಪ, ಮಂಚೂಣಿಗೆ ಬಂದರು. ದೇವನೂರು ಅಂತರ್ಮುಖಿಯಾಗತೊಡಗಿದರು. ಆ ವೇಳೆಗೆ, ಹಳ್ಳಿಗಳಿಂದ ಬಂದ ದಲಿತ ಹುಡುಗರು, ಹಳ್ಳಿಗಳಲ್ಲಿ ತಮಗೆ ಅಪಾಯವಿರುವುದು, ಹಲ್ಲೆಯಾಗುವುದು ಲಿಂಗಾಯಿತ, ಒಕ್ಕಲಿಗರಿಂದಲೇ ಎಂಬುದನ್ನು ಒತ್ತಿ ಒತ್ತಿ ಹೇಳತೊಡಗಿದರು. ದಲಿತರಿಂದ, ದಲಿತರಿಗಾಗಿ, ದಲಿತರಿಗೆ ಮಾತ್ರ ಎಂಬ ಘೋಷಣೆ ಯೊಂದಿಗೆ ದಸಂಸ ಹರಡಿತು. ದಸಂಸ ಮಾನಸಗಂಗೋತ್ರಿ ಯೆಂಬ ನರ್ಸರಿ ಶಾಲೆಯಿಂದ ಆಚೆ ಬಂತು.

ಜೆಪಿ ಚಳವಳಿಯಲ್ಲಿ ಸಹ ಎಂಡಿಎನ್‌ಗೆ ಆಘಾತ ಕಾದಿತ್ತು. ಅವರು ಪಾಟ್ನಾಗೆ ಹೋಗಿ ಜೆಪಿಯನ್ನು ಭೇಟಿ ಮಾಡಿದ್ದರು. ಹಾಗೆ ಕೇಳಿದ ನೆನಪು. ಜೆಪಿಗೆ, ತಮ್ಮ ಚಳವಳಿ, ಕೆಲವು ಕಡೆ ದಾರಿ ತಪ್ಪಿದೆ ಎಂಬ ಅನುಭವ ಆವೇಳೆಗಾಗಲೇ ಆಗಿತ್ತು. ಅವರು ಆ ವೇಳೆಯಲ್ಲಿ ಸ್ವಲ್ಪ ಎಚ್ಚರವಾಗಿದ್ದರು. ಕರ್ನಾಟಕದಲ್ಲಿ ಆರ್‌ಎಸ್‌ಎಸ್ "ಅಂದು ಗಾಂಧಿ, ಇಂದು ಜೆಪಿ" ಅಂತ ಗೋಡೆ ಬರೆಹ ತುಂಬಿದ್ದರು. ಆಗ ಜೆಪಿ, ಕರ್ನಾಟಕದಲ್ಲಿ ತಮ್ಮ ಚಳವಳಿ ಗರುಡ ಶರ್ಮರ ನೇತೃತ್ವದಲ್ಲೇ ನಡೆಯಬೇಕೆಂದು ಷರತ್ತು ಹಾಕಿದರು ಎಂಡಿಎನ್‌ಗೆ ಬೇರೆ ದಾರಿ ಇರಲಿಲ್ಲ. ಒಪ್ಪಿಕೊಂಡರು. ಗರುಡ ಶರ್ಮರು ಕನ್ನಡಿಗರು. ಬೇಲೂರಿನ ಅಯ್ಯಂಗಾರರು. ಬ್ರಹ್ಮಚಾರಿ. ತಮ್ಮ ಜೀವನವನ್ನು ಸರ್ವೋದಯ ಚಳವಳಿಗೆ ಸಮರ್ಪಿಸಿದ್ದರು. ಮನೆ-ಮಠ, ಕುಟುಂಬ ಎಲ್ಲವನ್ನೂ ತ್ಯಜಿಸಿದ್ದರು. ಪಟ್ನಾದಲ್ಲಿ ಜೆಪಿ ಜತೆ ಇದ್ದವರು ಬೆಂಗಳೂರಿಗೆ ಬಂದು ಚಳವಳಿ ಆರಂಭಿಸಿದರು. ಅಷ್ಟರಲ್ಲೇ ತುರ್ತು ಪರಿಸ್ಥಿತಿ ಬಂತು.

1975ರಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಯಿತು. ದೇವರಾಜ ಅರಸು ಯಾರನ್ನೂ ಬಂಧಿಸಲಿಲ್ಲ. ದೆಹಲಿಯಿಂದ, ಬಂದ ಪಟ್ಟಿಯಲ್ಲಿದ್ದವರ ಬಂಧನ ಮಾತ್ರ ನಡೆಯಿತು. ಬಹುತೇಕರು ಜನಸಂಘ-ಆರ್‌ಎಸ್‌ಎಸ್‌ನವರು, ಕೆಲವು ಸೋಷಲಿಸ್ಟರು, ಕಮ್ಯುನಿಸ್ಟರೂ ಇದ್ದರು. ಸಂಸ್ಥಾ ಕಾಂಗ್ರೆಸಿನಿಂದ ರಾಮಕೃಷ್ಣ ಹೆಗಡೆ ಮಾತ್ರ, ವೀರೇಂದ್ರ ಪಾಟೀಲ್, ಬೊಮ್ಮಾಯಿ, ದೇವೇಗೌಡ ಕೆಲವು ದಿನ ಮಾತ್ರ ಇದ್ದರು. ಜಾರ್ಜ್ ಸಂಪರ್ಕದಿಂದಾಗಿ ಸ್ನೇಹಲತಾ ರೆಡ್ಡಿ ಒಳಕ್ಕೆ ಹೋಗಿದ್ದರು. ಬಂದಗದ್ದೆ ರಮೇಶ ಮೆಜೆಸ್ಟಿಕ್‌ನಲ್ಲಿ ಭಾಷಣ ಮಾಡಿ, ತಾನಾಗಿಯೇ ಬಂಧನಕ್ಕೊಳಗಾದ. ಚಂಪಾ ಸಹ ಅಷ್ಟೆ. ಬಂದಗದ್ದೆ-ಚಂಪಾ ಪೋಲೀಸರ ಪಟ್ಟಿಯಲ್ಲಿರಲಿಲ್ಲ.

ಅರಸು, ಯಾವ ಬುದ್ಧಿಜೀವಿಯನ್ನೂ ಮುಟ್ಟಲಿಲ್ಲ. ಅವರು ನಿರುಪದ್ರವಿಗಳೆಂದು, ಅವರಿಗೆ ಚೆನ್ನಾಗಿಯೇ ಗೊತ್ತಿತ್ತು. ಬುದ್ಧಿಜೀವಿಗಳು, ಲೋಹಿಯಾವಾದಿಗಳು ತಮ್ಮ ಪಾಡಿಗೆ ಸಿನಿಮಾ, ನಾಟಕ, ಹಾಡು ಅಂತ ಇದ್ದರು. ರಾತ್ರಿಯ ಬೈಠಕ್ಕುಗಳಲ್ಲಿ ಸಣ್ಣ ದನಿಯಲ್ಲಿ ಇಂದಿರಾ ಗಾಂಧಿಯನ್ನು ಟೀಕಿಸುತ್ತಿದ್ದರು.

ತುರ್ತು ಪರಿಸ್ಥಿತಿ ಮುಗಿದು 1977ರ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಲೇ ಬೇಕೆಂದು ಲೋಹಿಯಾವಾದಿಗಳು, ಮಾಜಿ ಒಕ್ಕೂಟಿಗರು ಕರೆ ಕೊಟ್ಟರು. ವೀರಾವೇಷದ ಪತ್ರಿಕಾ ಹೇಳಿಕೆ ಕೊಟ್ಟರು. ಸೆಮಿನಾರು ನಡೆಸಿದರು. ಆದರೆ ಕರ್ನಾಟಕದ ಲೋಕಸಭೆಯ 28 ಕ್ಷೇತ್ರಗಳಲ್ಲಿ, 27ರಲ್ಲಿ ಕಾಂಗ್ರೆಸ್ ಗೆಲ್ಲಸಿದ್ದು, ಚಿಕ್ಕಮಗಳೂರು ಲೋಕಸಭಾ ಉಪ ಚುನಾವಣೆಯಲ್ಲಿ ಗೆಲ್ಲಿಸಿದ್ದು, ಪುನಃ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದ್ದು. ಕಾಂಗ್ರೆಸ್ಸನ್ನು ಸೋಲಿಸಿದ ಕೀರ್ತಿ ಗುಂಡೂರಾಯರಿಗೇ ದಕ್ಕಿದ್ದು- ಈಚಿನ ಓದುಗರಿಗೆಲ್ಲಾ ತಿಳಿದ ವಿಷಯ. ಅಲ್ಲಿಗೆ 1970 ಮುಗಿಯಿತು.

1980 ಆರಂಭವಾಯಿತು. ಕರ್ನಾಟಕದ ಪ್ರತಿಭಟನೆ, ಬಂಡಾಯ, ಸಮುದಾಯ, ಪರ್ಯಾಯ ಸಾಹಿತ್ಯ ಸಮ್ಮೇಳನ, ದಲಿತ ಸಾಹಿತ್ಯ... ಎಲ್ಲವೂ ಕೊನೆಗೊಂಡವು. ಎಂಡಿಎನ್ ರೈತ ಸಂಘ, ಲಂಕೇಶರು ಪತ್ರಿಕೆಗಳಂತಹ ಕೋಟೆ ಕಟ್ಟಿಕೊಂಡು ಪಾಳ್ಳೇಗಾರರಾದರು. ಸಿದ್ದಲಿಂಗಯ್ಯ ಎರಡು ಬಾರಿ ವಿಧಾನ ಪರಿಷತ್ತಿನಲ್ಲಿ ಕೂತರು. ಈಗಲೂ ಅವರು ಅಧಿಕಾರದ ಕುರ್ಚಿಯಿಂದ ಎದ್ದೇಳುವ ಹಾಗೆ ಕಾಣುವುದಿಲ್ಲ. ಅವರು ಎಲ್ಲರಿಗೂ ಒಳ್ಳೆಯವರು.

ಚಂಪಾ, ಸಾಹಿತ್ಯ ಪರಿಷತ್ತೆಂಬ ಮಠ ಸೇರಿದರು. ಡಿ.ಆರ್. ನಾಗರಾಜ, ಬೆಂಗಳೂರು, ದೆಹಲಿ ಸಾಲದೆಂದು ಅಮೆರಿಕ ಸೇರಲು ತಯಾರಿ ನಡೆಸುತ್ತಿರುವಾಗಲೇ, ನಮ್ಮಿಂದ ದೂರವಾದರು. ದೇವನೂರು, ಪದ್ಮಶ್ರೀ ದೇವನೂರು ಆದರು. ಬರಗೂರು, ಈಗಲೂ ಭಾಷಣಗಳಲ್ಲಿ ಕೆಂಡ ಕಾರುತ್ತಾ, ಸಿನಿಮಾ ಮಾಡುತ್ತಿದ್ದಾರೆ. ಇನ್ನೂ ಅನೇಕರು ವಿಧಾನ ಪರಿಷತ್ ಸದಸ್ಯತ್ವ, ಉಪಕುಲಪತಿ, ಅಕಾಡೆಮಿ ಅಧ್ಯಕ್ಷತೆಗಾಗಿ ತಮ್ಮ ಹೋರಾಟ ಮುಂದುವರೆಸಿದ್ದಾರೆ. ದಲಿತರು ವ್ಯಾಪಾರ-ವ್ಯವಹಾರ ಚೆನ್ನಾಗಿಯೇ ಕಲಿತಿದ್ದಾರೆ. ಈಗ ಗುಂಪಾಗಿ ಉಳಿದಿರುವುದು, ಅವರೇ.

ಉಪಸಂಹಾರ: ಏನೇ ಇರಲಿ, 70ರ ದಶಕ ಕಂಡ ಸಾಹಿತ್ಯ-ಸಾಂಸ್ಕೃತಿಕ ಬಿರುಗಾಳಿ, ಇನ್ನೂ ಅನೇಕ ವರ್ಷ ನಮ್ಮನ್ನು ಕಾಡುತ್ತಲೇ ಇರುತ್ತದೆ. ಈವತ್ತು, ಈ ವಲಯದಲ್ಲಿ ಏನಾದರೂ ಒಳ್ಳೆಯದು ಇದ್ದರೆ, ಅದು 70ರ ದಶಕದ ಪಳೆಯುಳಿಕೆ. ಇಂದಿಗೂ ಬದುಕಿರುವ 70ರ ಅವಶೇಷಗಳ ನೆನಪಿನಲ್ಲಿ, ಬಿಸಿಲು ಕಾಯಿಸಿಕೊಳ್ಳುತ್ತಿದ್ದಾರೆ. □

ಕರ್ನಾಟಕ ಗಡಿ ಪ್ರದೇಶಗಳ ಅಭಿವೃದ್ಧಿ ಸಾಧ್ಯತೆಗಳು

ಡಾ. ಎನ್. ಜಗದೀಶ್ ಕೊಪ್ಪ

೧

ಕರ್ನಾಟಕ ಭಾರತದ ಮುಂದುವರೆದ ರಾಜ್ಯಗಳಲ್ಲಿ ಒಂದಾಗಿದ್ದು ಅತಿ ದೊಡ್ಡ ರಾಜ್ಯಗಳ ಪೈಕಿ ಎಂಟನೇ ಸ್ಥಾನ ಪಡೆದಿದೆ. ಕೃಷಿ ಇಲ್ಲಿನ ಜನರ ಮೂಲ ಕಸುಬಾಗಿದ್ದು, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಪ್ರವಾಸೋದ್ಯಮ, ಶಿಕ್ಷಣ, ಆರೋಗ್ಯ, ವ್ಯಾಪಾರ, ಆಹಾರ ಸಂಸ್ಕರಣೆ ಮುಂತಾದ ವಲಯಗಳಲ್ಲಿ ಗಮನಾರ್ಹ ಅಭಿವೃದ್ಧಿ ಸಾಧಿಸಿ ಜಗತ್ತಿನ ಗಮನ ಸೆಳೆದಿದೆ.

2001ರ ಜನಗಣತಿಯ ಪ್ರಕಾರ ರಾಜ್ಯದ ಜನಸಂಖ್ಯೆ 5 ಕೋಟಿ 28 ಲಕ್ಷ 50 ಸಾವಿರದ 662 ಇದ್ದದ್ದು ಈಗ 6 ಕೋಟಿ ಗಡಿಯನ್ನು ದಾಟಿದೆ. ಸಾಕ್ಷರತೆಯಲ್ಲಿ ಶೇ.66.6ರಷ್ಟು ಪ್ರಗತಿ ಸಾಧಿಸಿರುವ ಕರ್ನಾಟಕ ರಾಜ್ಯ ಭೌಗೋಳಿಕವಾಗಿ 74 ಸಾವಿರದ 120 ಚ.ಕೀ.ಮೀ. ವಿಸ್ತರವಾಗಿದೆ. ಹೊಸದಾಗಿ ಅಸ್ತಿತ್ವಕ್ಕೆ ಬಂದ ಯಾದಗೀರ್ ಜಿಲ್ಲೆಯೂ ಸೇರಿದಂತೆ 30 ಜಿಲ್ಲೆಗಳನ್ನು ಹೊಂದಿರುವ ಕರ್ನಾಟಕ ಪಶ್ಚಿಮ ಮತ್ತು ವಾಯುವ್ಯದಲ್ಲಿ ಮಹಾರಾಷ್ಟ್ರ, ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ ಆಂಧ್ರ ಮತ್ತು ತಮಿಳುನಾಡು, ಉತ್ತರದಲ್ಲಿ ಮಹಾರಾಷ್ಟ್ರ, ದಕ್ಷಿಣದ ನೈರುತ್ಯದಲ್ಲಿ ಕೇರಳ ಹಾಗೂ ಆಗ್ನೇಯದಲ್ಲಿ ತಮಿಳುನಾಡು ಭಾಗಗಳನ್ನು ಹೊಂದಿದೆ.

> **ಕರ್ನಾಟಕ ರಾಜ್ಯ ಮೇಲುನೋಟಕ್ಕೆ ಮುಂದುವರೆದ ರಾಜ್ಯ ಎಂಬಂತೆ ಕಂಡು ಬಂದರೂ ಆಂತರಿಕವಾಗಿ ಹಲವಾರು ವೈಪರೀತ್ಯ ಗುಣಗಳಿಂದ ಬಳಲುತ್ತಿದೆ. ಭೌಗೋಳಿಕ ಹವಾಮಾನ, ಜನತೆಯ ನಂಬಿಕೆ ಮತ್ತು ಸಂಸ್ಕೃತಿ ಹೀಗೆ ಹಲವು ಕಾರಣಗಳಿದ್ದರೂ ಇಲ್ಲಿನ ಬಹುತೇಕ ಪ್ರದೇಶಗಳು ಪ್ರಾದೇಶಿಕ ಅಸಮಾನತೆಯಿಂದ ಬಳಲುತ್ತಿರುವುದು ನಿತ್ಯ ವಾಸ್ತವ ಸಂಗತಿ. ಸ್ವತಂತ್ರ ಪೂರ್ವದಿಂದಲೂ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಭಾಗಗಳು ಅನೇಕ ದೊರೆಗಳ, ನವಾಬರ, ಜಹಗೀರುದಾರರ ಅಧಿಪತ್ಯಕ್ಕೆ ಒಳಪಟ್ಟು ಅಭಿವೃದ್ಧಿಯಿಂದ ವಂಚಿತವಾಗಿ ಶೋಷಣೆಗೆ ಒಳಪಟ್ಟಿದ್ದು ಈಗ ಇತಿಹಾಸ.**

ಕರ್ನಾಟಕದ ಸುಮಾರು 8 ಜಿಲ್ಲೆಗಳು ಸುತ್ತ ಮುತ್ತಲಿನ ಗಡಿಭಾಗಕ್ಕೆ ಹೊಂದಿಕೊಂಡಿದ್ದು ಅನೇಕ ತಾಲೂಕು ಕೇಂದ್ರಗಳು ಹಾಗೂ ಗ್ರಾಮಗಳ ಜನತೆ ಗಡಿ ರಾಜ್ಯಗಳ ಜೊತೆ ತಮ್ಮ ಭೂಮಿ, ಶಿಕ್ಷಣ, ಕೃಷಿ, ವ್ಯಾಪಾರ–ವ್ಯವಹಾರ ಕುರಿತಂತೆ ಸಂಬಂಧ ಹೊಂದಿದ್ದಾರೆ. ಅಲ್ಲದೇ ನೆರೆ ರಾಜ್ಯಗಳ ಅನೇಕ ಪಟ್ಟಣಗಳಲ್ಲಿ ಬಹುಸಂಖ್ಯಾತ ಕನ್ನಡಿಗರಿರುವುದೂ ವಿಶೇಷ. ಮಹಾರಾಷ್ಟ್ರದಲ್ಲಿ ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ಕೇರಳದಲ್ಲಿ ಕಾಸರಗೋಡು, ಆಂಧ್ರದ ಹಿಂದೂಪುರ, ಅಧೋನಿ, ತಮಿಳುನಾಡಿನ ಹೊಸೂರು, ಡೆಂಕಣಿಕೋಟೆ, ಗೋಪಿನಾಥಂ ಮುಂತಾದ ಊರುಗಳಲ್ಲಿ ಕನ್ನಡಿಗರಿದ್ದು, ಕನ್ನಡ ಭಾಷೆ ಮತ್ತು ಸಂಸ್ಕೃತಿ ಇಂದಿಗೂ ಜೀವಂತವಾಗಿವೆ.



ರಾಜ್ಯದ ಸಾರ್ವಭೌಮ ಹಾಗೂ ಮಾತೃಭಾಷೆಯಾದ ಕನ್ನಡ ಶೇ.64.75ರಷ್ಟು ಜನತೆಯ ಭಾಷೆಯಾಗಿದ್ದು, (ಮಂಡ್ಯ ಜಿಲ್ಲೆಯಲ್ಲಿ ಶೇ.97 ರಷ್ಟು ಮಂದಿಯ ಮಾತೃಭಾಷೆ ಕನ್ನಡವಾಗಿರುವುದು ವಿಶೇಷ). ನಂತರ ಶೇ.9.7ರಷ್ಟು ಮಂದಿ ಉರ್ದು ಭಾಷೆಯನ್ನು, ಶೇ.8.34ರಷ್ಟು ಮಂದಿ ತೆಲುಗು ಭಾಷೆಯನ್ನು, ಶೇ.5.46ರಷ್ಟು ಮಂದಿ ತಮಿಳು ಭಾಷೆಯನ್ನು ಮಾತೃಭಾಷೆಯಾಗಿ ಬಳಸುತ್ತಿದ್ದಾರೆ. ಶೇ.3.93ರಷ್ಟು ಮಂದಿ ಮರಾಠಿ, ಶೇ.3.3ರಷ್ಟು ಮಂದಿಗೆ ತುಳುಭಾಷೆ ಕರ್ನಾಟಕ ದಲ್ಲಿ ಮಾತೃಭಾಷೆಯಾಗಿದೆ.

ಕರ್ನಾಟಕ ರಾಜ್ಯ ಮೇಲುನೋಟಕ್ಕೆ ಮುಂದುವರೆದ ರಾಜ್ಯ ಎಂಬಂತೆ ಕಂಡುಬಂದರೂ ಆಂತರಿಕವಾಗಿ ಹಲವಾರು ವೈಪರೀತ್ಯ ಗುಣಗಳಿಂದ ಬಳಲುತ್ತಿದೆ. ಭೌಗೋಳಿಕ ಹವಾಮಾನ, ಜನತೆಯ ನಂಬಿಕೆ ಮತ್ತು ಸಂಸ್ಕೃತಿ ಹೀಗೆ ಹಲವು ಕಾರಣಗಳಿದ್ದರೂ ಇಲ್ಲಿನ ಬಹುತೇಕ ಪ್ರದೇಶಗಳು ಪ್ರಾದೇಶಿಕ ಅಸಮಾನತೆಯಿಂದ ಬಳಲುತ್ತಿರುವುದು ನಿತ್ಯ ವಾಸ್ತವ ಸಂಗತಿ. ಸ್ವತಂತ್ರ ಪೂರ್ವದಿಂದಲೂ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಭಾಗಗಳು ಅನೇಕ ದೊರೆಗಳ, ನವಾಬರ, ಜಹಗೀರುದಾರರ ಅಧಿಪತ್ಯಕ್ಕೆ ಒಳಪಟ್ಟು ಅಭಿವೃದ್ಧಿಯಿಂದ ವಂಚಿತವಾಗಿ ಶೋಷಣೆಗೆ ಒಳಪಟ್ಟಿದ್ದು ಈಗ ಇತಿಹಾಸ. ಇಲ್ಲಿನ ಜನತೆ ಅನಕ್ಷರತೆ, ಮುಗ್ಧತೆ, ಅಜ್ಞಾನ, ಬಡತನ ಮತ್ತು ಶೋಷಣೆಗಳಿಗೆ ಒಳಪಟ್ಟಿದ್ದು ಒಂದು ಕಾರಣವಾದರೆ, ಈ ಪ್ರದೇಶಗಳಲ್ಲಿ ಪದೇ ಪದೇ ಬಂದೆರಗಿದ ಬರಗಾಲ, ಕ್ಷಾಮ, ಸಾಂಕ್ರಾಮಿಕ ರೋಗ ರುಜಿನಗಳು ಮತ್ತೊಂದು ರೀತಿಯಲ್ಲಿ ಕಾರಣವಾದವು.

ಸ್ವತಂತ್ರ ಪೂರ್ವದಿಂದಲೂ ದಕ್ಷಿಣ ಕರ್ನಾಟಕದ ಜನತೆ ಮೈಸೂರು ದೊರೆಗಳ ಅಧಿಪತ್ಯಕ್ಕೆ ಒಳಪಟ್ಟು ಅನೇಕ ಅಭಿವೃದ್ಧಿಯ ಫಲಗಳನ್ನು ಅನುಭವಿಸುತ್ತಾ ಬಂದಿದ್ದಾರೆ. ಅದರಲ್ಲೂ ವಿಶೇಷವಾಗಿ ಪ್ರಗತಿಪರ ಆಲೋಚನೆಗಳ ನಿಧಿಯಂತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಮುಂದಾಲೋಚನೆಯ ಫಲವಾಗಿ ಉತ್ತರ ಕರ್ನಾಟಕದ ಜನತೆಯ ಬದುಕಿಗೆ ಹೋಲಿಸಿದರೆ ದಕ್ಷಿಣ ಕರ್ನಾಟಕದ ಜನತೆ ನೆಮ್ಮದಿಯ ಬದುಕನ್ನು ಕಂಡುಕೊಂಡಿರುವುದು ಸತ್ಯ ಸಂಗತಿ. ಸ್ವತಂತ್ರ ಪೂರ್ವ ಹಾಗೂ ನಂತರದ ದಿನಗಳಲ್ಲೂ ದಕ್ಷಿಣ ಕರ್ನಾಟಕ ಭಾಗಕ್ಕೆ ಸಿಕ್ಕ ರೈಲು ಹಾಗೂ ರಸ್ತೆ ಸಾರಿಗೆ ಸುವ್ಯವಸ್ಥೆ, ನೀರಾವರಿ, ಶಿಕ್ಷಣ, ಆರೋಗ್ಯ ಇವೆಲ್ಲ ಅಂಶಗಳು ಕಾರಣವಾಗಿವೆ. ಆದರೆ ಇವುಗಳಿಂದ ಉತ್ತರ ಕರ್ನಾಟಕದ ಜನತೆ ವಂಚಿತರಾದದ್ದು ಕಟು ವಾಸ್ತವಿಕ ಸತ್ಯಗಳಲ್ಲಿ ಒಂದು.

ಈ ಅಸಮಾನತೆ 1956ರಲ್ಲಿ ಏಕೀಕರಣಗೊಂಡು ಉದ್ಭವವಾದ ಕರ್ನಾಟಕ ರಾಜ್ಯ (ಮೈಸೂರು) ದಲ್ಲಿ ನಂತರವೂ ಮುಂದುವರೆದಿದ್ದು ದುರಂತವೇ ಸರಿ. ಆಡಳಿತವೆಲ್ಲವೂ ಉತ್ತರ

ಕರ್ನಾಟಕದಿಂದ 500 ಕಿ.ಮೀ. ದೂರದ ರಾಜಧಾನಿ ದಕ್ಷಿಣದ ಬೆಂಗಳೂರಿನಲ್ಲಿ ಕೇಂದ್ರೀಕೃತಗೊಂಡದ್ದು ಅಸಮಾನತೆಯ ಮೂಲ ಕಾರಣವಾದರೆ, ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳನ್ನು ಪ್ರತಿನಿಧಿಸುತ್ತಾ ಬಂದ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯೂ ಸಹ ಮತ್ತೊಂದು ಪ್ರಭಲ ಕಾರಣವಾಗಿದೆ.

90ರ ದಶಕದಲ್ಲಿ ಕೊಪ್ಪಳ ಜಿಲ್ಲೆ ರಚನೆಯಾಗುವ ಮುನ್ನ ಇದು ರಾಯಚೂರು ಜಿಲ್ಲೆಯ ಭಾಗವಾಗಿತ್ತು. ಇಲ್ಲಿನ ರೈತನೊಬ್ಬ ತನ್ನ ಭೂಮಿಯ ದಾಖಲೆಗೆ ಅಥವಾ ನ್ಯಾಯಾಲಯದ ವ್ಯವಹಾರಕ್ಕೆ 175 ಕಿ.ಮೀ. ದೂರದ ಜಿಲ್ಲಾ ಕೇಂದ್ರವಾದ ರಾಯಚೂರಿಗೆ ಹೋಗಬೇಕಾದ ಪರಿಸ್ಥಿತಿ ಇತ್ತೆಂದರೆ, ಇಂತಹ ಸ್ಥಿತಿಯಲ್ಲಿ ಯಾವ ಅಭಿವೃದ್ಧಿ ತಾನೆ ಸಾಧ್ಯವಾಗಬಲ್ಲದು? ಸಧ್ಯದ ಸ್ಥಿತಿಯಲ್ಲಿ ಅನೇಕ ಜಿಲ್ಲೆಗಳು ಉದ್ಭವವಾಗಿ ಆಡಳಿತ ವಿಕೇಂದ್ರಿತಗೊಂಡು ಅಭಿವೃದ್ಧಿ ಕೆಲಸಗಳು ಸಾಗುತ್ತಿದ್ದರೂ ಕೂಡ ಶಿಕ್ಷಣ, ಆರೋಗ್ಯ, ವಸತಿ, ರಸ್ತೆ, ನೀರಾವರಿ, ಕೈಗಾರಿಕೆ, ಉದ್ಯೋಗ ಸೃಷ್ಟಿ ಇವುಗಳಲ್ಲಿ ತೃಪ್ತಿಕರವಾದ ವಾತಾವರಣ ಕಂಡುಬಂದಿಲ್ಲ. ಅಲ್ಲದೇ ಕರ್ನಾಟಕ ಸರಕಾರ ನೇಮಿಸಿದ್ದ ಆರ್ಥಿಕ ತಜ್ಞ ಡಾ. ಡಿಎಂ.ನಂಜುಂಡಪ್ಪ ನೇತೃತ್ವದ ಸಮಿತಿ ಕರ್ನಾಟಕದಲ್ಲಿ ತಾಂಡವವಾಡುತ್ತಿರುವ ಅಸಮತೋಲನ ನಿವಾರಣೆಗೆ ನೀಡಿದ ವರದಿಯನ್ನು ರಾಜ್ಯ ಸರಕಾರ ಇನ್ನೂ ಪೂರ್ಣ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತಂದಿಲ್ಲ.

ಡಾ. ನಂಜುಂಡಪ್ಪನವರ ವರದಿಯಲ್ಲಿ ರಾಜ್ಯದ 178 ತಾಲೂಕು ಕೇಂದ್ರಗಳ ವಸ್ತು ಸ್ಥಿತಿಯ ಬಗ್ಗೆ ಚರ್ಚಿಸಲಾಗಿದ್ದು 75 ಕ್ಕೂ ಹೆಚ್ಚು ತಾಲೂಕುಗಳನ್ನು ಅತಿ ಹಿಂದುಳಿದ ತಾಲೂಕುಗಳೆಂದು ಗುರುತಿಸಲಾಗಿದೆ. ಇವುಗಳೆಲ್ಲವೂ ರಾಜ್ಯದ ಗಡಿ ಜಿಲ್ಲೆಗಳಾದ ಬಿಜಾಪುರ, ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿರುವುದು ವಿಶೇಷ. ಡಾ. ನಂಜುಂಡಪ್ಪನವರ ವರದಿ ಔಚಿತ್ಯಪೂರ್ಣವಾದ ಮಾಹಿತಿಗಳನ್ನು ಒಳಗೊಂಡಿದ್ದು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸರಕಾರ ಕೈಗೊಳ್ಳಬೇಕಾದ ಅನೇಕ ಮಾರ್ಗದರ್ಶಿ ಸೂತ್ರಗಳಿವೆ. ಇವುಗಳನ್ನು ಸರಕಾರ ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಹೊಣೆಗಾರಿಕೆ ಕೂಡ ಹೆಚ್ಚಿನದಾಗಿದೆ. ಏಕೆಂದರೆ ಪ್ರಾಧಿಕಾರದ ವ್ಯಾಪ್ತಿಗೆ ಬರುವ ರಾಜ್ಯದ 18 ಜಿಲ್ಲೆಗಳ 52 ತಾಲೂಕುಗಳಲ್ಲಿ ಡಾ.ನಂಜುಂಡಪ್ಪ ಗುರುತಿಸಿರುವ 42 ತಾಲೂಕುಗಳು ಸೇರಿರುವುದು ಗಮನಾರ್ಹ.

ಡಾ. ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಪ್ರಾದೇಶಿಕ ಅಸಮತೋಲನೆಯ ನಿವಾರಣೆಗಾಗಿ ಸರಕಾರ ಹಿಂದುಳಿದ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಔದ್ಯೋಗಿಕ ತರಬೇತಿ ಸಂಸ್ಥೆಗಳ ಸ್ಥಾಪನೆ, ಆರೋಗ್ಯ, ವಸತಿ, ಕುಡಿಯುವ ನೀರು, ರಸ್ತೆ, ಒಳಚರಂಡಿ, ಕೃಷಿ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆಗಳ ವಿಸ್ತರಣೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇವುಗಳಿಗೆ ಆದ್ಯತೆ ನೀಡಬೇಕೆಂದು ಪ್ರಸ್ತಾಪಿಸಿದ್ದಾರೆ. ಅಸಮತೋಲನೆ ನಿವಾರಣೆಗಾಗಿ 31 ಸಾವಿರ ಕೋಟಿ ಬಂಡವಾಳ ತೊಡಗಿಸಬೇಕಾಗಿದ್ದು ಇದರಲ್ಲಿ ಒಂದೇ ಬಾರಿಗೆ 15 ಸಾವಿರ ಕೋಟಿ ವಿನಿಯೋಗಿಸಿ, ಉಳಿದ 16 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ 2 ಸಾವಿರ ಕೋಟಿಯಂತೆ ಪ್ರತಿ ಬಜೆಟ್‌ನಲ್ಲಿ ಮೀಸಲಾಗಿರಿಸಬೇಕೆಂದು ಸೂಚಿಸಲಾಗಿತ್ತು.

> **ಪ್ರತಿ ವರ್ಷ ಬೇಸಿಗೆಯಲ್ಲಿ ಬಂದೆರಗುವ ಬರಗಾಲವನ್ನು ಎದುರಿಸಲಾರದೆ ಉತ್ತರ ಕರ್ನಾಟಕದ ಬಿಜಾಪುರ, ರಾಯಚೂರು, ಗುಲ್ಬರ್ಗ, ಕೊಪ್ಪಳ ಜಿಲ್ಲೆಗಳಿಂದ ಲಕ್ಷಾಂತರ ಕುಟುಂಬಗಳು ಉದ್ಯೋಗ ಅರಸಿ ನೆರೆಯ ರಾಜ್ಯಗಳಿಗೆ ವಲಸೆ ಹೋಗುತ್ತಿವೆ. ಇವುಗಳಲ್ಲಿ ಶೇ.90ರಷ್ಟು ಕೃಷಿಕ ಮತ್ತು ಕೂಲಿ ಕಾರ್ಮಿಕರ ಕುಟುಂಬಗಳೇ ಆಗಿವೆ. ಈ ಪ್ರದೇಶದ ಜನತೆಗೆ ಈವರೆಗೆ ನಮ್ಮನ್ನಾಳಿದ, ಆಳುತ್ತಿರುವ ಸರಕಾರಗಳು ಉದ್ಯೋಗ ಸೃಷ್ಟಿಸುವಲ್ಲಿ ಏಕೆ ವಿಫಲವಾಗಿವೆ? ರಾಜ್ಯದ ಅಭಿವೃದ್ಧಿಯಲ್ಲಿ ಈ ಪ್ರದೇಶಗಳ ಕೊಡುಗೆ ಏನು? ವಿಫಲತೆಗೆ ಕಾರಣವೇನು? ಈ ಎಲ್ಲ ಪ್ರಶ್ನೆಗಳಿಗೆ ನಾವಿನ್ನೂ ಉತ್ತರ ಕಂಡುಕೊಂಡಿಲ್ಲ. ಉತ್ತರ ಕರ್ನಾಟಕದ ಜನತೆ ನೆರೆಯ ರಾಜ್ಯಗಳಲ್ಲಿ ಕಟ್ಟಡದ ಕಾರ್ಮಿಕರಾಗಿ, ರಸ್ತೆ ಕಾಮಗಾರಿಯಲ್ಲಿ ತೊಡಗಿಕೊಳ್ಳುತ್ತ 3ನೇ ದರ್ಜೆಯ ನಾಗರೀಕರಾಗಿ ಬೀದಿ ಬದಿಯಲ್ಲಿ ಕುಟುಂಬ ಸಮೇತರಾಗಿ ಬದುಕುತ್ತಿರುವ ಈ ಶ್ರಮಜೀವಿಗಳಿಗೆ ಶಾಶ್ವತ ಪರಿಹಾರವನ್ನು ಏಕೆ ಕಂಡು ಕೊಂಡಿಲ್ಲ? ಇವರ ಬದುಕು ರಾಜ್ಯದ ಜನತೆಗೆ ಅಪಮಾನ ಎಂದು ನಾವೇಕೆ ಪರಿಭಾವಿಸಿಲ್ಲ?**

ಪ್ರಸ್ತುತ ರಾಜ್ಯ ಸರಕಾರ ಈ ಬಗ್ಗೆ ಗಮನ ಹರಿಸಿರುವುದು ಸಮಾಧಾನಕರ ಸಂಗತಿಯಾದರೂ, ಡಾ.ನಂಜುಂಡಪ್ಪ ಸಮಿತಿ ಸೂಚಿಸಿದಷ್ಟು ರೀತಿಯಲ್ಲಿ ಬಂಡವಾಳ ವಿನಿಯೋಗ ಸಾಧ್ಯವಾಗಿಲ್ಲ. ಈಗಾಗಲೇ ಹಲವಾರು ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದರೂ ಬೆಳೆಯುತ್ತಿರುವ ಜನಸಂಖ್ಯೆ, ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇವೆಲ್ಲವೂ ಅಸಮತೋಲನ ನಿವಾರಣೆಗೆ ಅಡ್ಡಿಯಾಗಿರುವುದು ಗಮನಿಸಬೇಕಾದ ಸಂಗತಿ. ಇವುಗಳ ಜೊತೆಗೆ ಅನಿರೀಕ್ಷಿತವಾಗಿ ಬಂದೆರಗುತ್ತಿರುವ ನೈಸರ್ಗಿಕ ವಿಕೋಪ ಹಾಗೂ ಆಳುವ ಸರಕಾರಗಳನ್ನು ಕಾಡುವ ಅಸ್ಥಿರತೆ ಪರೋಕ್ಷವಾಗಿ ಅಭಿವೃದ್ಧಿಗೆ ಅಡ್ಡಿಯಾಗಿರುವುದನ್ನು ನಾವು ಮನಗಾಣಬೇಕಾಗಿದೆ.

ಇಪ್ಪತ್ತೊಂದನೇ ಶತಮಾನದ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸವೆಂದರೆ ಪಕ್ಷ ಬೇಧ ಮರೆತು ನಮ್ಮನ್ನಾಳುತ್ತಿರುವ ಎಲ್ಲಾ ಸರಕಾರಗಳು ಅಭಿವೃದ್ಧಿ ಕುರಿತಂತೆ ತಪ್ಪಾಗಿ ವ್ಯಾಖ್ಯಾನಿಸುತ್ತಿರುವುದು. ಪ್ರಗತಿ ಸಾಧಿಸಿದ ಒಂದೆರಡು ವಲಯಗಳಿಂದ ಗಳಿಸಿದ ವರಮಾನವನ್ನು ಇಡೀ ಸಮಗ್ರ ಅಭಿವೃದ್ಧಿ ಬೆಳವಣಿಗೆಯ ದರಕ್ಕೆ ತಳಕು ಹಾಕಿ ಸಾಮಾನ್ಯ ಜನರನ್ನು ದಾರಿ ತಪ್ಪಿಸುವ ಕೆಲಸದಲ್ಲಿ ಸರಕಾರಗಳು ನಿರತವಾಗಿವೆ. ಈ ಕಾರಣಕ್ಕಾಗಿಯೇ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಅಮಾರ್ತ್ಯಸೇನ್, "ಬಡತನವೆಂದರೆ ವ್ಯಕ್ತಿಯೊಬ್ಬನ ಭೌತಿಕ ಸ್ಥಿತಿ ಅಲ್ಲ. ಇದು ಬಡತನಕ್ಕೆ ಮಾನದಂಡವಾಗಲಾರದು. ನಾಗರಿಕನೊಬ್ಬನ ವರಮಾನ ಹೆಚ್ಚಿದ್ದರೂ ಕೂಡ ಆತ ಶಿಕ್ಷಣ, ವಸತಿ, ಆರೋಗ್ಯ ಮುಂತಾದ ಸೇವೆಗಳಿಂದ ವಂಚಿತನಾಗಿದ್ದರೆ, ಬಡತನದ ರೇಖೆಯಿಂದ ಮೇಲೆದ್ದು ಬಂದ ಬಡವ" ಎಂದು ವ್ಯಾಖ್ಯಾನಿಸಿದ್ದಾರೆ.

೨

ವ್ಯಕ್ತಿಯೊಬ್ಬ ತನ್ನ ಧಾರಣ ಸಾಮರ್ಥ್ಯವನ್ನು ಕೇವಲ ವರಮಾನದಿಂದ ಅಥವಾ ಸರಕಾರ ಜನಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಬಂಡವಾಳದಿಂದ ದಕ್ಕಿಸಿಕೊಳ್ಳುವುದಿಲ್ಲ. ಸಮಾಜದ ಕೆಳಸ್ತರದ ಮನುಷ್ಯ ಅಥವಾ ಮಹಿಳೆ ಸಮಾಜದಲ್ಲಿ ಲಭ್ಯವಾಗುವ ಎಲ್ಲಾ ಸೌಲಭ್ಯಗಳನ್ನು ಎಷ್ಟರ ಮಟ್ಟಿಗೆ ಸದುಪಯೋಗಪಡಿಸಿಕೊಂಡು ದಕ್ಕಿಸಿಕೊಳ್ಳುತ್ತಾರೆ ಎಂಬುದರ ಮೇಲೆ ಅವರ ಧಾರಣಾ ಸಾಮರ್ಥ್ಯ ನಿರ್ಧಾರವಾಗುತ್ತದೆ. ಜಾತಿ, ಧರ್ಮ ಅಥವಾ ಪ್ರಾದೇಶಿಕ ಭಿನ್ನತೆ ಕಾರಣದಿಂದ ಅನೇಕ ಸಮುದಾಯಗಳು ಇಂತಹ ಅವಕಾಶದಿಂದ ವಂಚಿತವಾಗಿರಬಹುದು.

ಇವುಗಳನ್ನು ಸೂಕ್ಷ್ಮವಾಗಿ ಗಮನಿಸುವ ಹಾಗೂ ಕುಂದು ಕೊರತೆಗಳನ್ನು ಅಧ್ಯಯನ ಮಾಡಿ ನಿವಾರಿಸುವ ನೈತಿಕ ಹೊಣೆ ಸರಕಾರಗಳ ಮೇಲಿರುತ್ತದೆ. ಅಮಾರ್ತ್ಯ ಸೇನ್ ಈ ಕುರಿತಂತೆ "ಜನತೆ ಅನೇಕ ಬಗೆಯ ಸ್ವಾತಂತ್ರ್ಯಗಳಿಂದ ಮತ್ತು ಅವಕಾಶಗಳಿಂದ ವಂಚಿತರಾಗಿ ತಾವು ಬದುಕುವ ಕತ್ತಲೆಯ ಕೂಪದಿಂದ ಪಡೆಯುವ ಬಿಡುಗಡೆಯಡೆಯೇ ಅಭಿವೃದ್ಧಿ" ಎಂದು ನಿರ್ವಚಿಸಿದ್ದಾರೆ. ವಾಸ್ತವವಾಗಿ ರಾಜ್ಯದ ಅಭಿವೃದ್ಧಿ ಬೆಳವಣಿಗೆಯ ದರ ಶೋಚನೀಯವಲ್ಲ. ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ರಾಜ್ಯದ ಸಮಗ್ರ ಅಭಿವೃದ್ಧಿಯ ಸಂಕೇತವೇನಲ್ಲ. ರಾಜ್ಯದ ಒಟ್ಟು ಬೆಳವಣಿಗೆಯಲ್ಲಿ ಮಾಹಿತಿ ತಂತ್ರಜ್ಞಾನದ ಕೊಡುಗೆ ಎರಡಂಕಿ ದಾಟುವುದಿಲ್ಲ. ಇದನ್ನು ಸರಕಾರ ಹಾಗೂ ಪ್ರತಿನಿಧಿಗಳು ಮನಗಾಣಬೇಕು.

ರಾಜ್ಯ ಸರಕಾರದ ಅನೇಕ ಸಾಧನೆಗಳ ನಡುವೆ ಅರಿಯಬೇಕಾದ ವಾಸ್ತವ ಸಂಗತಿಯೊಂದಿದೆ. ಪ್ರತಿ ವರ್ಷ ಬೇಸಿಗೆಯಲ್ಲಿ ಬಂದೆರಗುವ ಬರಗಾಲವನ್ನು ಎದುರಿಸಲಾರದೆ ಉತ್ತರ ಕರ್ನಾಟಕದ ಬಿಜಾಪುರ, ರಾಯಚೂರು, ಗುಲ್ಬರ್ಗ, ಕೊಪ್ಪಳ ಜಿಲ್ಲೆಗಳಿಂದ ಲಕ್ಷಾಂತರ ಕುಟುಂಬಗಳು ಉದ್ಯೋಗ ಅರಸಿ ನೆರೆಯ ರಾಜ್ಯಗಳಿಗೆ ವಲಸೆ ಹೋಗುತ್ತಿವೆ. ಇವುಗಳಲ್ಲಿ ಶೇ.90ರಷ್ಟು ಕೃಷಿಕ ಮತ್ತು ಕೂಲಿ ಕಾರ್ಮಿಕರ ಕುಟುಂಬಗಳೇ ಆಗಿವೆ. ಈ ಪ್ರದೇಶದ ಜನತೆಗೆ ಈವರೆಗೆ ನಮ್ಮನ್ನಾಳಿದ, ಆಳುತ್ತಿರುವ ಸರಕಾರಗಳು ಉದ್ಯೋಗ ಸೃಷ್ಟಿಸುವಲ್ಲಿ ಏಕೆ ವಿಫಲವಾಗಿವೆ? ರಾಜ್ಯದ ಅಭಿವೃದ್ಧಿಯಲ್ಲಿ ಈ ಪ್ರದೇಶಗಳ ಕೊಡುಗೆ ಏನು? ವಿಫಲತೆಗೆ ಕಾರಣವೇನು? ಈ ಎಲ್ಲ ಪ್ರಶ್ನೆಗಳಿಗೆ ನಾವಿನ್ನೂ ಉತ್ತರ ಕಂಡುಕೊಂಡಿಲ್ಲ.

ಉತ್ತರ ಕರ್ನಾಟಕದ ಜನತೆ ನೆರೆಯ ರಾಜ್ಯಗಳಲ್ಲಿ ಕಟ್ಟಡದ ಕಾರ್ಮಿಕರಾಗಿ, ರಸ್ತೆ ಕಾಮಗಾರಿಯಲ್ಲಿ ತೊಡಗಿಕೊಳ್ಳುತ್ತ 3ನೇ ದರ್ಜೆಯ ನಾಗರಿಕರಾಗಿ ಬೀದಿ ಬದಿಯಲ್ಲಿ ಕುಟುಂಬ ಸಮೇತರಾಗಿ ಬದುಕುತ್ತಿರುವ ಈ ಶ್ರಮಜೀವಿಗಳಿಗೆ ಶಾಶ್ವತ ಪರಿಹಾರವನ್ನು ಏಕೆ ಕಂಡುಕೊಂಡಿಲ್ಲ? ಇವರ ಬದುಕು ರಾಜ್ಯದ ಜನತೆಗೆ ಅಪಮಾನ ಎಂದು ನಾವೇಕೆ ಪರಿಭಾವಿಸಿಲ್ಲ?

ವರ್ಷದ 6 ತಿಂಗಳು ಹೊರರಾಜ್ಯಗಳಲ್ಲಿ ಬದುಕುವ ಈ ಕುಟುಂಬಗಳಿಗೆ ರಾಜ್ಯ ಸರಕಾರ ನೀಡುತ್ತಿರುವ ಯಾವುದೇ ಸವಲತ್ತುಗಳು ತಲುಪುವುದು ಕನಸಿನಮಾತೇ ಸರಿ. ಹಿಂದುಳಿದ ಪ್ರದೇಶಗಳಲ್ಲಿ ಅಸಂಖ್ಯಾತ ಉದ್ಯೋಗ ಸೃಷ್ಟಿಸುವ ಕೃಷಿಗೆ ಒತ್ತು ನೀಡಿ, ನೀರಾವರಿ ಯೋಜನೆ, ಕೈತೋಟ ಅಭಿವೃದ್ಧಿ, ಹೈನುಗಾರಿಕೆ, ಕೋಳಿಸಾಕಾಣಿಕೆ ಮುಂತಾದ ಉಪ ಕಸುಬುಗಳ ಮೂಲಕ ಜೀವನಕ್ಕೆ ಆಧಾರವಾಗಿ ನಿಲ್ಲುವುದರ ಜೊತೆಗೆ ಪರಿಣಾಮಕಾರಿಯಾದ ಸಾರ್ವಜನಿಕ ಪಡಿತರ ವ್ಯವಸ್ಥೆ, ಕೈಗೆಟುಕುವ ದರದಲ್ಲಿ ರೈತರಿಗೆ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಉಚಿತವಾಗಿ ಸಿಗುವ ಆರೋಗ್ಯ ಮತ್ತು ಶಿಕ್ಷಣ ಇವುಗಳನ್ನು ಒದಗಿಸಿ ನಿರುದ್ಯೋಗಿಗಳಿಗೆ ತಾಂತ್ರಿಕ ಶಿಕ್ಷಣ ವ್ಯವಸ್ಥೆ ಮಾಡುವ ಮೂಲಕ ಗಡಿ ಪ್ರದೇಶದ ಹಿಂದುಳಿದ ತಾಲೂಕುಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ.

ಆಯಾ ಜಿಲ್ಲೆ ಮತ್ತು ಪ್ರದೇಶದ ಹವಾಮಾನಕ್ಕೆ ಹೊಂದಿಕೊಳ್ಳಬಹುದಾದ ಬೆಳೆಗಳ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಿ, ಉಪಕಸುಬುಗಳ ಬಗ್ಗೆ ಒಲವು ಮೂಡುವಂತೆ ಮಾಡಬೇಕಾದ ಅಗತ್ಯತೆ ಇದೆ. ನೆರೆಯ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ಕೃಷಿ ವಿ.ವಿ.ಗಳು ಈ ನಿಟ್ಟಿನಲ್ಲಿ ರೂಪಿಸಿರುವ ಕಾರ್ಯಕ್ರಮಗಳು ಅಭಿವೃದ್ಧಿಗೆ ನೆರವಾಗಬಲ್ಲವು. ಆಂಧ್ರಪ್ರದೇಶದ ಸಂಗಾರೆಡ್ಡಿ, ಮೆಡಕ್, ಅದಿಲಾಬಾದ್ ಜಿಲ್ಲೆಗಳು, ತಮಿಳುನಾಡಿನ ದಿಂಡಿಗಲ್, ನಾಗರಕೋಯಿಲ್, ತಿರುನ್ನಾವೇಲಿ, ರಾಮನಾಥಪುರ ಜಿಲ್ಲೆಗಳಲ್ಲಿ ಕಡಿಮೆ ನೀರಿನಲ್ಲಿ ಹಾಗೂ ಮಳೆಯಾಶ್ರಯದಲ್ಲಿ ಬೆಳೆಯಬಹುದಾದ ಅನೇಕ ಬಗೆಯ ಆಹಾರ ದಾನ್ಯಗಳ ತಳಿಗಳನ್ನು ಹಾಗೂ ಬಿಸಿಲು ಮತ್ತು ಉಷ್ಣವನ್ನು ಸಹಿಸಿಕೊಳ್ಳಬಲ್ಲ ಮೇಕೆ, ಕುರಿ ಹಾಗೂ ಗೋವುಗಳು ಮುಂತಾದ ತಳಿಗಳನ್ನು ಅಭಿವೃದ್ಧಿ ಪಡಿಸಿ ಪರಿಚಯಿಸಲಾಗಿದೆ. ಇದರಿಂದಾಗಿ ಅನೇಕ ಬಡಕುಟುಂಬಗಳು ಬದುಕುವ ದಾರಿ ಕಂಡುಕೊಂಡಿವೆ. ಇಂತಹದ್ದೇ ಯೋಜನೆಗಳನ್ನು ರಾಜ್ಯ ಸರಕಾರ ಗಡಿನಾಡಿನ ಹಿಂದುಳಿದ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾಗಿದೆ. ಗುಜರಾತಿನ ಮುಖ್ಯಮಂತ್ರಿ ನರೇಂದ್ರಮೋದಿಯ ಬಗ್ಗೆ ಏನೇ ತಕರಾರುಗಳಿರಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಅವರು ಗುಜರಾತಿನ ಗ್ರಾಮೀಣ ಪ್ರದೇಶಗಳಲ್ಲಿ ಜಾರಿಗೆ ತಂದ ಸುಧಾರಣೆಗಳು ದೇಶದ ಎಲ್ಲಾ ರಾಜ್ಯಗಳಿಗೆ ಮಾದರಿಯಾಗಿದೆ.

೩

ಕರ್ನಾಟಕ ಸರಕಾರದ ಮುಂದಿರುವ ಅತ್ಯಂತ ದೊಡ್ಡ ಸವಾಲೆಂದರೆ ಸ್ಥಳೀಯವಾಗಿ ದೊರಕುವ ಸಂಪನ್ಮೂಲ ಹಾಗೂ ಮಾನವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದೇ ಆಗಿದೆ. ರಾಜ್ಯದ ರಾಜಧಾನಿ ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ ಕೆಲವು ಸ್ಥಳಗಳಲ್ಲಿ ಬಹುತೇಕ ಕೈಗಾರಿಕೆಗಳು ಕೇಂದ್ರೀಕೃತವಾಗಿದ್ದು, ಇದು ಸಮಾನ ಉದ್ಯೋಗ ಸೃಷ್ಟಿಗೆ ತೊಡಕಾಗಿದೆ. ಇದಕ್ಕೆ ಪೂರಕವಾಗಿ ಬಂಡವಾಳ ಹೂಡಿಕೆದಾರರಿಗೆ ಅವರು ಕೇಳಿದ ಸ್ಥಳಗಳಲ್ಲೇ ಕೈಗಾರಿಕೆ ಸ್ಥಾಪಿಸಲು ಸರಕಾರ ಅನುವು ಮಾಡಿಕೊಡುತ್ತಿರುವುದು ಪ್ರಾದೇಶಿಕ ಅಸಮಾನತೆಗೆ ಮಾತ್ರವಲ್ಲ, ಉದ್ಯೋಗ ಸೃಷ್ಟಿಯ ವಿಫಲತೆಗೂ ಕಾರಣವಾಗತೊಡಗಿದೆ. ಬೆಂಗಳೂರು, ಮೈಸೂರಿನಂತಹ ನಗರಗಳು ಮೆಟ್ರೊಪಾಲಿಟನ್ ಸಂಸ್ಕೃತಿಗೆ ಒಳಗಾಗಿದ್ದು ಇಂತಹ ಸ್ಥಳಗಳಲ್ಲಿ ಸೃಷ್ಟಿಯಾಗುವ ಉದ್ಯೋಗದ ಅವಕಾಶಗಳು ನೆರೆ ರಾಜ್ಯಗಳ ಅನ್ಯ ಭಾಷಿಗರ ಪಾಲಾಗುತ್ತಿವೆ. ಇಂತಹ ಸ್ಥಳಗಳಿಗೆ ಬದಲಾಗಿ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಕಡಿಮೆ ಬೆಲೆಯಲ್ಲಿ ಭೂಮಿ, ನೀರು, ವಿದ್ಯುತ್ ಒದಗಿಸುವುದರ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯ ಸರಕಾರ ಮುಂದಾಗಬೇಕಾಗಿದೆ. ಈ ನಿಟ್ಟಿನಲ್ಲಿ ಗಡಿ ನಾಡ ಪ್ರದೇಶಗಳಲ್ಲಿ ಲಭ್ಯವಾಗುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳ ಬಗ್ಗೆ ಅಧ್ಯಯನ ಅತ್ಯವಶ್ಯಕ.

ಬೆಂಗಳೂರು ನಗರದಲ್ಲಿ 4 ಸಾವಿರ ಸಿದ್ಧ ಉಡುಪುಗಳ ಕಾರ್ಖಾನೆಗಳು ಇದ್ದು, ಇವುಗಳಲ್ಲಿ 16 ಲಕ್ಷ ಮಹಿಳಾ ಕಾರ್ಮಿಕರು ಅಸಂಘಟಿತವಾಗಿ ದುಡಿಯುತ್ತಿದ್ದಾರೆ.(ಸರಕಾರದ ಅಧಿಕೃತ ಅಂಕಿ-ಅಂಶಗಳ ಪ್ರಕಾರ ಈ ಮಹಿಳಾ ಕಾರ್ಮಿಕರ ಸಂಖ್ಯೆ 6 ಲಕ್ಷ). ಬೆಂಗಳೂರು ನಗರದಿಂದ 98 ಕಿ.ಮೀ. ದೂರದ ಮಂಡ್ಯ, 80 ಕಿ.ಮೀ. ದೂರದ ಮದ್ದೂರು, 60 ಕಿ.ಮೀ. ದೂರದ ಚನ್ನಪಟ್ಟಣ, 50 ಕಿ.ಮೀ. ದೂರದ ರಾಮನಗರ ಪಟ್ಟಣ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಿಂದ 5 ಸಾವಿರ ಮಹಿಳಾ ಕಾರ್ಮಿಕರು ದುಡಿಯುತ್ತಿರುವುದನ್ನು ಮನಗಂಡ ಈ ಪ್ರದೇಶಗಳ ಜನ ಪ್ರತಿನಿಧಿಗಳು ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿಯವರ ಗಮನಕ್ಕೆ ತಂದರು. ಇದರ ಪರಿಣಾಮವಾಗಿ ಅಂದು ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಸಿದ್ಧ ಉಡುಪು ಕಾರ್ಖಾನೆಗಳ ಮಾಲೀಕರ ಮನವೊಲಿಸಿದ ಪರಿಣಾಮ ಇಂದು ರಾಮನಗರ, ಚನ್ನಪಟ್ಟಣ, ಮದ್ದೂರಿನಲ್ಲಿ 30 ಕ್ಕೂ ಹೆಚ್ಚು ಕಾರ್ಖಾನೆಗಳು ತಲೆ ಎತ್ತಿವೆ.

ಬೆಂಗಳೂರು, ಮೈಸೂರಿನಂತಹ ನಗರಗಳು ಮೆಟ್ರೊಪಾಲಿಟನ್ ಸಂಸ್ಕೃತಿಗೆ ಒಳಗಾಗಿದ್ದು ಇಂತಹ ಸ್ಥಳಗಳಲ್ಲಿ ಸೃಷ್ಟಿಯಾಗುವ ಉದ್ಯೋಗದ ಅವಕಾಶಗಳು ನೆರೆ ರಾಜ್ಯಗಳ ಅನ್ಯ ಭಾಷಿಗರ ಪಾಲಾಗುತ್ತಿವೆ. ಇಂತಹ ಸ್ಥಳಗಳಿಗೆ ಬದಲಾಗಿ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಕಡಿಮೆ ಬೆಲೆಯಲ್ಲಿ ಭೂಮಿ, ನೀರು, ವಿದ್ಯುತ್ ಒದಗಿಸುವುದರ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯ ಸರಕಾರ ಮುಂದಾಗಬೇಕಾಗಿದೆ.ಈ ನಿಟ್ಟಿನಲ್ಲಿ ಗಡಿನಾಡ ಪ್ರದೇಶಗಳಲ್ಲಿ ಲಭ್ಯವಾಗುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳ ಬಗ್ಗೆ ಅಧ್ಯಯನ ಅತ್ಯವಶ್ಯಕ.

ಬೆಂಗಳೂರು ನಗರದಲ್ಲಿ ನೀಡುತ್ತಿದ್ದ ವೇತನಕ್ಕಿಂತ ಕಡಿಮೆ ವೇತನಕ್ಕೆ ದುಡಿಯುವ ಮಹಿಳಾ ಕಾರ್ಮಿಕರು ಲಭ್ಯವಾಗಿದ್ದು, ಸ್ಥಳೀಯ ಹೆಣ್ಣು ಮಕ್ಕಳಿಗೆ ತಾವಿರುವ ಮನೆಯ ಸಮೀಪವೇ ಉದ್ಯೋಗ ಸೃಷ್ಟಿಯಾದಂತಾಗಿದೆ. ಈ ಮಹಿಳಾ ಕಾರ್ಮಿಕರಲ್ಲಿ ಬಹುತೇಕ ಮಂದಿ ಹಿಂದುಳಿದ ವರ್ಗಗಳಿಂದ ಬಂದಿರುವುದು ವಿಶೇಷ. ಕೈಗಾರಿಕೋದ್ಯಮಿಗಳಿಗೆ ಕಡಿಮೆ ದರದಲ್ಲಿ ದೊರಕುತ್ತಿರುವ ಕಟ್ಟಡ, ಭೂಮಿ ಹಾಗೂ ಮಾನವ ಸಂಪನ್ಮೂಲ ಸೇರಿದಂತೆ ಇತರೆ ಸೌಲಭ್ಯಗಳು ದೊರಕುತ್ತಿರುವುದು ಸಿದ್ಧ ಉಡುಪು ಕಾರ್ಖಾನೆ ಸ್ಥಾಪನೆಗೆ ಹೆಚ್ಚು ಉತ್ಸಾಹ ಬಂದಂತಾಗಿದೆ. ಇಂತಹ ಕ್ರಿಯಾಶೀಲ ಯೋಜನೆಗಳನ್ನು ರಾಜ್ಯದ ಎಲ್ಲೆಡೆ ವಿಸ್ತರಿಸುವ ಅಗತ್ಯವಿದೆ. ಗಡಿ ಭಾಗದ ಬೆಳಗಾವಿ ಜಿಲ್ಲೆಯಲ್ಲಿ ಮೋಟಾರು ವಾಹನಗಳ ಬಿಡಿ ಭಾಗಗಳು, ಸಿದ್ಧಪಡಿಸಿದ ಆಹಾರ ವಸ್ತುಗಳು, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಹತ್ತಿ, ಜೋಳ, ಮೆಣಸಿನಕಾಯಿ ಆಧಾರಿತ ಗುಡಿ ಕೈಗಾರಿಕೆಗಳಿಗೆ ಒಳ್ಳೆಯ ಅವಕಾಶವಿದೆ. ಅದೇ ರೀತಿ ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ, ಹಣ್ಣು ಹಂಪಲುಗಳು ಮತ್ತು ಆಹಾರ ಸಂಸ್ಕರಣೆ, ಬೀದರ್ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆಗೆ ಉತ್ತಮ ಅವಕಾಶವಿದೆ.

ಹತ್ತು ವರ್ಷಗಳ ಹಿಂದೆ ಬೆಂಗಳೂರು ಸುತ್ತ ಮುತ್ತ ಎಕರೆಗೆ ತಲಾ 10 ಲಕ್ಷ ರೂನಂತೆ ಸರ್ಕಾರ ಭೂಮಿ ನೀಡುತ್ತಿದ್ದ ಸಂದರ್ಭದಲ್ಲಿ ಆಂಧ್ರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿದ್ದ ಚಂದ್ರಬಾಬುನಾಯ್ಡು ಹೈದರಾಬಾದ್-ಬೀದರ್ ನಡುವಿನ ಸಂಗಾರೆಡ್ಡಿ ಜಿಲ್ಲೆಯಲ್ಲಿ ಎಕರೆಗೆ 1 ಲಕ್ಷ ರೂನಂತೆ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ಕೃಷಿಗೆ ಯೋಗ್ಯವಲ್ಲದ ಭೂಮಿ ನೀಡಿ ಜಗತ್ತಿನ ದೈತ್ಯ ಸಂಸ್ಥೆಗಳನ್ನೆಲ್ಲಾ ಸೆಳೆದು ಕರ್ನಾಟಕಕ್ಕೆ ಸಡ್ಡು ಹೊಡೆದದ್ದನ್ನು ನಾವು ಗಮನಿಸಬೇಕು. ಈಗ ಬೆಂಗಳೂರು ಸುತ್ತ ಮುತ್ತ ಭೂಮಿಯ ಬೆಲೆ ಗಗನಕ್ಕೇರಿರುವ ಸಂದರ್ಭದಲ್ಲಿ ಬೆಂಗಳೂರಿನಿಂದ ಕೇವಲ 42 ಕಿ.ಮೀ. ದೂರದ ಹೊಸೂರು ತಾಲೂಕಿನಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಜಾಪುರ, ಅತ್ತಿಬೆಲೆ ಪಟ್ಟಣಗಳ ಸರಹದ್ದಿನಲ್ಲಿ ತಮಿಳುನಾಡು ಸರಕಾರ 4.5 ಸಾವಿರ ಎಕರೆ ಭೂಮಿಯನ್ನು ಐ.ಟಿ. ಪಾರ್ಕ್ ಆಗಿ ಪರಿವರ್ತಿಸಿ ಕರ್ನಾಟಕದ ಮಾಹಿತಿ ತಂತ್ರಜ್ಞಾನದ ಕಂಪನಿಗಳನ್ನು ತನ್ನತ್ತ ಸೆಳೆಯುತ್ತಿದೆ.

ಕರ್ನಾಟಕ ಸರಕಾರವೂ ಕೂಡ ಗಡಿ ಭಾಗದ ಮಾಲೂರು, ಮಾಸ್ತಿ, ಚಿಂತಾಮಣಿ, ಕೋಲಾರ ಈ ಪ್ರದೇಶಗಳಲ್ಲಿ ಐ.ಟಿ. ಪಾರ್ಕ್‌ಗಳನ್ನು ಸೃಷ್ಟಿಸುವ ಅಗತ್ಯವಿದೆ. ಕರ್ನಾಟಕ ಸರಕಾರ ಕಾಸರಗೋಡು ಸಮೀಪ ಕೇರಳ ಸರಕಾರ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶವನ್ನು ಎಚ್ಚರಿಕೆಯಿಂದ ಗಮನಿಸುವ ಅಗತ್ಯವಿದೆ. ಇಲ್ಲದಿದ್ದರೆ ಉದ್ಯೋಗ ಸೃಷ್ಟಿಗೆ ಅವಕಾಶದ ಬಾಗಿಲುಗಳು ಮುಚ್ಚಿ ಹೋಗುವುದನ್ನು ನಾವು ಕಾಣಬೇಕಾಗುತ್ತದೆ.

೪

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕ ಈ ಸಾಲಿನ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಅನುಮೋದನೆಗೊಂಡಿರುವುದರಿಂದ ಪ್ರಾಧಿಕಾರಕ್ಕೆ ವಿಶೇಷ ಸ್ವಾಯತ್ತತೆ ದೊರಕಿದೆ. ಈ ಅವಕಾಶವನ್ನು ಬಳಸಿಕೊಂಡು ರಾಜ್ಯದ ಗಡಿ ಪ್ರದೇ

ಶಗಳಲ್ಲಿ, ಎಲ್ಲಾ ಸ್ಥಳಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳುವುದರ ಮೂಲಕ ಗಡಿ ಪ್ರದೇಶಗಳಲ್ಲಿ ನಾಡು ನುಡಿ, ಸಾಂಸ್ಕೃತಿಕ ಪೋಷಣೆಗೆ ಮುಂದಾಗ ಬೇಕಾಗಿದೆ. ಪ್ರಾಧಿಕಾರದ ಸದಸ್ಯರಲ್ಲಿ ಸರಕಾರದ ವಿವಿಧ ಇಲಾಖೆಯ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಇರುವುದರಿಂದ ಅದರಲ್ಲೂ ವಿಶೇಷವಾಗಿ ಶಿಕ್ಷಣ ಇಲಾಖೆ, ಗ್ರಾಮಪಂಚಾಯತಿ ಇಲಾಖೆ, ಕಂದಾಯ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಿರುವುದರಿಂದ ಗಡಿ ಪ್ರದೇಶದ ಕುಂದು ಕೊರತೆಗಳನ್ನು ಅವರ ಗಮನಕ್ಕೆ ತಂದು ತಕ್ಷಣದಲ್ಲೇ ನಿವಾರಿಸುವ ಅವಕಾಶ ಪ್ರಾಧಿಕಾರಕ್ಕೆ ದೊರಕಿದೆ. ಇದನ್ನು ಸದುಪಯೋಗ ಪಡಿಸಿ ಕೊಂಡು ಸರ್ವತೋಮುಖ ಏಳಿಗೆಗೆ ಶ್ರಮಿಸುವುದರ ಜೊತೆಗೆ ರಾಜ್ಯದ ಬೆಳವಣಿಗೆಗೆ ಪೂರಕವಾಗುವಂತೆ ಸರಕಾರಕ್ಕೆ ಸಲಹೆ ಸೂಚನೆ ನೀಡುವ ಅಪರೂಪದ ಅವಕಾಶ ಪ್ರಾಧಿಕಾರಕ್ಕೆ ದೊರಕಿದೆ. ಈ ನಿಟ್ಟಿನಲ್ಲಿ ಗಡಿ ಜಿಲ್ಲೆಗಳ ಕುಂದು ಕೊರತೆಗಳ ಬಗ್ಗೆ ಆಳವಾದ ಅಧ್ಯಯನ ಮತ್ತು ಸಮೀಕ್ಷೆ ಅವಶ್ಯಕವಾಗಿದೆ.

ಗಡಿ ಜಿಲ್ಲೆಗಳಾದ ಬಿಜಾಪುರ, ಬೀದರ್, ಗುಲ್ಬರ್ಗ ಜಿಲ್ಲೆಗಳಲ್ಲಿರುವ ಐತಿಹಾಸಿಕ ಸ್ಮಾರಕಗಳಿಂದಾಗಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶಗಳಿವೆ. ಅದೇ ರೀತಿ ಚಾಮರಾಜನಗರ, ಕೊಡಗು, ಬೆಳಗಾಂ ಜಿಲ್ಲೆಯ ಖಾನಾಪುರದ ಪರಿಸರ ಮತ್ತು ಅರಣ್ಯ ಪ್ರದೇಶಗಳಲ್ಲಿ ಪ್ರವಾಸೋದ್ಯಮವನ್ನು ವಿಸ್ತರಿಸುವ ಸಾಧ್ಯತೆಗಳಿವೆ.

ಈಗಾಗಲೇ ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆ ನಷ್ಟದಿಂದ ಕಂಗೆಟ್ಟಿದ್ದ ಅಲ್ಲಿನ ಬೆಳೆಗಾರರು ತಮ್ಮ ಎಸ್ಟೇಟ್‌ಗಳಲ್ಲಿ ಹೋಂ ಸ್ಟೇ ಹೆಸರಿನಲ್ಲಿ ಅತಿಥಿಗೃಹಗಳನ್ನು ಸ್ಥಾಪಿಸಿ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದಾರೆ. ಇದಲ್ಲದೆ ಕೋಲಾರ ಜಿಲ್ಲೆಯ ಗಡಿ ಭಾಗದ ಚಿಂತಾಮಣಿ ಸಮೀಪ ಮದನಪಲ್ಲಿ ಬಳಿ ಇರುವ ಹಾರ್ಸ್‌ಲಿ ಹಿಲ್ಸ್ ಗಿರಿಧಾಮವನ್ನು ಆಂಧ್ರ ಪ್ರದೇಶದ ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಿ, ನೂರಾರು ಕಾಟೇಜ್‌ಗಳನ್ನು ನಿರ್ಮಿಸಿ ಕರ್ನಾಟಕದ ಪ್ರವಾಸಿಗರನ್ನೂ ಸೆಳೆಯುತ್ತಿವೆ. ಇಲ್ಲಿ ಯಾವುದೇ ಖಾಸಗಿ ವಸತಿ ನಿರ್ಮಾಣಕ್ಕೆ ಆಂಧ್ರ ಸರಕಾರ ಅವಕಾಶ ನೀಡದಿರುವುದು ವಿಶೇಷ. ಇದೇ ಮಾದರಿಯಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರವು ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಕ್ಯಾತದೇವರಗುಡಿ ಅರಣ್ಯ ಪ್ರದೇಶ, ಬೆಳಗಾಂ ಜಿಲ್ಲೆಯ ಖಾನಾಪುರ, ಉ.ಕ.ಜಿಲ್ಲೆಯ ಜೋಯಿಡಾ ಅರಣ್ಯಪ್ರದೇಶ, ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮ ಇವುಗಳನ್ನು ಪ್ರವಾಸೋದ್ಯಮ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಿದರೆ ಸ್ಥಳೀಯವಾಗಿ ಹಲವಾರು ಉದ್ಯೋಗಗಳ ಸೃಷ್ಟಿಗೆ ಸಹಾಯವಾಗುತ್ತದೆ.

ಗಡಿ ಅಭಿವೃದ್ಧಿ ಪ್ರಾಧಿಕಾರವು ಗಡಿ ಜಿಲ್ಲೆಗಳ ರೈತರ ಬದುಕನ್ನು ಹಸನುಗೊಳಿಸಲು ಹೆಚ್ಚಿನ ರೀತಿಯಲ್ಲಿ ಶ್ರಮಿಸಬೇಕಾಗಿದೆ. ಸ್ಥಳೀಯ ಗುಡಿ ಕೈಗಾರಿಕೆಗಳ ಕೊರತೆಯಿಂದಾಗಿ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಬೆಳೆಯುವ ಹತ್ತಿ ಜಿನ್ನಿಂಗ್ ಮತ್ತು ನೂಲು ತಯಾರಿಕೆಗಾಗಿ ದೂರದ ಕೊಯಮತ್ತೂರಿಗೆ ಹೋಗುತ್ತಿದ್ದರೆ, ಮೆಣಸಿನಕಾಯಿ ಗುಜರಾತ್ ಮತ್ತು ಆಂಧ್ರ ರಾಜ್ಯಗಳಿಗೆ ರಫ್ತಾಗುತ್ತಿದೆ. ಅದೇ ರೀತಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆಯುವ ಉತ್ತಮ ಗುಣಮಟ್ಟದ ಅರಿಶಿಣ ಮಾರುಕಟ್ಟೆಯ ಕೊರತೆಯಿಂದಾಗಿ ತಮಿಳುನಾಡಿನ ಈರೋಡ್‌ಗೆ ಸಾಗಿಸಲ್ಪಡುತ್ತಿದೆ. ಇಂತಹ ಅಂಶಗಳನ್ನು ಗಡಿನಾಡು ಅಭಿವೃದ್ಧಿ ಪ್ರಾಧಿಕಾರ ಸೂಕ್ಷ್ಮವಾಗಿ ಗಮನಿಸಬೇಕಾಗಿದೆ.

ಗಡಿ ಅಭಿವೃದ್ಧಿ ಪ್ರಾಧಿಕಾರವು ಗಡಿ ಜಿಲ್ಲೆಗಳ ರೈತರ ಬದುಕನ್ನು ಹಸನುಗೊಳಿಸಲು ಹೆಚ್ಚಿನ ರೀತಿಯಲ್ಲಿ ಶ್ರಮಿಸಬೇಕಾಗಿದೆ. ಸ್ಥಳೀಯ ಗುಡಿ ಕೈಗಾರಿಕೆಗಳ ಕೊರತೆಯಿಂದಾಗಿ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಬೆಳೆಯುವ ಹತ್ತಿ ಜಿನ್ನಿಂಗ್ ಮತ್ತು ನೂಲು ತಯಾರಿಕೆಗಾಗಿ ದೂರದ ಕೊಯಮತ್ತೂರಿಗೆ ಹೋಗುತ್ತಿದ್ದರೆ, ಮೆಣಸಿನಕಾಯಿ ಗುಜರಾತ್ ಮತ್ತು ಆಂಧ್ರ ರಾಜ್ಯಗಳಿಗೆ ರಫ್ತಾಗುತ್ತಿದೆ. ಅದೇರೀತಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆಯುವ ಉತ್ತಮ ಗುಣಮಟ್ಟದ ಅರಿಶಿಣ ಮಾರುಕಟ್ಟೆಯ ಕೊರತೆಯಿಂದಾಗಿ ತಮಿಳುನಾಡಿನ ಈರೋಡ್‌ಗೆ ಸಾಗಿಸಲ್ಪಡುತ್ತಿದೆ.

ರಾಜ್ಯದ ಗಡಿಗೆ ಹೊಂದಿಕೊಂಡಂತಿರುವ ನೆರೆ ರಾಜ್ಯಗಳ ವ್ಯಾಪ್ತಿಯಲ್ಲಿ ಸ್ಥಳೀಯರಿಗೆ ದೊರಕುತ್ತಿರುವ ಸರಕಾರದ ಅನುಕೂಲತೆಗಳನ್ನು ತೌಲನಿಕವಾಗಿ ಗಮನಿಸುವ ಅಗತ್ಯವಿದೆ. ಉದಾಹರಣೆಗೆ ಕರ್ನಾಟಕದ ರೈತರಿಗೆ ಹೋಲಿಸಿದರೆ ಆಂಧ್ರ ಸರಕಾರ ಅಲ್ಲಿನ ರೈತರಿಗೆ ವಿದ್ಯುತ್, ಬೀಜ, ಗೊಬ್ಬರ ಇತ್ಯಾದಿ ವಿಷಯಗಳಲ್ಲಿ ನೀಡುತ್ತಿರುವ ರಿಯಾಯ್ತಿ, ಗಡಿ ಭಾಗದ ಕನ್ನಡಿಗರಿಗೆ ರಾಜ್ಯ ಸರಕಾರದ ಬಗ್ಗೆ ನಿರಾಶೆ ಮೂಡಿಸುವಂತಿದೆ. ಬೆಳಗಾಂ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿರುವ ಕನ್ನಡ ಸರಕಾರಿ ಪ್ರಾಥಮಿಕ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಈ ತಾಲೂಕಿನಲ್ಲಿ ಶಾಲೆಗಳು ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದ್ದು, ಇಲ್ಲಿನ ಕನ್ನಡಿಗರು ತಮ್ಮ ಮಕ್ಕಳನ್ನು ಅತ್ಯುತ್ತಮ ವ್ಯವಸ್ಥೆಯಿಂದ ಕೂಡಿರುವ ಮರಾಠಿ ಶಾಲೆಗಳಿಗೆ ಕಳಿಸುತ್ತಿದ್ದಾರೆ.

ಇದನ್ನು ಸರಕಾರ ಮತ್ತು ಗಡಿ ಅಭಿವೃದ್ಧಿ ಪ್ರಾಧಿಕಾರ ಗಂಭಿರವಾಗಿ ಪರಿಗಣಿಸಬೇಕಾಗಿದೆ. ರಾಜ್ಯದ ಅತಿ ದೊಡ್ಡ ಜಿಲ್ಲೆಗಳಲ್ಲಿ ಒಂದಾದ ಬೆಳಗಾಂ 10 ತಾಲೂಕುಗಳಲ್ಲಿ 1278 ಗ್ರಾಮಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು 3210 ಪ್ರೈಮರಿ ಶಾಲೆಗಳು, 628 ಪ್ರೌಢಶಾಲೆ ಹಾಗೂ ಪಿ.ಯು.ಸಿ. ಕಾಲೇಜುಗಳಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಸಾಕ್ಷರತೆಯ ಮಟ್ಟ ಶೋಚನೀಯ ಸ್ಥಿತಿಯಲ್ಲಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ 48 ಹೋಬಳಿ ಕೇಂದ್ರಗಳು, 337 ಗ್ರಾಮ ಪಂಚಾಯತಿಗಳಿದ್ದು 1360 ಗ್ರಾಮಗಳಿವೆ. ಇವುಗಳಲ್ಲಿ 642 ಗ್ರಾಮಗಳಿಗೆ (ಲಂಬಾಣಿ ತಾಂಡಗಳೂ ಸೇರಿ) ವಿದ್ಯುತ್‌ಶಕ್ತಿ ಸೌಲಭ್ಯ ಈವರೆಗೆ ದೊರೆತಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ 3 ತಾಲೂಕುಗಳಿದ್ದು 27 ಹೋಬಳಿ ಕೇಂದ್ರಗಳು, 542 ಗ್ರಾಮಗಳನ್ನು ಒಳಗೊಂಡಿದ್ದು ಶೇ.70 ರಷ್ಟು ಜನತೆ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಜಿಲ್ಲೆಯ ಗಡಿ ಭಾಗದ ಹಳ್ಳಿಗಳೂ ಕೂಡ ಶೋಚನೀಯ ಸ್ಥಿತಿಯಲ್ಲಿವೆ.

ಬೀದರ್ ಜಿಲ್ಲೆಯ ಬಾಲ್ಕಿ, ಔರಾದ್, ಬಸವಕಲ್ಯಾಣ, ಹಮನಾಬಾದ್, ಬೀದರ್, ಬಿಜಾಪುರ ಜಿಲ್ಲೆಯ ಬಿಜಾಪುರ , ಇಂಡಿ ತಾಲೂಕು, ಬೆಳಗಾಂ ಜಿಲ್ಲೆಯಲ್ಲಿ ಬೆಳಗಾವಿ, ಖಾನಾಪುರ, ಹುಕ್ಕೇರಿ, ಚಿಕ್ಕೋಡಿ, ಅಥಣಿ, ಗುಲ್ಬರ್ಗ ಜಿಲ್ಲೆಯ ಅಫ್ಜಲ್‌ಪುರ, ಆಳಂದ, ಚಿಂಚೋಳಿ, ಸೇಡಂ, ಯಾದಗಿರಿ ತಾಲೂಕು, ರಾಯಚೂರು ಜಿಲ್ಲೆಯ ರಾಯಚೂರು, ಮಾನ್ವಿ, ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಸಂಡೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ತುಮಕೂರು ಜಿಲ್ಲೆಯ ಶಿರಾ, ಮಧುಗಿರಿ, ಪಾವಗಡ, ಕೋಲಾರ ಜಿಲ್ಲೆಯ ಮುಳಬಾಗಿಲು, ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ಚಿಂತಾಮಣಿ, ಬೆಂಗಳೂರು ನಗರ ಜಿಲ್ಲೆಯ ಆನೇಕಲ್, ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ರಾಮನಗರ ಜಿಲ್ಲೆಯ ಕನಕಪುರ, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೆಗಾಲ, ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ಕೊಡಗು ಜಿಲ್ಲೆಯ ವಿರಾಜಪೇಟೆ, ಮಡಿಕೇರಿ, ದ.ಕ. ಜಿಲ್ಲೆಯ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಉ.ಕ. ಜಿಲ್ಲೆಯ ಕಾರವಾರ, ಜೋಯಿಡಾ ತಾಲೂಕುಗಳಲ್ಲಿ ಸಮಗ್ರವಾದ ಅಧ್ಯಯನವನ್ನು ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಎರಡು ಹಂತಗಳಲ್ಲಿ ಅಧ್ಯಯನವನ್ನು ಕೈಗೊಳ್ಳಬೇಕಾಗಿದ್ದು, ಗಡಿ ಜಿಲ್ಲೆಗಳನ್ನು ಉತ್ತರ ಮತ್ತು ದಕ್ಷಿಣ ಭಾಗವಾಗಿ ವಿಂಗಡಿಸಿಕೊಂಡು, ಗಡಿ ಪ್ರದೇಶಗಳಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಬೇಕಾಗಿದೆ. ಜೊತೆಗೆ ಹೊರ ರಾಜ್ಯಗಳಲ್ಲಿರುವ ಕನ್ನಡ ಪ್ರದೇಶಗಳಾದ ಜತ್ತ, ಮಂಗಲವೇಡ್, ಅಕ್ಕಲಕೋಟೆ, ಸೊಲ್ಲಾಪುರ, ಉಮದಗ, ವಾಸ್ಕೊ, ಅಧೋನಿ, ಹಿಂದೂಪುರ, ಹೊಸೂರು, ಡೆಂಕಣಿಕೋಟೆ, ಕುಪ್ಪಂ, ಗೋಪಿನಾಥಂ, ಮಾನಂತವಾಡಿ, ಸುಲ್ತಾನ್‌ಬತೇರಿ, ಕಾಸರಗೋಡು ಈ ಪ್ರದೇಶಗಳಲ್ಲಿ ಕನ್ನಡಿಗರ ಸ್ಥಿತಿ ಗತಿ ಹಾಗೂ ಕನ್ನಡದ ನಾಡು ನುಡಿ ಭಾಷೆಗೆ ಸಂಬಂಧಿಸಿದಂತೆ ಸಮೀಕ್ಷೆ ಕೈಗೊಳ್ಳಬೇಕಾಗಿದೆ.

ಯಾವುದೇ ಅಭಿವೃದ್ಧಿಯ ಕಾರ್ಯ ಚಟುವಟಿಕೆಗಳಿಗೆ ಪ್ರತಿಫಲ ಸಿಗಬೇಕಾದರೆ ಮೊದಲು ಅಲ್ಲಿನ ಜನರ ಬದುಕು ಹಸನಾಗಬೇಕು. ಗಡಿ ಭಾಗದ ಕನ್ನಡಿಗರ ಜೀವನ ಸುಧಾರಿಸದೆ ನಾಡು ನುಡಿಯ ಬೆಳವಣಿಗೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ 1985ರಲ್ಲಿ ಬೀದರ್‌ನಲ್ಲಿ ಜರುಗಿದ 57ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ.ಹಾ.ಮ.ನಾಯಕ್ ಹೇಳಿದ "ನಾವು ದೊಡ್ಡವರಾಗದೇ ನಮ್ಮ ನಾಡು ನುಡಿಗಳು ದೊಡ್ಡವಾಗುವುದಿಲ್ಲ" ಎಂಬ ಮಾತು ನೆನಪಿಗೆ ಬರುತ್ತದೆ. □

ಜಾಗತೀಕರಣ ಸಂದರ್ಭದಲ್ಲಿ ಇತ್ತೀಚಿನ ಕನ್ನಡ ಸಾಹಿತ್ಯದ ಧೋರಣೆಗಳು

ಗೌಸುದ್ದೀನ್, ತುಮಕೂರಕರ

ಕನ್ನಡದ ನವ್ಯತೆ ಪಾಶ್ಚಾತ್ಯರ ಧೋರಣೆಯ ಫಲಶೃತಿಯಾಗಿಯೇ ಬಂದದ್ದು. ಟಿ. ಎಸ್. ಎಲಿಯಟ್‌ನ "ವೇಸ್ಟ್ ಲ್ಯಾಂಡ್" ದಂತಹ ಕಾವ್ಯ ಹಾಗೂ ವಿಮರ್ಶೆಯ ವಿಚಾರಗಳು ಜಗತ್ತಿನ ಸಾಹಿತ್ಯದ ದಿಕ್ಕನ್ನೇ ಬದಲಿಸಿದಂತೆ ನವ್ಯ ಪ್ರಯೋಗಗಳು ಕನ್ನಡ ಸಾಹಿತ್ಯ ತನ್ನ ಗರ್ಭದಲ್ಲಿ ಕರಗಿಸಿಕೊಂಡು ಮಾದರಿಯಾಗಿ ಬೆಳೆಯಿತು. ಕನ್ನಡ ಸಾಹಿತ್ಯಕ್ಕೆ ಜಾಗತೀಕರಣ ವೆಂಬುದು ಇಂದು ನಿನ್ನೆಯದಲ್ಲ, ಅದು ಪಂಪ, ರನ್ನರ ಕಾಲ ದಿಂದಲೂ ನಡೆದು ಬಂದ ವಿಚಾರ. ಸಂಸ್ಕೃತದಿಂದ ಪ್ರಭಾವಿತನಾದ ಪಂಪ ಕನ್ನಡದಲ್ಲಿ ಆ ಸಾಹಿತ್ಯದ ರೂಪಗಳನ್ನು ತರಲು ಪ್ರಯತ್ನಿಸಿ ಯಶಸ್ವಿಯಾದ. ಪಂಪನ ಕಾಲದಲ್ಲಿ ನಡೆದ ಕನ್ನಡದ ಜಾಗತೀಕರಣ ಇಂದಿಗೂ ಅದು ಹೊಸ ಹೊಸ ಆಯಾಮಗಳನ್ನು ಪಡೆದು ಮತ್ತಷ್ಟು ಶ್ರೀಮಂತವಾಗಿದೆ.

ಜಾಗತೀಕರಣಗೊಂಡ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಗಮನಿಸುವಾಗ ಹಲವಾರು ಮಹತ್ವದ ಸ್ಥಿತ್ಯಂತರಗಳು ಎದ್ದುಕಾಣುತ್ತವೆ. ಕುವೆಂಪು; ಬೇಂದ್ರೆ, ಗೋಕಾಕರಿಂದ ಹಿಡಿದು ಯು.ಆರ್. ಅನಂತಮೂರ್ತಿ, ಗಿರೀಶಕಾರ್ನಾಡರವರೆಗೆ ಕನ್ನಡ ಸಾಹಿತ್ಯ ಜಾಗತೀಕರಣದ ಛಾಯೆಯನ್ನೇ ಪಡೆದುಕೊಂಡ ಮಣ್ಣಿನ ವಾಸನೆಯಿಂದ ಬೆಳೆದು ಬಂದಿದೆ. ಒಂದು ಅರ್ಥದಲ್ಲಿ ಆಧುನಿಕ ಕನ್ನಡ ಸಾಹಿತ್ಯವೆಂದು ಕರೆದರೂ ಅದು ಪರ್ಯಾಯವಾಗಿ ಜಾಗತೀಕರಣಗೊಂಡ ಕನ್ನಡ ಸಾಹಿತ್ಯವೆ ಸರಿ. ಐವತ್ತು ವರ್ಷಗಳ ಈ ಕನ್ನಡ ಸಾಹಿತ್ಯ ಹಲವು ಪ್ರಮುಖ-ಅಪ್ರಮುಖ ಸಾಹಿತ್ಯ ದಾರಿಗಳನ್ನು ಮಾಡಿಕೊಂಡು ಹುಟ್ಟಿಕೊಂಡಿತು. ಇದೊಂದು ನಿರಂತರ ಪ್ರಯೋಗಗಳ ಚಟುವಟಿಕೆಯ ಕಾಲವಾಗಿ ಪರಿಗಣಿಸಲ್ಪಟ್ಟಿರುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಜಾಗತೀಕರಣದಿಂದ ಕನ್ನಡ ಸಾಹಿತ್ಯ ಸೊರಗುತ್ತದೆಂಬ ಇತ್ತೀಚಿನ ಕೂಗು ತನ್ನ ಅರ್ಥವನ್ನು ಕಳೆದುಕೊಂಡು ಕಾಲದಿಂದ ಕಾಲಕ್ಕೆ ಜಾಗೃತಗೊಂಡು ಇನ್ನಷ್ಟು ಮತ್ತಷ್ಟೂ ಬೆಳೆದ ಸಂಮೃದ್ಧ ಸಾಹಿತ್ಯವಾಗಿ ಬೆಳೆಯಲು ಕಾರಣವಾಗಿದೆ.

ಜಾಗತೀಕರಣದ ಬದಲಾವಣೆಯಿಂದ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಆದ ಬದಲಾವಣೆಯನ್ನು ಪಾಶ್ಚಾತ್ಯ ಜೀವನ ಶೈಲಿಯಿಂದ ಪಡೆದುಕೊಳ್ಳಬೇಕಾಯಿತು. ಈ ಬದಲಾವಣೆಗಳನ್ನು ಹತ್ತಿರದಿಂದ ಗಮನಿಸಿದ ಸಮಾಜ ನವಜೀವನದ ಧೋರಣೆಯನ್ನೇ ಅನುಭವಿಸಿ ಪಾಶ್ಚಾತ್ಯ ಶೈಲಿಯನ್ನು ಕನ್ನಡಕ್ಕೆ ಅಳವಡಿಸಿಕೊಂಡಿತ್ತು. ಇದನ್ನೇ ನಾವು "Modern Think tank" ಎಂಬ ವಾದದ ಮೂಲಕ ಕನ್ನಡ ಸಾಹಿತ್ಯವೂ ಹೊಸ ಹೊಸ ವಿಚಾರಗಳಿಂದ ಪರಂಪರಾಗತವಾದ ಜೀವನ ಮೌಲ್ಯಗಳನ್ನು ಪರಿವರ್ತಿಸುವ, ಪುನಃ ಸೃಷ್ಟಿಸುವ ಕಾರ್ಯಕ್ಕೆ ಕತೃವಾದವರು ವಿ.ಕೃ. ಗೋಕಾಕ, ಮತ್ತು ಗೋಪಾಲಕೃಷ್ಣ ಅಡಿಗರು. ಇವರಿಂದ ಪ್ರಾರಂಭಗೊಂಡ ಕನ್ನಡ ಪರಂಪರೆ ಜಾಗತೀಕರಣದ ಕನ್ನಡ ಸಾಹಿತ್ಯದ ರೂಪವಾಗಿ ಬೆಳೆಯಿತು.

ಜಾಗತೀಕರಣ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಒಂದು ಗಟ್ಟಿ ಪರಂಪರೆ ಆ ತಲೆಮಾರಿನ ಅನೇಕ ಹಿರಿ ಕಿರಿಯ ಸಾಹಿತಿಗಳ ಮಾರ್ಗದರ್ಶನದಿಂದ ಕನ್ನಡ ಸಾಹಿತ್ಯವನ್ನು ಬಿತ್ತಿಬೆಳೆದು ಸಂಮೃದ್ಧಿಯ ಬೆಳೆಯನ್ನು ತೆಗೆಯಲು ಕಾರಣರಾದರು. ಕನ್ನಡ ಸಾಹಿತ್ಯ ನವ್ಯತೆಯತ್ತ ದಾಪುಗಾಲು ಹಾಕಿತು. ಕನ್ನಡ ಕಾವ್ಯ ಪಂಪನಿಂದ ಇಂದಿನವರೆಗೂ ಹಲವಾರು ರೂಪಗಳನ್ನು ಪಡೆದುಕೊಂಡು ಪ್ರಯೋಗಗೊಂಡು, ನವ್ಯೋದಯ, ನವ್ಯ, ನವ್ಯೇತ್ತರ, ದಲಿತ ಬಂಡಾಯದಂತಹ ಸಾಹಿತ್ಯ ಪ್ರಕಾರಗಳು ಹುಟ್ಟಿ ಬಂದವು. ಇವೆ ಕನ್ನಡ ಸಾಹಿತ್ಯ ರೂಪಗಳೂ ಜಾಗತೀಕರಣಗೊಂಡು ಹೊಸ ಹೊಸ ಪ್ರಯೋಗಕ್ಕೆ ನಾಂದಿಯಾಯಿತು ಜಗತ್ತಿನ ಇತರ ಭಾಷೆಗಳ ಸಾಹಿತ್ಯದಲ್ಲಿ ಇದೇ ತೆರನಾದ ಬದಲಾವಣೆಗಳಾದವು. ಹಾಗೆಯೇ ಕನ್ನಡ ಸಾಹಿತ್ಯದಲ್ಲಿಯೂ ಸಾಕಷ್ಟು ಬದಲಾವಣೆಗಳನ್ನು ಪಡೆದುಕೊಂಡಿತು.

ಕನ್ನಡದ ನವ್ಯತೆ ಪಾಶ್ಚಾತ್ಯರ ಧೋರಣೆಯ ಫಲಶೃತಿಯಾಗಿಯೇ ಬಂದದ್ದು. ಟಿ. ಎಸ್. ಎಲಿಯಟ್‌ನ "ವೇಸ್ಟ್ ಲ್ಯಾಂಡ್" ದಂತಹ ಕಾವ್ಯ ಹಾಗೂ ವಿಮರ್ಶೆಯ ವಿಚಾರಗಳು ಜಗತ್ತಿನ ಸಾಹಿತ್ಯದ ದಿಕ್ಕನ್ನೇ ಬದಲಿಸಿದಂತೆ ನವ್ಯ ಪ್ರಯೋಗಗಳು ಕನ್ನಡ ಸಾಹಿತ್ಯ ತನ್ನ ಗರ್ಭದಲ್ಲಿ ಕರಗಿಸಿಕೊಂಡು ಮಾದರಿಯಾಗಿ ಬೆಳೆಯಿತು. ಕನ್ನಡ ಸಾಹಿತ್ಯಕ್ಕೆ ಜಾಗತೀಕರಣವೆಂಬುದು ಇಂದು ನಿನ್ನೆಯದಲ್ಲ, ಅದು ಪಂಪ, ರನ್ನರ ಕಾಲದಿಂದಲೂ ನಡೆದುಬಂದ ವಿಚಾರ. ಸಂಸ್ಕೃತದಿಂದ ಪ್ರಭಾವಿತನಾದ ಪಂಪ ಕನ್ನಡದಲ್ಲಿ ಆ ಸಾಹಿತ್ಯದ ರೂಪಗಳನ್ನು ತರಲು ಪ್ರಯತ್ನಿಸಿ ಯಶಸ್ವಿಯಾದ. ಪಂಪನ ಕಾಲದಲ್ಲಿ ನಡೆದ ಕನ್ನಡದ ಜಾಗತೀಕರಣ ಇಂದಿಗೂ ಅದು ಹೊಸ ಹೊಸ ಆಯಾಮಗಳನ್ನು ಪಡೆದು ಮತ್ತಷ್ಟು ಶ್ರೀಮಂತವಾಗಿದೆ.

ಕನ್ನಡ ಸಾಹಿತ್ಯವನ್ನು ಗಮನಿಸುವಾಗ ಮುಖ್ಯವಾಗಿ ಕನ್ನಡಿಗರಿಗೆ ಪಾಶ್ಚಾತ್ಯರ ಪ್ರಭಾವದಿಂದ ಪ್ರೇರಿತರಾಗಿ ಸಾಹಿತ್ಯದ ಲಕ್ಷಣಗಳನ್ನು ನಮ್ಮಲ್ಲಿಯೂ ಬದಲಾವಣೆ ತರಲು ಪ್ರಯತ್ನಿಸಿದರ ಫಲವೇ ಹೊಸ ರೂಪ ಲಕ್ಷಣಗಳನ್ನು ಪಡೆಯಬೇಕಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಮುಖ್ಯವಾಗಿ, ಇಂಗ್ಲೆಂಡಿನಲ್ಲಿ ಈ ಶತಮಾನದ ಪ್ರಾರಂಭದಿಂದಲೇ ನವ್ಯತೆಯ ಲಕ್ಷಣಗಳು ಗೋಚರಿಸಲು ಕಾರಣವಾಯಿತು. ವೈಚಾರಿಕ ಕ್ಷೇತ್ರದಲ್ಲಿ ಹೊಸ ಕ್ರಾಂತಿಯ ಅಲೆಯೇ ಶುರುವಾಯಿತು. ಡಾರ್ವಿನ್ನನ ವಿಕಾಸವಾದ, ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತ ಹಾಗೂ ಫ್ರಾಯಿಡನ ಮನೋವೈಜ್ಞಾನಿಕ ವಿಚಾರಗಳನ್ನು ತಿಳಿದುಕೊಂಡ ನಮ್ಮವರು ಕನ್ನಡ ಸಾಹಿತ್ಯದಲ್ಲಿ ಅಂಥಹ ವಿಚಾರಗಳನ್ನು ದಾಖಲಿಸುವುದಕ್ಕೆ ಪ್ರಯತ್ನಿಸಿದರು. ಪರಂಪರಾಗವಾದ ಜೀವನ ಮೌಲ್ಯಗಳಿಗೆ ಆಹ್ವಾನವನ್ನೊಡ್ಡಿ ಹೊಸ ಸಾಮಾಜಿಕ ಸಂಘರ್ಷಗಳಿಗೆ ಹುಟ್ಟು ಹಾಕಿದರು.

ಇದರಿಂದ ಹಳೆಯ ಸಾಮಾಜಿಕ ವ್ಯವಸ್ಥೆ ಕೊನೆಗೊಂಡು, ಆಧುನಿಕ ಯಂತ್ರನಾಗರಿಕತೆಗೆ ಮಾರುಹೋಗ ಬೇಕಾಯಿತು. ಇದೇ ಲಕ್ಷಣಗಳು ಸಾಹಿತ್ಯ ಪ್ರಕಾರಗಳಲ್ಲಿ ಬಂದವು. ಮಾನವನು ಜೀವನದ ಸಹಜತೆಯನ್ನು ಕಳೆದುಕೊಂಡು ಯಾಂತ್ರಿಕನಾದ. "ಹಾಲೋಮನ್" ಹಾಗೂ "ವೇಸ್ಟ್‌ಲ್ಯಾಂಡ್" ಕವಿತೆಗಳಲ್ಲಿ ಅನನ್ಯತೆಯ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ. ಇದರಂತೆ ಕನ್ನಡ ಸಾಹಿತ್ಯವೂ ಹೊರಗುಳಿಯಲಿಲ್ಲ. ನವ್ಯ ತಂತ್ರಗಳನ್ನು ಪ್ರಚುರಪಡಿಸಿದ ಕೀರ್ತಿ ಎಲಿಯಟನ ಕಾವ್ಯಕ್ಕಿದೆ. ರೋಮಾಂಟ್ಯಿಕ್ ಕಾವ್ಯದ ಸರಳ ಅಭಿವ್ಯಕ್ತಿ ಮಾರ್ಗವನ್ನು ಬಿಟ್ಟು ಐತಿಹಾಸಿಕ ಪ್ರಜ್ಞೆಯ ದಾರಿಯಲ್ಲಿ ಜಗತ್ತಿನ ಸಾಹಿತ್ಯವೂ ಸಹ ಪುನಃಸೃಷ್ಟಿಯನ್ನು ಪಡೆದುಕೊಂಡಿತು. ಒಂದು ರೀತಿಯಲ್ಲಿ ಇಡೀ ಜಗತ್ತೇ ಸಾಹಿತ್ಯದ ಜಾಗತೀಕರಣವಾಯಿತು.

ನವ್ಯಮಾರ್ಗದ ಹರಿಕಾರರಾಗಿ ವಿ.ಕೃ. ಗೋಕಾಕರು ಕಾಣುತ್ತಾರೆ. 1951ರ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ "ಕನ್ನಡ ಕೂಡಾ ನವ್ಯ ಮಾರ್ಗ" ಹಿಡಿದು ಸಾಗಬೇಕಾದ ಅನಿವಾರ್ಯತೆಗೆ ಒತ್ತುಕೊಟ್ಟರು. ಆಧುನಿಕ-ಸಾಹಿತ್ಯ ಸಹಜ ಹಾಗೂ ಅನಿವಾರ್ಯ ಬೆಳವಣಿಗೆಯೆಂದು ಅಭಿಪ್ರಾಯ ಪಟ್ಟರು. ಆ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಬದಲಾವಣೆಗೆ ಪ್ರೇರಕ ಶಕ್ತಿಯನ್ನು ನೀಡಿದ್ದು ಜಾಗತೀಕರಣ. ಗೋಕಾಕರ ಕಾವ್ಯ "ಸಮುದ್ರ ಗೀತೆಗಳಲ್ಲಿ" ಇಂಥಹ ನವ್ಯತೆಯ ಲಕ್ಷಣಗಳಿವೆ.

ಜಾಗತೀಕರಣಗೊಂಡ ಕನ್ನಡ ನವ್ಯಕಾವ್ಯಕ್ಕೆ ಗೋಪಾಲಕೃಷ್ಣ ಅಡಿಗರ ಸೇವೆಗೆ ಎತ್ತರದ ಸ್ಥಾನವಿದೆ. ನವೋದಯ ಕಾವ್ಯಧೋರಣೆಯಲ್ಲಿ ಕಾವ್ಯ ರಚನೆ ಪ್ರಾರಂಭಿಸಿದ ಇವರು "ಚಂಡಮುದ್ದಳೆ", "ಭೂಮಿಗೀತ", "ವರ್ಧಮಾನ", ಆ ಕಾಲದ ನವ್ಯಕಾವ್ಯ ಸಂಗ್ರಹ ಗಳಾದರೂ ಇಂದಿಗೂ ಅವು ಹೊಸ ವಿಚಾರಗಳನ್ನು ನೀಡುತ್ತವೆ. ಕನ್ನಡದಲ್ಲಿ "ನವ್ಯಕಾವ್ಯ" ಆಧುನಿಕತೆ, ಜಾಗತೀಕರಣ ರೂಪದಲ್ಲಿ ಹೊರಹೊಮ್ಮುವುದು ಐತಿಹಾಸಿಕ ಅವಶ್ಯಕತೆಯೂ ಆಗಿತ್ತು. ಸ್ವತಂತ್ರ್ಯ ನಂತರದ ದಿನಗಳಲಿ ಮೋಡವಾಗಿ ಮೇಲೆದ್ದ ಮನಸ್ಸು ಮಳೆಯಾಗಿ ಮತ್ತೇ ಹಳ್ಳ ಕೊಳ್ಳಗಳಲ್ಲಿ ತುಂಬಿ ತಳದಲ್ಲಿ ಕೂಡಿದ್ದ ಕೊಳೆಕೆಸರು ರಾಡಿಯೆಲ್ಲಾ ಮೇಲೆದ್ದು ಬಂದು ಕನ್ನಡಿಯಂತಹ ತಿಳಿ ನೀರು ನಿಂತಿದೆ.

ಹೊಸ ತಲೆಮಾರಿನ ಜನಾಂಗದ ಜಾಣತನವೇ ಸರಿ. ಆಧುನಿಕ

ಜೀವಂತ ಜನಾಂಗದ ಸಂವೇದನೆಗಳು ಅಭಿವ್ಯಕ್ತಿಗೊಳಿಸಿದ ರೀತಿ ಅನನ್ಯವಾದದ್ದು. ನವೋದಯ ಕಾಲದ ಕವಿಗಳು ಹೊಸ ಪ್ರತಿಮೆ, ರೂಪಕ, ಪ್ರತೀಕ, ಸಂಕೇತಗಳ ನವ್ಯತಂತ್ರವೊಂದನ್ನು ಪ್ರಯೋಗದಲ್ಲಿ ತಂದರು. ಇದರಿಂದ ಕನ್ನಡ ಕಾವ್ಯ ಗಟ್ಟಿಕೊಂಡು ನಿಲ್ಲಲು ಕಾರಣವಾಯಿತು. ಬದಲಾವಣೆಯ ಧೋರಣೆ "ಸಾವಯವ ಸಾಮಗ್ರೀಕರಣ"ವೇ ಇಂದಿನ "ಸಾವಯವ ಜಾಗತೀಕರಣ" ರೂಪ ಪಡೆದುಕೊಂಡಿದೆ. ಸಮಕಾಲಿನ ಪ್ರಜ್ಞೆ ಸಾವಯವದ ಸಾಮಗ್ರೀಕರಣವನ್ನು ಪಡೆದುಕೊಂಡು ಗೋಕಾಕ ಅಡಿಗರ ಕಾವ್ಯ ಯಶಸ್ಸಿಗೆ ಕಾರಣವಾಗಿದೆ.

ನವ್ಯ ಕವಿಗಳೆಂದು ಹೆಸರಾದ ಕೆ.ಎಸ್. ನರಸಿಂಹ ಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿಯಂತಹ ಕವಿಗಳು ನವೋದಯ ಕಾವ್ಯದ ಧೋರಣೆಯಲ್ಲಿ ಜಾಗತೀಕರಣಗೊಂಡರು. ಇವರು ನವೋದಯ, ನವ್ಯ ಧೋರಣೆಯನ್ನು ಸಮನ್ವಯಗೊಳಿಸುವ ದಿಶೆಯಲ್ಲಿ ಪ್ರಮಾಣಿಕವಾಗಿ ಪ್ರಯತ್ನಿಸಿದರು. ಇವರನ್ನು ಸಮನ್ವಯ ಪಂಥದವರೆಂದು ಕರೆಯಲಾಯಿತು. ಇವರ ಪ್ರಭಾವದಿಂದ ಅನೇಕ ಹಿರಿಕಿರಿಯ ಕವಿಗಳು ನವ್ಯಕಾವ್ಯ ಕೃಷಿಗೆ ಕೈಹಾಕಿದರು. ರಾಮಚಂದ್ರಶರ್ಮ, ನಿಸಾರ ಅಹ್ಮದ್, ಚಂದ್ರಶೇಖರ ಕಂಬಾರ, ಪಿ.ಲಂಕೇಶ, ಯು.ಆರ್, ಅನಂತಮೂರ್ತಿ, ಗಿರೀಶಕಾರ್ನಾಡ್‌ರ ಕಾವ್ಯದಲ್ಲಿ ಎಂತೋ ಕಾದಂಬರಿ, ನಾಟಕ, ಸಣ್ಣಕತೆ ಮೊದಲಾದ ಗದ್ಯ ಪ್ರಕಾರಗಳಲ್ಲಿಯೂ ಆಧುನಿಕತೆಯ ಜಾಗತೀಕರಣವಾಯಿತು.

ಜಾಗತೀಕರಣವು ಕಾಲದಿಂದ ಕಾಲಕ್ಕೆ ಭಿನ್ನತೆಯ ರೂಪವನ್ನು ಪಡೆದುಕೊಂಡು ಅದು ನವೋದಯ, ನವ್ಯ, ಆಧುನಿಕ, ದಲಿತ, ಬಂಡಾಯದಂತಹ ಧೋರಣೆಯ ಮೌಲ್ಯಗಳನ್ನು ರೂಪಿಸುತ್ತಾ ಬೆಳೆದದ್ದು ಕನ್ನಡ ಸಾಹಿತ್ಯದ ಇತಿಹಾಸ. ಸಮಕಾಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆಯಾದವು. ಯುವಜನಾಂಗದ ಕವಿಗಳು ಇದರಿಂದ ಪ್ರೇರಿತರಾಗಿ ಬಂಡಾಯ ಧೋರಣೆಯ ಮೂಲಕ ನವ್ಯಕಾವ್ಯ ಜಾತಿವರ್ಣವ್ಯವಸ್ಥೆಯನ್ನು ತೊಡೆದು ಹಾಕುವ ಮೂಲಕ ಕನ್ನಡ ಕಾವ್ಯ ಸಾಹಿತ್ಯದಲ್ಲಿ ಪ್ರಬಲ ಆಂದೋಲನಗಳಾಗಿ ರೂಪಗೊಂಡವು. ಬಂಡಾಯ ಹಾಗೂ ದಲಿತ ಧೋರಣೆಗಳಿಗೆ ಆಧುನಿಕ ಸಮಾಜದಲ್ಲಿ ನಡೆಯುತ್ತಿರುವ ವರ್ಣವ್ಯವಸ್ಥೆಯ ಸಂಘರ್ಷ ಹಾಗೂ ಜಾತಿ ಸಂಘರ್ಷಗಳೇ ಕಾರಣವಾದವು. ಇಂದು ದಲಿತರು ಮತ್ತು ಜಾಗತೀಕರಣವೆನ್ನುವ ಚಿಂತನೆಯಲ್ಲಿ ಡಾ॥ ಮೊಗಳ್ಳಿ ಗಣೇಶರು ಹೊಸ ಹೊಸ ವಿಚಾರದತ್ತ ಸಾಹಿತ್ಯವನ್ನು ತಲುಪಿಸುತ್ತಿದ್ದಾರೆ.

ಜಾಗತೀಕರಣದ ಬಗ್ಗೆ ಅನೇಕರು ವಿವಿಧ ನೆಲೆಯಿಂದ ಚಿಂತಿಸಲು ಆರಂಭಿಸಿದ್ದಾರೆ. ಆದಿವಾಸಿಗಳು ಮತ್ತು ಅಲ್ಪಸಂಖ್ಯಾತ ಜನಾಂಗಗಳ ಹಾಗೂ ಮಹಿಳೆಯರ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ಪರ ಮತ್ತು ವಿರೋಧಗಳ ಧೋರಣೆಗಳಿಂದ ನಮ್ಮ ಕನ್ನಡ ಸಾಹಿತ್ಯ ಸಾಗಿ ಬಂದಿದೆ. ಶತಮಾನಗಳಿಂದ ವರ್ಣಬೇಧ ನೀತಿಗೆ ಬಲಿಯಾಗಿ ಅಪಮಾನ, ಅತ್ಯಾಚಾರಗಳಿಗೊಳಗಾದ ನಿಗ್ರೋಜನಾಂಗವು ಸಿಡಿದೆದ್ದು ಬಿಳಿಯ ನಾಗರಿಕ ವ್ಯವಸ್ಥೆಯಲ್ಲಿ ಕರಿಯರಿಗೂ ಸಮಪಾಲು ಬೇಕೆಂದು ಅಮೇರಿಕೆಯ ನಿಗ್ರೂ ಸಂಘಟನೆ ಸಿಡಿದೇಳಲು ಕಾರಣವಾಯಿತು. "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎನ್ನುವ ಕುವೆಂಪುರವರ ಕಾವ್ಯ ಧೋರಣೆಗೆ ಅದು ಪ್ರೇರಕಶಕ್ತಿಯಾಗಿ ಬಂದಿರಬಹುದು. ಕಪ್ಪು ಜನಾಂಗದ ಸಿಡಿದೆದ್ದ ಪ್ರಜ್ಞೆಯ ಪ್ರತಿಧ್ವನಿ ಜಗತ್ತಿನಾದ್ಯಂತ ಮೊಳಗಿ ದಬ್ಬಾಳಿಕೆಗೊಳಗಾದ ದಲಿತರಲ್ಲಿ ಹೊಸ ಸಾಮಾಜಿಕ ಆರ್ಥಿಕ–ಸಂಘರ್ಷಕ್ಕೆ ನಾಂದಿ ಹಾಡಿತು. ದಲಿತರು ಜಾಗತೀಕರಣಗೊಳ್ಳಲು ಕಾರಣವಾಯಿತು. ವರ್ತಮಾನ ಭಾರತದಲ್ಲಿ ಮಹಾರಾಷ್ಟ್ರ; ಆಂಧ್ರ, ಬಂಗಾಳದಲ್ಲಿ ದಲಿತರು ಸಂಘಟಿತ ಹೋರಾಟಕ್ಕೆ ಅಣಿಯಾದರು. ಸಾಹಿತ್ಯವು ಸಾಮಾಜಿಕ ಪರಿವರ್ತನೆಗೆ ಚಾಲನೆಯನ್ನು ಒದಗಿಸಿಕೊಟ್ಟಿತು.

> **ಬಂಡಾಯ ವೇದಿಕೆ ಇಡೀ ಸಮಾಜವನ್ನೇ ಎದುರಿಸುವ ಧೋರಣೆಯನ್ನು ಹೊಂದಿದೆ. ಈ ಧೋರಣೆಯಲ್ಲಿ ಸೃಷ್ಟಿಗೊಳ್ಳುತ್ತಿರುವ ಕನ್ನಡ ಸಾಹಿತ್ಯ ಕಾವ್ಯ, ಕಥೆ, ನಾಟಕ, ಕಾದಂಬರಿ ಮತ್ತು ಇತರ ಸಾಹಿತ್ಯಗಳಲ್ಲಿ ಆಕ್ರೋಶ ಚಿತ್ಕಾರಗಳೇ ಕೇಳಿ ಬರುತ್ತಿವೆ. ಕಲಾತ್ಮಕ ಅಭಿವ್ಯಕ್ತಿಯಲ್ಲಿ ಸಾರ್ಥಕತೆ ಪಡೆಯುವ ಆರೋಗ್ಯಪೂರ್ಣ ಲಕ್ಷಣಗಳು ಕನ್ನಡ ಸಾಹಿತ್ಯದ ಲೇಖಕರಲ್ಲಿ ಕಾಣಬಹುದು.**

ಇದುವೇ ಸಾಮಾಜಿಕ ಜಾಗತೀಕರಣ, ಆರ್ಥಿಕ ಜಾಗತೀಕರಣ, ಸಾಂಸ್ಕೃತಿಕ ಜಾಗತೀಕರಣದಂತಹ ಹೊಸ ಆಯಾಮಗಳು ಬೆಳೆದು ಬಂದವು. ಕರ್ನಾಟಕದ ದಲಿತ ವೇದಿಗೆ ಸಂಘಟಿತವಾಯಿತು. ಸಮಾಜದ ದುರ್ವ್ಯವಸ್ಥೆ ದುರಾಡಳಿತಗಳಿಗೆ ಕ್ರಿಯಾಶೀಲ ಪ್ರತಿಭಟನೆ ವ್ಯಕ್ತಪಡಿಸುವಂತಹ ಸಂಘಟನೆಗಳು ರೂಪಗೊಂಡವು. ಕನ್ನಡ ಪರ ಚಿಂತನೆಗಳು, ಕನ್ನಡ ನೆಲ–ಜಲದ ಸಮಸ್ಯೆಗಳು ಎದುರಾದಾಗ ಒಟ್ಟಿಗೆ ಹೋರಾಟಮಾಡಿ ಎದುರಿಸುವ ಸಂಘಟನೆಗಳು ಸಹ ಹುಟ್ಟಿಕೊಂಡವು, ಕರ್ನಾಟಕದಲ್ಲಿ ಇತ್ತೀಚಿಗೆ ಹುಟ್ಟಿ ಕೊಂಡ ಸಂಘಟನೆ ಕರವೇ (ಕರ್ನಾಟಕ ರಕ್ಷಣಾ ವೇದಿಕೆ) ತನ್ನ ಹಲವಾರು ಕಾರ್ಯಕ್ರಮಗಳ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

ಹಿಂದಿನ ಬಂಡಾಯ ಹಾಗೂ ದಲಿತ ವೇದಿಕೆಗಳ ಪ್ರಧಾನ ಆಶಯವೂ ಇದೆ ಆಗಿದೆ. ದಲಿತ ವೇದಿಕೆ ಕೇವಲ ದಲಿತರ ಸಮಸ್ಯೆಗಳಿಗೆ ಸೀಮಿತವಾದರೆ ಬಂಡಾಯ ವೇದಿಕೆ ಇಡೀ ಸಮಾಜವನ್ನೇ ಎದುರಿಸುವ ಧೋರಣೆಯನ್ನು ಹೊಂದಿದೆ. ಈ ಧೋರಣೆಯಲ್ಲಿ ಸೃಷ್ಟಿಗೊಳ್ಳುತ್ತಿರುವ ಕನ್ನಡ ಸಾಹಿತ್ಯ ಕಾವ್ಯ, ಕಥೆ, ನಾಟಕ, ಕಾದಂಬರಿ ಮತ್ತು ಇತರ ಸಾಹಿತ್ಯಗಳಲ್ಲಿ ಆಕ್ರೋಶ ಚಿತ್ಕಾರಗಳೇ ಕೇಳಿ ಬರುತ್ತಿವೆ. ಹೊಸ ಧೋರಣೆ ಮೂಡಿಬರುತ್ತಿದೆ. ಕಲಾತ್ಮಕ ಅಭಿವ್ಯಕ್ತಿಯಲ್ಲಿ ಸಾರ್ಥಕತೆ ಪಡೆಯುವ ಆರೋಗ್ಯಪೂರ್ಣ ಲಕ್ಷಣಗಳು ಕನ್ನಡ ಸಾಹಿತ್ಯದ ಲೇಖಕರಲ್ಲಿ ಕಾಣಬಹುದು. ಸಾಹಿತ್ಯ ಜಾಗತೀಕರಣದ ಹೊಡೆತಕ್ಕೆ ಸೊರಗುವುದಿಲ್ಲ. ಅದು ಮತ್ತೆ ಹೊಸ ಹೊಸ ಆಯಾಮದೊಂದಿಗೆ ಬೆಳಗುತ್ತದೆ ಕನ್ನಡ ಥಳಥಳ ಹೊಳೆಯುತ್ತದೆ. ಕನ್ನಡದ ಕಹಳೆ ವಿಶ್ವದಾದ್ಯಂತ ಮೊಳಗುತ್ತದೆ. ಕನ್ನಡ ಕ್ಷಾತ್ರ ಪರಂಪರೆ ಯಾವ ಕಾಲಕ್ಕೂ ಮೊಂಡಾಗದು ಆಧುನಿಕ ಬದುಕಿನೊಂದಿಗೆ ತೆರೆದುಕೊಂಡು ಇನ್ನಷ್ಟು ವಿಶ್ವಸ್ಥವಾಗುತ್ತದೆ. ಅದು ಯಾವಾಗಲು ಜಾಗತೀಕರಣದ ಧೋರಣೆಗಳನ್ನೆ ಒಳಗೊಂಡು ಬೆಳೆಯುತ್ತದೆ, ಕನ್ನಡ ಉಳಿಯುತ್ತದೆ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಗೆದ್ದಲು ಕಾದಂಬರಿಯೂ ದೇಶದ ಇಂದಿನ ದುಃಸ್ಥಿತಿಯೂ

ಪುಸ್ತಕ ಅವಲೋಕನ

ಮರಾಠಿ ಮೂಲದ ಗಣೇಶ ಆವಟೆಯವರ 'ಭಿರೂಢ' ಎಂಬ ಕಾದಂಬರಿಯನ್ನು ಚಂದ್ರಕಾಂತ ಪೋಕಳೆಯವರು ಕನ್ನಡಕ್ಕೆ 'ಗೆದ್ದಲು' (2010) ಎಂದು ಅನುವಾದಿಸಿದ್ದಾರೆ ಅಸ್ಪೃಶ್ಯತೆ ಎನ್ನುವುದು ಈ ದೇಶಕ್ಕೆ ಹಿಡಿದ ಒಂದು ದೊಡ್ಡ ಗ್ರಹಣ, ನಿಜ. ಯಾವ ಪಾತಕ ಮನಸ್ಸು ಇದಕ್ಕೆ ಮೊದಲ ವಿಷ ಹಿಂಡಿತೊ! ಆದರಿದು ಶತಶತಮಾನ ಕಳೆದರೂ ಅರ್ಬುದರೋಗವೆಂಬಂತೆ ಒಂದಲ್ಲ ಒಂದು ರೂಪ ಸ್ವರೂಪದಲ್ಲಿ ಹಬ್ಬುತ್ತಲೇ ಹೋಗುತ್ತಿದೆ. ವಸಾಹತುಶಾಹಿ ಆಳ್ವಿಕೆಯ ನಂತರ ಕೆಲವು ಸಾಹಸ ಜೀವಿಗಳು ಕಂಡೂ ಕಾಣದ ಬೆಳಕಿಂಡಿಗಳ ಮೂಲಕ ಅಸ್ಪಷ್ಟ ದಾರಿ ಸವೆಸುತ್ತ ಆ ಗವಗತ್ತಲೆಯ ಗವಿಯಿಂದ ತೆವಳಿ ಹೊರಬಂದು ಅಕ್ಷರ ಸೂರ್ಯನ ದರ್ಶನ ಮಾಡಿದರಷ್ಟೆ ಸ್ಮೃತಿ ನಾಶಕ್ಕೆ ಒಳಗಾಗದೆ ಹಾಗೆ ಮುನ್ನುಗ್ಗಿ ಹೊರಬಂದವರಲ್ಲಿ ದಲಿತ ಸೂರ್ಯ ಎಂದು ಕರೆಸಿಕೊಂಡ ಬಾಬಾಸಾಹೇಬ ಅಂಬೇಡ್ಕರ್ ಮೊದಲಿಗರು.

ಡಾ. ಅಂಬೇಡ್ಕರ್ ಅಕ್ಷರ ಯಾತ್ರೆಗೆ ಪಟ್ಟ ಸಾಹಸ ವಿಜ್ಞಾನಿಗಳು ನಡಸಿದ ವ್ಯೋಮ ಅನ್ವೇಷಣೆಗೂ ಮಿಗಿಲಾದುದು. ಹಾಗೆ ತಾವು ತೆವಳಿ ಬಂದ ಸಾಹಸ ಯಾತ್ರೆಯ ಹೆಜ್ಜೆ ಗುರುತುಗಳನ್ನು ಅವರು ತಮ್ಮ ವಿಪುಲ ಗ್ರಂಥರಾಶಿಯಲ್ಲಿ ದಾಖಲಿಸಿ ಹೋಗಿದ್ದಾರೆ. ತದನಂತರ ಮಹರಾಷ್ಟ್ರ ಮೂಲದ ಅನೇಕ ದಲಿತ ಲೇಖಕರು ಅಂಬೇಡ್ಕರ್ ನಡೆದ ದಾರಿಯಲ್ಲಿಯೇ ನಡೆದು ಅಸಮಾನತೆ, ಅಸಹಾಯಕತೆ, ಹಸಿವು-ಅಪಮಾನದಿಂದ ಬೆಂದ ತಮ್ಮ ಅನ್ನಿಸಿಕೆಗಳನ್ನು ನಿರ್ಭಿಡೆಯಿಂದ ಆತ್ಮಚರಿತ್ರೆಗಳನ್ನಾಗಿ ದಾಖಲಿಸಿದರು. ಆ ಮೊದಲ ತಲೆಮಾರಿನ ಆತ್ಮಕತೆಗಾರರಲ್ಲಿ ಬಹುಮುಖ್ಯರಾದವರೆಂದರೆ ಬೇಬಿತಾಯಿ ಕಾಂಬಳೆ (ಇದು ನಮ್ಮ ಬದುಕು), ಶರಣಕುಮಾರ ಲಿಂಬಾಳೆ (ಅಕ್ಕರಮಾಸಿ), ಲಕ್ಷ್ಮಣ ಗಾಯಕವಾಡ (ಉಚಲ್ಯಾ), ದಾದಾ ಸಾಹೇಬ್ ಮಲ್ಲಾರಿಮೋರೆ (ಗಬಾಳ), ಮುಂತಾದವರು.

ಪ್ರಸ್ತುತ 'ಭಿರೂಢ'ದ ಕನ್ನಡ ಅನುವಾದಕರಾದ ಪೋಕಳೆಯವರು ಅಭಿಪ್ರಾಯ ಪಡುವಂತೆ, 'ಮರಾಠಿ ಆತ್ಮಕತೆಗಳೆಲ್ಲ ಒಂದರ್ಥದಲ್ಲಿ ಸಾಮಾಜಿಕ ದಾಸ್ತಾವೇಜು ಎಂದೇ ಗುರುತಿಸಲಾಗಿದೆ. ಆನಂತರದ ತಲೆಮಾರಿನ ದಲಿತರು ಶಿಕ್ಷಣ ಪಡೆದರು; ಕೆಲವರ ಸ್ಥಾನಮಾನ ಹಿಗ್ಗಿತು. ಮಧ್ಯಮ ವರ್ಗದ ಜೀವನಕ್ಕೆ ಉತ್ಥಾನಗೊಂಡರು. ಅವರಲ್ಲಿ ಕೆಲವರು ದಲಿತ ಪುಢಾರಿಗಳೊಂದಿಗೆ ರಾಜಕಾರಣಿಗಳೊಂದಿಗೆ ಶಾಮೀಲಾಗಿ, ಅಂಬೇಡ್ಕರ್ ಹೇಳಿದ 'ಮರಳಿ ಹಳ್ಳಿಗೆ ನಡೆಯಿರಿ' ಎಂಬ ಮಾತನ್ನು ಮರೆತರು. ತಾವು ಹೆಗಲೇರಿ ಬಂದ ಗ್ರಾಮೀಣ ಬಾಂಧವರ ವೇದನೆಯನ್ನೇ ಮರೆತರೇನೋ ಎಂಬ ಸಂಶಯ ಮೂಡುತ್ತಿದೆ. ದಲಿತರಲ್ಲೂ ಈಗ ಒಗ್ಗಟ್ಟಿಲ್ಲ. ಹೊಲೆಯ ಮಾದಿಗ ಹಾಗೂ ಕ್ರಿಶ್ಚಿಯನ್ ಮತ್ತು ಬೌದ್ಧ ಮುಂತಾದ ಬಣಗಳಾಗಿ ಪೈಪೋಟಿಗೆ ಸೆಣಸುತ್ತಿವೆ. ಸಂವಿಧಾನ ಕಲ್ಪಿಸಿದ ಸೌಲಭ್ಯಗಳ ಸಿಂಹಪಾಲನ್ನು ಹೊಲೆಯರೇ ತಿಂದು ಮುಗಿಸುತ್ತಾರೆಂದು ಮಾದಿಗರೂ, ಇವರಿಗಿಂತ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ನಾವೇ ಶ್ರೇಷ್ಠರೆಂದು ಬೀಗುತ್ತಿರುವ ಮತಾಂತರ ಗೊಂಡ ಕ್ರಿಶ್ಚಿಯನ್ ಹಾಗೂ ಬೌದ್ಧರು- ಹೀಗೆ ತಂತಮ್ಮಲ್ಲಿಯೆ ಆರ್ಥಿಕ ಹಾಗೂ ಸಾಮಾಜಿಕ ಮೇಲರಿಮೆಗಾಗಿ ಪೈಪೋಟಿ ಮಾಡುತ್ತಿದ್ದಾರೆ. ಈ ಜಾತಿ ಪದ್ಧತಿಗೆ ಕಾರಣ ಭೂತರಾದ ಶೇಕಡ ಮೂರೂವರೆ ಇರುವ ಪುರೋಹಿತಶಾಹಿ ಬ್ರಾಹ್ಮಣರು ತಮ್ಮ ಎಂದಿನ ಒಡೆದಾಳುವ ನೀತಿಗ ನುಗುಣವಾಗಿ ತಮ್ಮ ಮೇಲಿನ ಶೋಷಣೆಯ ಆರೋಪವನ್ನೆಲ್ಲಾ, ಸ್ವಾತಂತ್ರ್ಯನಂತರ ದೊಡ್ಡ ದೊಡ್ಡ ಹಿಡುವಳಿದಾರರೂ ರಾಜಕಾರಣಿಗಳೂ ಸಾಂಸ್ಕೃತಿಕವಾಗಿ ನವಬ್ರಾಹ್ಮಣರೂ ಆಗುತ್ತಿರುವ ಸವರ್ಣೀಯ ಶೂದ್ರರ ಮೇಲೆ ಎತ್ತಿ ಹಾಕಿ ನಿಮ್ಮೆಲ್ಲಾ ಆರ್ಥಿಕ ವಿಪತ್ತುಗಳಿಗೆ ಇವರೇ ಕಾರಣರೆಂದು' ಪಂಚಮರನ್ನು ಪ್ರಚೋದಿಸುತ್ತ ತಮ್ಮ ಎಂದಿನ ಪಾರುಪತ್ಯ ನಡೆಸಲು ಹವಣಿಸುತ್ತಿದ್ದಾರೆ.

ಭಾರತದ ಈಗಿನ ಸ್ಥಿತಿ-ಗತಿಯನ್ನು ಸಮೀಕ್ಷಿಸಿದರೆ, ಜಾತಿಪ್ರಜ್ಞೆ ಎಂಬುದು ಬ್ರಿಟಿಷ್ ಭಾರತದಲ್ಲಿದ್ದುದಕ್ಕಿಂತ ಅಧಿಕವಾಗಿತ್ತಿದೆಯೇನೊ ಎಂಬ ಸಂಶಯ ಕಾಡುತ್ತದೆ. ಇಂದು ಸಂಭವಿಸುತ್ತಿರುವ ಜಗಳ-ಕಿತ್ತಾಟ, ಮಾರಣ ಹೋಮ, ರಕ್ತಪಾತವನ್ನು ಲೆಕ್ಕಿಸಿದರೆ; ನಾವು ಭಾರತವನ್ನು ಬಿಟ್ಟು ಹೋಗುತ್ತಿದ್ದೇವೆ; ಹಾಗೆಯೇ ಇಲ್ಲಿ ನಾವು ಬೆಳಸಲು ಯತ್ನಸಿದ ಜಾತ್ಯಾತೀತ ಮೌಲ್ಯವನ್ನೂ ಕೊಂಡೂಯ್ಯುತ್ತಿದ್ದೇವೆ'-ಎಂದು ಬ್ರಿಟಿಷರ ಮಾತು ನಿಜವಾಗುತ್ತಿದೆ. ದಲಿತರು ಮತ್ತು ಸವರ್ಣೀಯರ ನಡುವೆ ಎಪ್ಪತ್ತು, ಎಂಭತ್ತರ ದಶಕದಲ್ಲಿದ್ದ ಸೌಹಾರ್ದದ ಸೇತುವೆ ಕುಸಿದುಬೀಳುತ್ತಿದೆ. ಈಗಾಗಲೇ ಹೇಳಿದಂತೆ ಇದಕ್ಕೆ ಪ್ರಬಲವಾದ ಕಾರಣ ಸಾಮಾಜಿಕ ಎನ್ನುವುದಕ್ಕಿಂತ, ಆರ್ಥಿಕ ಮೂಲದ್ದೇ ಎನ್ನಬಹುದು. ಮೊದಲನೆಯದಾಗಿ ನಮ್ಮ ಎಲ್ಲಾ ನೋವು ಸಂಕಟಗಳಿಗೆ ಸವರ್ಣೀಯ ಜಮೀನ್ದಾರಿ ವರ್ಗವೇ ಕಾರಣ ಎಂದು ದಲಿತರು ಆಕ್ರೋಶ ತಾಳಿದರೆ; ಎರಡನೆಯದಾಗಿ ಸವರ್ಣೀಯರಿಗೆ, ಈ ಹೊಲೆ- ಮಾದಿಗರು ಇದುವರೆಗೂ ನಾವು ಹೇಳಿದಂತೆ ಕೇಳುತ್ತಿದ್ದವರು ಈಗ ಎಷ್ಟೊಂದು ಪೊಗರು? ಎಷ್ಟೆಲ್ಲಾ ಪ್ರಶ್ನಿಸುವ; ಹಕ್ಕು ಚಲಾಯಿಸುವ ಧೈರ್ಯ ತಾಳಿದ್ದಾರಲ್ಲ ಎಂಬ ಅಸಹನೆ.

ಇಂಥ ಆಕ್ರೋಶ ಮತ್ತು ಅಸಹನೆಯ ಪರಿಣಾಮವಾಗಿಯೇ ಬಿಹಾರದ ಬೆಲ್ಚಿಯ ಹತ್ಯಾಕಾಂಡ; ಝಾರ್ಖಂಡದ ಸೆಲ್ವಾಜುಡಂ ದಾಯಾದಿ ರಕ್ತಪಾತ; ಆಂಧ್ರದ ಕರಮಚೇಡು; ಕರ್ನಾಟಕದ ಕಂಬಾಲಪಲ್ಲಿ ಹಾಗೂ ಮಹಾರಾಷ್ಟ್ರದ ಖೈರ್ಲಾಂಜಿಯ ಮಾರಣ ಹೋಮ ಹಾಗೂ ನರಬಲಿಗಳು ಜರುಗುತ್ತಿವೆ. ಸಂವಿಧಾನದ ಹೊರತಾಗಿಯೂ ದಲಿತರ ಜೀವ ಹತ್ಯೆಗಳಿಗೆ ಕೊನೆ ಇಲ್ಲವೆಂಬಂತಾಗಿದೆ. ಹೀಗಾದರೆ ದೇಶದ ಭವಿಷ್ಯವೇನು? ಇದರ ತಡೆ ಹೇಗೆ? ಗಾಂಧಿ-ಅಂಬೇಡ್ಕರ್ ಮೊದಲಾದವರು ಪ್ರತಿಪಾದಿಸಿದ ಸಹಬಾಳ್ವೆ, ಸಮಾನತೆ, ಸೋದರತ್ವ- ಇವು ಎಂದಾದರೂ ಸಾಧ್ಯವೇ? ಮುಂತಾದ ಪ್ರಶ್ನೆಗಳು ಕಾಡುತ್ತವೆ. ಈ ಹಿನ್ನೆಲೆಯಲ್ಲಿ ನಾವೀಗ ಗಣೇಶ ಆವಟೆಯವರ 'ಭಿರೂಢ' ಎಂಬ ಕೃತಿಯನ್ನು ಅವಗಾಹನೆಗೆ ತೆಗೆದುಕೊಳ್ಳಬಹುದು.

ಇಂಥ ಸಂಘರ್ಷಾತ್ಮಕ ಸನ್ನಿವೇಶದಲ್ಲಿ ಎರಡನೆಯ ತಲೆಮಾರಿಗೆ ಸೇರಿದ ಕೆಲವು ಮರಾಠಿ ದಲಿತ ಲೇಖಕರು ಆತ್ಮಚರಿತ್ರೆಯ ಪ್ರಕಾರವನ್ನು ತ್ಯಜಿಸಿ ರೂಪಾತ್ಮಕ ಸಾಹಿತ್ಯ ರಚನೆಗೆ ಕೈಹಾಕಿದಂತೆ ಕಂಡುಬರುತ್ತದೆ. ಅವರಲ್ಲಿ ಗಣೇಶ ಆವಟೆಯವರು ಮುಖ್ಯರು. ಇವರ 'ಭಿರೂಢ' ಕೃತಿ ಚಿತ್ರಿಸಿರುವ ಹಾಗೆ "ಇಂದು ಶಿಕ್ಷಣ ಪಡೆದ ದಲಿತ ಪೀಳಿಗೆಯು ಯಾವ ಕನಸು ಕಾಣುತ್ತಿದೆ, ಯಾವ ಸ್ಥಿತಿಯಲ್ಲಿ ಬದುಕುತ್ತಿದೆ, ಎಂಥ ಸಂಕಟ ಎದುರಿಸುತ್ತಿದೆ, ದಲಿತರ ಬಗೆಗೆ ಸಹಾನುಭೂತಿಯಿದೆ ಎಂದು ಸೋಗು ಹಾಕುವ, ಅವರು ಉನ್ನತರಾಗುತ್ತಿದ್ದಾರೆ ಎಂದು ಭಾವಿಸಿ ಅವರಿಗೆ ಅಡಚಣೆ ಉಂಟುಮಾಡಿ ಹತ್ತಿಕ್ಕಲು, ದಮನ ಮಾಡಲು ಹೊರಟ ಜನರ ಚಿತ್ರಣ ಈ ಕಾದಂಬರಿಯಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ." (ಅನುವಾದಕರ ಮಾತು) ಅಲ್ಲದೆ ಗ್ರಾಮೀಣ ಭಾರತದಲ್ಲಿ ಇಂದಿಗೂ ಖಾಯಂ ಆಗಿ ಉಳಿದುಬಂದಿರುವ ಜಾತಿಭೇದ, ಅಸ್ಪೃಶ್ಯತೆ, ಪುಢಾರಿ ರಾಜಕಾರಣ, ಸ್ವಾರ್ಥ ಬೂಟಾಟಿಕೆ, ಕಂಫರ್ಟ್‌ಝೋನಿನಲ್ಲಿ ಕುಳಿತು ಪ್ರಗತಿಪರ ನುಡಿಮುತ್ತು ಸುರಿಸುವ ಬುದ್ಧಿಜೀವಿಗಳು-ಹೀಗೆ ಗ್ರಾಮಭಾರತವನ್ನು ವಿಭಿನ್ನ ನೆಲೆಯಲ್ಲಿ ಶೋಧಿಸಲು ಹೊರಟಿದೆ ಈ ಕೃತಿ.

ಇಲ್ಲಿ ಕಥೆ ಹೆಚ್ಚೇನಿಲ್ಲ. ಗಾಂಧಿ-ಅಂಬೇಡ್ಕರ್ ಮೌಲ್ಯಗಳನ್ನು ಗೌರವಿಸುವ ಕೆಲವು ವ್ಯಕ್ತಿಗಳಿನ್ನೂ ಆ ಊರಿನಲ್ಲಿದ್ದಾರೆ. ದೇಶದ ಇತರ ಊರುಗಳಂತೆಯೇ ಈ ಊರೂ ನಿಧಾನವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಆದರೆ ಇದು ಹಣ-ಅಧಿಕಾರಕ್ಕೆ, ಐಷಾರಾಮ ಜೀವನ ಲಾಲಸೆಗೆ ಹಾಗೂ ಸನಾತನ ಜಾತಿಪದ್ಧತಿಗೆ ಅಂಟಿಕೊಂಡ ವಿವಿಧ ಜಾತಿ-ಜನಾಂಗದ ಕೆಲವರಿಗೆ ಹಿತವಾಗಲಿಲ್ಲ. ಏನಾ

ಮರಾಠಿ ಮೂಲ : ಗಣೇಶ್ ಆವಟೆ
ಕನ್ನಡಕ್ಕೆ : ಚಂದ್ರಕಾಂತ ಪೋಕಳೆ
ಬೆಲೆ : ರೂ ೧೨೦/-
ಪ್ರ : ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ

ಪ್ರೊ. ಶಿವರಾಮಯ್ಯ

ದರೂ ಸಂಚು ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹೊಂಚುಹಾಕುತ್ತಿದ್ದರು ಅಂಥ ಒಂದು ಸಂದರ್ಭ ತಾನಾಗಿಯೇ ಒದಗಿಬಂತು. ಮರಾಠವಾಡ ವಿಶ್ವವಿದ್ಯಾನಿಲಯದಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸಬೇಕೆಂಬ ಅಭಿಲಾಷೆ ಕೆಲವು ಸ್ವಹಿತಾಸಕ್ತ ದಲಿತ ನಾಯಕರಿಗೆ ಮೂಡಿತು. ಅವರಿಗೆ ಅಂಬೇಡ್ಕರ್ ಅವರ ವಿದ್ವತ್ತು ಹಾಗೂ ಜೀವಪರ ಕಳಕಳಿಗಿಂತ ಅವರ ಪ್ರತಿಮೆಯನ್ನು ನಿಲ್ಲಿಸಿ 'ಜೈ ಭೀಮ' ಎಂದು ಕೂಗುವುದರಲ್ಲಿಯೇ ತೃಪ್ತಿ. ಅದಕ್ಕಾಗಿ ಅವರ ಹೆಸರನ್ನು ಮುಂದೆ ಮಾಡಿಕೊಂಡು ದಲಿತರ ಹೆಗಲೇರಿ ಅಧಿಕಾರಕ್ಕೆ ಬರುವುದೇ ಅವರ ಆಕಾಂಕ್ಷೆ. ಆದರೆ ಉಳಿದವರು ಇದನ್ನು ಬಹಿರಂಗವಾಗಿ ವಿರೋಧಿಸಲಾರರು; ಸುಮ್ಮನಿರಲಾರರು.

ಆಗ ಬೇರೆ ಬೇರೆ ಸಂಘಟನೆಗಳು ಕೇವಲ ಅಂಬೇಡ್ಕರ್ ಪ್ರತಿಮೆಯೇ ಏಕೆ? ಲೋಕಮಾನ್ಯ ತಿಲಕ, ಜ್ಯೋತಿಭಾಫುಲೆ, ಭಗವಾನ್‌ಬಾಬಾ, ಸಂಭಾಜಿರಾಜ್, ಯಶವಂತರಾವ ಹೋಳ್ಕರ್, ವಸಂತರಾವ ನಾಯಕ, ಅಣ್ಣಾಭುವಾ-ಮುಂತಾದವರ ಪ್ರತಿಮೆಗಳೂ ನಿಲ್ಲಬೇಕು-ಎಂದು ಬೇಡಿಕೆ ಇಟ್ಟರು. ಆದರೆ ವಿಶ್ವವಿದ್ಯಾಲಯದ ಕುಲಪತಿ, ವಿದ್ಯಾಮಂತ್ರಿ ಮುಖ್ಯಮಂತ್ರಿ ಆದಿಯಾಗಿ ಇರುವ ಸಮಿತಿಯು ಸಂವಿಧಾನಶಿಲ್ಪಿ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸುವತ್ತ ತಮ್ಮ ಮೊದಲ ಆದ್ಯತೆಯನ್ನು ಪ್ರಕಟಿಸಿತು. ಆದರಿದು ಚಿತ್ಪಾವನ ಮೂಲದ ಸಂಘಪರಿವಾರ ನಿರ್ವಹಿಸುವ ಶಾರದಾ ಸಂಸ್ಥೆಯ ಆಡಳಿತಗಾರಾರಿಗೆ ಹಾಗೂ ಪ್ರಾಚಾರ್ಯರಿಗೆ, 'ಹೋಸ್ತಿಲು' ಪತ್ರಿಕೆ ಸಂಪಾದಕರಿಗೆ ಕಸಿವಿಸಿ ತಂದಿತು. ಇವರೆಲ್ಲಾ ಒಂದುಗೂಡಿ ಕೆಲವು ಸವರ್ಣೀಯ ನಾಯಕರೊಂದಿಗೆ ಒಳಸಂಧಾನ ಮಾಡಿ ಅಂಬೇಡ್ಕರ್ ಪ್ರತಿಮಾ ಸ್ಥಾಪನೆಯ ವಿರುದ್ಧ ಕಮಿಟಿಯನ್ನು ಹುಟ್ಟುಹಾಕಿ, ದಲಿತರ ವಿರುದ್ಧ ಹೋರಾಟಕ್ಕೆ ಅಣಿಯಾದರು.

ಹೀಗೆ ತೆರೆಮರೆಯಲ್ಲಿ ಸನಾತನಿಗಳು ಹಾಗೂ ಸವರ್ಣೀಯರೆಲ್ಲ ಒಟ್ಟಾಗಿ ಗಾಂಧಿ ಅನುಯಾಯಿ ಆ ಊರಿನ ನಗರಾಧ್ಯಕ್ಷ ಭಾವೂರಾವ ಲೋಮಟೆಯವರು ಪ್ರಯತ್ನಪಟ್ಟು ನಿರ್ಮಾಣ ಮಾಡಿಸಿದ್ದ ದಲಿತ ಬಡಾವಣೆ ರಮಾಯಿನಗರಕ್ಕೆ ಅಪರಾತ್ರಿಯಲ್ಲಿ ನುಗ್ಗಿ ಲಗ್ಗೆಯಿಟ್ಟು ಅದನ್ನು ಸಂಪೂರ್ಣವಾಗಿ ಸುಟ್ಟುಹಾಕಿಬಿಟ್ಟರು. ಅಲ್ಲದೆ ನಗರದ ಕೊಳೆ ಕೊಂಪೆಗಳಲ್ಲಿದ್ದ ಕೆಲವು ಗುಡಿಸಿಲಿಗೂ ಬೆಂಕಿಯಿಟ್ಟರು. ಪರಿಣಾಮವಾಗಿ ನಿರ್ಗತಿಕರಾದ ದಲಿತರು ರಾಮರಾವ ಎಂಬುವವರ ತೋಟದ ಮನೆಗೆ ಓಡಿಬಂದು ಜೀವ ಉಳಿಸಿಕೊಳ್ಳುತ್ತಾರೆ-ಎಂಬಲ್ಲಿಗೆ 'ಭಿರೂಢ' ಕಾದಂಬರಿ ಮುಗಿಯುತ್ತದೆ.

ಕಾದಂಬರಿಯ ಗಟ್ಟಿ ಪಾತ್ರವೆಂದರೆ ಗಾಂಧಿ ಅನುಯಾಯಿ ವಯೋವೃದ್ಧ ಜನಾನುರಾಗಿ ಭಾವೂರಾವ ಲೋಮಟೆಯವರದು. ಅವರ ಪ್ರಯತ್ನದ ಫಲವಾಗಿ ಆ ಊರಿನ ದಲಿತರಿಗೆ ತಲೆ ಮೇಲೆ ಸೂರು, ಕೈಗಳಿಗೆ ಕೆಲಸ ಸಿಕ್ಕಿದೆ. ಇರುವ ಸಂಪನ್ಮೂಲಗಳನ್ನೆಲ್ಲಾ ಕ್ರೋಢೀಕರಿಸಿ ಅವರು ನಗರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸರ್ವ ಪ್ರಯತ್ನ ಮಾಡುತ್ತಿದ್ದರು ಅಲ್ಲಿ ದಲಿತರಿಗೆ ನೀರು, ವಿದ್ಯುತ್, ಶೌಚಾಲಯಗಳಿಂದ ಕೂಡಿದ ಆಧುನಿಕ ಬಡಾವಣೆಯೊಂದನ್ನು ನಿರ್ಮಿಸಿದ್ದು ಉಳಿದ ಸವರ್ಣೀಯರಿಗೆ ಸಹನೆ ತರಲಿಲ್ಲ. ಅದು ದ್ವೇಷವಾಗಿ ಪರಿವರ್ತನೆಗೊಂಡು ರಮಾಯಿನಗರವನ್ನು ಸುಟ್ಟು ಹಾಕಿತು. ತಡೆಯಲು ಅಡ್ಡ ಬಂದ ಆ ವಯಸ್ಕನ ಮೇಲೆ ಹಲ್ಲೆ ಮಾಡಿದರು. ಒಟ್ಟಾರೆ

> **ಭಾರತದ ಈಗಿನ ಸ್ಥಿತಿ-ಗತಿಯನ್ನು ಸಮೀಕ್ಷಿಸಿದರೆ, ಜಾತಿಪ್ರಜ್ಞೆ ಎಂಬುದು ಬ್ರಿಟಿಷ್ ಭಾರತದಲ್ಲಿದ್ದುದಕ್ಕಿಂತ ಅಧಿಕವಾಗುತ್ತಿದೆಯೇನೊ ಎಂಬ ಸಂಶಯ ಕಾಡುತ್ತದೆ. ಇಂದು ಸಂಭವಿಸುತ್ತಿರುವ ಜಗಳ-ಕಿತ್ತಾಟ, ಮಾರಣ ಹೋಮ, ರಕ್ತಪಾತವನ್ನು ಲೆಕ್ಕಿಸಿದರೆ; ನಾವು ಭಾರತವನ್ನು ಬಿಟ್ಟು ಹೋಗುತ್ತಿದ್ದೇವೆ; ಹಾಗೆಯೇ ಇಲ್ಲಿ ನಾವು ಬೆಳಸಲು ಯತ್ನಸಿದ ಜಾತ್ಯಾತೀತ ಮೌಲ್ಯವನ್ನೂ ಕೊಂಡೊಯ್ಯುತ್ತಿದ್ದೇವೆ'-ಎಂದು ಬ್ರಿಟಿಷರ ಮಾತು ನಿಜವಾಗುತ್ತಿದೆ. ದಲಿತರು ಮತ್ತು ಸವರ್ಣೀಯರ ನಡುವೆ ಎಪ್ಪತ್ತು, ಎಂಭತ್ತರ ದಶಕದಲ್ಲಿದ್ದ ಸೌಹಾರ್ದದ ಸೇತುವೆ ಕುಸಿದುಬೀಳುತ್ತಿದೆ. ಈಗಾಗಲೇ ಹೇಳಿದಂತೆ ಇದಕ್ಕೆ ಪ್ರಬಲವಾದ ಕಾರಣ ಸಾಮಾಜಿಕ ಎನ್ನುವುದಕ್ಕಿಂತ, ಆರ್ಥಿಕ ಮೂಲದ್ದೇ ಎನ್ನಬಹುದು. ಮೊದಲನೆಯದಾಗಿ ನಮ್ಮ ಎಲ್ಲಾ ನೋವು ಸಂಕಟಗಳಿಗೆ ಸವರ್ಣೀಯ ಜಮೀನ್ದಾರಿ ವರ್ಗವೇ ಕಾರಣ ಎಂಬ ಆಕ್ರೋಶ ದಲಿತರದು.**

ಲೋಮಟೆಯವರ ದೂರದರ್ಶಿತ್ವ ಹಾಗೂ ಮಾನವಾನುಕಂಪಕ್ಕೆ ಬೆಂಕಿ ಬಿತ್ತು. ಕಾಲೇಜು ವಿದ್ಯಾರ್ಥಿಗಳಾದ ತುಕಾರಾಮ ಜಗತಪ, ಅವನ ದಲಿತ ಸ್ನೇಹಿತ ದಗಡೂ ನಾರಾಜಿ ಡಂಬಾಳೆ ಹಾಗು ಅವರ ಕಿರಿಯ ಸ್ನೇಹಿತ ಮೋಹನ ಕುಲಪೆ-ಎಂಬ ಈ ಮೂವರು ತರುಣರ ಸಾಕ್ಷೀಪ್ರಜ್ಞೆಯಲ್ಲಿ ಭಿರೂಢ ಕಾದಂಬರಿ ಹಾದು ಹೋಗುವ ಮೂಲಕ ಅವರ ವ್ಯಕ್ತಿತ್ವವೂ ಪ್ರಕಾಶಮಾನಕ್ಕೆ ಬರುವಂತಿದೆ, ತರತಮ ವಿಮರ್ಶೆಯುಳ್ಳ, ಜಾತ್ಯಾತೀತ ನಿಲುವಿನ, ಕಷ್ಟಸಹಿಷ್ಣುಗಳಾದ, ಎಲ್ಲಕ್ಕಿಂತ ಮಿಗಿಲಾಗಿ ಪ್ರಬುದ್ಧರಾಗಿ ಯೋಚಿಸುವ, ಚಿಂತಿಸುವ ಇಂಥವರಿಂದಾಗಿ ದೇಶ ಮುಂದೆ ಸಾಗಬೇಕಾಗಿದೆ-ಎಂಬ ಆಶಯವೂ ಇಲ್ಲಿ ವ್ಯಕ್ತವಾಗುತ್ತದೆ.

ಇವರಿಗೆ ವಿರುದ್ಧವಾಗಿ ಸಾಕಷ್ಟು ಜನ ಲೋಕಕಂಟಕ ವ್ಯಕ್ತಿಗಳಿದ್ದಾರೆ. ಅವರಲ್ಲಿ ಬಹಳ ಎದ್ದುಕಾಣುವ ಪಾತ್ರ ಪ್ರಾಚಾರ್ಯ ಜಾಲಿಂದರ್ ಲಾಟೆ ಎಂಬುವವನದು. ಈತ ದಲಿತ ಹಾಗೂ ಬಲಿತ ವ್ಯಕ್ತಿ. ಹಣ-ಅಧಿಕಾರಕ್ಕಾಗಿ ಎಂಥ ತಂತ್ರಗಳನ್ನಾದರೂ ಮಾಡಬಲ್ಲವನು. ಮನುಷ್ಯ ತಿಂದು-ಉಂಡು ಕೊಬ್ಬಿದ ಮೇಲೆ ಅದಕ್ಕೊಂದು Out-Let ಬೇಕಲ್ಲವೆ? ಅದು ಪ್ರಾಣಿ ಸಹಜ ವಾಂಛೆ. ಅದನ್ನು ಹತ್ತಿಕ್ಕುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಆದ್ದರಿಂದ ಪ್ರಚಾರ್ಯ ಲಾಟೆಯೇ ಹೇಳಿಕೊಳ್ಳುವಂತೆ, ಅವನೀಗ ಮೂರನೆಯ ಹೆಂಡತಿಯೊಂದಿಗೆ ಸಂಸಾರ ಮಾಡುತ್ತಿದ್ದು, ನಾಲ್ಕನೆಯ ಹೆಣ್ಣೊಂದರ ಸಹವಾಸದಲ್ಲೂ ಸುಖಿಸುತ್ತಿದ್ದಾನಂತೆ, ಅದಕ್ಕೆ ಅವನು ಕೊಡುವ ಸಮರ್ಥನೆ "ಹಳೇಕಾಲದಲ್ಲಿ ಊರಗೌಡ ಹಲವು ಉಪಪತ್ನಿಯರನ್ನು ಇಟ್ಟುಕೊಳ್ಳುತ್ತಿದ್ದ. ತನಗೂ ಅಂಥ ಅವಕಾಶ ಸಿಕ್ಕಾಗ ತಾನಾದರೂ ಬಳಸಿಕೊಳ್ಳಬಾರದೇಕೆ?" ಎಂಬುದು. (ಗೆದ್ದಲು. ಪುಟ-113) ಅಂಬೇಡ್ಕರ್ ಅವರ ತಾತ್ವಿಕತೆಯನ್ನು ಗಾಳಿಗೆ ತೂರಿ, ಕೇವಲ ಅವರ ಪ್ರತಿಮೆಯ ನಿರ್ಮಾಣ ಮಾಡಿ ತಮ್ಮ ಸ್ವಪ್ರತಿಷ್ಠೆ ಹಾಗೂ ಅಧಿಕಾರ ಗಿಟ್ಟಿಸಿಕೊಳ್ಳುವ ತರಾತುರಿಯಲ್ಲಿ ಪ್ರತಿಮಾ ನಿರ್ಮಾಣಕ್ಕೆ ಬೆಂಬಲ ಸೂಚಿಸುತ್ತಿದ್ದಾನೆ. ನೈತಿಕ ದಿವಾಳಿಯಾಗುತ್ತಿರುವ ಇಂದಿನ ಕೆಲವು ದಲಿತ ವಿದ್ಯಾವಂತ ವರ್ಗಕ್ಕೆ ಪ್ರತಿನಿಧಿ ಈತ."ಜನರ ಹೆಗಲ ಮೇಲೆ ಕಾಲು ಕೊಟ್ಟು ತಾನು ಮುಂದೆ ಜಿಗಿಯಬೇಕು. ರಾಜಕೀಯ ನಾಯಕನಾಗಿ ನಗರಸಭೆ, ಪಂಚಾಯಿತಿ ಸಮಿತಿ, ಜಿಲ್ಲಾ ಪರಿಷತ್ತು, ಶಾಸಕ -ಹೀಗೆ ಒಂದೊಂದೇ ಮೆಟ್ಟಿಲು ಏರುತ್ತಾ ಸಾಗಬೇಕು. ಅದಕ್ಕಾಗಿ ಯಾವ ಮಾರ್ಗ ಹಿಡಿಯಲೂ ಸಿದ್ಧ" (ಪುಟ -188) ಈತ. ಇಂಥವರು ದಲಿತರಿಗೆ ಹಾಗೂ ದೇಶಕ್ಕೇ ಹಿಡಿದ ಗೆದ್ದಲಲ್ಲದೆ ಮತ್ತೇನು ಎಂದೆನಿಸುತ್ತದೆ.

ದಾಮೂ ಮತ್ತು ನಾನಾ ಎಂಬುವವರು ಕೂಡ ತಮ್ಮ ಸ್ವಾರ್ಥಕ್ಕಾಗಿ ಬಗೆ ಬಗೆಯ ಆಟ ಆಡುತ್ತಿದ್ದಾರೆ. ದಾಮು ಸರಪಂಚನಾಗಲು, ನಾನಾ ಹಣಗಳಿಸಲು ಹೊಂಚು ಹಾಕುವರು. ದಲಿತರಿಂದ ಅಟ್ರಾಸಿಟಿ ಕೇಸ್ ಜಡಿಸಿ ಸವರ್ಣೀಯರನ್ನು ಬೆದರಿಸಿ ಕಮೀಶನ್ ಗಿಟ್ಟಿಸುತ್ತಾನೆ ದಾಮು; ದಲಿತರಿಗೆ ಕಡಿಮೆ ಬಡ್ಡಿ ಆಸೆ ತೋರಿಸಿ ಕಡೆಗೆ ಅವರ ಅಲ್ಪ ಸ್ವಲ್ಪ ಆಸ್ತಿ ಪಾಸ್ತಿಗಳನ್ನು ಲಪಟಾಯಿಸಿ ಜಮೀನ್ದಾರನಾಗುತ್ತಿದ್ದಾನೆ ನಾನಾ. ಹಾಗೆಯೇ ನಯವಂಚಕನಾದ ಬಾಗೂಲ ಎಂಬುವನಿದ್ದಾನೆ; ಚಾಡಿ ಚುಚ್ಚಿ ಬದುಕುವುದೇ ಇವನ ಚಾಳಿ. ಜಗದಾಪನ ತಂದೆ ರಾಮರಾವನಿಗೆ ದಲಿತರ ವಿರುದ್ಧ ಅದೂ ಇದೂ ಚಾಡಿ ಹೇಳಿ ಪ್ರಚೋದಿಸಲು ಹೆಣಗುತ್ತಾನೆ ಈತ.

ಇನ್ನು ತುಕಾರಾಮನ ಸಾಕ್ಷಿ ಪ್ರಜ್ಞೆಯಲ್ಲಿ ಹಾದು ಹೋಗುವ "ಹಲವು ಸಮಿತಿಯಲ್ಲಿ ಇರುವ ಅಂಬೇಕರ, ಸದಾ ಜನಪ್ರಿಯತೆ ಬಯಸುವ ಖೋಪಟಕರ, ಯೋಗ್ಯತೆ ಇಲ್ಲದೆಯೂ ಕುಲಪತಿಯಾಗುವ ಬಯಕೆ ಹೊಂದಿದ ಕರಮಕರ, ಯಾಚಕ ರಾಜಕಾರಣದಲ್ಲಿ ತೊಡಗಿರುವ ವಡಗಾವಕರ, 'ಹೊಸ್ತಿಲ' (ಪತ್ರಿಕೆ) ಶಸ್ತ್ರ ಬಳಸಿ ಜನರನ್ನು ದೋಚುವ ಪತ್ರಕರ್ತ ಧನಾಜಿರಾವ, ವಡಗಾವಕರರ ರೊಟ್ಟಿಯ ಮೇಲೆ ಬದುಕಿರುವ ಆನಂದ, ವಸತಿ ನಿಲಯದ ವಿದ್ಯಾರ್ಥಿಗಳಿಗೆ ಕಳಪೆ ಊಟ ಹಾಕಿ, ಹಣ ತಿನ್ನುವ ತುಳಸಿರಾಮ ಬನಸೋಡೆ, ದಲಿತ ಚಳವಳಿಯ ಏಣಿ ಬಳಸಿ ರಾಜಕಾರಣದ ಆಗಸಕ್ಕೆ ಹಾರುವ ಮಹತ್ವಾಕಾಂಕ್ಷೆ ಹೊಂದಿದ ಲಾಟೆಸರ್, ಎರಡೂ ಗುಂಪಿನ ತುರುಣ ಕಾರ್ಯಕರ್ತರು, ಅಂಬೇಡ್ಕರರನ್ನು ಪ್ರೀತಿಸುವ ಮುಗ್ಧ ದಲಿತ ಮಹಿಳೆಯರು, ನಿಃಸ್ವಾರ್ಥ ಬುದ್ಧಿಯಿಂದ ಸಾಮಾಜಿಕ ಕಾರ್ಯ ಮಾಡುವ ಭಾವೂರಾವ ಲೋಮಟೆ"-ಮುಂತಾದವರಿದ್ದಾರೆ.

ಅಲ್ಲದೆ ಸಾಹಿತಿ-ಬುದ್ಧಜೀವಿಗಳು ಎನಿಸಿಕೊಂಡವರ ಪ್ರತಿನಿಧಿಯಾಗಿ ಮಾಣಿಕವೈದ್ಯ ಎಂಬ ಸಾಹಿತಿ ಕಾಣಿಸಿಕೊಳ್ಳುತ್ತಾನೆ. ಅವನನ್ನು ಸಂದರ್ಶಿಸುವ ಜಾಣ ಪತ್ರಕರ್ತ ಸಂದೀಪಕದಮ ಇದ್ದಾನೆ. ದಲಿತರು ಸ್ವಾವಲಂಬಿ ಹಾಗೂ ಸ್ವಾಭಿಮಾನದಿಂದ ಬದುಕಬೇಕಾದರೆ, ಇನ್ನು ಮುಂದೆ

ನಮಗೆ ಸವಲತ್ತು ಬೇಡವೆಂದು ಹಿಂದುಳಿದವರೇ ಹೇಳಬೇಕು (ಪುಟ-144) ಎಂಬುದು ಸಾಹಿತಿ ಮಾಣಿಕವೈದ್ಯನ ಕಮ್ಯೂನಿಸ್ಟ್ ಚಿಂತನೆ. ಹೀಗೆ ಇಂದಿನ ಜೀವಂತ ಪಾತ್ರಗಳೇ ಕಣ್ಣೆದುರು ಮೂಡಿ ಬರುತ್ತವೆ.

ಸಮೂಹ ಸನ್ನಿಯಿಂದಾಗುವ ಅನಾಹುತಗಳ ಬಗ್ಗೆ ಭಿರೂಢದಲ್ಲಿ ಸಾಕಷ್ಟು ಪುರಾವೆಗಳಿದ್ದು, ದಲಿತ ಭಾರತದ ವಾಸ್ತವ ಚಿತ್ರವನ್ನು ಎತ್ತಿಕೊಡುತ್ತದೆ. ರಮಾಯಿನಗರಕ್ಕೆ ಗಲಭೆಕೋರರು ಬೆಂಕಿ ಹಚ್ಚಿದಾಗ ಮೂರು ವರ್ಷದ ಮಗುವೊಂದು ಅಸಹಾಯಕ ಸ್ಥಿತಿಯಲ್ಲಿ ಆಗಸದತ್ತ ಕೈಯೆತ್ತಿ 'ಅವ್ವಾ ಅವ್ವಾ' ಎಂದು ಚೀರುತ್ತಿದ್ದರೆ, ಆ ಗಲಭೆಕೋರರು ಅದರ ಬಾಯಿಗೆ ಮಣ್ಣು ಹಾಕಿದ್ದು; ಸುಟ್ಟು ಪಾಳು ಬಿದ್ದ ರಮಾಯಿನಗರದ ಹತ್ತಿರದ ಮರದ ಟೊಂಗೆಯ ಮೇಲೆ ಕುಳಿತ ಕಾಗೆಗಳು ಹಸುಗೂಸಿನ ಕೈಯನ್ನು ಕುಕ್ಕಿ ತಿನ್ನುತ್ತಿದ್ದದ್ದು; ಅದು ಮಂಜಾಯಿ ಎಂಬುವಳ ಸೊಸೆ ಪೂನಮ್‌ಳ ಮಗುವಿನ ಕೈಯಾಗಿದ್ದುದು; ಒಂದೂವರೆ ದಿನದ ಹಸಿ ಬಾಣಂತಿ ಪೂನಮ್‌ಳನ್ನು ಆ ಕಾಮುಕರು ಹೊಳೆ ದಂಡೆಗೆ ಎಳೆದೊಯ್ದು ಆಕೆಯ ಮೇಲೆ ಅತ್ಯಾಚಾರವೆಸಗಿದ್ದು; ಇತ್ಯಾದಿ ದೃಶ್ಯಗಳು 2002ರಲ್ಲಿ ಗುಜರಾತ್‌ನಲ್ಲಿ ನಡೆದ ಅಲ್ಪಸಂಖ್ಯಾತರ ಮೇಲಿನ ಹತ್ಯಾಕಾಂಡವನ್ನೇ ನೆನಪಿಗೆ ತರುತ್ತವೆ. ಕಂಬಾಲಪಲ್ಲಿ, ಖೈರ್ಲಾಂಜಿ ಘಟನೆಗಳೊಂದಿಗೆ ಹೋಲಿಸಿದರೆ ಈ ಕಾದಂಬರಿಯಲ್ಲಿ ವರ್ಣಿತವಾಗಿರುವ ದಲಿತ ದಮನ ಹಿಂಸೆ ಇತ್ಯಾದಿಗಳು ಉತ್ಪ್ರೇಕ್ಷೆ ಎನಿಸದೆ ಸಾಹಿತ್ಯಕ್ಕೂ ಚರಿತ್ರೆಗೂ ನಡುವಿನ ಗೆರೆಯೇ ಅಳಿಸಿಹೋದಂತೆ ಕಾಣುತ್ತದೆ. ಸಮೂಹ ಸನ್ನಿ ಹಿಡಿದ ಜನ ಹಿಂಸ್ರಾಪಶುಗಳಂತೆ ವರ್ತಿಸುತ್ತಾರೆಂಬುದನ್ನು ಲೇಖಕರು ಕೊಂಚ ವಿಸ್ತರಿಸಿದಂತೆ ಕಂಡುಬಂದರೂ ಅವಾಸ್ತವ ಎನಿಸುವುದಿಲ್ಲ. ಏಕೆಂದರೆ ವಾಸ್ತವ ಚರಿತ್ರೆ ಇದಕ್ಕೂ ಭಯಂಕರವಾಗಿದೆಯಲ್ಲವೆ?

ಈ ಕೃತಿಯಲ್ಲಿ ಕಲ್ಪಿಸಿರುವ ಪಕ್ಷಿ ರೂಪಕಗಳು ಕಥೆಯ ವೈರುಧ್ಯಗಳನ್ನು ಸಂವಹನಗೊಳಿಸಲು ಇನ್ನಷ್ಟು ಸಹಕಾರಿಯಾಗಿವೆ. ಕಾಗೆಗಳು ಗೂಡು ಕಟ್ಟಿ ಮರಿ ಮಾಡುವುದು; ಗುಬ್ಬಚ್ಚಿಗಳು ಮರಿಗಳಿಗೆ ಗುಟುಕು ತಂದು ನೀಡುವುದು ಇತ್ಯಾದಿ ಪಕ್ಷಿ ಸಂಕುಲದ ಸಂಸಾರ ಚಿತ್ರಣದೊಂದಿಗೆ ಮಾನವ ಲೋಕದ ಮನೆ ಸುಡುವ, ಮಕ್ಕಳ ಬಾಯಿಗೆ ಮಣ್ಣು ಹಾಕುವ ಪೈಶಾಚಿಕ ದೃಶ್ಯಗಳನ್ನು ಕಲ್ಪಿಸಿಕೊಂಡರೆ 'ಭಿರೂಢ' ಕೃತಿಯ ವಾಸ್ತವ ತಿಳಿದುಬರುತ್ತದೆ. ಹಾಗೆಯೆ ಗಿರಣಿಯ ಬೀಸುವ ಕಲ್ಲು ತುಕಾರಾಮನ ತಲೆಯಲ್ಲಿ ತಿರುಗುವ ಬೀಸುಕಲ್ಲಿನಂತಾಗಿ ಅವನ ಚಿಂತನೆಯ ಗಾಢತೆಯನ್ನು ಮನಮುಟ್ಟಿಸುತ್ತದೆ. ಸುಟ್ಟ ರಮಾಯಿನಗರದ ಅವಶೇಷಗಳ ನಡುವೆ ನಿಂತು ಮೌನವಾಗಿ ಬಿಕ್ಕುವ ಹುಡುಗ ಮೋಹನ ಕುಲಪೆಯ ದೀನ ಮುಖವನ್ನಂತೂ ಮರೆಯಲುಬಾರದು.

ಭಿರೂಢ ಕೃತಿಯ ಶೈಲಿ-ತಂತ್ರದ ಬಗ್ಗೆ ಒಂದು ಮಾತು. ಇಲ್ಲಿ ಕಾದಂಬರಿಕಾರ ಪಾತ್ರಗಳ ಬಗ್ಗೆ ತಲೆ ತೂರಿಸದೆ, ಅವು ತಮಗೆ ತಾವೇ ಆತ್ಮ ವೃತ್ತಾಂತವನ್ನು ಹೇಳಿಕೊಳ್ಳುವ ವಿಧಾನವನ್ನು ಅನುಸರಿಸಲಾಗಿದೆ. ಇದೇನು ಹೊಸ ತಂತ್ರ ಅಲ್ಲವಾದರೂ ಪಾತ್ರಗಳು ತಮಗೆ ತಾವೇ ಸ್ವವಿಮರ್ಶೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದ್ದು, ಲೇಖಕನ ಜವಾಬ್ದಾರಿ ಕೊಂಚ ಹಗುರವೂ ನಿಷ್ಪಕ್ಷಪಾತವೂ ಆಗಿದೆ ಎಂದು ಹೇಳಬಹುದು. ಈ ಬಗೆಯ ಶೈಲಿ-ತಂತ್ರದಲ್ಲಿ ಪಾತ್ರಗಳು ತನಗೆ ತಾನೇ ಮಾತಾಡಿಕೊಂಡಂತಿರುವ ಕಾರಣ ನಮಗೆ ಇನ್ನಷ್ಟು ಹತ್ತಿರವಾದಂತೆ ಕಾಣುತ್ತದೆ. ಅವು ಸನಾತನವಾದಿಗಳಾಗಿರಲಿ, ಸವರ್ಣೀಯರಾಗಿರಲಿ ಅಥವಾ ದಲಿತರಾಗಿರಲಿ ಸ್ವವಿಮರ್ಶೆಯ ತಕ್ಕಡಿಯಲ್ಲಿ ತೂಗಿಕೊಂಡು ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುವಾಗ ಅವುಗಳ ಬಣ್ಣ ಬಯಲಾಗಿ, ಟೊಳ್ಳು-ಗಟ್ಟಿತನ ನಮಗೆ ಬೇಗ ಅರ್ಥವಾಗುತ್ತದೆ. ಆದ್ದರಿಂದ ಎತ್ತಿನ ಕೊಂಬಿಗೆ ಬಿದ್ದ 'ಭಿರೂಢ' ಕೀಟದಂತೆ ಕೆರಳುತ್ತಿರುವ ಜನರೇ ಅಧಿಕವಾಗುತ್ತಿರುವ ಈ ದೇಶದ ಇಂದಿನ ದುಃಸ್ಥಿತಿಗೆ ಹಿಡಿದ ಪುಟ್ಟ ಕನ್ನಡಿ ಈ ಕಾದಂಬರಿ ಎನ್ನಬಹುದು.

ಇನ್ನು 'ಭಿರೂಢ' ಎಂಬ ಶೀರ್ಷಿಕೆಯ ಬಗ್ಗೆ. ಇದನ್ನು ಕನ್ನಡಕ್ಕೆ ಅನುವಾದಿಸಿರುವ ಚಂದ್ರಕಾಂತ ಪೋಕಳೆಯವರು 'ಭಿರೂಢ' ಶಬ್ದಕ್ಕೆ ಕನ್ನಡ ಶಬ್ದ ಸಿಗಲಿಲ್ಲವೆಂದು, ಅದಕ್ಕೆ ಸಮಾನಾಂತರ ಪದ 'ಗೆದ್ದಲು' ಎಂದು ಭಾವಿಸಿ ತಮ್ಮ ಅನುವಾದ ಕೃತಿಗೆ 'ಗೆದ್ದಲು' ಎಂಬ ಶೀರ್ಷಿಕೆಯನ್ನು ಕೊಟ್ಟಿರುತ್ತಾರೆ. ಆದರೆ ಭಿರೂಢ ಮತ್ತು ಗೆದ್ದಲು ಈ ಎರಡೂ ಕೀಟಗಳ ಗುಣಲಕ್ಷಣ ಹಾಗೂ ಜೀವಕೋಟಿಯೊಂದಿಗಿರುವ ಉಪಯೋಗದ ದೃಷ್ಟಿಯಿಂದ 'ಭಿರೂಢ' ಗೆದ್ದಲಿಗಿಂತ ಅಪಾಯಕಾರಿ ಕೀಟ. ಆದರೆ 'ಗೆದ್ದಲು' ಜೀವ ಸಹಕಾರಿ. ದನಗಳ ಕೊಂಬು ಕೊರೆದು ಮೆದುಳಿಗೆ ಸೇರಿ, ಆ ಪ್ರಾಣಿ ಕೆರಳುವಂತೆ ಮಾಡಿ ಅದರ ಜೀವಕ್ಕೇ ಸಂಚಕಾರ ತರುತ್ತದೆ ಭಿರೂಢ. ಇದು ಮೆದುಳಿಗೆ ಸೇರಿದರೆ ರಾಸುಗಳು ತಲೆತಿರುಗಿದಂತಾಡಿ, ಕೊನೆಗೆ ನರಳಿ ಸಾಯುತ್ತವೆ. ಆ ಅನುಭವದ ಮೇರೆಗೆ ಕೆರಳಿದ ದನದಂತೆ ಸುತ್ತುವ ವ್ಯಕ್ತಿಯನ್ನು ಕುರಿತು ಬಯಲುಸೀಮೆ ಕಡೆ 'ಭೈರಿಗೆ ಹುಳ ಬಿದ್ದವನಂತೆ ಆಡುತ್ತಿದ್ದಾನೆ' ಎಂಬ ನಾಣ್ನುಡಿ ಹುಟ್ಟಿಕೊಂಡಿದೆ. ಆದ್ದರಿಂದ ಮರಾಠಿಯ 'ಭಿರೂಢ' ಶಬ್ದಕ್ಕೆ ಕನ್ನಡದಲ್ಲಿ 'ಭೈರಿಗೆ ಹುಳ' ಎಂದು ಇಟ್ಟುಕೊಳ್ಳುವುದೇ ಸೂಕ್ತ. ಮತ್ತೂ ಹೇಳಬೇಕೆಂದರೆ 'ಭಿರೂಢ' ಜೀವಹಾನಿ ಮಾಡುವ, ಪ್ರಾಣಿಯ ತಲೆಬುರುಡೆಗೆ ಸೇರುವ ಕೀಟವಾದರೆ 'ಗೆದ್ದಲು' ಒಣಗಿದ ಗಿಡ ಮರ ಎಲೆ ತರಗು ಹುಲ್ಲು ತಿಂದು ಭೂಮಿಯನ್ನು ಹಸನುಮಾಡಿ ಅದರ ಫಲವತ್ತತೆಗೆ ಕಾರಣವಾಗುವ ಪರಿಸರಸ್ನೇಹಿ. ಮುಂಗಾರು ಸಮಯದಲ್ಲಿ ಗೆದ್ದಲು ತಿಂದ ನೆಲದಲ್ಲಿ ಬೆಳೆ ಅಧಿಕ ಎಂಬುದು ಅನುಭವ ವೇದ್ಯ. ಆದ್ದರಿಂದ ಕನ್ನಡ ಅನುವಾದಕ್ಕೆ 'ಭೈರಿಗೆ ಹುಳ' ಅಥವಾ 'ಭಿರೂಢ' ಎಂಬುದೇ ಸರಿ ಎನಿಸುತ್ತದೆ.

ಈ ಕೃತಿಯಲ್ಲಿ ಕಲ್ಪಿಸಿರುವ ಪಕ್ಷಿ ರೂಪಕಗಳು ಕಥೆಯ ವೈರುಧ್ಯಗಳನ್ನು ಸಂವಹನಗೊಳಿಸಲು ಇನ್ನಷ್ಟು ಸಹಕಾರಿಯಾಗಿವೆ. ಕಾಗೆಗಳು ಗೂಡು ಕಟ್ಟಿ ಮರಿ ಮಾಡುವುದು; ಗುಬ್ಬಚ್ಚಿಗಳು ಮರಿಗಳಿಗೆ ಗುಟುಕು ತಂದು ನೀಡುವುದು ಇತ್ಯಾದಿ ಪಕ್ಷಿ ಸಂಕುಲದ ಸಂಸಾರ ಚಿತ್ರಣದೊಂದಿಗೆ ಮಾನವ ಲೋಕದ ಮನೆ ಸುಡುವ, ಮಕ್ಕಳ ಬಾಯಿಗೆ ಮಣ್ಣು ಹಾಕುವ ಪೈಶಾಚಿಕ ದೃಶ್ಯಗಳನ್ನು ಕಲ್ಪಿಸಿಕೊಂಡರೆ 'ಭಿರೂಢ' ಕೃತಿಯ ವಾಸ್ತವ ತಿಳಿದುಬರುತ್ತದೆ. ಹಾಗೆಯೆ ಗಿರಣಿಯ ಬೀಸುವ ಕಲ್ಲು ತುಕಾರಾಮನ ತಲೆಯಲ್ಲಿ ತಿರುಗುವ ಬೀಸುಕಲ್ಲಿನಂತಾಗಿ ಅವನ ಚಿಂತನೆಯ ಗಾಢತೆಯನ್ನು ಮನಮುಟ್ಟಿಸುತ್ತದೆ. ಸುಟ್ಟ ರಮಾಯಿನಗರದ ಅವಶೇಷಗಳ ನಡುವೆ ನಿಂತು ಮೌನವಾಗಿ ಬಿಕ್ಕುವ ಹುಡುಗ ಮೋಹನ ಕುಲಪೆಯ ದೀನ ಮುಖವನ್ನಂತೂ ಮರೆಯಲು ಬಾರದು.

ಕೊನೆಯದಾಗಿ, ಭಿರೂಢ ಕಾದಂಬರಿಯು ಕೇವಲ ಹಣ-ಅಧಿಕಾರ ಹಾಗೂ ಸೆಕ್ಸ್ ಅಂಡ್ ಕ್ರೈಮ್‌ನಲ್ಲಿ ನಿರತರಾಗಿರುವ ಎಲ್ಲ ಜಾತಿ-ಜನಾಂಗೀಯ ಪಾತ್ರಗಳ ವಾಸ್ತವ ಚಿತ್ರವನ್ನು ನೀಡುವ ಮೂಲಕ ನಮ್ಮನ್ನು ನಿರಾಶೆಯ ಕಂದರಕ್ಕೆ ತಳ್ಳುವ ಕೃತಿ ಮಾತ್ರವೋ ಅಥವಾ ಈ ಎಲ್ಲದರಿಂದ ದಾಟಿಕೊಳ್ಳಬಹುದಾದ ಮುಂಗಾಣ್ಕೆಯನ್ನು ಏನಾದರೂ ಹೊಂದಿದೆಯೋ ಎಂಬುದು ಸಹ ವಿಚಾರಾರ್ಹ. ಮೊದಲಿಗೆ ಎಲ್ಲವೂ ಪ್ರಗತಿಪಥದಲ್ಲಿ ಸಾಗುತ್ತಿದ್ದ ಆ ಊರು ಕಡೆ ಕಡೆಗೆ ವಿಗತಿಯತ್ತ ಮುಖಮಾಡಿ ಜಾರಿ ಹೋಗುತ್ತಿರುವುದೇ ಅಧಿಕಾಂಶವಾಗಿ ಇಲ್ಲಿ ಕಂಡುಬರುತ್ತದೆ. ಅದರಲ್ಲಿ ಆ ಊರಿನ ಎಲ್ಲಾ ಜಾತಿ- ಜನಾಂಗದವರ ಪಾತ್ರವಿದೆ. ಆದರೆ ಆ ಎಲ್ಲ ಹಿಂಸೆ, ಕ್ರೌರ್ಯ, ಕುಟಿಲತೆ, ಕೊಳಕು, ಕೊಚ್ಚೆಯನ್ನು ಉತ್ತರಿಸಿ ಮೇಲೆ ಬರುವ ಜೀವನ್ಮುಖೀ ವಾತಾವರಣವನ್ನು ಕಲ್ಪಿಸುವ ಸೂಚನೆಯೂ ಇಲ್ಲಿ ಇಲ್ಲದಿಲ್ಲ.

ಈ ನೆಲೆಯಲ್ಲಿ ನೋಡಿದಾಗ ಸರ್ವೋದಯ ಕಾರ್ಯದಲ್ಲಿ ತತ್ಪರರಾಗಿರುವ ವೃದ್ಧ ಭಾವೂರಾವ ಲೋಮಟೆ, ಸಮ ಸಮಾಜದ ಕನಸು ಕಾಣುವ ಕಾಲೇಜು ವಿದ್ಯಾರ್ಥಿಗಳಾದ ತುಕಾರಾಮ ಜಗತಾಪ, ದಗಡೂ ಡಂಬಾಳೆ, ಮೋಹನ ಕುಲಪೆ ಹಾಗೂ ಮನೆ ಸುಟ್ಟು ನಿರ್ಗತಿಕರಾದ ದಲಿತರಿದ್ದ ರಾಮರಾವನ ತೋಟದ ಮನೆಗೆ ತನ್ನ ಸಹಾಯಕರೊಂದಿಗೆ ಹೊತ್ತಾರೆ ಬುಟ್ಟಿಗಟ್ಟಲೆ ರೊಟ್ಟಿ- ಜುನಕಾ ಹೊರಿಸಿ ತಂದು, ಆ ದುಃಖಾರ್ತರನ್ನು ಸಂತೈಸುವ, ಹೆದರಿದ ಮಗುವೊಂದನ್ನು ಎತ್ತಿ ತೊಡೆಯೆರಿಸಿಕೊಂಡು ಮುದ್ದಿಸುತ್ತ ತಾಯ ಕಕ್ಕುಲತೆಯಿಂದ ರೊಟ್ಟಿ ತಿನ್ನಿಸುವ ಆ ಊರಿನ ಹಿರೀಕಳಾದ ಸಮಿಂದಾಬಾಯಿ ಮುಂತಾದ ಪಾತ್ರಗಳು ಆ ಊರಿನಲ್ಲಿ ಇನ್ನೂ ಮಾನವತೆ ಮುರುಟಿಲ್ಲ; ಕುಡಿಯೊಡೆಯುತ್ತಿದೆ-ಎಂಬ ಆಶಾಭಾವನೆ ಮೂಡುತ್ತದೆ.

ಒಟ್ಟಾರೆ, ನಾಡಿನಾದ್ಯಂತ ಇತ್ತೀಚೆಗೆ ಮಹಾನ್ ವ್ಯಕ್ತಿಗಳ ಪ್ರತಿಮೆ ನಿರ್ಮಾಣ ಮಾಡುತ್ತ ಅವರ ಚಲನಶೀಲವೂ ಪ್ರಗತಿಪರವೂ ಆದ ತತ್ವಸಿದ್ಧಾಂತಗಳಿಗೆ, ತಿಲಾಂಜಲಿ ಕೊಟ್ಟು ಸ್ಥಾವರಗೊಳಿಸುವ ಮೂಲಕ, 'ಸಾಮಾನ್ಯ ಜನರನ್ನು ಯಾಮಾರಿಸಿ, ರಾಜ್ಯಾಧಿಕಾರಕ್ಕೆ ಲಗ್ಗೆಯಿಕ್ಕುವ' ರಾಜಕೀಯ ಪುಢಾರಿಗಳ ಇವತ್ತಿನ ವಿಕಾರಗಳನ್ನು ಅನಾವರಣ ಮಾಡುವ ಗಣೇಶ ಆವಟೆಯವರ 'ಭಿರೂಢ' ಒಂದು ಅನನ್ಯ ಕೃತಿ ಎನ್ನಬಹುದು. ಇಂಥ ಒಂದು ಕೃತಿಯನ್ನು ಕನ್ನಡ ವಿಚಾರವಂತ ಓದುಗರಿಗೆ ಮರಾಠಿಯಿಂದ ಅನುವಾದ ಮಾಡಿಕೊಟ್ಟ ಪ್ರೊ. ಚಂದ್ರಕಾಂತ ಪೋಕಳೆಯವರು ಅಭಿನಂದನಾರ್ಹರು. □

ಹೊಸ ಪುಸ್ತಕ

ಬುದ್ಧ ಬೆಳದಿಂಗಳು
ಲೇ: ಮೂಡ್ನಾಕೂಡು ಚಿನ್ನಸ್ವಾಮಿ
ಬೆಲೆ: ರೂ. ೬೫/-

೪೩ ಕವಿತೆಗಳನ್ನೊಳಗೊಂಡ ಈ ಸಂಕಲನದ ಉದ್ದಕ್ಕೂ ಆಳವಾದ ಚಿಂತನೆಯನ್ನು ಹಲವು ರೂಪಗಳಲ್ಲಿ ಲೇಖಕರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿಯ ಪ್ರತಿಯೊಂದು ಕವಿತೆಯೂ ದಲಿತಸ್ಥಿತಿಗೆ ಮಿಡಿಯುತ್ತಲೇ ಮಾನವ ಅಂತಃಕರಣವನ್ನು ಹಿಗ್ಗಿಸಿ ಅಸ್ಪೃಶ್ಯತೆಯ ಚಾರಿತ್ರಿಕ ಅವಮಾನದಿಂದ ಬಿಡುಗಡೆ ಮಾಡಬಲ್ಲ ಆಶಯವನ್ನೂ ಹೊಂದಿದೆ. ಇಂದಿನ ಸತ್ಯಗಳಿಗೆ ಸಂವಾದಿಯಾಗುತ್ತಲೇ ಆಚಿನದನ್ನೂ ಭರವಸೆಯಲ್ಲಿ ಕಾಣುತ್ತಾ, ಸಾಮಾನ್ಯ ಅಸಾಮಾನ್ಯನಾಗುವತ್ತಾ ಪ್ರೇರೇಪಿಸುವಲ್ಲಿ ಈ ಕೃತಿ ಸಫಲವಾಗಿದೆ.

ಪ್ರಕಾಶಕರು: ಅಕ್ಷರ ಪ್ರಕಾಶನ
ಹೆಗ್ಗೋಡು, ಸಾಗರ





ಮುಗಿಲ ಮಲ್ಲಿಗೆ
ಲೇ: ಡಾ. ವಿಜಯಶ್ರೀ ಸಬರದ
ಬೆಲೆ: ರೂ. ೬೦/-

ಈ ಸಂಕಲನದ ಕವನಗಳಲ್ಲಿ ಮಹಿಳಾ ಅಭಿವ್ಯಕ್ತಿ ಧ್ವನಿಪೂರ್ಣವಾಗಿ ಹೊರಹೊಮ್ಮಿದೆ. ಬಂಡಾಯ ಪ್ರವೃತ್ತಿ, ಮಹಿಳಾ ವಿಮೋಚನೆ ಹಾಗೂ ಗೇಯ ಗುಣ ಇಲ್ಲಿನ ಕವಿತೆಗಳ ಪ್ರಧಾನ ಆಶಯ. ಕಾವ್ಯಾತ್ಮಕ ಗುಣ ಹೊಂದಿದ್ದು ಸಾಹಿತ್ಯಕ, ಸಾಂಸ್ಕೃತಿಕ ಮುಖಾಮುಖಿಯೊಂದಿಗೆ ಸಮಾಜದೊಂದಿಗಿನ ಬದ್ಧತೆಯನ್ನು ಎತ್ತಿ ಹಿಡಿಯುವುದರ ಜೊತೆಗೆ ಕ್ರಾಂತಿಶೀಲ, ಪ್ರಗತಿಶೀಲವಾಗಿ ಗಮನ ಸೆಳೆಯುತ್ತವೆ. ಸಂಭ್ರಮ ಮತ್ತು ವಿಷಾದದ ನಡುವಿನ ಚರಿತ್ರೆಯ ಬಗ್ಗೆ ಸಮರ್ಥ ನೋಟವಿದೆ.

ಪ್ರ: ಪಲ್ಲವಿ ಪ್ರಕಾಶನ
ಗುಲಬರ್ಗಾ-೫೮೫೧೦೬

ಹೊತ್ತು ಕಂತುವ ಮುನ್ನ
ಲೇ: ಡಾ. ಸಾರಾ ಅಬೂಬಕ್ಕರ್
ಬೆಲೆ: ರೂ 150/-

ಕನ್ನಡದ ಮಹತ್ವದ ಲೇಖಕಿಯ ಆತ್ಮಚರಿತ್ರೆಯ ಈ ಕೃತಿ ತನ್ನ ಬಗೆಗಿನ ವಿವರಗಳನ್ನಷ್ಟೆ ಅಲ್ಲದೆ ತಾನು ಹುಟ್ಟಿದ ಮುಸ್ಲಿಂ ಸಮುದಾಯದ ಕಟ್ಟುಪಾಡುಗಳು, ಸಂಪ್ರದಾಯಗಳು, ಸುತ್ತಲಿನ ನಡಾವಳಿಗಳನ್ನು ತಿಳಿಸಿಕೊಡುವಲ್ಲಿ ಸಫಲವಾಗಿದೆ. ತಲೆಮಾರುಗಳ ಭಿನ್ನತೆ, ಬಡತನ, ಮೌಢ್ಯ, ಶಿಕ್ಷಣದ ಬಗೆಗಿನ ನಿರಾಸಕ್ತಿ, ಆ ಸಮುದಾಯದ ತಳಮಳಗಳನ್ನು ಲೇಖಕಿ ಸಮರ್ಥವಾಗಿ ನಿರೂಪಿಸಿ ಹೊಸ ಲೋಕವೊಂದನ್ನು ತೆರೆದಿಟ್ಟಿದ್ದಾರೆ. ಈ ಎಲ್ಲಾ ದುಗುಡಗಳನ್ನು ತಾಕಲಾಟಗಳನ್ನು ಮೀರಿ ಬೆಳೆದ ಪರಿ ಕಣ್ಣಿಗೆ ಕಟ್ಟುವಂತಿದೆ.

ಪ್ರಕಾಶಕರು: ಚಂದ್ರಗಿರಿ ಪ್ರಕಾಶನ
ಮಂಗಳೂರು-೫೭೫೦೦೬





ಮಲೆಗಳಲ್ಲಿ ಮದುಮಗಳು:
ಸಾಂಸ್ಕೃತಿಕ ಮುಖಾಮುಖಿ
ಸಂ: ರಹಮತ್ ತರೀಕೆರೆ
ಬೆಲೆ: ರೂ 150/-

ಕುವೆಂಪುರವರ ಒಂದು ಕೃತಿಯ ಮೂಲಕ ಅವರನ್ನು ಅರ್ಥ ಮಾಡಿಕೊಳ್ಳಲು ಮತ್ತು ಮೌಲ್ಯಮಾಪನ ಮಾಡಲು ವಿವಿಧ ನೆಲೆಗಳ ೨೦ ಮಂದಿ ಲೇಖಕರು ಮತ್ತು ಚಿಂತಕರು ೨ ದಿನಗಳ ಕಾಲ ನಡೆಸಿದ ಸಂವಾದದ ಸಾರವೇ ಈ ಕೃತಿಯ ಹೂರಣ. ಚರ್ಚೆಯು ಸಾಹಿತ್ಯವಷ್ಟೇ ಅಲ್ಲದೆ ಸಮಾಜ, ರಾಜಕಾರಣ, ಧರ್ಮಗಳಿಗೂ ವಿಸ್ತರಣೆಗೊಂಡಿದೆ. ತಂತಮ್ಮ ಅನುಭವವನ್ನು ಮುಕ್ತವಾಗಿಯೂ, ಪ್ರಾಮಾಣಿಕವಾಗಿಯೂ, ಆಪ್ತವಾಗಿಯೂ, ಅನೌಪಚಾರಿಕವಾಗಿ ಚರ್ಚಿಸಿದ್ದರಿಂದಾಗಿ ಹಲವು ಹೊಸ ನೋಟಗಳು ಮೆಳೈಸಿದ್ದು ಕನ್ನಡದ ವಿವರ್ಶಾ ಲೋಕದಲ್ಲಿ ಇದು ವಿಶಿಷ್ಟ ಬಗೆಯ ಪ್ರಯೋಗವಾಗಿದೆ.

ಪ್ರಕಾಶಕರು: ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಇರದೇ ತೋರುವ ಬಗೆ
ಲೇ: ಎಸ್. ಬಿ. ಜೋಗುರ
ಬೆಲೆ: ರೂ. ೧೦೦/-

ವಸ್ತು ವೈವಿಧ್ಯ ಮತ್ತು ಬಯಲು ಸೀಮೆಯ ನುಡಿಸೊಗಡನ್ನು ಇಂಬಿಟ್ಟುಕೊಂಡ ಈ ಸಂಕಲನದಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ೧೪ ಕಥೆಗಳಿವೆ. ಅಪೂರ್ವವಾದ ಜೀವನದ ತುಣುಕುಗಳನ್ನು ಕಥೆಯಾಗಿಸುವಲ್ಲಿ ಲೇಖಕರು ತಮ್ಮ ಗ್ರಹಿಕೆ, ನೋಟ, ವಿಸ್ತಾರವಾದ ಅಧ್ಯಯನ ಹಾಗೂ ಗಾಢ ಅನುಭವದ್ರವ್ಯವನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಶ್ರಮ ಸಂಸ್ಕೃತಿ ಹಾಸುಹೊಕ್ಕಾಗಿರುವ ಗ್ರಾಮೀಣ ಬದುಕಿನ ಚಿತ್ರಣ, ಪರಸ್ಪರ ಹೊಂದಾಣಿಕೆಯ ಅಗತ್ಯತೆ ಮತ್ತು ಮಾನವೀಯ ತುಡಿತದ ಗುಣ ಹೊಂದಿರುವ ಈ ಕೃತಿ ಗಮನ ಸೆಳೆಯುತ್ತದೆ.

ಪ್ರ: ರಾಘವೇಂದ್ರ ಪ್ರಕಾಶನ,
ಅಂಬಾರಕೊಡ್ಲ, ಅಂಕೋಲಾ



ಥ್ಯಾಯ್‌ಲ್ಯಾಂಡ್ ಎಂಬ ಮುಗುಳ್ನಗೆ
ಲೇ: ಡಾ. ಲಕ್ಷ್ಮೀಪತಿ ಸಿ.ಜಿ
ಬೆಲೆ: ರೂ. ೬೫/-

ಪ್ರವಾಸ ಕಥನದ ಈ ಕೃತಿ ಥಾಯ್‌ಲ್ಯಾಂಡ್‌ನ ಮುಕ್ತ ಲೈಂಗಿಕೋದ್ಯಮದ ವಿಜೃಂಭಣೆಯ ಹಿಂದಿರುವ ಕರಾಳ ರೂಪವನ್ನು ತೆರೆದಿಡುವುದರ ಜೊತೆಗೆ ಇತಿಹಾಸ, ಸಮಕಾಲೀನ ರಾಜಕೀಯ, ಜನಜೀವನ ಹಾಗೂ ಆರ್ಥಿಕ ಚೌಕಟ್ಟನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲಿನವರ ಬಡತನ ಹೆಣ್ಣು ಮಕ್ಕಳನ್ನು ಸೆಕ್ಸ್ ಕೂಪಕ್ಕೆ ತಳ್ಳಿದೆ ಹಾಗೂ ಅವರೇ ಆ ದೇಶದ ಆರ್ಥಿಕ ಬೆನ್ನೆಲುಬು ಕೂಡ ಎಂಬ ಕಠೋರ ಸತ್ಯವನ್ನು ವಿಷಾದ ಭಾವದಿಂದ ಲೇಖಕರು ನಿರೂಪಿಸಿದ್ದಾರೆ.

ಪ್ರಕಾಶಕರು: ಸಿರಿವರ ಪ್ರಕಾಶನ
ಬೆಂಗಳೂರು-೫೬೦೦೨೧

ಸಾಂಸ್ಕೃತಿಕ ಯಜಮಾನ್ಯ ಮತ್ತು ಪ್ರತಿ ಸಂಸ್ಕೃತಿ ನಿರ್ಮಾಣದ ಪ್ರಯತ್ನಗಳು...

ಇದು ವಿದ್ವಾಂಸ ಸಭೆ. ಆದ್ದರಿಂದ ನಾನು ಮಾಹಿತಿ ಕೊಡುವ ಭಾಷಣ ಮಾಡಬೇಕಾದ ಅಗತ್ಯ ಇಲ್ಲ. ಸಾಂಸ್ಕೃತಿಕ ಯಜಮಾನ್ಯದ ವಿರುದ್ಧ ಪ್ರತಿ ಯಜಮಾನ್ಯವನ್ನು ನಿರ್ಮಿಸಲು ಕರ್ನಾಟಕದ ಚರಿತ್ರೆಯಲ್ಲಿ ನಡೆದ ಹೋರಾಟಗಳ ವಿವರಗಳು ಕೂಡ ಸುಪ್ರಸಿದ್ಧವೇ! ಕರ್ನಾಟಕ ಅಥವಾ ಭಾರತದ ಸಂದರ್ಭದಲ್ಲಿ ಆಳುವ ಸಂಸ್ಕೃತಿ ಮತ್ತು ಅದಕ್ಕೆ ಪ್ರತಿಯಾಗಿ ಪ್ರತಿ ಸಂಸ್ಕೃತಿಯನ್ನು ನಿರ್ಮಾಣ ಮಾಡೋದಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಡೆದ ಸಾಂಸ್ಕೃತಿಕ ಪ್ರತಿಭಟನೆಗಳ ಸುದೀರ್ಘ ಹಾದಿ ಇದೆ.

ಕನ್ನಡದ ಆದಿಕವಿ ಪಂಪ ಕಾವ್ಯದಲ್ಲಿ 'ಮನುಷ್ಯ ಕುಲಂ ತಾನೊಂದೆ ವಲಂ' ಎಂದು ಸಾರಿದ ಸನ್ನಿವೇಶದಿಂದ ಹಿಡಿದು, ರಾಮಾನುಜಾರ್ಯ ತನ್ನ ವೈಷ್ಣವ ಪಂಥದ ಪ್ರಚಾರದ ಅಂಗವಾಗಿ ಹನ್ನೊಂದನೇ ಶತಮಾನದಲ್ಲಿ ಅಸ್ಪೃಶ್ಯರನ್ನು 'ತಿರುಕುಲ'ದವರು ಎಂದು ಕರೆದು ಅವಮಾನ ತೊಡೆಯಲು ಯತ್ನಿಸಿದ್ದೂ ಸೇರಿ, ಹನ್ನೆರಡನೆಯ ಶತಮಾನದಲ್ಲಿ 'ಕಾಯಕವೇ ಕೈಲಾಸ, ದೇಹವೇ ದೇಗುಲ' ಎಂದು ಕೆಳಜಾತಿಗಳ ಕುಶಲಕರ್ಮಿಗಳು ಶರಣ ಚಳವಳಿಯನ್ನು ನಡೆಸಿದ್ದು, ಕನಕದಾಸರಂತಹ ಹರಿದಾಸರು ಹದಿನಾಲ್ಕು ಹದಿನೈದನೇ ಶತಮಾನದ 'ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂಬಂತಹ ಜೀವಪರ ನಿಲುವನ್ನು ಸಾರಿದ್ದು, ಹದಿನೈದು ಹದಿನಾರನೇ ಶತಮಾನಗಳಲ್ಲಿ ಸಂತರು, ಅನುಭಾವಿಗಳು ಮಲೆ ಮಾದಪ್ಪ, ಮಂಟೆಸ್ವಾಮಿ, ತಿಪ್ಪೇ ಸ್ವಾಮಿಯಂತಹ ಅನೇಕರು ಹೂಡಿದ ಸಾಂಸ್ಕೃತಿಕ ಬಂಡಾಯಗಳು, ಶಿಶುನಾಳ ಶರೀಫ, ನಾಗಲಿಂಗ ಯೋಗಿ, ಕಡಕೊಳ ಮಡಿವಾಳಪ್ಪ ತತ್ವಪದಕಾರ ಅನುಭಾವಿಗಳು ಹಾಡಿದ್ದು ಸೇರಿದಂತೆ, ತೀರಾ ಈಚಿನ ವರ್ತಮಾನದ ದಲಿತ-ಬಂಡಾಯ ಸಾಹಿತ್ಯ ಪಂಥಗಳವರೆಗೆ ಈ ಪ್ರಯತ್ನ ಮುಂದುವರೆಯುತ್ತಲೇ ಇದೆ.

ನಮ್ಮ ಪ್ರಶ್ನೆ ಮತ್ತು ಗೊಂದಲಗಳು ಇರೋದು ನಾವು ಮತ್ತೆ ಆ ವಿಷಯಗಳನ್ನ, ಇತಿಹಾಸದ ಮಾಹಿತಿಗಳನ್ನ ಚರ್ಚೆ ಮಾಡುವುದರಲ್ಲಲ್ಲ. ಕಡೇ ಪಕ್ಷ ಈ ರೀತಿಯಾಗಿರುವ ಜನಪರ ಹೋರಾಟಗಳ ಮುಂಚೂಣಿ ವಿದ್ವಾಂಸರು ಮತ್ತು ಮುಖ್ಯ ಹೋರಾಟಗಾರರು ಸೇರಿರುವ ಸಂದರ್ಭದಲ್ಲಿ ನಾವು ಈ ಸಾಂಸ್ಕೃತಿಕ ರಾಜಕೀಯದ ಚರ್ಚೆಯನ್ನು, ಪ್ರತಿ ಸಂಸ್ಕೃತಿ ನಿರ್ಮಾಣ ಪ್ರಯತ್ನದ ಚರ್ಚೆಯನ್ನು ವರ್ತಮಾನಕ್ಕೆ ಸಂಬಂಧಿಸಿದಂತೆ ಇನ್ನೊಂದು ಹಂತಕ್ಕೆ ಒಯ್ಯುವುದಕ್ಕೆ ಸಾಧ್ಯ ಇದೆಯೇ? ಕಡೆಯ ಪಕ್ಷ ನಮ್ಮ ಗೊಂದಲಗಳನ್ನಾದರೂ ಸ್ಪಷ್ಟಪಡಿಸಿ ಕೊಳ್ಳೋದಕ್ಕೆ ಸಾಧ್ಯ ಇದೆಯೇ? ಅನ್ನೋದೇ ಚರ್ಚೆಯ ಮುಖ್ಯವಾಗಿರುವ ಅಂಶವಾಗಿದ್ದರೆ ಒಳ್ಳೆಯದು ಅಂತ ನನ್ನ ಅನಿಸಿಕೆ.

ಸಧ್ಯದ ಪರಿಸ್ಥಿತಿಯಲ್ಲಿ ಯಜಮಾನ ಸಂಸ್ಕೃತಿಯ ವ್ಯಾಖ್ಯಾನ ಕೂಡ ಬಹಳ ಗೊಂದಲಕಾರಿಯಾದುದು. ಆಳುವ ಸಂಸ್ಕೃತಿ ಅಂದಾಗ ಶರಣ ಚಳವಳಿಯ ಸನ್ನಿವೇಶದಲ್ಲಿ ನಿರ್ದಿಷ್ಟವಾದ ಒಂದು ಆಕೃತಿಯಾದರೂ ಇತ್ತು. ದಾಸ ಸಂಸ್ಕೃತಿಯ ಸಂದರ್ಭದಲ್ಲೂ ಹೀಗೆಯೇ. ಅವರೆಲ್ಲರ ಗುರಿ ಮತ್ತು ಅವರ ಎದುರಾಳಿ ಬಹಳ ನಿಶ್ಚಿತವಾಗಿದ್ದ ಸನ್ನಿವೇಶಗಳವು. ಆನಂತರದಲ್ಲಿ ಈ ಪ್ರತಿ ಸಂಸ್ಕೃತಿ ಪಯತ್ನ ನಡೆಸಿದ ಶಕ್ತಿ ಗಳೇ ಸ್ಥಾಪಿತ ಜಾತಿ ಸಂಸ್ಕೃತಿಗಳಾಗಿ ಬೆಳೆದಂತಹ ಸಂದರ್ಭದಲ್ಲಿ ಅನುಭಾವಿಗಳು ಮತ್ತು 'ಸಂತರಿಗೂ ಕೂಡ ಅವರು ವಿರೋಧಿಸಬೇಕಾದಂತಹ ಶಕ್ತಿಗಳು ಯಾವುವು ಎನ್ನುವುದರ ಬಗ್ಗೆ ಒಂದು ಸ್ಪಷ್ಟವಾದ ಆಲೋಚನೆಗೆ ಅವಕಾಶವಿತ್ತು.

ಈಗ ಈ ಆಧುನಿಕ ಕಾಲಘಟ್ಟದಲ್ಲಿ, ನಾವೀಗ ಮಾತನಾಡುತ್ತಿರುವ ಸಂದರ್ಭದಲ್ಲಿ ಯಜಮಾನ ಸಂಸ್ಕೃತಿ ಎನ್ನುವುದು ಯಾವುದು? ಮತ್ತು ಅದನ್ನು ಎದುರಿಸುವುದಕ್ಕೆ ನಾವು ಯಾವ ಪರಿಕರಗಳನ್ನು ಬಳಸಬಹುದು? ಪ್ರತಿ ಸಂಸ್ಕೃತಿ ಎನ್ನುವುದು ಅಥವಾ ಪ್ರತಿ ಯಜಮಾನ್ಯ ಸಂಸ್ಕೃತಿ ಎನ್ನುವುದು-ಇವು ಕೂಡ ತುಂಬ ಗೊಂದಲಕಾರಿ ಪಾರಿಭಾಷಿಕ ಶಬ್ದಗಳಲ್ಲವೇ? ಯಜಮಾನಿಕೆಯ ಬದಲಾಗಿ ಪ್ರತಿಯಜಮಾನಿಕೆಯನ್ನು ನಿರ್ಮಿಸುತ್ತಾ ಹೋದರೆ ಮತ್ತೆ ಅದು ಅದೇ ಥೀಸಿಸ್-ಆಂಟಿಥೀಸಿಸ್‌ನ ಪ್ರಕ್ರಿಯೆಯೊಳಗೆ ಸುತ್ತಾಡುತ್ತಾ ಇರಬೇಕಾಗಿ ಬರುವುದಿಲ್ಲವೇ? ಯಜಮಾನ್ಯ ಅಥವಾ ಪ್ರತಿ ಯಜಮಾನ್ಯ ಎರಡನ್ನೂ ನಿರಾಕರಿಸುವ ಸಂಸ್ಕೃತಿಯೊಂದನ್ನು ನಾವು ಬಯಸುವುದಾದರೆ ಅದರ ರೂಪರೇಷೆಗಳೇನು? ಅನ್ನುವುದರ ಬಗ್ಗೆ ಕೂಡ ಚರ್ಚಿಸಿ ಸ್ಪಷ್ಟಪಡಿಸಿಕೊಳ್ಳಬೇಕಾದ ಅಗತ್ಯವಿದೆಯೆಂದು ಕಾಣುತ್ತದೆ.

ನಾವು ರೂಪಕವಾಗಿ ಹೇಳಬಹುದಾದರೆ ಈ ಇಂಗ್ಲಿಶ್ ಮತ್ತು ಸಂಸ್ಕೃತ, ಇವುಗಳಲ್ಲಿ ಯಾವುದು ಯಾವಾಗ ಪ್ರಧಾನ ಆಗುತ್ತದೆ ಎಂದು ಹೇಳುವುದು ಕಷ್ಟ, ಆದ್ದರಿಂದ ನನಗೆ ಇವೆರಡೂ ಕೂಡ ಯಜಮಾನ್ಯ ಸಂಸ್ಕೃತಿ, ಆಳುವ ಸಂಸ್ಕೃತಿಗಳಾಗಿ ಕಾಣುತ್ತಿವೆ. ಅವೆರಡೂ ಒಟ್ಟೊಟ್ಟಿಗೇ ನಮ್ಮನ್ನ ಆಳುತ್ತಾ ಇರುವಂತ ಸಂಸ್ಕೃತಿಗಳು. ಆವೆರಡರ ಸಹಯೋಗವಿದೆಯೋ ಅಥವಾ ಅವೆರಡೂ ಒಂದಕ್ಕೊಂದು ಪೂರಕವಾಗಿರುವ ಪಾತ್ರಗಳನ್ನ ನಿರ್ವಹಿಸುತ್ತಿವೆಯೋ, ನಾವದನ್ನ ಮತ್ತಷ್ಟು ವಿಶದವಾಗಿ ಚರ್ಚೆ ಮಾಡಬೇಕು ಎಂದು ನನಗೆ ಅನ್ನಿಸುತ್ತಿದೆ. ಎರಡು-ಮೂರು ದಶಕಗಳ ಹಿಂದೆ ಲೋಹಿಯಾ ಹೇಳಿದ ಮಾತು, ಈ ಭಾರತದಲ್ಲಿ ಹಣ, ಇಂಗ್ಲಿಷ್ ಮತ್ತು ಮೇಲ್ಜಾತಿ ಈ ಮೂರರಲ್ಲಿ ಯಾವುದಾದರೂ ಎರಡು ಇದ್ದರೂ ಸಾಕು ಗೆಲ್ಲಬಹುದು ಅಂತ. ಈ ವಿಷಯದಲ್ಲಿ ಅವತ್ತಿಗೂ, ಇವತ್ತಿಗೂ ಏನು ವ್ಯತ್ಯಾಸ ಆಗಿದೆ? ಪರಿಸ್ಥಿತಿ ಮತ್ತಷ್ಟು ತೀವ್ರಗೊಂಡಿದೆ.

ಈ ಮೂರರಲ್ಲಿ ಯಾವುದಾದರೂ ಎರಡು ಇದ್ದರೆ ಮಾತ್ರ ಗೆಲ್ಲುವಂತಹ ನಿಚ್ಚಳ ಸಾಧ್ಯತೆಗಳನ್ನು ಈ ಆಳುವ ಸಂಸ್ಕೃತಿ ಇಲ್ಲಿ ನಿರ್ಮಿಸಿಟ್ಟಿದೆ. ಅಲ್ಲದೆ ಹೊಸ ಸಾಧ್ಯತೆಯೊಂದನ್ನು ಕೂಡ ಕೊಟ್ಟಿದೆ. ಲೋಹಿಯಾ ಅವರಿಗೆ ಆ ಅಂಶ ಹೊಳೆದಿರಲಿಲ್ಲ ಎಂದು ಕಾಣುತ್ತದೆ. ನಮ್ಮ ದೇಶದಲ್ಲಿ ಈಗ ಬಣ್ಣ ಇರುವ ಹೆಣ್ಣಾಗಿದ್ದರೆ ಕೂಡ ಬಹಳ ಸುಲಭವಾಗಿ ಯಜಮಾನ ಸಂಸ್ಕೃತಿಯ ಪರಿಧಿಯೊಳಗೆ ಸೇರಬಹುದು. ಜಾಗತೀಕರಣದ ನಂತರದಲ್ಲಿ ಉಂಟಾಗಿರುವ ವಿಚಿತ್ರವಾಗಿರುವ ಸನ್ನಿವೇಶ ಅದು.

ಕಂಪ್ಯೂಟರ್ ಮತ್ತು ಜ್ಯೋತಿಷ್ಯಗಳು ಸಲೀಸಾಗಿ ಒಟ್ಟಿಗೇ

ಇಂಗ್ಲೀಷ್ ಮತ್ತು ಸಂಸ್ಕೃತ, ಇವುಗಳಲ್ಲಿ ಯಾವುದು ಯಾವಾಗ ಪ್ರಧಾನ ಆಗುತ್ತದೆ ಎಂದು ಹೇಳುವುದು ಕಷ್ಟ, ಆದ್ದರಿಂದ ನನಗೆ ಇವೆರಡೂ ಕೂಡ ಯಜಮಾನ್ಯ ಸಂಸ್ಕೃತಿ, ಆಳುವ ಸಂಸ್ಕೃತಿಗಳಾಗಿ ಕಾಣುತ್ತಿವೆ. ಅವೆರಡೂ ಒಟ್ಟೊಟ್ಟಿಗೇ ನಮ್ಮನ್ನ ಆಳುತ್ತಾ ಇರುವಂತ ಸಂಸ್ಕೃತಿಗಳು. ಆವೆರಡರ ಸಹಯೋಗವಿದೆಯೋ ಅಥವಾ ಅವೆರಡೂ ಒಂದಕ್ಕೊಂದು ಪೂರಕವಾಗಿರುವ ಪಾತ್ರಗಳನ್ನ ನಿರ್ವಹಿಸುತ್ತಿವೆಯೋ, ನಾವದನ್ನ ಮತ್ತಷ್ಟು ವಿಶದವಾಗಿ ಚರ್ಚೆ ಮಾಡಬೇಕು.

ಹೋಗುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಸಂಸ್ಕೃತ ಮತ್ತು ಇಂಗ್ಲೀಷ್‌ಗಳು ಸಹ ಅಸ್ತಿತ್ವವನ್ನು ಸಾಧಿಸಿರುವಷ್ಟು ಸುಲಭವಾಗಿ ಕನ್ನಡಕ್ಕೆ ಸಾಧ್ಯವಾಗದೇ ಹೋಗುತ್ತಿರುವುದು ಬಹಳ ದೊಡ್ಡ ಸಮಸ್ಯಾತ್ಮಕ ಸನ್ನಿವೇಶ. ಕಂದಾಚಾರ ಪುನರುತ್ಥಾನ ಅಂತಲೋ ಅಥವಾ ನವ ಕಂದಾಚಾರ ಅಂತಲೋ ಇದನ್ನು ನಾವು ಕರೆಯಬಹುದೆಂದು ಕಾಣುತ್ತದೆ.

ನಾವು ಆಧುನಿಕಗೊಂಡಷ್ಟೂ ಕಂದಾಚಾರಗಳನ್ನು ನಮ್ಮ ಸಮಾಜದಲ್ಲಿ ಮತ್ತೆ ಮತ್ತೆ ಪುನರುಜ್ಜೀವನಗೊಳಿಸುತ್ತಾ ಇದ್ದೇವೆ. ಕ್ಲೀಷೆಯಾದ ಮಾತುಗಳಲ್ಲಿ ಹೇಳಬಹುದಾದರೆ, ಈ ಕಂಪ್ಯೂಟರ್ ಮತ್ತು ಜ್ಯೋತಿಷ್ಯ ಎಷ್ಟು ಚೆನ್ನಾಗಿ ಜೋಡಿಯಾಗಿವೆ ಅಂತ ಹೇಳಿದರೆ, ಡಿಟಿಪಿ ಮಾಡೋದು, ಇಂಟರ್‌ನೆಟ್ ಬ್ರೌಸ್ ಮಾಡೋದು ಬಿಟ್ಟರೆ ಸಾಮಾನ್ಯರಿಗೆ ಅತ್ಯಂತ ಹೆಚ್ಚು ಬಳಕೆಯಾಗ್ತಿರೋದು ಜ್ಯೋತಿಷ್ಯ ಕೇಳೋಕೆ. ಅವರು ಬರೀ ಜ್ಯೋತಿಷಿಗಳಲ್ಲದೆ ಕಂಪ್ಯೂಟರ್ ತಂತ್ರಜ್ಞಾನ ಬಳಸುವ ಜ್ಯೋತಿಷಿಗಳಾದ್ದರಿಂದ ಜನರ ಕಣ್ಣಲ್ಲಿ ಕವಡೆ ಹಾಕಿ ಶಾಸ್ತ್ರ ಹೇಳುವವರಿಗಿಂತ ಹೆಚ್ಚು ವಿಶ್ವಾಸಾರ್ಹತೆಯನ್ನು ಪಡೆದು ಕೊಂಡಿದ್ದಾರೆ.

ಇದನ್ನು ಇನ್ನೊಂದು ರೂಪದಲ್ಲಿ ಹೇಳಬೇಕೆಂದರೆ ಫ್ಲೈಓವರ್ ಮತ್ತು ವಾಸ್ತುಶಾಸ್ತ್ರ. ಬಹುರಾಷ್ಟ್ರೀಯ ನಿರ್ಮಾಣ ಕಂಪನಿಗಳು ನಿರ್ಮಿಸುತ್ತಿರುವ ಅತ್ಯಾಧುನಿಕ ಫ್ಲೈಓವರ್‌ಗಳು, ಅದರ ಜೊತೆಜೊತೆಗೇ ಹೆಚ್ಚಳಗೊಳ್ಳುತ್ತಿರುವ ವಾಸ್ತುಶಾಸ್ತ್ರದ ಗೀಳು. ಅದನ್ನ ಇನ್ನೂ ವಿಸ್ತರಿಸಿ ಆಧುನಿಕ ತಂತ್ರಜ್ಞಾನದ ಬಗ್ಗೆ ಹೇಳುವುದಾದರೆ 'ಬ್ಲೂಟೂತ್' ಮತ್ತು ಜನಿವಾರ. ಒಂದರಲ್ಲಿ ಯಾವುದೇ ಮಾಹಿತಿಯನ್ನು ವರ್ಗಾಯಿಸಬೇಕೆಂದರೂ ಯಾವುದೇ ತಂತುಗಳ ಅಗತ್ಯವಿಲ್ಲವಾದರೆ ಅದನ್ನು ನಿರ್ವಹಿಸುತ್ತಿರುವ ಇಂಜಿನಿಯರ್‌ಗಳು ಜನಿವಾರದ ದಾರವನ್ನು ಇನ್ನಿಲ್ಲದಷ್ಟು ಆಧರಿಸಿಕೊಳ್ಳತೊಡಗಿದ್ದಾರೆ. ಇವೆಲ್ಲ ಒಟ್ಟೊಟ್ಟಿಗೆ ಮುಂದುವರೆಯುತ್ತಿವೆ ಅನ್ನೋದೆ ನಮ್ಮ ಆಳುವ ವರ್ಗದ ಸಂಸ್ಕೃತಿ ಯಾವುದು ಅನ್ನೋ ಗೊಂದಲಕ್ಕೆ ಕಾರಣವಾಗಿದೆ.

ಇಲ್ಲಿ ಯಜಮಾನ ಸಂಸ್ಕೃತಿ ಅನ್ನುವುದು, ಆಳುವ ಸಂಸ್ಕೃತಿ ಅನ್ನುವುದು ಯಾವುದು ಎನ್ನುವ ಪ್ರಶ್ನೆಯನ್ನು ಮತ್ತಷ್ಟು ನಾವು ವಿಶ್ಲೇಷಿಸಬೇಕಿದೆ? ಸಧ್ಯಕ್ಕೆ ಗೊತ್ತಾಗುವ ರೀತಿಯಲ್ಲಿ ಇಬ್ಬರು ಯಜಮಾನರಿದ್ದಾರೆ ಕಾಣುತ್ತಿದ್ದಾರೆ ನಮಗೆ. ಒಬ್ಬ ಜಾಗತಿಕ ಯಜಮಾನ. ಅವನ ರೀತಿ, ರಿವಾಜುಗಳೇ ಬೇರೆ ಇವೆ. ಇನ್ನೊಬ್ಬ ನಿರ್ವಾಹಕ ಯಜಮಾನ ಇದ್ದಾನೆ. ಭಾರತೀಯ ನಿರ್ವಾಹಕ ಮ್ಯಾನ್ಯೇಜರ್. ಅವನ ಸಂಸ್ಕೃತಿ ಒಂದಿದೆ. ಅದೂ ಕೂಡ ಅಷ್ಟೇ ಪ್ರಮಾಣದಲ್ಲಿ ಮಾನ್ಯತೆಯನ್ನು ಪಡೆದುಕೊಂಡಿದೆ. ಒಂದು ನೆಲೆಯಲ್ಲಿ ನೋಡಿದರೆ, ಆ ಎರಡೂ ಸಂಸ್ಕೃತಿಗಳಿಗೆ ತದ್ವಿರೋಧಿಯಾಗಿರುವಂತಹ ಚಹರೆಗಳಿವೆ. ಜಾಗತಿಕ ಯಜಮಾನನಿಗೆ ಗೋಮಾಂಸ ಭಕ್ಷಣೆಯ ಬಗ್ಗೆ ಯಾವುದೇ ರೀತಿಯ ಆಕ್ಷೇಪಗಳೂ ಇಲ್ಲ. ಆತನ ನಿತ್ಯದ ಆಹಾರ ಕ್ರಮ ಅದು.

ಆದರೆ ಈ ನಿರ್ವಾಹಕ ಯಜಮಾನನಿಗೆ ಗೋವು ಪವಿತ್ರ ಅನ್ನೋ ಕಾರಣಕ್ಕೆ ನಾವು ಗೋಮಾಂಸ ಭಕ್ಷಣೆಯನ್ನ ನಿಲ್ಲಿಸಬೇಕು. ಜಾಗತಿಕ ಯಜಮಾನನಿಗೆ ಜಾತಿ ಏನೂ ಇಲ್ಲ. ಬಣ್ಣಗಳಿವೆ. ಜಾತಿ ಬಗ್ಗೆ ಬಹಳ ದೊಡ್ಡ ಆಲೋಚನೆಗಳೇನೂ ಆತನಿಗೆ ಅರ್ಥ ಆಗೋದಿಲ್ಲ.

ನಾವು ಆಧುನಿಕಗೊಂಡಷ್ಟೂ ಕಂದಾಚಾರಗಳನ್ನು ನಮ್ಮ ಸಮಾಜದಲ್ಲಿ ಮತ್ತೆ ಮತ್ತೆ ಪುನರುಜ್ಜೀವನಗೊಳಿಸುತ್ತಾ ಇದ್ದೇವೆ. ಕ್ಲೀಷೆಯಾದ ಮಾತುಗಳಲ್ಲಿ ಹೇಳಬಹುದಾದರೆ, ಈ ಕಂಪ್ಯೂಟರ್ ಮತ್ತು ಜ್ಯೋತಿಷ್ಯ ಎಷ್ಟು ಚೆನ್ನಾಗಿ ಜೋಡಿಯಾಗಿವೆ ಅಂತ ಹೇಳಿದರೆ, ಡಿಟಿಪಿ ಮಾಡೋದು, ಇಂಟರ್‌ನೆಟ್ ಬ್ರೌಸ್ ಮಾಡೋದು ಬಿಟ್ಟರೆ ಸಾಮಾನ್ಯರಿಗೆ ಅತ್ಯಂತ ಹೆಚ್ಚು ಬಳಕೆಯಾಗ್ತಿರೋದು ಜ್ಯೋತಿಷ್ಯ ಕೇಳೋಕೆ. ಅವರು ಬರೀ ಜ್ಯೋತಿಷಿಗಳಲ್ಲದೆ ಕಂಪ್ಯೂಟರ್ ತಂತ್ರಜ್ಞಾನ ಬಳಸುವ ಜ್ಯೋತಿಷಿಗಳಾದ್ದರಿಂದ ಜನರ ಕಣ್ಣಲ್ಲಿ ಕವಡೆ ಹಾಕಿ ಶಾಸ್ತ್ರ ಹೇಳುವವರಿಗಿಂತ ಹೆಚ್ಚು ವಿಶ್ವಾಸಾರ್ಹತೆಯನ್ನು ಪಡೆದು ಕೊಂಡಿದ್ದಾರೆ.

ಆದರೆ ಈ ನಿರ್ವಾಹಕ ಯಜಮಾನನಿಗೆ ಜಾತಿ ಎನ್ನುವುದು ಬಹಳ ದೊಡ್ಡ ಪ್ರಶ್ನೆ ಆಗಿಹೋಗಿದೆ. ನಮ್ಮ ಎಲ್ಲ ಐಟಿ ಬಿಟಿ ಕಂಪನಿಗಳೂ ಇವತ್ತು ಜಾತಿ ಆಧಾರಿತ ನವ ಶ್ರಮವಿಭಜನೆಯ ಮೇಲೆ ಅಸ್ತಿತ್ವದಲ್ಲಿವೆ.

ಆಧುನಿಕತೆ ಮತ್ತು ಸನಾತನತೆ ಇವೆರಡೂ ಒಟ್ಟೊಟ್ಟಿಗೇ ಹೋಗುತ್ತಾ ಇರುವಂತ ಒಂದು ವಿಚಿತ್ರವಾದ ಸನ್ನಿವೇಶ – ಅತ್ಯಂತ ಹೆಚ್ಚು ಓದಿರುವಂತವರು ಎನ್ ಆರ್ ಐಗಳಾಗಿ ಬೇರೆ ದೇಶಗಳಲ್ಲಿದ್ದಾರೆ. ಅವ್ರು ಇಲ್ಲಿಗೆ ಹಣ ಕಳಿಸುತ್ತಿರೋದು ಜಾತಿ ಸಂಘಟನೆಗಳನ್ನ ಮಾಡೋದಕ್ಕೆ. ಇವತ್ತು ಅತ್ಯಂತ ಸಮರ್ಪಕವಾಗಿ ಜಾತಿ ಸಂಘಟನೆಗಳನ್ನ ಮಾಡ್ತಾ ಇರುವಂತ ಎಲ್ಲ, ಬಲಿಷ್ಠ ಹಿಂದುಳಿದ ಜಾತಿಗಳು ವರ್ಗಗಳು ಎನ್‌ಆರ್‌ಐಗಳ ದುಡ್ಡನ್ನೇ ಅದಕ್ಕಾಗಿ ಅವಲಂಬಿಸಿರೋದು. ವಿದೇಶಗಳಲ್ಲಿ ಆಧುನಿಕ ತಂತ್ರಜ್ಞಾನದ ಕಂಪನಿಗಳಲ್ಲಿ ಕೆಲಸ ಮಾಡುತ್ತಾ ಇರುವಂತ ಇಂಜಿನಿಯರ್‌ಗಳು ಕಳಿಸಿರುವ ಹಣದಿಂದಲೇ ಇವತ್ತು ಇಲ್ಲಿ ನವ ಆಧ್ಯಾತ್ಮಿಕ ಆಶ್ರಮಗಳು ಹುಟ್ಟುತ್ತಾ ಇರೋದು. ಆದ್ದರಿಂದ ಈ ವಿನ್ಯಾಸದಲ್ಲಿ ನಾವು ನಮ್ಮ ಆಳುವ ಸಂಸ್ಕೃತಿಯನ್ನು ವ್ಯಾಖ್ಯಾನಿಸುವುದು ಮತ್ತು ಅದನ್ನು ಯಾವ ರೀತಿಯಲ್ಲಿ ಎದುರಿಸುವುದು?

ನಮ್ಮ ಹಿಂದಿನ ಅನುಭವಗಳ ಬಗ್ಗೆ ಹೇಳುವುದಾದರೆ ಒಂದು ರೀತಿಯಲ್ಲಿ ಅದು ಸರಳವಾದ ವಿಧಾನದಲ್ಲಿತ್ತು ಎಂದು ನಾನು ಹೇಳಿದೆ. ಪುರೋಹಿತಶಾಹಿ ಶಕ್ತಿ, ಪುರೋಹಿತಶಾಹಿ ಸ್ಥಾನಮಾನಗಳು ಯಾವುದೋ ಜಾತಿಯ ಕೈಯಲ್ಲಿ ಸೀಮಿತ ಆಗಿವೆ ಅಂತ ಆದಾಗ, ಅದನ್ನ ವಿಕೇಂದ್ರೀಕರಿಸಿ ಪ್ರಜಾತಾಂತ್ರಿಕಗೊಳಿಸುವುದು, ಎಲ್ಲಾ ಜಾತಿಗಳಲ್ಲೂ ಪುರೋಹಿತಶಾಹಿಯನ್ನ ನಿರ್ಮಿಸುವುದನ್ನು ಹೋರಾಟದ ಒಂದು ವಿಧಾನವನ್ನಾಗಿ ಮಾಡಿಕೊಂಡಿದ್ದನ್ನು ನಾವು ಕಂಡಿದ್ದೇವೆ. ಹರಿದಾಸ ಚಳವಳಿ ನೋಡಿದರೆ, ಅದು ತನ್ನ ವ್ಯಾಪ್ತಿಗೆ ಬಂದ ಎಲ್ಲ ಜಾತಿಗಳಿಗೂ ದಾಸ ದೀಕ್ಷೆ ಕೊಡುವುದನ್ನು ಆರಂಭಿಸಿತು. ಶಾಸ್ತ್ರಪುರಾಣಗಳನ್ನೇ ಪುರೋಹಿತಶಾಹಿ ಬಹಳ ದೊಡ್ಡ ಪ್ರಮಾಣಿತ ಅಧಿಕಾರ ಮೂಲಗಳು ಎಂದು ಕರೆದಾಗ ಶರಣ ಚಳವಳಿ ಬದುಕಿನ ಅನುಭವಗಳನ್ನೇ ದೊಡ್ಡದು ಅಂತ ಗೌರವಿಸಿ ಅದಕ್ಕೆ ಸವಾಲೆಸೆಯಿತು.

ಈಗ ನಮಗೆ ಯಜಮಾನ ಸಂಸ್ಕೃತಿಯಿಂದ ಒದಗಿರುವ ಸಮಸ್ಯೆ ಅನ್ನುವಂಥಾದ್ದು ಅನುಭೋಗವಾದ. ಈ ಅನುಭೋಗವಾದಕ್ಕೆ ಪೂರಕವಾಗಿ ಉಳಿದ ಎಲ್ಲವೂ ಕೂಡ ಇಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಅನುಭೋಗವಾದವೆನ್ನುವುದು ವ್ಯಕ್ತಿಕೇಂದ್ರಿತ ವಾದವಾಗಿ, ಸಂಪತ್ತಿನ ಹಂಚಿಕೆಯ ತೀವ್ರ ಅಸಮಾನತೆಯಾಗಿ, ಸರಕು ಸಂಸ್ಕೃತಿಯಾಗಿ, ಹೆಚ್ಚೆಚ್ಚು ತಂತ್ರಜ್ಞಾನ ಬಳಕೆಯ ಮೂಲಕ ಪ್ರತಿಷ್ಠೆ ತೋರಿಸಿಕೊಳ್ಳುವ ಒಂದು ಆಧುನಿಕತೆಯಾಗಿ, ಬಲಿಷ್ಠ ಜಾತಿಗಳ ಸಂಖ್ಯಾಬಲ ಮತ್ತು ಹಣಬಲದ ಪ್ರಜಾತಂತ್ರವಾಗಿ, ಆ ಮುಖಾಂತರವಾಗಿ ಸಾಮಾಜಿಕ ಮೌಲ್ಯಗಳ ಪೂರ್ತಿ ಪತನವಾಗಿ ಇದು ಅಭಿವ್ಯಕ್ತಿಗೊಂಡಿದೆ. ಈ ಲಕ್ಷಣಗಳನ್ನು ಕ್ರೋಢೀಕರಿಸಿ ಅದನ್ನು ಇಂದಿನ ಯಜಮಾನ್ಯ ಸಂಸ್ಕೃತಿಯ ಒಂದು ಆಕೃತಿಯನ್ನಾಗಿ ನೋಡಬಹುದೇ. ಬೇರೆಲ್ಲವೂ ಕೂಡ ಆನುಷಂಗಿಕ ಲಕ್ಷಣಗಳು ಅನ್ನುವಂತೆ ಕಾಣಿಸುತ್ತಾ ಇದೆ. ಅವಕಾಶವಾದ ಅಂತ ರವೀಂದ್ರ ರೇಷ್ಮೆಯವರು ಹೇಳಿದರು. ಈ ಅವಕಾಶವಾದವೇ ಬಹಳ ದೊಡ್ಡ ಸಾಂಸ್ಕೃತಿಕ ಮೌಲ್ಯವಾಗಿ ಇವತ್ತು ಎಲ್ಲ ರಂಗಗಳಲ್ಲಿ ತಾಂಡವವಾಡುತ್ತಿದೆ. ಅಂದರೆ ಅನುಭೋಗವಾದವನ್ನು ಬಲಪಡಿಸುವುದಕ್ಕೆ ಅಂತಿಮವಾಗಿ ಅಕ್ರಮ ಹಣ ಗಳಿಕೆಯ ವಿಧಾನಗಳಿಗೆ ದಾರಿ ಮಾಡಿಕೊಡುವಂತಹ ವ್ಯಕ್ತಿಕೇಂದ್ರಿತ ಸ್ವಾರ್ಥವಾಗಿ ಇವತ್ತು ನಮ್ಮಲ್ಲಿ ಚಾಲ್ತಿಯಲ್ಲಿದೆ.

ಒಂದು ಕಡೆ 'ಜಾತಿ' ಅನ್ನುವುದು ಬಲಿಷ್ಠ ಆಗುತ್ತಾ ಇದೆ. ಅದು ಅವಕಾಶವಾದವನ್ನು ಬೆಂಬಲಿಸುವ ಅಸ್ತ್ರವಾಗಿಯೂ ಬಳಕೆಯಾಗುತ್ತಿದೆ. ಇದರಿಂದಾಗಿ ಏಕ ಕಾಲದಲ್ಲಿ ನಾವು ಜಾತ್ಯಾತೀತರೂ ಮತ್ತು ಜಾತಿವಾದಿಗಳೂ ಆಗಿರುವಂತಹ ಆಷಾಢಭೂತಿತನದ ವಿಪರ್ಯಾಸಕರ ಸನ್ನಿವೇಶ ಕಂಡುಬರುತ್ತಿದೆ. ಯಾರನ್ನೂ ಇಂತಹ ಜಾತಿಯವನೆಂಬ ಕಾರಣಕ್ಕೆ ದೂರ ಇಟ್ಟಿದ್ದೇವೆ ಅಂತ ಇವತ್ತಿನ ಸಾಮಾಜಿಕ ರಂಗದಲ್ಲಿ ಯಾರೂ ತೋರಿಸಿಕೊಳ್ಳಬಯಸುತ್ತಿಲ್ಲ. ಈಗ ಅದು ಅನುಕೂಲ ಅನಾನುಕೂಲದ ಪ್ರಶ್ನೆ ಮಾತ್ರ. ಯಾವ ಜಾತಿ ಯಾವ ಜಾತಿ ಸಮೀಕರಣ ಆ ಸನ್ನಿವೇಶದಲ್ಲಿ ಹೆಚ್ಚು ಲಾಭ ಕೊಡುತ್ತದೋ, ಆ ಜಾತಿಗಳನ್ನ ಸಮೀಕರಣ ಮಾಡುವುದಕ್ಕೆ ಈ ಅವಕಾಶವಾದಿ ರಾಜಕಾರಣಿಗಳು ಸಿದ್ಧರಿದ್ದಾರೆ. ಜಾತಿ ಸಮೀಕರಣಗಳು, ಅದಕ್ಕೋಸ್ಕರವಾಗಿ ಜಾತಿಗಳನ್ನ ಕಟ್ಟುವಂತಹ ಒಂದು ವಿಧಾನ ಜಾತಿಗಳನ್ನ ಕಾಪಾಡುವ ಹುನ್ನಾರಗಳು, ಮತ್ತು ಅದೇ ಸಂದರ್ಭದಲ್ಲಿ ಜಾತಿಗೆ ಸೀಮಿತವಾಗಿದ್ದೇವೆ ಅಂತ ತೋರಿಸಿಕೊಳ್ಳದಿರಲು ತಂತ್ರಗಾರಿಕೆಗಳು ಇಂತಹ ಎಲ್ಲ ಸರ್ಕಸ್ಸುಗಳನ್ನು ಯಜಮಾನ ಸಂಸ್ಕೃತಿ ಮಾಡುತ್ತಾ ಇದೆ.

ಪ್ರತಿಯೊಬ್ಬರೂ ಕೂಡ ಗೊತ್ತಿದ್ದೇ ತಮ್ಮ ಜಾತಿಯನ್ನ ಬಳಸುತ್ತಾ ಇದ್ದಾರೆ ಮತ್ತು ಬೇರೆ ಜಾತಿ ಗುಂಪುಗಳ ಜೊತೆ ಹಿತಾಸಕ್ತಿ ಆಧಾರಿತ ಸಮೀಕರಣವನ್ನ ಸಾಧಿಸುತ್ತಾ ಇದ್ದಾರೆ. ಅನುಭೋಗವಾದ ಮತ್ತು ಅದರ ಮುಖಾಂತರವಾಗಿ ಹುಟ್ಟುರುವಂತಹ ಅವಕಾಶವಾದವೇ ಇದರ ನೆಲೆಗಟ್ಟು. ಇದು ನಮ್ಮಲ್ಲಿ ಯಾವ ಬಗೆಯ ಸಂಸ್ಕೃತಿಯನ್ನು ಪ್ರೇರೇಪಿಸಿದೆ? ಮತ್ತು ಅದಕ್ಕೆ ವಿರೋ

ಧವಾಗಿ ಯಾವ ಬಗೆಯ ಸಾಂಸ್ಕೃತಿಕ ಹೋರಾಟಗಳನ್ನ ನಾವು ಮಾಡೋದಕ್ಕೆ ಸಾಧ್ಯ ಇದೆ? ಅನ್ನುವುದನ್ನು ಹೊಸದಾಗಿ ಯೋಚಿಸಬೇಕಿದೆ. ಹಳೆಯ ಅನುಭವಗಳ ಆಧಾರದಲ್ಲಿ ಆಲೋಚಿಸಿ ಈ ಹೊಸ ವಿದ್ಯಮಾನಗಳನ್ನು ಎದುರಿಸುವ ಸೂಚನೆಗಳನ್ನು ಪಡೆದುಕೊಂಡರೆ ಬಹುಶಃ ಸಾಕಾಗುವುದಿಲ್ಲ. ನನಗಂತೂ ಇದು ಬಹಳ ಇಕ್ಕಟ್ಟಿನ ಸನ್ನಿವೇಶವಾಗಿ ಕಾಣುತ್ತಿದೆ. ಏಕೆಂದರೆ ಇವತ್ತಿನ ಈ ಅವಕಾಶವಾದ ಒಂದು ಜಾತಿಗೆ ಸೀಮಿತವಾದುದಲ್ಲ, ಒಂದು ಸಮುದಾಯಕ್ಕೆ ಸೀಮಿತವಾದುದಲ್ಲ.

ಸಂಸ್ಕೃತಿ ಅನ್ನುವುದರ ನಿರ್ವಚನ ಕೂಡ ಸಂಕೀರ್ಣವಾಗಿದೆ. ಒಟ್ಟಾರೆಯಾಗಿ ನಾವು ಇವತ್ತು ಕಾಣುತ್ತಾ ಇರುವಂಥದ್ದು ಒಂದು ಏಕಾಕಾರಿ ಸಂಸ್ಕೃತಿ. ಮತ್ತದು ಏಕಾಕಾರಿ ಭಾಷೆಯನ್ನು ಓಲೈಸುತ್ತಿರುವಂತಾದ್ದು ಕೂಡ. ಸಂಸ್ಕೃತಿಯಲ್ಲಿ ಏಕಾಕಾರ, ಭಾಷೆಯಲ್ಲಿ ಏಕಾ ಕಾರ, ಉತ್ಪಾದನೆಯಲ್ಲಿ ಏಕಾಕಾರ, ಅಭಿರುಚಿಯಲ್ಲಿ ಏಕಾ ಕಾರ, ಇವುಗಳಿಗೆ ಜೊತೆಯಾಗಿ ಏಕಾಕಾರಿ ರಾಜಕೀಯ– ಅದು ಯಾವುದೆಂದರೆ ಅಧಿಕಾರ ಹುದ್ದೆಗಳನ್ನವಲಂಬಿಸಿ ರುವ ಅವಕಾಶವಾದ. ಇವತ್ತು ಇದು ಎಲ್ಲರಿಗೂ ಗೊತ್ತಿ ರುವ ಅಂಶ. ಅದು ಸಿದ್ಧಾಂತವೂ ಅಲ್ಲ. ಮೌಲ್ಯವೂ ಅಲ್ಲ, ಹೋರಾಟವೂ ಅಲ್ಲ. ಅಧಿಕಾರವನ್ನ ಮಾತ್ರ ಪಡೆಯಬೇಕು. ಅಧಿಕಾರ ಕೂಡ ಅಕ್ರಮ ಹಣ ಮಾಡೋದಕ್ಕೋಸ್ಕರವಾಗಿ ಮಾತ್ರ.

ಈ ಸನ್ನಿವೇಶದಲ್ಲಿ ಒಂದು ನವಹಿಂದೂತ್ವವಾದ ನಮ್ಮ ಭಾರತದಲ್ಲಿ ಕಾಣಿಸಿಕೊಂಡಿದೆ. ಈ ನವಹಿಂದುತ್ವವಾದಕ್ಕೂ ಮೊದಲ ಮೂಲದ ಬ್ರಾಹ್ಮಣ ಹಿಂದುತ್ವವಾದಕ್ಕೂ ಹಲವಾರು ವ್ಯತ್ಯಾಸಗಳಿವೆ. ಬ್ರಾಹ್ಮಣ ಶ್ರೇಷ್ಠತೆಯೇ ಆದ್ಯತೆಯ ಪ್ರತಿಪಾದನೆಯಾಗಿರಬೇಕು ಎಂಬುದು ಈಗ ಪಕ್ಕಕ್ಕೆ ಸರಿದಿದೆ. ಅದರೊಳಗೆ ಬಂದು ಹಿಂದುತ್ವವಾದದ ಮುಖಾಂತರವಾಗಿ ಹಿಂದುಳಿದ ಬಲಿಷ್ಠ ಜಾತಿಗಳು ರಾಜಕಾರಣವನ್ನು ನಡೆಸೋದಾದರೆ ಅಧಿಕಾರ ಸ್ಥಾನಗಳಲ್ಲಿ ಕೂರಿಸುವ ಅವಕಾಶ ಕಲ್ಪಿಸುವುದಕ್ಕೆ ಅದು ಸಿದ್ಧವಿದೆ. ಭಾರತೀಯ ಜನತಾ ಪಕ್ಷದ ಬಹುಪಾಲು ರಾಜಕಾರಣಿಗಳನ್ನು, ಅದರಲ್ಲಿ ಮುಖ್ಯಮಂತ್ರಿಗಳಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವವರನ್ನು ನೋಡಿದರೆ ಇವತ್ತು ಯಾವ ಕಾರಣಕ್ಕೂ ಭಾರತೀಯ ಜನತಾ ಪಕ್ಷ ಅನ್ನುವಂತಾದ್ದು ಕೇವಲ ಬ್ರಾಹ್ಮಣ ರಾಜಕಾರಣಿಗಳ ಸಂಘಟನೆ ಅಥವಾ ಪಕ್ಷವಾಗಿ ಉಳಿದಿಲ್ಲ.

ಪ್ರಜಾತಾಂತ್ರಿಕ ವಿಧಾನಗಳಲ್ಲಿ ಅಧಿಕಾರಕ್ಕೆ ಬರಬೇಕು ಅಂತ ಹೇಳಿದರೆ, ಸಂಖ್ಯಾಬಲವುಳ್ಳ ಬಲಿಷ್ಠ ಜಾತಿಗಳನ್ನು ತನ್ನೊಳಕ್ಕೆ ಸೇರಿಸಿಕೊಳ್ಳಬೇಕು. ಅದನ್ನವರು ಈಗ ಸಾಧಿಸಿದ್ದಾರೆ. ಈ ಬಗೆಯ ಏರ್ಪಾಡನ್ನು ಸಂಘಪರಿವಾರ ಪ್ರವರ್ತಿಸಿರುವ ಹಲವಾರು ಸಮೂಹ ಸಂಘಟನೆಗಳಲ್ಲೂ ಇದೇ ಬಗೆಯ ಏರ್ಪಾಡನ್ನು ಮಾಡಿದ್ದಾರೆ. ಅದನ್ನು ನವಹಿಂದೂತ್ವವಾದ ಎಂದೇ ನಾವು ಕರೆಯಬೇಕು. ಮತ್ತೆ ಜಾತಿ ಆಧಾರಿತ ದಮನಕಾರಿ ರಾಜಕಾರಣವನ್ನ ಮಾಡೋದಕ್ಕೆ ಮತ್ತು ತೋಳ್ಬಲವನ್ನ ಬಳಸೋದಕ್ಕೆ ಈ ನವಹಿಂದೂತ್ವಕ್ಕೆ ಈ ಹಿಂದುಳಿದ ಬಲಿಷ್ಠ ಜಾತಿಗಳ ಬೆಂಬಲ ಅನ್ನೋದು ಬಹಳ ಅತ್ಯಗತ್ಯವಾಗಿದೆ. ಆದ್ದರಿಂದ ಸ್ವರೂಪದಲ್ಲಿ ಅದಕ್ಕಿರುವಂತಹ ಕೋಮುವಾದಿ ರಾಜಕಾರಣದ ಅಧಿಕಾರ ಕೇಂದ್ರದ ಪುರೋಹಿತಿಕೆಯನ್ನು ಬ್ರಾಹ್ಮಣ ವರ್ಗ ತಾನೇ ಇಟ್ಟುಕೊಂಡಿರುತ್ತದೆ. ಅದನ್ನ ಇವರು ಒಪ್ಪಿದರಾಯಿತು. ಬಲಿಷ್ಠ ಹಿಂದುಳಿದ ಜಾತಿಗಳು ಅದು ಯಡಿಯೂರಪ್ಪ ಆಗಿರಲಿ, ಗುಜರಾತಿನಲ್ಲಿ ಮೋದಿ ಆಗಿರಲಿ ಅಥವಾ ಇನ್ನೊಂದು ಕಡೆ ಯಾರಾದರೂ ಆಗಿರಲಿ, ಯಾರು ಅವರಿಗೆ ಥಿಂಕ್ ಟ್ಯಾಂಕ್ ಆಗಿರುವುದು ಇವರ ಕೆಲಸ. ಈ ಥಿಂಕ್ ಟ್ಯಾಂಕ್ ಆದೇಶಗಳು ಅಂತಿಮ.

ಇದೊಂದು ರೀತಿಯಲ್ಲಿ ಪುರಾತನ ಸಾಮ್ರಾಜ್ಯಗಳ ರಾಜಪುರೋಹಿತಿಕೆಯ ವಿಧಾನವನ್ನವಲಂಬಿಸಿದೆ. ಆರ್ ಎಸ್ಎಸ್ ಈಗ ಕೋಮುವಾದಿ ರಾಜಕಾರಣದ ರಾಜಪುರೋಹಿತ ಸ್ಥಾನ ಅಲಂಕರಿಸಿ ತೆರೆಮರೆಯಿಂದ ನಿಯಂತ್ರಣ ಮಾಡಿತ್ತಿದೆ. ಅಧಿಕಾರದ ಹುದ್ದೆಗಳಲ್ಲಿ ಬೇರೆ ಬಲಿಷ್ಠ ಜಾತಿಗಳವರಿರುತ್ತಾರೆ. ಇವರ ಮುಖಾಂತರವಾಗಿಯೇ ಆಡಳಿತ ನಡೆಸೋದಕ್ಕೆ, ಇವರ ಮುಖಾಂತರವೇ ತನ್ನ ಅಜೆಂಡಾಗಳನ್ನು ಪೂರೈಸಿಕೊಳ್ಳೋದಕ್ಕೆ ಅದು ತಂತ್ರಗಾರಿಕೆ ರೂಪಿಸಿದೆ. ಅವರು ಮಾಂಸಾಹಾರಕ್ಕೆ ಈಗ ರೆಡಿ ಇದ್ದಾರೆ. ಬಿಜೆಪಿಗೇನು ಮಾಂಸಾಹಾರ ಈಗ ದೊಡ್ಡ ವಿಷಯ ಅಲ್ಲ. ಗೋವು ಪವಿತ್ರ ಎಂದು ಭಾವಿಸಬೇಕು ಮತ್ತು ಅದರಿಂದಾಗಿ ಗೋವು ತಿನ್ನೋರನ್ನು ಪ್ರತ್ಯೇಕಗೊಳಿಸಬೇಕಷ್ಟೆ.

ಅದು ಕೋಮುವಾದಿ ರಾಜಕಾರಣದ ಜನರನ್ನು ವಿಭಜಿಸುವ ಒಂದು ಹುನ್ನಾರ. ಬಹುಸಂಖ್ಯಾತ ಧಾರ್ಮಿಕ ಸಮುದಾಯವನ್ನು ಇಂತಹ ವಿಷಯಗಳ ಮೂಲಕ ಭಾವೋದ್ರೇಕಗೊಳಿಸಿ ಮತಬ್ಯಾಂಕ್‌ಅನ್ನು ನಿರ್ಮಾಣ ಮಾಡಿಕೊಳ್ಳುತ್ತಿದೆ. ನೀವು ಆಧುನಿಕರಾಗಿರುವುದರಲ್ಲಿ ಸಮಸ್ಯೆ ಇಲ್ಲ ಅವರಿಗೆ. ಬಹಿರಂಗವಾಗಿ ಪಬ್‌ಗಳಿಗೆ ಹೋಗಬಾರದು. ನಿಮ್ಮ ಮನೆಯಲ್ಲಿ ಕುಡಿಯಬಹುದು. ಹೀಗೆ ವಿಚಿತ್ರವಾಗಿರುವ ಸಾಂಸ್ಕೃತಿಕ ಸಮೀಕರಣಗಳನ್ನ ಅವರು ನಮ್ಮ ಸಮಾಜದಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ಮುಂದಿಡುತ್ತಿದ್ದಾರೆ. ಡೆಮಾಕ್ರಸಿ ಕೂಡ ಅವರಿಗೆ ಪರವಾಗಿಲ್ಲ. ಆದರೆ ಏನಪ್ಪಾ ಅಂದರೆ ಮುಖ್ಯಮಂತ್ರಿಗಳು ಯಾವಾಗಲೂ ಕೋಮುವಾದವನ್ನು ಒಪ್ಪಿಕೊಳ್ಳುವ ಬಲಿಷ್ಠ ಹಿಂದುಳಿದ ಜಾತಿಯವರಾಗಿರಬೇಕು.

ಜಾತಿ ಆಧಾರಿತ ದಮನಕಾರಿ ರಾಜಕಾರಣವನ್ನ ಮಾಡೋದಕ್ಕೆ ಮತ್ತು ತೋಳ್ಬಲವನ್ನ ಬಳಸೋದಕ್ಕೆ ಈ ನವ ಹಿಂದೂತ್ವಕ್ಕೆ ಈ ಹಿಂದುಳಿದ ಬಲಿಷ್ಠ ಜಾತಿಗಳ ಬೆಂಬಲ ಅನ್ನೋದು ಬಹಳ ಅತ್ಯಗತ್ಯವಾಗಿದೆ. ಆದ್ದರಿಂದ ಸ್ವರೂಪದಲ್ಲಿ ಅದಕ್ಕಿರುವಂತಹ ಕೋಮುವಾದಿ ರಾಜಕಾರಣದ ಅಧಿಕಾರ ಕೇಂದ್ರದ ಪುರೋಹಿತಿಕೆಯನ್ನು ಬ್ರಾಹ್ಮಣ ವರ್ಗ ತಾನೇ ಇಟ್ಟುಕೊಂಡಿರುತ್ತದೆ. ಅದನ್ನ ಇವರು ಒಪ್ಪಿದರಾಯಿತು. ಬಲಿಷ್ಠ ಹಿಂದುಳಿದ ಜಾತಿಗಳು ಅದು ಯಡಿಯೂರಪ್ಪ ಆಗಿರಲಿ, ಗುಜರಾತಿನಲ್ಲಿ ಮೋದಿ ಆಗಿರಲಿ ಅಥವಾ ಇನ್ನೊಂದು ಕಡೆ ಯಾರಾದರೂ ಆಗಿರಲಿ, ಯಾರು ಅವರಿಗೆ ಥಿಂಕ್ ಟ್ಯಾಂಕ್ ಆಗಿರುವುದು ಇವರ ಕೆಲಸ.

ಹೆಣ್ಣು ಮಕ್ಕಳು ಕುಡೀಬಹುದಂತೆ, ಪಬ್‌ಗೆ ಹೋಗಬಾರದು. ನೀವು ಮನೇಲಿ ಕುಡೀರಿ. ನಾನು ಅವರ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಿದಾಗ ಇನ್ನೂ ಒಂದು ಅವರು ರಿಯಾಯಿತಿಯನ್ನೂ ಹೇಳಿದರು. ಬೇಕಾದರೆ ಪಬ್ಬಿಗೆ ಹೋಗಿ ಕುಡೀಲಿ, ಆದರೆ ಅವರ ಅಫಿಶಿಯಲ್ ಗಂಡನ ಜೊತೆಗೆ ಅಥವಾ ಅಣ್ಣನ ಜೊತೆಗೆ ಹೋಗಿ ಕುಡಿಯಬಹುದು. ಯಾರ್‍ಯಾರೋ ಜೊತೆಗೆ ಹೋಗಿ ಅದು ಹೇಗೆ ಕುಡೀತಾರೆ? ಇದು ಬಹಳ ಸಮಸ್ಯಾತ್ಮಕ ಆಗಿರುವ ಸಾಂಸ್ಕೃತಿಕ ಡಿಸ್ಕೋರ್ಸ್. ಒಬ್ಬ ವ್ಯಕ್ತಿಗೆ ಆಹಾರ, ಆಚಾರ, ವಿಚಾರ ಇವುಗಳ ಸ್ವಾತಂತ್ರ್ಯ ಸಂವಿಧಾನ ಕೊಟ್ಟಿದೆ. ಅದನ್ನು ಚಲಾಯಿಸಲಿಕ್ಕೂ ಈ ಬಗೆಯ ನಿರ್ಬಂಧಗಳು. ಆದ್ದರಿಂದ ಸನಾತನವಾದವೂ ಈ ಆಧುನಿಕತೆಯೂ ವಿಚಿತ್ರ ರೀತಿಯಲ್ಲಿ ತಳುಕು ಹಾಕಿಕೊಂಡು ಮುನ್ನಡೆಯುತ್ತಿರುವಂತ ಬಹಳ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿವತ್ತು ಇದ್ದೇವೆ.

ಮಹಿಳೆಯರನ್ನ ಅವರು ಒಂದು ರೀತಿಗೆ ಒಳಪಟ್ಟು ಬಿಡುಗಡೆ ಮಾಡೋಕೆ ರೆಡಿ ಇದ್ದಾರೆ. ಆದರೆ ಮಹಿಳೆ ಯಾವ ಬಗೆಯ ಸಾರ್ವಜನಿಕ ಕೆಲಸಗಳಲ್ಲಿ ನಿಯೋಜನೆಗೊಳ್ಳಬೇಕು ಅಂತ ಇವರ ನವಹಿಂದೂತ್ವ ಹೇಳುತ್ತದೋ ಅದಕ್ಕೇ ಅವರು ಸೀಮಿತಗೊಂಡಿರಬೇಕು. ಅವರನ್ನ ಪೂರ್ತಿಯಾಗಿ ಮೊದಲ ರೀತಿಯಲ್ಲಿ ಮನೆಗೆ ಮಾತ್ರ ಸೀಮಿತ ಎಂದು ಅವರು ಕರೆಯೋದಿಲ್ಲ. ಆದರೆ ಪಾಲನೆ ಪೋಷಣೆಗೆ ಸಂಬಂಧಪಟ್ಟ ಎರಡನೇ ದರ್ಜೆಯ ಪರಿಚಾರಕ ಕೆಲಸಗಳ ನಿರ್ವಹಣೆಯನ್ನೇ ಅವರು ಮಾಡಬೇಕು, ಅದು ಅವರ ಮುಖ್ಯವಾಗಿರುವಂತ ನಿಬಂಧನೆ.

ಆದ್ದರಿಂದ ಇಲ್ಲಿ ಎರಡು ರೀತಿಯ ಹಂತಗಳಿವೆ ಅಂತ ಅನ್ನಿಸುತ್ತಿದೆ. ಈ ಆಳುವ ಸಂಸ್ಕೃತಿಯಲ್ಲಿ ಯಜಮಾನ ಸಂಸ್ಕೃತಿ ಕೊಡುತ್ತಿರುವಂತಹ ಮಾದರಿಗಳು, ಆ ಮಾದರಿಗಳನ್ನ ಅಳವಡಿಸಿಕೊಳ್ಳುವುದಕ್ಕೆ ನಮ್ಮ ನಿರ್ವಾಹಕ ಯಜಮಾನ ಸಂಸ್ಕೃತಿ ತನ್ನದೇ ಆಗಿರುವ ಸ್ಥಳೀಯ ಪ್ರಭೇದವನ್ನ ಸೃಷ್ಟಿ ಮಾಡಿಕೊಂಡು, ತನಗೆ ಬೇಕಾಗಿರುವಂತಹ ಕಂದಾಚಾರದ ಸಾಂಸ್ಕೃತಿಕ ಬಣ್ಣವನ್ನು ಹಚ್ಚುತ್ತಾ ಇರುವಂತಹ ಒಂದು ವಿಧಾನ. ಆಧುನಿಕವಾಗಿರುವ ಹಣ, ಬಂಡವಾಳ ಮತ್ತು ತಂತ್ರಜ್ಞಾನದ ಮೂಲಕವೇ ಮತ್ತೊಂದು ಸಲ ಜಾತಿ ತಾರತಮ್ಯ ಆಧರಿಸಿರುವ ಶ್ರಮ ವಿಭಜನೆಯನ್ನು ಈ ವಿಚಿತ್ರ ಸನ್ನಿವೇಶ ಉಂಟುಮಾಡಿದೆ. ಆಧುನಿಕವಾದ ಜಾಗತೀಕರಣ ಅನ್ನುವಂಥಾದ್ದು ಭಾರತದಲ್ಲಿ ಜಾತೀಕರಣವಾಗಿ ಮತ್ತೊಂದು ಸಲ ಬಹಳ ದೊಡ್ಡದಾಗಿ ಅಪ್ಪಳಿಸಿದೆ. ಅಮೆರಿಕಾದವರು ಪ್ರಪಂಚಕ್ಕೆ ಬ್ರಾಹ್ಮಣರು, ಬ್ರಾಹ್ಮಣರು ಭಾರತದ ಅಮೆರಿಕಾದವರು. ಆ ರೀತಿಯಾಗಿರುವ ಒಂದು ಸಂಯೋಜನೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ.

ಖಾಸಗಿ ಕ್ಷೇತ್ರದ ಉದ್ದಿಮೆಗಳಲ್ಲಿ ಜಾತಿ ತಾರತಮ್ಯ ಆಧಾರಿತ ಶ್ರಮ ವಿಭಜನೆ ಎಷ್ಟು ಚೆನ್ನಾಗಿ ಎದ್ದು ಕಾಣುತ್ತೆ ಅಂದರೆ, ಯಾವುದೇ ಸಿ ಇ ಓ ಹುದ್ದೆಗಳು, ಯಾವುದೇ ಟೀಮ್ ಲೀಡರ್, ಪ್ರಾಜೆಕ್ಟ್ ಮ್ಯಾನೇಜರ್, ಇಂಜಿನಿಯರ್ ಹುದ್ದೆಗಳು ಎಲ್ಲವೂ ಕೂಡ 100ಕ್ಕೆ 90ರಷ್ಟು ಮೇಲ್ಜಾತಿಯವರ ಕೈಯಲ್ಲಿವೆ. 70–80ರ ದಶಕದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲೂ, ಸರ್ಕಾರಿ ಹುದ್ದೆಗಳ ನಿರ್ವಹಣೆಯಲ್ಲೂ ರಿಜರ್ವೇಶನ್ ಮುಖಾಂತರವಾಗಿ ಏನು ಸಾಮಾಜಿಕ

ನ್ಯಾಯದ ಸಬಲೀಕರಣ ಉಂಟಾಗಿತ್ತು ಅದು ಕ್ರಮೇಣ ಕಣ್ಮರೆಯಾಗುತ್ತಿದೆ. ಅದೇ ಸಮಯದಲ್ಲಿ ವಿಸ್ತಾರಗೊಳ್ಳುತ್ತಿರುವ ಖಾಸಗಿ ಕ್ಷೇತ್ರದ ಉದ್ದಿಮೆ ಮತ್ತು ಕಚೇರಿಗಳಲ್ಲಿ ಜಾತಿ ಆಧಾರಿತ ಶ್ರಮ ವಿಭಜನೆಯೇ ನೆಲೆಗೊಂಡಿರುವುದನ್ನು ನಾವು ಕಾಣ್ತಾ ಇದ್ದೀವಿ. ಉನ್ನತ ವರ್ಗದ 1 ಲಕ್ಷ ರೂ., 80 ಸಾವಿರ ರೂ. ಸಂಬಳದ ಹುದ್ದೆಗಳೆಲ್ಲವೂ ಕೂಡ ಕೆಲವೇ ಜಾತಿಗಳ ಕೈಯಲ್ಲಿವೆ. ಅದಕ್ಕಿಂತ ಕೆಳಗಡೆಯ ಎರಡನೇ ಸಾಲಿನ ನಿರ್ವಾಹಕ ಹುದ್ದೆಗಳು, ಟ್ಯಾಕ್ಸಿ ಟ್ರಾವೆಲ್ಸ್ ಮಾಲೀಕ, ರೆಸ್ಟೋರೆಂಟ್ ಮಾಲೀಕ, ಮುಂತಾದವುಗಳೆಲ್ಲಾ ಮಧ್ಯಮ ಬಲಿಷ್ಠ ಜಾತಿಗಳವರಾಗಿದ್ದಾರೆ. ಪರಿಚಾರಕರು, ಕಾರ್ ಚಾಲಕರು, ಸೆಕ್ಯೂರಿಟಿ ಮೆನ್‌ಗಳು, ಲಾನ್ ಮೈನ್‌ಟೆನೆನ್ಸ್, ಫ್ಲೋರ್ ಮತ್ತು ಟಾಯ್ಲೆಟ್ ಕ್ಲೀನಿಂಗ್‌ನಂತಹ ಕೆಲಸಗಳಲ್ಲಿ ಕೆಳ ಜಾತಿಗಳವರಿದ್ದಾರೆ.

ಆಫೀಸ್‌ಗಳಿಗೆ ಹೋಗಿ ಸುಮ್ಮನೆ ಅವರ ಜಾತಿಗಳನ್ನ ಕೇಳಿದರೆ ಈ ಆಧುನಿಕ ಬಂಡವಾಳ ಅನ್ನುವಂಥಾದ್ದು ಇಲ್ಲಿ ಭಾರತದಲ್ಲಿ ಯಾವ ರೀತಿಯಾಗಿ ಮತ್ತೆ ಜಾತಿಯಾಧಾರಿತ ಶ್ರಮ ವಿಭಜನೆಯನ್ನು ಹೊಸದಾಗಿ ಜಾರಿಗೆ ತಂದಿದೆ? ಎಷ್ಟು ಬಹಿರಂಗವಾಗಿ ಸಾಮಾಜಿಕ ನ್ಯಾಯದ ಯಾವುದೇ ಹಂಗಿಲ್ಲದೆ ಕಾರ್ಯಾಚರಣೆ ನಡೆಸುತ್ತಿದೆ ಎಂಬುದು ಗೊತ್ತಾಗುತ್ತೆ. ಈ ಬಗೆಯ ತಾರತಮ್ಯ ಆಚರಣೆಗೆ ಜಾತಿ ತಾರತಮ್ಯಗಳನ್ನು ಗಟ್ಟಿಗೊಳಿಸುವ ಶಕ್ತಿ ಈ ಮೊದಲಿಗಿಂತ ಹೆಚ್ಚಿಗಿದೆ. ಏಕೆಂದರೆ ಸಂಪತ್ತಿನ ಹಂಚಿಕೆಯ ಅಂತರ ಬಹಳಷ್ಟು ಜಾಸ್ತಿ ಇದೆ. ಆಧುನಿಕ ತಂತ್ರಜ್ಞಾನದ ಒಡೆತನ, ಸಾಂಸ್ಕೃತಿಕ ಶಕ್ತಿ, ಹಣ ಮತ್ತೆ ಅದಕ್ಕೆ ಇರುವಂತಹ ಜಾಗತಿಕ ಯಜಮಾನನ ಅನುಮತಿ. ಯಾವ ಐಟಿ ಕಂಪನಿಯೂ ಕೂಡ ನೀನು ಅಧಿಕೃತವಾಗಿ ಈ ರೀತಿಯಾಗಿರುವ ಜಾತಿ ಲಾಂಛನಗಳನ್ನ ಧರಿಸಿ ಆಫೀಸಿಗೆ ಬರಬಾರದು, ಇದು ಸೆಕ್ಯುಲರ್ ಸ್ಪೇಸ್ ಅಂತ ನಿಯಮ ಹೇಳಿಲ್ಲ.

ಎಲ್ಲ ಕಂಪ್ಯೂಟರ್ ಇಂಜಿನಿಯರ್‌ಗಳೂ ಹಣೆ ಮೇಲೆ ಗಂಧಾಕ್ಷತೆ, ತಿಲಕ, ನಾಮಗಳೊಂದಿಗೇ ಕಚೇರಿಗೆ ಹೋಗ್ತಾರೆ. ಹೋಗೋಕೆ ಮೊದಲು ಒಂದೆರಡು ಸಲ ಆದರೂ ದೇವಸ್ಥಾನದ ಹತ್ತಿರ ಕಾರು ನಿಲ್ಲಿಸುತ್ತಾರೆ. ದಾರಿಯಲ್ಲಿ ದೇವರಿಗೆ ಸಂಬಂಧಪಟ್ಟ ಏನು ಕಂಡರೂ ಒಂದು ಸಲ ಕೈ ಮುಗೀತಾರೆ. ಆಧುನಿಕ ತಂತ್ರಜ್ಞಾನದ ಶಿಕ್ಷಣ ಮತ್ತು ಈ ಬಗೆಯ ಭಕ್ತಿ ಪ್ರದರ್ಶನ ಬಹಳ ವಿಚಿತ್ರವಾಗಿದೆ.

ನನಗನ್ನಿಸುವುದು ಸಾಂಸ್ಕೃತಿಕವಾಗಿ ಇದು ಜಾಗತಿಕ ಯಜಮಾನನಿಂದ ಅನುಮತಿಸಲ್ಪಟ್ಟಿದೆ. ಇಲ್ದಿದ್ರೆ ಒಂದು ಅಭ್ಯಾಸ ಇದೆ ನಮ್ಮ ನಿರ್ವಾಹಕ ಸಂಸ್ಕೃತಿಗೆ. ಅದು ಯಾವಾಗಲೂ ಧಣಿಯ ಆದೇಶಗಳನ್ನ ಚಾಚೂ ತಪ್ಪದೆ ಪಾಲಿಸುತ್ತದೆ. ನೀನು ಭಾರತೀಯ ಜುಟ್ಟು ಬಿಡಬಾರದು ಅಂತ ಅಂದೊಡನೆ ಕೂದಲು ಕ್ರಾಪ್ ಮಾಡಿಸಿದ್ದಾರೆ ಒಂದು ಕಾಲದಲ್ಲಿ. ನೀನು ಕೋಟ್ ಹಾಕ್ಕೋಬೇಕು ಅಂದರೆ ಸೆಖೆಯಾದರೂ ಕೂಡ ಕ್ಲೋಸ್ಡ್ ಕಾಲರ್ ಕೋಟ್ ಹಾಕಿದ್ದಾರೆ. ಬಹಳ ವಿಚಿತ್ರಕಾರಿಯಾಗಿರುವಂತಹ ದೈನೇಸೀ ನಿರ್ವಾಹಕ ವರ್ಗ ನಮ್ಮದು. ಇದು ಬಾಲಂಗೋಚಿ ವರ್ಗವಾದ್ದರಿಂದ, ನೀನು ಇಂಗ್ಲಿಷ್ ಕಲಿಬೇಕು ಅಂತ ಅಂದ್ರೆ ಕಷ್ಟ ಬಿದ್ದು ಅವರಿಗಿಂತಲೂ ಚೆನ್ನಾಗಿ ಉಚ್ಚರಿಸುವುದನ್ನ ಕಲಿತುಕೊಂಡಿದ್ದಾರೆ. ಅವರ ಜೀವನದ ಧ್ಯೇಯವೇ ಅದು. ಇಂಗ್ಲಿಷ್ ಕಲಿಯೋದು. ಈಗಲೂ ಕೂಡ. ಅತ್ಯಂತ ಸ್ಪಷ್ಟವಾಗಿ

ಕಂಪ್ಯೂಟರ್ ಇಂಜಿನಿಯರ್‌ಗಳೂ ಹಣೆ ಮೇಲೆ ಗಂಧಾಕ್ಷತೆ, ತಿಲಕ, ನಾಮಗಳೊಂದಿಗೇ ಕಚೇರಿಗೆ ಹೋಗ್ತಾರೆ. ಹೋಗೋಕೆ ಮೊದಲು ಒಂದೆರಡು ಸಲ ಆದರೂ ದೇವಸ್ಥಾನದ ಹತ್ತಿರ ಕಾರು ನಿಲ್ಲಿಸುತ್ತಾರೆ. ದಾರಿಯಲ್ಲಿ ದೇವರಿಗೆ ಸಂಬಂಧಪಟ್ಟ ಏನು ಕಂಡರೂ ಒಂದು ಸಲ ಕೈ ಮುಗೀತಾರೆ. ಆಧುನಿಕ ತಂತ್ರ ಜ್ಞಾನದ ಶಿಕ್ಷಣ ಮತ್ತು ಈ ಬಗೆಯ ಭಕ್ತಿ ಪ್ರದರ್ಶನ ಬಹಳ ವಿಚಿತ್ರವಾಗಿದೆ.

ಇಂಗ್ಲಿಷ್‌ನ ಮಾತಾಡೋದು ಹೇಗೆ ಅಂತ ಕಲಿಯೋದೇ ಅವರ ಜೀವನದ ಬಹಳ ದೊಡ್ಡ ಗುರಿ.

ಮ್ಯಾನೇಜ್‌ಮೆಂಟ್ ಹುದ್ದೆಗಳು ಸಿಗುತ್ತವೆ ಅಂತ ಗೊತ್ತಾದೊಡನೆ ಇವತ್ತು ಭಾರತದ ತುಂಬ ಅವೇ ಇದ್ದಾವೆ. ಎಂಬಿಎ ಮತ್ತು ಬಿಬಿಎಂ ಕೋರ್ಸ್‌ಗಳು. ಇವನು ಓನರ್ ಅಲ್ಲವೇ ಅಲ್ಲ ಮ್ಯಾನೇಜರ್ ಮಾತ್ರ ತಾನೆ ಇವನು. ಆದ್ದರಿಂದ ಅದಕ್ಕೆ ಬೇಕಾಗಿರುವ ವಿದ್ಯಾರ್ಹತೆಯನ್ನು ಶ್ರದ್ಧೆಯಿಂದ ಕಲೀತಿದಾನೆ. ಜಾಗತಿಕ ಯಜಮಾನನ ಆರ್ಥಿಕತೆ ಮೇಲೆ ಇಷ್ಟು ಅವಲಂಬಿತವಾಗಿರುವ, ಈಪಾಟಿ ಆದೇಶ ಪಾಲಕನಾಗಿರುವ ಇದು ವ್ರತಗಳನ್ನು, ಈ ಯಜ್ಞಗಳನ್ನು ಜಾಸ್ತಿ ಜಾಸ್ತಿ ಮಾಡ್ತಿದೆ ಅಂದರೆ, ಹೀಗಿರುವುದಕ್ಕೆ ಜಾಗತಿಕ ಯಜಮಾನ ಸಂಸ್ಕೃತಿ ಇಲ್ಲಿರುವಂತಹ ನಿರ್ವಾಹಕ ಯಜಮಾನನಿಗೆ ಅನುಮತಿಯನ್ನು ಕೊಟ್ಟಿದೆ. ನೀನು ದೇಶೀಯವಾಗಿ, ಸ್ಥಳೀಯವಾಗಿ ಈ ರೀತಿಯಾಗಿರುವ ಕಂದಾಚಾರ ಪುನರುತ್ಥಾನವನ್ನು ಮಾಡಬಹುದು. ನಿನ್ನ ಮಾದರಿ ಅನುಸರಿಸುವ ಸಾಮಾನ್ಯ ಜನವರ್ಗಗಳು ತಮ್ಮ ಬಡತನ ಮತ್ತು ಭವಿಷ್ಯಹೀನತೆ ನಿವಾರಣೆಗೆ ಈ ಬಗೆಯ ಆಚರಣೆಗಳನ್ನೇ ಮಾಡುತ್ತಾ ಮನಸ್ಸಿಗೆ ಸಮಾಧಾನ ಪಡೆಯುತ್ತಿರಲಿ.

ಜಾತಿ, ಧರ್ಮದ ಜಗಳ; ಹುಸಿ ಧಾರ್ಮಿಕ ಶ್ರದ್ಧೆ, ಅತಿರೇಕದ ದೈವಭಕ್ತಿ ಮತ್ತು ಮೌಢ್ಯದ ವ್ರತಾಚರಣೆಗಳನ್ನು ಆಳುವ ಸಂಸ್ಕೃತಿ ಉದ್ದೇಶಪೂರ್ವಕವಾಗಿ ಬೆಳೆಸುತ್ತಿದೆ. ಜಾಗತಿಕ ಯಜಮಾನ ಸಂಸ್ಕೃತಿಗೆ ಈ ಮಾನಸಿಕ ಅವಲಂಬನೆಗಳು ಒಂದು ರೀತಿಯಲ್ಲಿ ಹಾದಿ ಸುಗಮ ಮಾಡುತ್ತಿವೆ. ಭೌತಿಕವಾಗಿ ಜಾಗತಿಕ ಯಜಮಾನ ಸಂಸ್ಕೃತಿ ಒದಗಿಸುವ ಸರಕು ಸಾಧನಗಳನ್ನು ಬಳಸುವುದು, ಮಾನಸಿಕವಾಗಿ ನಿರ್ವಾಹಕ ಸಂಸ್ಕೃತಿ ಪ್ರತಿಪಾದಿಸುವ ಕಂದಾಚಾರಗಳಲ್ಲಿ ಸಮಾಧಾನ ಪಡೆಯುವುದು ಎನ್ನುವಂತಹ ಸನ್ನಿವೇಶ ಇಲ್ಲಿ ನೆಲೆಗೊಳ್ಳುತ್ತಿದೆ. ಹೀಗಿರುವಾಗ ನಾವು ಪರ್ಯಾಯ ಸಂಸ್ಕೃತಿ ನಿರ್ಮಾಣ ಮಾಡುವಂತಹ ಪ್ರಯತ್ನಗಳನ್ನು ಯಾವ ರೀತಿಯಲ್ಲಿ ಕೈಗೊಳ್ಳಬಹುದು? ಈವರೆಗೂ ಈ ದಿಸೆಯಲ್ಲಿ ನಮ್ಮ ವರ್ತಮಾನದಲ್ಲಿ ನಡೆದಿರುವ ಪ್ರಯತ್ನಗಳೇನು?

ಈ ಬಗೆಯ ಸಾಂಸ್ಕೃತಿಕ ಯಜಮಾನಿಕೆಯನ್ನು ಪ್ರಶ್ನಿಸುವ ಒಂದು ವಿಧಾನವಾಗಿ ಕೆಲವರು ಅನುಭಾವಿ ಪಂಥಗಳಿಗೆ ಮೊರೆ ಹೋಗುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅದನ್ನು ನಿರರ್ಥಕ ಅನ್ನಲು ಬರುವುದಿಲ್ಲ. ನಾವೀಗ ಭೌತಿಕವಾದಿಗಳಲ್ಲ. ಅನುಭೋಗವಾದಕ್ಕೆ ಭಿನ್ನವಾದ ಆಧ್ಯಾತ್ಮಿಕ ಚಿಂತನೆಗಳ ಮುಖಾಂತರ ಯಜಮಾನ ಸಂಸ್ಕೃತಿಯನ್ನು ಎದುರಿಸಬೇಕು ಎನ್ನುವವರ ಒಂದು ಪಂಗಡ ಇದೆ. ಇನ್ನೊಂದು ಸ್ಪಿರಿಚುಯಲ್ ಸೋಷಿಯಲಿಸಂ ಅನ್ನುವಂತಹ ತಾತ್ವಿಕತೆಯನ್ನು ಪ್ರತಿಪಾದಿಸುವ ಮುಖಾಂತರ ಈ ಸನ್ನಿವೇಶವನ್ನು ಎದುರಿಸಬೇಕು ಅನ್ನುವವರಿದ್ದಾರೆ.

ನಮ್ಮ ಸಮಾಜದಲ್ಲಿ ಅನುಭೋಗವಾದವನ್ನು ತಿರಸ್ಕರಿಸದ ಹೊರತು, ಈ ಅವಕಾಶವಾದವನ್ನಾಗಲೀ ಅಥವಾ ಸಾಮಾಜಿಕ ಮೌಲ್ಯಗಳ ಅಧಃಪತನವನ್ನಾಗಲೀ ನಿವಾರಿಸುವುದು ಬಹಳ ಕಷ್ಟದ ಕೆಲಸ. ಅದಕ್ಕೆ ಸೂಕ್ತ ಪರಿಹಾರವೆಂದರೆ ಗಾಂಧಿ ಮತ್ತು ಆ ಸ್ಕೂಲ್ ಆಫ್ ಥಾಟ್‌ನಿಂದ ಬಂದಿರುವ ಚಿಂತನೆಗಳು ಅಂತ ಪ್ರತಿಪಾದಿಸುವವರಿದ್ದಾರೆ. ಇನ್ನು ಕೆಲವರು ಆದಿವಾಸಿ ಬುಡಕಟ್ಟು ಸಮುದಾಯಗಳಲ್ಲಿರುವ ಕೆಲವು ಮಾದರಿಗಳನ್ನು ಅದನ್ನ ನಮ್ಮ ಸಾಮಾಜಿಕ ಸಂಸ್ಥೆಗಳಾಗಿ ನಾವು ಅಳವಡಿಸಿಕೊಳ್ಳುವುದು ಸೂಕ್ತ ಎಂದು ಸೂಚಿಸುತ್ತಿದ್ದಾರೆ. ಏಕೆಂದರೆ ಅಲ್ಲಿರುವಂತಹ ಪ್ರಜಾತಂತ್ರ, ಸಮಾನತಾಭಾವ ಮತ್ತು ಸೋದರ ಭಾವಗಳು ಈ ಯಜಮಾನ ಸಂಸ್ಕೃತಿಗೆ ಪರ್ಯಾಯವಾಗಬಲ್ಲವು ಎಂಬುದು ಅವರ ಗ್ರಹಿಕೆ.

ಕೆಲವು ಸಾಮಾಜಿಕ ಹೋರಾಟದ ಗುಂಪುಗಳು ಆದಿವಾಸಿ ಬುಡಕಟ್ಟು ಜೀವನದ ಮೌಲ್ಯ ಪ್ರತಿಪಾದನೆಯನ್ನು ಬಹಳ ದೊಡ್ಡ ಅಸ್ತ್ರವಾಗಿ ಬಳಸುತ್ತಾ ಇವೆ. ಕೆನ್ಯಾದಲ್ಲಿ, ಹವಾಯಿನಲ್ಲಿ ಮುಂತಾದ ಕಡೆ ಈ ಪ್ರಯೋಗಗಳು ನಡೆಯುತ್ತಿವೆ. ತಮ್ಮ ಹಳೆಯ ಬುಡಕಟ್ಟು ಜೀವನದ ಅನುಭವಗಳನ್ನೇ ಹೊಸ ಕಾಲದ ಸಾಮಾಜಿಕ ಸಮಾನತೆ ಮತ್ತು ಸರಳ ಸಂತೃಪ್ತಿಯ ಬದುಕಿಗೆ ಮಾದರಿಯಾಗಿ ಭಾವಿಸುತ್ತಿದ್ದಾರೆ. ಇನ್ನೂ ಕೆಲವರು ತೀವ್ರಗಾಮಿ ಎಡಪಂಥೀಯ ಹೋರಾಟದ ರಾಜಕೀಯದ ಮುಖಾಂತರವಾಗಿ ಇದನ್ನ ಪ್ರತಿಭಟಿಸುತ್ತಿರುವುದನ್ನು ಕಾಣುತ್ತಾ ಇದ್ದೀವಿ. ಅಹಿಂದ ವರ್ಗಗಳ ಪ್ರಜಾಪ್ರಭುತ್ವ ಅನ್ನುವಂತಹ ಒಂದು ವಿಧಾನದ ಮೂಲಕ ಈ ಏಕಾಕಾರಿ ಸಂಸ್ಕೃತಿಯನ್ನ ಮತ್ತು ಕಂದಾಚಾರ ಆಧಾರಿತವಾಗಿರುವ ಮೇಲ್ಜಾತಿ ಆಳುವ ಸಂಸ್ಕೃತಿಯನ್ನ ವಿರೋಧಿಸುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಇವೆಲ್ಲ ಎಷ್ಟರಮಟ್ಟಿಗೆ ಯಶಸ್ವಿಯಾಗಿವೆ? ಎಷ್ಟರ ಮಟ್ಟಿಗೆ ಶಕ್ತಿಯುತವಾಗಿವೆ? ಅಥವಾ ಎಷ್ಟರಮಟ್ಟಿಗೆ ನಾವೂ ಕೂಡ ಕ್ರಮೇಣ ಕೈಸೋತು ಆಳುವ ಸಂಸ್ಕೃತಿಯ ಒಂದು ಭಾಗವಾಗುವುದಕ್ಕೆ ಅಪೇಕ್ಷೆಗಳನ್ನ ವ್ಯಕ್ತಪಡಿಸುತ್ತಾ ಇದ್ದೀವಿ ಅನ್ನುವುದನ್ನ ಮತ್ತಷ್ಟು ಸಾರಾಸಗಟಾಗಿ ಯೋಚನೆ ಮಾಡೋದು ಮತ್ತು ಅದಕ್ಕೋಸ್ಕರವಾಗಿ ನಮ್ಮ ಹತ್ತಿರ ಇರುವಂತಹ ಮಾದರಿಗಳೇನಿವೆ ಅನ್ನೋದನ್ನು ಪರಿಶೀಲಿಸೋದು ಬಹಳ ಅಗತ್ಯ. ಏಕೆಂದರೆ ಯಾವುದೇ ಏಕಾಕಾರಿ ಮಾದರಿಗಳನ್ನು ನಾವು ಇದಕ್ಕೆ ಪರ್ಯಾಯವಾಗಿ ಬಳಸುವುದು ಕಷ್ಟ. ಕನ್ನಡ ಸಾಹಿತ್ಯದಲ್ಲಿ ಮತ್ತು ಸಾಂಸ್ಕೃತಿಕ ರಂಗದಲ್ಲಿ ಸಬಾಲ್ಟ್ರನ್ ಅಧ್ಯಯನಗಳ ಒಂದು ಪ್ರವೃತ್ತಿ ಶುರುವಾಗಿದೆ. ನಿರ್ಲಕ್ಷಿತ ವಲಯದ ಶ್ರದ್ಧಾ ಕೇಂದ್ರಗಳು ಮತ್ತು ಸಾಂಸ್ಕೃತಿಕ, ಆಧ್ಯಾತ್ಮಿಕ ಬಂಡುಕೋರ ಸಂತರನ್ನು ಪ್ರೀತಿಸುವ, ಆರಾಧಿಸುವ, ಮೆಚ್ಚಿಕೊಳ್ಳುವ ಆ ಮುಖಾಂತರವಾಗಿ ಈ ಅತ್ಯಾಧುನಿಕತೆಯ ಸಾಂಸ್ಕೃತಿಕ ದಾಳಿಗೆ, ಏಕಾಕಾರಿತ್ವದ ಪ್ರವೃತ್ತಿಗಳಿಗೆ ವಿರೋಧವೊಡ್ಡುವುದು.

(45ನೇ ಪುಟಕ್ಕೆ)

ಕಾರ್ಮಿಕ ದುಡಿದರಷ್ಟೇ ಬಂಡವಾಳಿಗನ ಪ್ರಗತಿ

-೧೦-

ಜ್ಯೋತಿ ಗುರುಪ್ರಸಾದ್

ಬಂಡವಾಳವನ್ನು ಹೂಡಿರುವ ಉದ್ದಿಮೆದಾರನೂ ಕೂಡ ಒಬ್ಬ ಕಾರ್ಮಿಕನಿಗಿಂತ ಬೇರೆಯಲ್ಲ ಆದರೆ ಉದ್ದಿಮೆದಾರರು ಹಣ ಹೂಡಿ ಲಾಭಗಳಿಸುವುದೇ ಪರಮಾರ್ಥವೆಂದು ಬಗೆದು ಕೈ ಕೆಳಗಿನ ಬೆವರು ಸುರಿಸುವ ಆಳುಗಳನ್ನು ತನ್ನಂತೆ ಮನುಷ್ಯರಾಗಿ ನೋಡದೆ ಜೀತದಾಳುಗಳೆಂದು ಶೋಷಿ ಸುತ್ತಾ ಅವರಿಗೆ ಸರಿಯಾಗಿ ಸಿಗಬೇಕಾದ ಸಂಬಳವನ್ನು ದಿನಗೂಲಿಯನ್ನು ಸೂಕ್ತವಾಗಿ ವಿತರಿಸದಿದ್ದರೆ ಅದು ಅಭಿವೃದ್ಧಿಯೂ ಆಗುವುದಿಲ್ಲ. ಕೈಗಾರಿಕಾ ಕ್ರಾಂತಿಯ ಫಲಶೃತಿಯೂ ಆಗುವುದಿಲ್ಲ.

ಮೇ 1ರಂದು ಪ್ರಪಂಚದಾದ್ಯಂತ ಆಚರಿಸುವ ಕಾರ್ಮಿಕ ದಿನಾಚರಣೆಯ ಶುಭ ಸಂದರ್ಭದಲ್ಲಿ ನಾನು ಕ್ರಿಯಾತ್ಮಕವಾಗಿ ತಮ್ಮ ಕಾಯಕದಲ್ಲಿ ತೊಡಗಿಸಿಕೊಳ್ಳುವ ಎಲ್ಲ ಕಾರ್ಮಿಕರಿಗೂ ಶುಭ ಕೋರುತ್ತ ನನ್ನ ಈ ಲೇಖನದ ಚಿಂತನೆಯನ್ನು ವಿಶ್ಲೇಷಿಸುತ್ತೇನೆ.

'ಕಾರ್ಮಿಕ' ಎಂದರೆ ಕೆಲಸಗಾರ-ಕೆಲಸಮಾಡುವವನು ಎಂದರ್ಥ. ಭವದ್ಗೀತೆಯಲ್ಲಿ 'ಕರ್ಮಯೋಗ' ಎಂಬ ಅಧ್ಯಾಯದಲ್ಲಿ 'ಫಲಾಪೇಕ್ಷೆಯಿಲ್ಲದೆ ನಿನ್ನ ಕೆಲಸದಲ್ಲಿ ನೀನು ನಿರತವಾದರೆ ಯೋಗ ವೆಂಬುದು ತಾನೇ ತಾನಾಗಿ ದೊರೆಯುತ್ತದೆ' ಎಂಬ ಸಂದೇಶ ದೊರೆ ಯುತ್ತದೆ. ಈ ಸಂದೇಶದಲ್ಲಿ ಏಕಾಗ್ರವಾಗಿ ನಮ್ಮ ಪಾಲಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ-ತೊಡಗಿಸಿಕೊಳ್ಳಲು ಸಾಧ್ಯವಾದಾಗ ನಿರೀಕ್ಷಿಸದಿದ್ದರೂ ಒಳ್ಳೆಯ ಫಲ ತಾನೇತಾನಾಗಿ ಒದಗಿಬರುತ್ತದೆ ಎಂಬ ಮನೋ ವೈಜ್ಞಾನಿಕ ವಿಶ್ಲೇಷಣೆಯ ಸಂದೇಶ ಒದಗಿ ಬರುತ್ತದೆ. ಈ ರೀತಿಯ ತಲ್ಲೀನತೆಯಿಂದ ಮನಸ್ಸು ನಿರ್ಮಲವೂ ಆಗಿ-ಘನವೂ ಆಗುವುದರಿಂದ ಇದೊಂದು ವ್ಯಕ್ತಿತ್ವದ ಗುಣಮಟ್ಟದ ಸತ್ವ ಪರೀಕ್ಷೆ ಜೀವನದ ಪ್ರಕ್ರಿಯೆ. ಇದನ್ನೇ ಬಸವಣ್ಣನವರು 'ಕಾಯಕವೇ ಕೈಲಾಸ' ಎನ್ನುತ್ತಾರೆ ಹಾಗೂ

ಕಾಯಕದಲ್ಲಿ ನಿರತನಾದೊಡೆ
ಗುರು ಲಿಂಗ ಜಂಗಮ ಬಂದರೂ
ಮರೆಯಬೇಕು

ಎಂಬ ಶರಣ ವಚನವೊಂದು 'ಕಾಯಕ'ದ ಕರ್ಮಕ್ಕೆ ಸಂಬಂಧಿಸಿದಂತೆ ಹೊಮ್ಮುತ್ತದೆ. ನಾನಿಲ್ಲಿ 'ಕರ್ಮಸಿದ್ಧಾಂತ'ವೆಂದು ಆಚರಿ ಸುವ ಯಾವ ಮೌಢ್ಯದ ಬಗ್ಗೆಯೂ ಪ್ರಸ್ತಾಪಿಸಲು ಹೋಗುವುದಿಲ್ಲ. ಆದರೆ ಮರದ ಕೆಲಸವನ್ನು ಚೆನ್ನಾಗಿ ಮಾಡುವ ಬಡಗಿಯೊಬ್ಬನು ತನ್ನ ಮಗನಿಗೂ ಅದನ್ನು ಶ್ರದ್ಧೆಯಿಂದ ಕಲಿಸಿ ಆ ಮಗನೂ ಅದನ್ನು ಮಾಡುವ ಕೌಶಲ್ಯತೆಯನ್ನು ಹೊಂದಿರುವನೇ ಆದರೆ ಅದು ಆತನ ಕಸುಬಿನ ಕಲೆಗಾರಿಕೆಯ ಏಳಿಗೆಯಾಗುತ್ತದೆ ಹಾಗೂ ಅವನಿಂದಾಗಿ ಆ ಕ್ಷೇತ್ರದ ಕೆಲಸಗಳು ಇನ್ನೂ ಚೆನ್ನಾಗಿ ಆಗುತ್ತವೆ. ಆದರೆ ಅದೇ ಬಡಗಿ ತನ್ನ ಮರಗೆಲಸದ ಕಸುಬಿನ ಕುಶಲಕಲೆಯನ್ನು ತಾನೇ ಕಡಿಮೆಯೆಂದು ಅಲ್ಲಗೆಳೆದುಕೊಂಡು ತನ್ನ ಮಗ ಇಂಜಿನಿಯರ್ ಅಥವಾ ಡಾಕ್ಟರ್ ಆದರೇನೇ ಸಾರ್ಥಕ ಎಂದು ಯೋಚಿಸಿ ಆ ಹುಡುಗನನ್ನು ಇಂಥ ಪದವಿಗೇರಿಸಲು ಶ್ರಮ ಪಟ್ಟು ಆ ಹುಡುಗ ಆ ಕ್ಷೇತ್ರದಲ್ಲಿ ಮುಂದುವರೆಯಲಾಗದಿದ್ದರೆ ಅವಮಾನವೆಂದು ಯೋಚಿಸಿದರೆ ಇದು 'ಕರ್ಮಸಿದ್ಧಾಂತ'ದ ವೈಜ್ಞಾನಿಕತೆಗೆ ಒದಗುವ ಹಾನಿ ಎಂದು ಮಾತ್ರ ಹೇಳ ಬಯಸಯತ್ತೇನೆ.

ಇದರಿಂದ ಒಬ್ಬ ಒಳ್ಳೆಯ ನುರಿತ ಬಡಗಿಯನ್ನು ಕಳೆದುಕೊಂಡ ನಷ್ಟ ಕಾಯಕ ಕ್ಷೇತ್ರಕ್ಕಾಗುತ್ತದೆ. ಇದು ಒಂದು ಸಣ್ಣ ಉದಾಹರಣೆ ಅಷ್ಟೆ. ಹೀಗೆಯೇ ಮನೆ ಕಟ್ಟುವ, ತೋಟದ ಕೆಲಸ ಮಾಡುವ, ಕೈಗಾರಿಕೆಗಾಗಿ ಕಾರ್ಖಾನೆಗಳಲ್ಲಿ ತೊಡಗಿ ಕೊಳ್ಳುವ ಕಾರ್ಮಿಕ ಬಂಧುಗಳು ಅವರುಗಳಿಲ್ಲದಿದ್ದರೆ ಈ ಕ್ಷೇತ್ರಗಳೆಲ್ಲಾ ಅಂಗವಿಕಲ ಕ್ಷೇತ್ರಗಳಾಗಿ ಪ್ರಗತಿಯೆಂಬುದು ಕುಂಟುತ್ತಾ ಸಾಗುತ್ತದೆ. ವಿದ್ಯಾವಂತರಾಗಿ ಪ್ರಪಂಚ ತಿಳಿದುಕೊಳ್ಳುವುದು ತುಂಬಾ ಮುಖ್ಯ. ಆದರೆ ತಿಳಿದುಕೊಂಡ ಪ್ರಪಂಚವನ್ನು ತನ್ನ ಯಾವ ಕೆಲಸಗಳ ಮೂಲಕ ಸುಸ್ಥಿತಿಯಲ್ಲಿಡಬಹುದು ಎಂಬ ಅರಿತು ಕರ್ತವ್ಯಗಳನ್ನು ನಿರ್ವಹಿಸುವುದು ವಿದ್ಯೆಗೆ-ಕಲಿತ ವಿದ್ಯೆಗೆ ಭೂಷಣ. 'ಕರ್ಮ' ಎಂದರೆ ನಮ್ಮಿಂದ ನಡೆದಿರಬಹುದಾದ-ನಡೆಯಬಹುದಾದ ಕಾರ್ಯಗಳ ಮೊತ್ತವೇ ಹೊರತು "ನನ್ನ ಹಣೆಯಲ್ಲಿ ಹೀಗೆ ಬರೆದಿತ್ತು ಅಥವಾ ಹಣೆಯಲ್ಲಿ ಬರೆದ ಹಾಗಾಗುತ್ತದೆ" ಎಂದು ಕ್ರಿಯಾಶೀಲತೆಯಿಲ್ಲದೆಯೇ ನೀಡುವ ಒಣ ಹೇಳಿಕೆಗಳಲ್ಲ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆ ಮಾತೂ ಸಹ ಇದೇ ಕಾರಣಕ್ಕೆ ಚಲಾವಣೆಯಲ್ಲಿ ರುವಂಥದ್ದು.

ಆತ್ಮಗೌರವಕ್ಕೆ ಕುಂದು ಬರದಂಥ ಅವರವರ ಸಾಧ್ಯತೆಯ ಕಾಯಕವನ್ನು ಸಮರ್ಪಕವಾಗಿ ಅರಿತು ನಿರ್ವಹಿಸುವವರೆಲ್ಲಾ ನಿಜವಾದ ಕಾರ್ಮಿಕರೇ ಅಲ್ಲವೇ? ಮುಖ್ಯವಾಗಿ ಮಾರ್ಕ್ಸ್, ಲೆನಿನ್ ಕಾಲದಲ್ಲಿ - ಕೈಗಾರಿಕಾ ಕ್ರಾಂತಿಯ ಪ್ರಭಾವದಿಂದಾಗಿ ಕಾರ್ಮಿಕರ ಹಕ್ಕನ್ನು ಅವರುಗಳಿಗೆ ದೊರಕಿಸಿಕೊಡುವ ಹೋರಾಟವಾಗಿ 'ಮೇ1' ಹುಟ್ಟಿಕೊಂಡರೂ ಬಂಡವಾಳವನ್ನು ಹೂಡಿರುವ ಉದ್ದಿಮೆದಾರನೂ ಕೂಡ ಒಬ್ಬ ಕಾರ್ಮಿಕನಿಗಿಂತ ಬೇರೆಯಲ್ಲ ಎಂದು ನನಗನಿಸುತ್ತದೆ. ಹಣವನ್ನು ಹೂಡುವುದು ಅವನ ಕೆಲಸ ಅಷ್ಟೆ. ಆ ಹಣವನ್ನು ತೊಡಗಿಸಿ ಕಾರ್ಖಾನೆಯನ್ನು ಆರಂಭಿಸಿದರೂ-ತೋಟವನ್ನು ಕೊಂಡುಕೊಂಡರೂ ಅವನೊಬ್ಬನೇ ಏನು ಮಾಡಲು ಸಾಧ್ಯ? ಎಂಬ ಸಣ್ಣ ತಿಳಿವಳಿಕೆ ಮಾತ್ರ ಒಬ್ಬ ಉದ್ದಿಮೆದಾರನನ್ನಾಗಲೀ-ತೋಟದ ಮಾಲೀಕನನ್ನಾಗಲೀ ಭ್ರಷ್ಟನಾಗ ದಂತೆ-ಯಜಮಾನ ಸಂಸ್ಕೃತಿಗೆ ಒಳಗಾಗಿ ತನ್ನ ಉದ್ಯಮದಲ್ಲಿ ದುಡಿ ಯುವ ದುಡಿಮೆಯ ಒಡೆಯರನ್ನು ಕಡೆಗಣಿಸದಂತೆ-ಬಂಡವಾಳ ಶಾಹಿ ಯಾಗದಂತೆ ಕಾಪಾಡಬಲ್ಲದು.

ಆದರೆ ಉದ್ದಿಮೆದಾರರು ಹಣ ಹೂಡಿ ಲಾಭಗಳಿಸುವುದೇ ಪರಮಾರ್ಥವೆಂದು ಬಗೆದು ಕೈ ಕೆಳಗಿನ ಬೆವರು ಸುರಿಸುವ ಆಳುಗಳನ್ನು ತನ್ನಂತೆ ಮನುಷ್ಯರಾಗಿ ನೋಡದೆ ಜೀತದಾಳುಗಳೆಂದು ಶೋಷಿ ಸುತ್ತಾ ಅವರಿಗೆ ಸರಿಯಾಗಿ ಸಿಗಬೇಕಾದ ಸಂಬಳವನ್ನು ದಿನಗೂಲಿಯನ್ನು ಸೂಕ್ತವಾಗಿ ವಿತರಿಸದಿದ್ದರೆ ಅದು ಅಭಿವೃದ್ಧಿಯೂ ಆಗುವುದಿಲ್ಲ. ಕೈಗಾರಿಕಾ ಕ್ರಾಂತಿಯ ಫಲಶೃತಿಯೂ ಆಗುವುದಿಲ್ಲ. ಉದ್ಯಾನ ನಗರಿ ಬೆಂಗಳೂರಿನಲ್ಲಿ ಉದ್ಯಾನವನ್ನೇ ಮಾಯವಾಗಿಸುತ್ತ ಫ್ಲೈ ಓವರ್ ರಸ್ತೆಗಳನ್ನು ನಿರ್ಮಿಸುತ್ತ ಅದೆಷ್ಟೋ ಬಡವರಿಗೆ ಇನ್ನೂ ಗುಡಿಸಲುಗಳೇ ಗತಿಯಾಗಿ ಅವರುಗಳು ಪ್ರತ್ಯೇಕವಾಗಿ ಕೊಳಗೇರಿಯಲ್ಲಿ ಜೀವಿಸುತ್ತಿದ್ದರೆ ಅದನ್ನು 'ಅಭಿವೃದ್ಧಿ' ಎಂದು ಕರೆಯಲು ಸಾಧ್ಯವಿಲ್ಲ. Capitalist ಒಬ್ಬ Socialist ಆಗದ ಹೊರತು 'ಕಾರ್ಮಿಕ ದಿನಾಚರಣೆ'ಗೆ ಅರ್ಥ ಬರುವುದಿಲ್ಲ. ಬಂಡವಾಳಶಾಹೀ ಸಮಾಜದಲ್ಲಿ ಘರ್ಷಣೆಯುಂಟಾಗುತ್ತದೆ. Lock out ಮುಂತಾದ ಮುಷ್ಕರದ ಬಂಡಾಯಗಳು ಎದ್ದು ಕಾರ್ಮಿಕರ ಜೀವನ ನಿರ್ವಹಣೆಯೇ ಕಡು ಕಷ್ಟವಾಗಿ ಬಿಟ್ಟರೆ ಅವರುಗಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸುತ್ತಾರೆ. ಅಥವಾ ದಿನಗೂಲಿ ಎಲ್ಲಿ ಹೆಚ್ಚು ಸಿಗು ತ್ತದೋ ಅಲ್ಲಿಗೆ ವಲಸೆ ಹೋಗುತ್ತಾರೆ.

ಆಗ ಬಂಡವಾಳ ಶಾಹಿಯ ಮಾನ-ಸಮ್ಮಾನ ಎಲ್ಲಾ ನಷ್ಟವಾಗಿ ಇನ್ನು ಆತನ ಸಂಪತ್ತು ವೃದ್ಧಿಯಾಗದಂತೆ ನಿಂತ ನೀರಾಗುತ್ತದೆ. ಇದರಿಂದ ನಾಡಿಗೆ ಉಪಕಾರವಾಗ ಬಲ್ಲ ಉದ್ಯಮದ ಅರ್ಥವ್ಯಾಪ್ತಿಯೇ ನಶಿಸಿ ಹೋಗಿ ಅವ ನೊಬ್ಬ ಕೇವಲ

ಸ್ವಾರ್ಥಿ ಮತ್ತು ಶೋಷಕನಾಗಿ ಉಳಿಯುತ್ತಾನೆ. ಒಬ್ಬನೇ ತನ್ನ ಬ್ಯಾಂಕ್ ಬ್ಯಾಲೆನ್ಸ್‌ಗಳನ್ನೆಲ್ಲಾ ಕೂಡಿ ಟ್ಟುಕೊಂಡು ಎಷ್ಟು ದಿನ ಅಂತ ಸುಖ ಅನುಭವಿಸಬಲ್ಲ? ಅವನಿಗೂ-ಕೂಲಿ ಕಾರ್ಮಿಕನಿಗೂ ಬರುವ ಮರಣದ ಸ್ವರೂಪ ಒಂದೇ ಆಗಿರುತ್ತದೆ. ಇಬ್ಬರೂ ಹುಲು ಮಾನವರು. ಬಂಡವಾಳಗಾರ ತನ್ನಲ್ಲಿರುವ ಅಪಾರ ಹಣದಿಂದ ತನಗೆ ಆರೋಗ್ಯ ಕೆಟ್ಟರೆ ಚಿಕಿತ್ಸೆಗೊಳಗಾಗಿ ತನ್ನ ಆಯುಷ್ಯ ವನ್ನು ಇನ್ನಷ್ಟು ವರ್ಷಗಳು Postpone ಮಾಡಬಹುದು. ಕೂಲಿ ಕಾರ್ಮಿಕನಿಗೆ ಇದೇ ಹಣ ಅವನ ಆರೋಗ್ಯ ಕಾಪಾಡಿಕೊಳ್ಳಲು ಸಕಾಲಕ್ಕೆ ಒದಗಿ ಬರದಿದ್ದರೆ ಆತನೂ-ಅವನ ಕುಟುಂಬವೂ ಸ್ವಲ್ಪ ಬೇಗ ಸಾಯಬಹುದು.

ಆದರೆ 'ಬಂಡವಾಳಶಾಹಿ' ಎಂಬ ಮನುಷ್ಯ ತನ್ನ ಜಡತೆಯನ್ನು-ಕ್ರೌರ್ಯವನ್ನು ವೃದ್ಧಿಸಿ ಕೊಂಡ ಒಬ್ಬ ಸಮಾನತೆಯ ಶತ್ರುವಾಗಿ ವಿಜೃಂಭಿಸುತ್ತಾನೆ. ಇಂಥ ಅಸಮಾನತೆಯ ವಿಜೃಂಭಣೆಯಿಂದ ಸಮಾಜ ನಲುಗುತ್ತದೆ. ಒಬ್ಬ ಕಾಫಿ ಪ್ಲಾಂಟರ್ ಆಗಲಿ, ಒಬ್ಬ ರೈಟರ್ ಆಗಲಿ, ಮೇಸ್ತ್ರಿ ಆಗಲಿ ಇಡೀ ಪ್ಲಾಂಟೇಶನ್ ತನ್ನ ಊರಿನ ಸುಖ-ಶಾಂತಿಯ ಭಾಗ ಎಂದು ಭಾವಿಸಿದರೆ ಮಾತ್ರ ಸಮುದಾಯದ ಹಿತದೃಷ್ಟಿಯನ್ನು ಸಾಧಿಸಬಲ್ಲ ಘನತೆಯೆಡೆಗೆ ಚಲಿಸಿದಂತಾಗುತ್ತದೆ. ಇಂಥ ಕಾರ್ಮಿಕ ಹಿತ ದೃಷ್ಟಿಯ ಸದಾಶಯ ವೊಂದು ಸಂವೇದನಾಶೀಲ ಲೇಖಕ ಅಬ್ದುಲ್ ರಶೀದ್ ಅವರ ಕಾದಂಬರಿ 'ಹೂವಿನ ಕೊಲ್ಲಿ' ಯಲ್ಲಿ ನೈಜವಾಗಿ ಹೆಣೆದುಕೊಂಡಿದೆ.

ಅಕ್ರಮ ಗಣಿಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಣವನ್ನು ಲೂಟಿ ಮಾಡಿ ಕೊನೆಗೆ ಪಾಪಕ್ಕೆ ಪ್ರಾಯಶ್ಚಿತ್ತವೆಂಬಂತೆ ತಿರುಪತಿ ತಿಮ್ಮಪ್ಪನಿಗೆ ನೀಡುವ ಲಂಚದಂಥ ವಜ್ರದ ಕಿರೀಟದಿಂದ ಕಾರ್ಮಿಕರ ಹಿತರಕ್ಷಣೆ ಖಂಡಿತ ಆಗದು ಎಂಬ ಕಟು ಸತ್ಯವನ್ನು ಜನಾರ್ಧನ ರೆಡ್ಡಿಯಂಥ ರಾಜಕಾರಣಿಗಳು ಅರಿಯುವವರೆಗೂ, ಚುನಾವಣೆಯ ಸಂಧರ್ಭದಲ್ಲಿ ಪ್ರಚಾರದ ಮೋಹಕ್ಕಾಗಿ ಬಡವರ ಮನೆಯಲ್ಲಿ ಕೂತು ಊಟ ಮಾಡಿ ಆ ಮನೆಯ ಬಾಲಕನ ಹೆಗಲ ಮೇಲೆ ಕೈ ಹಾಕಿಕೊಂಡು ಆದಷ್ಟು ಬೇಗ ನಿವೇಶನವನ್ನು ನೀಡಿ ಅವರ ಕಷ್ಟವನ್ನು ಪರಿಹರಿ ಸುವೆನೆಂದು ಮಾತು ಕೊಟ್ಟು, ಪತ್ರಿಕೆಗಳಲೆಲ್ಲಾ ಮುಖ ಪುಟದ ಪ್ರಚಾರ ಪಡೆದುಕೊಂಡು ಅದನ್ನು ಈಡೇರಿಸುವ ಜವಾಬ್ದಾರಿಯೇ ಇಲ್ಲದೆ ಈಗಾಗಲೇ ಸಿರಿವಂತರಾಗಿರುವ ವಿಶ್ವ ಕಪ್ ಗೆದ್ದಿರುವ ಧೋನಿ ಪಡೆಯ ಕ್ರಿಕೆಟಿಗೆ ತಲಾ 25 ಲಕ್ಷ ರೂ Gift ಕೊಡುವೆನೆಂಬ ದೊಡ್ಡಸ್ತಿಕೆಯ 'ಕ್ರೀಡಾ ಪ್ರೇಮ' ಮರೆಯುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರ ಆಡಳಿತ ವೈಖರಿಯಿಂದಲೂ 'ಕಾರ್ಮಿಕ ದಿನಾಚರಣೆ'ಯ ಸಾರ್ಥಕ ಆಚರಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಕಾಯಕ ಮರೆತರೆ ಕೈಲಾಸವೆಲ್ಲಿ?

ಬಾಲ ಕಾರ್ಮಿಕ ನಿಷೇಧ ಕಾನೂನು ಮಕ್ಕಳ ಶಿಕ್ಷಣ ಹಕ್ಕನ್ನು ದೊರಕಿಸಿಕೊಡುವ ವರದಾನದಂತಿದೆ. ಚನ್ನಾಗಿ ಆಡಿಕೊಂಡು- ಶಾಲೆಗೆ ಹೋಗುತ್ತ ಆರೋಗ್ಯವಾಗಿ ತಿಂದುಂಡು ಬೆಳೆಯಬೇಕಾದ ಮಕ್ಕಳು ಆ ವಯಸ್ಸಿನಲ್ಲಿ ಹೋಟೆಲ್ ಸಪ್ಲೈ ರ್‌ಗಳಾಗಿಯೋ, ಹೂವು ಮಾರುತ್ತಲೋ, ಚಪ್ಪಲಿಗಳನ್ನು ಕಾಯುವ ಕೆಲಸದಲ್ಲಿ ತೊಡಗಿಕೊಂಡು ತಮ್ಮ ಹಕ್ಕಿಂದ ವಂಚಿತರಾಗುವುದನ್ನು ನೋಡುವುದೇ ಒಂದು ಹಿಂಸೆ. ಬಾಲ ಕಾರ್ಮಿಕರ ನಿಷೇಧದ ಕಾನೂನು ಸಂಪೂರ್ಣ ಆಚರಣೆಗೆ ತರುವುದರ ಮೂಲಕ 'ಕಾರ್ಮಿಕರ ದಿನಾಚರಣೆ'ಗೆ ಹೊಸ ಅರ್ಥ ಬರುತ್ತದೆ.

ಒಬ್ಬನೇ ತನ್ನ ಬ್ಯಾಂಕ್ ಬ್ಯಾಲೆನ್ಸ್‌ಗಳನ್ನೆಲ್ಲಾ ಕೂಡಿಟ್ಟುಕೊಂಡು ಎಷ್ಟು ದಿನ ಅಂತ ಸುಖ ಅನುಭವಿಸಬಲ್ಲ? ಅವನಿಗೂ-ಕೂಲಿ ಕಾರ್ಮಿಕನಿಗೂ ಬರುವ ಮರಣದ ಸ್ವರೂಪ ಒಂದೇ ಆಗಿರುತ್ತದೆ. ಇಬ್ಬರೂ ಹುಲು ಮಾನವರು. ಬಂಡವಾಳಗಾರ ತನ್ನಲ್ಲಿರುವ ಅಪಾರ ಹಣದಿಂದ ತನಗೆ ಆರೋಗ್ಯ ಕೆಟ್ಟರೆ ಚಿಕಿತ್ಸೆಗೊಳಗಾಗಿ ತನ್ನ ಆಯುಷ್ಯವನ್ನು ಇನ್ನಷ್ಟು ವರ್ಷಗಳು Postpone ಮಾಡಬಹುದು. ಕೂಲಿ ಕಾರ್ಮಿಕನಿಗೆ ಇದೇ ಹಣ ಅವನ ಆರೋಗ್ಯ ಕಾಪಾಡಿಕೊಳ್ಳಲು ಸಕಾಲಕ್ಕೆ ಒದಗಿ ಬರದಿದ್ದರೆ ಆತನೂ-ಅವನ ಕುಟುಂಬವೂ ಸ್ವಲ್ಪ ಬೇಗ ಸಾಯಬಹುದು. ಆದರೆ 'ಬಂಡವಾಳಶಾಹಿ' ಎಂಬ ಮನುಷ್ಯ ತನ್ನ ಜಡತೆಯನ್ನು-ಕ್ರೌರ್ಯವನ್ನು ವೃದ್ಧಿಸಿಕೊಂಡ ಒಬ್ಬ ಸಮಾನತೆಯ ಶತ್ರುವಾಗಿ ವಿಜೃಂಭಿಸುತ್ತಾನೆ. ಇಂಥ ಅಸಮಾನತೆಯ ವಿಜೃಂಭಣೆಯಿಂದ ಸಮಾಜ ನಲುಗುತ್ತದೆ. ಒಬ್ಬ ಕಾಫಿ ಪ್ಲಾಂಟರ್ ಆಗಲಿ, ಒಬ್ಬ ರೈಟರ್ ಆಗಲಿ, ಮೇಸ್ತ್ರಿ ಆಗಲಿ ಇಡೀ ಪ್ಲಾಂಟೇಶನ್ ತನ್ನ ಊರಿನ ಸುಖ-ಶಾಂತಿಯ ಭಾಗ ಎಂದು ಭಾವಿಸಿದರೆ ಮಾತ್ರ ಸಮುದಾಯದ ಹಿತದೃಷ್ಟಿಯನ್ನು ಸಾಧಿಸಬಲ್ಲ ಘನತೆಯೆಡೆಗೆ ಚಲಿಸಿದಂತಾಗುತ್ತದೆ.

ಹಾಗೆಯೇ 'ನೇಗಿಲ ಯೋಗಿ' ರೈತನಿಗೆ ಸಿಗಬೇಕಾದ ನ್ಯಾಯದ ಆದ್ಯತೆ. ಜೊತೆಗೆ ಮನೆ ಕೆಲಸ ಮಾಡುವ ಹೆಂಗಸರಿಗೆ ಸಿಗಬೇಕಾದ ಹಕ್ಕು-ಬಾಧ್ಯತೆಗಳ ಆದ್ಯತೆ. ಮನೆಯನ್ನು ನೋಡಿಕೊಂಡು ಮನೆಯೊಳಗಿನ ಕೆಲಸ ಮಾಡುವ ಹೆಂಗಸಿನ ಪರಮ ಪಾವನ ಕೆಲಸ 'ಕೆಲಸವಲ್ಲ' ಎಂದು ಅನ್ನಿಸಿಬಿಟ್ಟರೆ ಅದು ಮೂರ್ಖತನದ ಪರಮಾವಧಿ ಎಂದು ಮಾತ್ರ ನನಗನಿಸುತ್ತದೆ. ಹೊರಗೆ ದುಡಿದರೆ ಮಾತ್ರ 'ಕೆಲಸ' ಎಂದು ಆರ್ಥಿಕ ಭದ್ರತೆಯಿದ್ದರೂ ಶೋಕಿಗಾಗಿ 'ಗೌರವ'ದ ಕೆಲಸಗಳನ್ನು ಹುಡುಕುವವರಿಂದ ನಿರುದ್ಯೋಗ ಸಮಸ್ಸೆ ಉಲ್ಬಣಿಸುತ್ತದೆ. ಆದರೆ ಮನೆ ಕೆಲಸ ಮಾಡಿಕೊಂಡು ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬರದಂತೆ ಬದುಕುವ ಹೆಣ್ಣುಮಕ್ಕಳ ಕ್ರಿಯಾಶೀಲತೆಗೂ ಇತರ ಎಲ್ಲ ಉದ್ಯೋಗಗಳಿಗೆ, ಕಾಯಕಕ್ಕೆ ದೊರಕುವ ಸಮ್ಮಾನ-ಜೀವನ ಭದ್ರತೆ ದೊರೆಯಬೇಕು. ಸ್ವತಃ ನಾವು ಮಾಡುವ ಕಾಯಕ ನಮಗೆ ಖುಷಿ ಕೊಡಬೇಕು ಈ ಖುಷಿಯಲ್ಲಿ ಮಾತ್ರ ಕರ್ಮದ ಸಾರ್ಥಕತೆ ಅಡಗಿರುತ್ತದೆ. □

ಸಾಂಸ್ಕೃತಿಕ ಯಜಮಾನ್ಯ ಮತ್ತು

(43ನೇ ಪುಟದಿಂದ)

ಯಜಮಾನ ಸಂಸ್ಕೃತಿಯ ಅದ್ವಾನಗಳಿಗೆ ವಿರೋಧವಾಗಿ ಮಂಟೇಸ್ವಾಮಿ, ಮಲೆ ಮಹದೇಶ್ವರ ಮುಂತಾದ ಪಂಥಗಳ ಜನಪರ ಅಂಶಗಳು ದೇಸೀ ನೆಲೆಗಳ ಪರ್ಯಾಯಗಳಾಗಿ ಒದಗಬಹುದೇ ಅನ್ನುವಂತಹ ಅಧ್ಯಯನಶೀಲ ಹುಡುಕಾಟಗಳು ಆರಂಭವಾಗಿವೆ. ಪ್ರಪಂಚ ವ್ಯಾಪಿಯಾಗಿರುವ ಏಕಾಕಾರಿ ಸಂಸ್ಕೃತಿಯನ್ನು ಸೃಷ್ಟಿ ಮಾಡಬೇಕು ಅಂತ ಜಾಗತಿಕ ಯಜಮಾನ ಸಂಸ್ಕೃತಿ ಪ್ರಯತ್ನ ಪಟ್ಟಾಗ, ಇದ್ದಕ್ಕಿದ್ದಂತೆ ಮರೆತ, ನಿರ್ಲಕ್ಷಿತ ನೆಲೆಗಳ ಎಳೆಗಳಿಂದ ಸ್ಫೂರ್ತಿಯನ್ನು ಪಡೆಯುವ ಮೂಲಕ ಅನೇಕಾಂತಗಳನ್ನು ಸವಾಲಾಗಿ ಒಡ್ಡುವುದು ಕೂಡ ಪರಿಣಾಮಕಾರಿಯಾಗಬಲ್ಲದು. ಅಂತಹ ನಿರ್ಲಕ್ಷಿತ ನೆಲೆಗಳ ಸಂಸ್ಕೃತಿಗಳಿಗೆ ಕೆಲವು ಸಲ ಸೂಕ್ತ ಪರಿಷ್ಕರಣೆಯನ್ನು, ನಿರ್ವಚನವನ್ನು ಒದಗಿಸಬೇಕಾಗಬಹುದು.

ಬಹಳ ಸಲ ಅದು ಅದರಲ್ಲಿ ಈ ಮೊದಲೇ ಅಸ್ತಿತ್ವದಲ್ಲಿರುತ್ತದೋ ಇಲ್ಲವೋ ಗೊತ್ತಿಲ್ಲ. ನಮ್ಮ ಅಗತ್ಯಗಳು ಮತ್ತು ಅಭೀಪ್ಸೆಗಳು ಅಲ್ಲಿ ಹೊಸ ನಿರ್ವಚನಗಳಾಗಿ ವ್ಯಕ್ತಗೊಂಡರೆ ಆಶ್ಚರ್ಯವಿಲ್ಲ. ಆದರೆ ಆ ಬಗೆಯ ಹೊಸ ನಿರ್ವಚನಗಳನ್ನು ಧರಿಸುವ ಸತ್ವ ಅಂತಹ ನಿರ್ಲಕ್ಷಿತ ನೆಲೆಯ ಸಾಂಸ್ಕೃತಿಕ ಮಾದರಿಗಳಿಗೆ ಇರುತ್ತದೆ ಎನ್ನುವುದೇ ನಮ್ಮ ಆಶಾವಾದಕ್ಕೆ ಕಾರಣವಾಗಬಲ್ಲದು.

ಇವೆಲ್ಲವೂ ಕೂಡ ಈಗ ಇರುವಂತಹ ದಿಕ್ಕೆಡಿಸುವಂತ ಆಳುವ ಸಂಸ್ಕೃತಿಗೆ ವಿರೋಧವಾಗಿ ನಡೆಯುತ್ತಿರುವ ವರ್ತಮಾನದ ಪ್ರಯತ್ನಗಳು. ಆದರೆ ಆ ಪ್ರಯತ್ನಗಳಲ್ಲಿ ಎಷ್ಟರಮಟ್ಟಿಗೆ ಯಶಸ್ಸಿದೆ ಮತ್ತು ಎಷ್ಟರಮಟ್ಟಿಗೆ ನಮಗೆ ಫಲ ಕಾಣಿಸುತ್ತಾ ಇದೆ? ನಿಜವಾಗಿಯೂ ಎಷ್ಟರ ಮಟ್ಟಿಗೆ ಉಳಿವಿನ ಸಾಧ್ಯತೆ ಕಾಣಿಸುತ್ತಾ ಇದೆ? ಅಥವಾ ಏನೂ ಮಾಡೋದಕ್ಕೆ ಸಾಧ್ಯ ಇಲ್ಲ ಅನ್ನುವಂತ ಹತಾಶ ಪರಿಸ್ಥಿತಿಗೆ ನಾವು ಈಗಾಗಲೇ ತಲುಪಿಬಿಟ್ಟಿದ್ದೀವಾ? ಎಂಬುದೆಲ್ಲವನ್ನೂ ಕೂಡ ಯೋಚನೆ ಮಾಡಬೇಕಾದ ಸಂದರ್ಭ ಇದು.

ಮೌಲ್ಯಗಳಲ್ಲಿ ಎಷ್ಟು ಅವಕಾಶವಾದ, ಮತ್ತು ಅಧಃಪತನ ಬಂದಿದೆಯೆಂದರೆ ಇವತ್ತು ಅಕ್ರಮ ಹಣಗಳಿಕೆ ಅನ್ನುವಂತಾದ್ದು ಮತ್ತು ಆ ಮೂಲಕವಾಗಿ ಹಣ ಬಂದಿದ್ದು ತಪ್ಪು ಅನ್ನುವಂತಹ ಅಭಿಪ್ರಾಯವೇ ಕಣ್ಮರೆಯಾಗಿರುವಂತಿದೆ. ಶ್ರೀಮಂತರಾಗುವುದು ಮುಖ್ಯ. ಸಿಕ್ಕಾಪಟ್ಟೆ ಹಣವಿರುವವರನ್ನು ಪ್ರಶ್ನಿಸುವವರು, ವಿಮರ್ಶಿಸುವವರು ಅಥವಾ ದೂರ ಇಡುವವರು ಯಾರೂ ಇಲ್ಲ ಅನ್ನುವ ಹಾಗೆ ಆಗುತ್ತಿರುವಂತಿದೆ. ಬೇಕಾದಷ್ಟು ಹಣ ಇದೆ ಅನ್ನೋದೊಂದೇ ಮೌಲ್ಯ ಆಗಿರುವುದರಿಂದ ಹಿಂದುಳಿದ ವರ್ಗಗಳು, ದಲಿತ ವರ್ಗಗಳು ಕೂಡ ಅದೇ ಹಾದಿ ಹಿಡಿಯುತ್ತಿವೆಯೇನೋ ಅನ್ನುವ ಆತಂಕ ಕಾಡುತ್ತಿರುವುದರಿಂದ, ಅದು ಆಳುವ ಸಂಸ್ಕೃತಿಗೆ ಪರೋಕ್ಷವಾಗಿರುವ ಸಹಮತವನ್ನು ತೋರಿಸಿದಂತಾಗಿಬಿಡುತ್ತಿದೆಯೇ ಎಂಬ ಭಯವೂ ಹುಟ್ಟುತ್ತಿದೆ ಅಂತ ನಾನು ಹೇಳಿದರೆ ಉತ್ಪ್ರೇಕ್ಷೆಯ ಮಾತಾಡುತ್ತಿದ್ದೇನೆ ಎಂದು ನೀವು ನನ್ನನ್ನು ಆಕ್ಷೇಪಿಸಲಾರಿರಿ ಅಂದುಕೊಳ್ಳುತ್ತೇನೆ. □

(ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ಇವರು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾಡಿದ ಭಾಷಣದ ಬರಹ ರೂಪ)

ಡಿ.ಐ.ಸಿ.ಸಿ.ಐ ಏಕೆ ಬೇಕು?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ದಲಿತರಿಗೆ ಡಿ.ಐ.ಸಿ.ಸಿ.ಐಇ ಏಕೆ ಬೇಕು ಎನ್ನುವುದನ್ನು ತಿಳಿದುಕ್ಕೊಳ್ಳುವುದಕ್ಕೆ ಮೊದಲು ನಾವು ಮುಖ್ಯ ವಾಹಿನಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಾಗಿ ಎಫ್.ಐ.ಸಿ.ಸಿ.ಐ ಏಕೆ ಬೇಕು ಎಂಬ ಒಂದು ಪ್ರಶ್ನೆ ಕೇಳಬೇಕು

1927ರಲ್ಲಿ ಸ್ಥಾಪಿತವಾದ ಎಫ್.ಐ.ಸಿ.ಸಿ.ಐ ಅದರ ಮಾತನ್ನು ಅದೇ ಒಪ್ಪಿಕೊಂಡಂತೆ. ಮುಖ್ಯ ವಾಹಿನಿ ಭಾರತೀಯ ಕೈಗಾರಿಕೋದ್ಯಮಿಗಳಿಗೆ ಮತ್ತು ಕೈಗಾರಿಕೆಗಳಿಗೆ ಅವರೇ ಒಪ್ಪಿಕೊಂಡಂತೆ ಒಮ್ಮೆ ಖಚಿತವಾದ ಧ್ವನಿ ಎಫ್.ಐ.ಸಿ.ಸಿ.ಐ ಸುಮಾರು ಒಂದು ಲಕ್ಷ ಸದಸ್ಯ ಸಂಸ್ಥೆಗಳನ್ನು ಒಳಗೊಂಡಿದೆ. ಪ್ರಪಂಚದಾದ್ಯಂತ 79 ವಾಣಿಜ್ಯ ಮಂಡಳಿಗಳ ಜೊತೆ ಸಂಪರ್ಕ ಹೊಂದಿದೆ. ಒಂದು ಮೂಲದ ಪ್ರಕಾರ ಈ ಸಂಸ್ಥೆಯನ್ನು ಸ್ಥಾಪಿಸಲು ಗಾಂಧೀಜಿಯವರು ಜಿ.ಡಿ. ಬಿರ್ಲಾ ಅವರನ್ನು ಪ್ರೇರೇಪಿಸಿದರು ಎಂದು ತಿಳಿದುಬರುತ್ತದೆ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಸರ್ಕಾರದ ನೀತಿ ನಿಯಮಗಳಲ್ಲಿ ಭಾಗವಹಿಸುವುದರ ಜೊತೆಗೆ ಎಫ್.ಐ.ಸಿ.ಸಿ.ಐ ಚಾರಿತ್ರಿಕವಾಗಿ ಭಾರತದ ಸ್ವಾತಂತ್ರ್ಯದ ಹೋರಾಟದ ಜೊತೆ ಹೆಣೆದುಕೊಂಡಿತು.

ಎಫ್.ಐ.ಸಿ.ಸಿ.ಐ ಅಲ್ಲದೆ ಭಾರತದ ವಾಣಿಜ್ಯ ಮತ್ತು ಕೈಗಾರಿಕೆ ಇತರ ಹಲವು ಸಂಸ್ಥೆಗಳನ್ನು ಹುಟ್ಟು ಹಾಕಿದೆ. ಇವುಗಳಲ್ಲಿ ಪ್ರಮುಖವಾದುದು ಮತ್ತು ಕಡಿಮೆ ರಕ್ಷಣಾತ್ಮಕವಾದುದು ಕಾನ್ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ ಇದು ಅತಿ ಹಳೆಯ ವಾಣಿಜ್ಯ ಸಂಘವಾಗಿದ್ದು ಇದನ್ನು 1895ರಲ್ಲಿ ಇಂಜಿನಿಯರಿಂಗ್ ಮತ್ತು ಕಬ್ಬಿಣದ ವಾಣಿಜ್ಯ ಸಹಕಾರ ಸಂಘವಾಗಿ ಪ್ರಾರಂಭಿಸಲಾಯಿತು. ಸಿ.ಐ.ಇ 9000/–ಸದಸ್ಯರನ್ನೊಳಗೊಂಡು ಭಾರತದಾದ್ಯಂತ 64 ಕಛೇರಿಗಳನ್ನು ಹೊಂದಿದ್ದು, ಹೊರದೇಶಗಳಲ್ಲಿ 7 ಕಛೇರಿಗಳನ್ನು ಹೊಂದಿದೆ. ಎಫ್.ಐ.ಸಿ.ಸಿ.ಐ, ಸಿ.ಐ.ಐ ಕೂಡ ಭಾರತದ ಆರ್ಥಿಕ ನೀತಿ ನಿಯಮದಲ್ಲಿ ತನ್ನ ಪಾತ್ರ ವಹಿಸುತ್ತದೆ.

ಎಫ್.ಐ.ಸಿ.ಸಿ.ಐ, ಸಿ.ಐ.ಐ ಅಲ್ಲದೆ ಇನ್ನೂ ಅನೇಕ ವಾಣಿಜ್ಯ ರಂಗದಲ್ಲಿ ಪ್ರತಿನಿದಿಸುತ್ತದೆ. ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಆಫ್ ಇಂಡಿಯಾ ಇಂತಹ ಒಂದು ಪ್ರಮುಖ ಸಂಸ್ಥೆಯಾಗಿದ್ದು, ಭಾರತೀಯ ವಾಣಜ್ಯ ಸಂಸ್ಥೆಗಳನ್ನು ಪ್ರತಿನಿಧಿಸುತ್ತದೆ. 1920ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಸುಮಾರು ಎರಡು ಲಕ್ಷ ಸದಸ್ಯ ಕಂಪನಿಗಳನ್ನೊಳಗೊಂಡಿದ್ದು ಭಾರತದ ಕೈಗಾರಿಕೋದ್ಯಮಗಳನ್ನು ಉತ್ತೇಜಿಸುವಲ್ಲಿ ಒಂದು ಮುಖ್ಯ ಪಾತ್ರ ವಹಿಸುತ್ತದೆ. ಮತ್ತು ಸರ್ಕಾರದ ಆರ್ಥಿಕ ನೀತಿ ನಿಯಮಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ.

ಎಫ್.ಐ.ಸಿ.ಸಿ.ಐ, ಸಿ.ಐ.ಐ ಅಲ್ಲದೆ ಸಾವಿರಾರು ವಿಭಾ ಗೀಯ ಮತ್ತು ಸ್ಥಳೀಯ ವಾಣಿಜ್ಯ ಸಂಘಗಳ ಮೇಲಿನ ಉದ್ದೇಶ ಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿದೆ. ಮುಖ್ಯವಾಹಿನಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಇಂತಹ ಸಂಸ್ಥೆಗಳು ಬೇಕಾಗಿದ್ದಲ್ಲಿ ದಲಿತರೇಕೆ ತಮ್ಮದೇ ಆದ ಒಂದು ವಾಣಿಜ್ಯ ಸಂಘವನ್ನು ಹೊಂದ ಬಾರದು? ಜೊತೆಯಲ್ಲಿರೊ ಮತ್ತೊಂದು ಪ್ರಶ್ನೆ ಹುಟ್ಟಬಹುದು. ದಲಿತ ವಾಣಿಜ್ಯ ಸಂಸ್ಥೆಗಳಿಗೇಕೆ ಎಫ್.ಐ.ಸಿ. ಸಿ.ಐ,ಸಿ.ಐ.ಐ ಇವುಗಳ ಸದಸ್ಯರಾಗ ಬಾರದು? ಪ್ರಶ್ನೆಯೇನೊ ಚೆನ್ನಾಗಿದೆ. ಆದರೆ ದಲಿತರು ತಮ್ಮದೇ ಆದ ವಾಣಿಜ್ಯ ಸಂಘವನ್ನು ಡಿ.ಐ.ಸಿ.ಸಿ.ಐನಂತ ವಾಣಿಜ್ಯ ಸಂಸ್ಥೆಯನ್ನು ಏಕೆ ಹೊಂದಿ ರಬೇಕು ಎಂಬುದಕ್ಕೆ ಕಾರಣಗಳು ಬೇರೆಲ್ಲೊ ಇವೆ. ಉದಾಹ ರಣೆಗೆ ನಾವು ಅಮೇರಿಕಾ ಮತ್ತು ಅಲ್ಲಿಯ ಬೇರೆ ಸ್ಥಳೀಯರು ಹೊಂದಿರುವ ವಾಣಿಜ್ಯ ಸಂಸ್ಥೆಗಳನ್ನು ತೆಗೆದು ಕೊಳ್ಳೋಣ. ಪ್ರಪಂಚದ ಬಂಡವಾಳ ಶಾಹಿಯ ಕೇಂದ್ರವಾಗಿ ಯುನೈಟೆಡ್ ಸ್ಟೇಟ್ಸ್ ಪ್ರಪಂಚದ ಅತಿ ದೊಡ್ಡ ವಾಣಿಜ್ಯ ಸಂಸ್ಥೆಗಳಿಗೆ ಮನೆಯಾಗುತ್ತಿದೆ. ಆದರೂ ಕರಿಯರು ತಮ್ಮದೇ ಆದ ವಾಣಿಜ್ಯ ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕಾಗಿದೆ. 1900ರಷ್ಟು ಮೊದಲೇ ರಾಷ್ಟ್ರೀಯ ನೀಗ್ರೋ ಬಿಸಿನೆಸ್ ಲೀಗ್ ಜನ್ಮತಾಳಿತು.

1966ರಿಂದ ನ್ಯಾಷನಲ್ ಬಿಸಿನೆಸ್ ಲೀಗ್ ಎಂದು ಮರು ನಾಮಕರಣ ಮಾಡಿದ ಈ ಸಂಸ್ಥೆ ಕರಿಯರ ಪುನರುಜ್ಜೀವನಕ್ಕೆ ಒಂದು ವೇದಿಕೆ ಕಲ್ಪಿಸಿ, ಕುತೂಹಲಕಾರವೆಂದರೆ ಈ ನೀಗ್ರೋ ಬಿಸಿ ನೆಸ್ ಲೀಗ್ ಯುನೈಟೆಡ್ ಸ್ಟೇಟ್ಸ್ ಚೇಂಬರ್ಸ್ ಆಫ್ ಕಾಮರ್ಸ್ ಸಂಸ್ಥೆಗಿಂತ 12 ವರ್ಷ ಹಳೆಯದಾದ ಕರಿಯರು, ಬಿಳಿಯರು ಒಂದು ವಾಣಿಜ್ಯ ಸಂಸ್ದೆ ಕಟ್ಟುವ ಮೊದಲೇ ತಮ್ಮದೇ ಆದ ವಾಣಿಜ್ಯ ಸಂಸ್ಥೆ ಕಟ್ಟಿದ್ದು ಮೈ ಪುಳಕಗೊಳಿಸುವ, ರೊಮಾಂಚನಕಾರಿ ಸಿನಿಮಾಗಳಂತೆ ಪ್ರತ್ಯೇಕ ಬರಹಕ್ಕೆ ಅರ್ಹವಾಗಿದೆ. ಸುಮಾರು ಒಂದು ಲಕ್ಷ ಸದಸ್ಯರನ್ನೊಳಗೊಂಡ ರಾಷ್ಟ್ರೀಯ ಲ್ಯಾಕ್‌ಚೇಂಬರ್ಸ್ ಆಫ್ ಕಾಮರ್ಸ್ ಒಂದು ಪ್ರಮುಖ ಕರಿಯರೇ ನಡೆಸುವ ವಾಣಿಜ್ಯ ಸಂಘ. ನೀವು ಅಂತರ್ಜಾಲದಲ್ಲಿ ಹುಡುಕಿದಲ್ಲಿ ಇಂತಹ ನೂರಾರು ಕರಿಯರ ವಾಣಿಜ್ಯ ಸಂಘಗಳನ್ನು ಕಾಣಬಹುದು. ಪ್ರತಿ ರಾಜ್ಯ ಮತ್ತು ಪ್ರತಿ ದೇಶದಲ್ಲಿ ಅನೇಕ ಕರಿಯರ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಕಾಣಬಹುದು. ನಿಜವಾಗಿ ಅಲ್ಲಿ ಒಂದು ಬ್ಲಾಕ್ ಬ್ಯಾಂಕರ್ಸ್ ಅಸೋಸಿಯೇಷನ್ ಕೂಡ ಇದೆ. ಈ ಕರಿಯ ಕಾರ್ಖಾನೆಗಳನ್ನು ಹುಡುಕಿ. ನೀವು ಕೊನೆ ಮೊದಲಿಲ್ಲದ ಪಟ್ಟಿಗಳನ್ನು ಕಾಣುತ್ತೀರಿ. ಕರಿಯರ ಪತ್ರ ತಯಾರಿಕೆ ಸಂಸ್ಥೆ, ಕರಿಯ ಕಟ್ಟಡ ನಿರ್ಮಾಣ ಸಂಸ್ಥೆ ಇವಕ್ಕೆಲ್ಲ ಉದಾವರಣೆಗಳು. ಕರಿಯ ಮಹಿಳೆಯರ ವಾಣಿಜ್ಯ ಸಂಘಗಳನ್ನು ನೀವು ಹುಡುಕಿ ಹೇಗೆ ಕರಿಯ ಮಹಿಳೆಯರು ಮಹಿಳಾ ಉದ್ಯಮಿಗಳು ತಮ್ಮದೇ ಆದ ಸಂಘಗಳನ್ನು ಹೊಂದಿದ್ದಾರೆ ಎಂಬುದನ್ನು ಅನೇಕ ಅಂತರ್ಜಾಲದಲ್ಲಿ ವಿವರಿಸಿರುತ್ತಾರೆ. ಆದ್ದರಿಂದ ಕರಿಯರು ನಮಗಿಂತ ಅಷ್ಟು ಮಂದಿ ಇದ್ದಾರೆ.

ಭಾರತದಲ್ಲಿ ಬಿ.ಐ.ಸಿ.ಸಿ.ಐ ಕೇವಲ ಅನೇಕ ದಶಕಗಳಷ್ಟು ಹಳೆಯದು. ಇಷ್ಟು ಸ್ವಲ್ಪ ಸಮಯದಲ್ಲಿ ಡಿ.ಐ.ಸಿ.ಸಿ.ಐ ತನ್ನ ಪರಿಣಾಮ ಬೀರಲು ಪ್ರಾರಂಭಿಸಿದೆ. ಮುಖ್ಯ ವಾಹಿನಿಯ ವಾಣಿಜ್ಯ ಸಂಸ್ಥೆಗಳಾದ ಎಫ್.ಐ.ಸಿ.ಸಿ.ಐ, ಸಿ.ಸಿ.ಐ ಈಗ ಬಿ.ಐ.ಸಿ.ಸಿ.ಐ ಅನ್ನೊ ಒಂದು ನಂಬಿಕಾರ್ಹ ದಲಿತ ವಾಣಿಜ್ಯ ಸಂಸ್ಥೆಯಾಗಿ ಗುರುತಿಸುತ್ತಿದೆ. ದೇಶದಾದ್ಯಂತ ದಲಿತ ಕೈಗಾರಿಕೋದ್ಯಮಗಳು ಡಿ.ಐ. ಸಿ.ಸಿ.ಐ ಕೇಂದ್ರ ಕಛೇರಿಯನ್ನು ಸಂಪರ್ಕಿಸುತ್ತಿವೆ. ಡಿ.ಐ.ಸಿ.ಸಿ.ಐನ ಅಂಗ ಸಂಸ್ಥೆಗಳನ್ನು ಸ್ಥಾಪಿಸಲು ಅನೇಕ ರಾಜ್ಯಗಳಿಂದ ಈಗಾಗಲೇ ಬೇಡಿಕೆ ಬಂದಿದೆ. ಅದರ ಒಂದು ಪ್ರಶ್ನೆ ದಲಿತರೇಕೆ ತಮ್ಮದೇ ಆದ ವಾಣಿಜ್ಯ ಸಂಘವನ್ನು ಸ್ಥಾಪಿಸಲು ಇಷ್ಟು ಸಮಯ ತೆಗೆದುಕೊಂಡರು. ಅನೇಕ ಸ್ಥಳಗಳನ್ನೊಳಗೊಂಡ ತಾರತಮ್ಯದ ಆಡಳಿತದಲ್ಲಿ ಸಾಮಾಜಿಕ ಪ್ರಶ್ನೆಗಳನ್ನು ದಲಿತ ಚಳುವಳಿಯು ತನದಾಗಿಸಿಕೊಂಡಿದೆ. ಆರ್ಥಿಕ ಸಮಸ್ಯೆಗಳು ಇದರ ನಂತರದ್ದಾಗಿರಬೇಕಾಗಿತ್ತು. ಆದರೆ ರಾಜ

ದಲಿತರು ತಮ್ಮದೇ ಆದ ವಾಣಿಜ್ಯ ಸಂಘವನ್ನು ಡಿ. ಐ.ಸಿ.ಸಿ.ಐನಂತ ವಾಣಿಜ್ಯ ಸಂಸ್ಥೆಯನ್ನು ಏಕೆ ಹೊಂದಿರಬೇಕು ಎಂಬುದಕ್ಕೆ ಕಾರಣಗಳು ಬೇರೆಲ್ಲೊ ಇವೆ. ಉದಾಹರಣೆಗೆ ನಾವು ಅಮೇರಿಕಾ ಮತ್ತು ಅಲ್ಲಿಯ ಬೇರೆ ಸ್ಥಳೀಯರು ಹೊಂದಿರುವ ವಾಣಿಜ್ಯ ಸಂಸ್ಥೆಗಳನ್ನು ತೆಗೆದು ಕೊಳ್ಳೋಣ. ಪ್ರಪಂಚದ ಬಂಡವಾಳ ಶಾಹಿಯ ಕೇಂದ್ರವಾಗಿ ಯುನೈಟೆಡ್ ಸ್ಟೇಟ್ಸ್ ಪ್ರಪಂಚದ ಅತಿ ದೊಡ್ಡ ವಾಣಿಜ್ಯ ಸಂಸ್ಥೆಗಳಿಗೆ ಮನೆಯಾಗುತ್ತಿದೆ. ಆದರೂ ಕರಿಯರು ತಮ್ಮದೇ ಆದ ವಾಣಿಜ್ಯ ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕಾಗಿದೆ. ೧೯೦೦ರಷ್ಟು ಮೊದಲೇ ರಾಷ್ಟ್ರೀಯ ನೀಗ್ರೋ ಬಿಸಿನೆಸ್ ಲೀಗ್ ಜನ್ಮತಾಳಿತು.

ನಮ್ಮ ಬಾಗಿಲಲ್ಲಿ ಕೈಗಾರಿಕೆ

ಕಾರಣ ಆರ್ಥಿಕತೆಯನ್ನು ಹಿಂದಿಕ್ಕಿತು. ಇರಲೂಬಹುದು ರಾಜಕೀಯ ಶಕ್ತಿ ಅತಿ ಪ್ರಾಮುಖ್ಯವಾದುದು ಎನ್ನುವುದು ಸಹಜವೆ.

ಭಾರತದ ಮುಖ್ಯ ವಾಹಿನಿ ಸಮಾಜಕ್ಕೆ ಎಫ್.ಐ.ಸಿ.ಸಿ, ಸಿ.ಐ.ಐ ಅವಶ್ಯಕವಿದ್ದಂತೆ ದಲಿತರಿಗೆ ಡಿ.ಐ.ಸಿ.ಸಿ.ಐ ಅವಶ್ಯಕವಾಗಿತ್ತು. ಕೊನೆಯ ಮಿಲಿಂದ್ ಕಾಂಬ್ಳೆಯವರಲ್ಲಿ ಇದನ್ನು ಗ್ರಹಿಸಿದವರು ಮತ್ತು ಹೊಸ ಪೋಷಣೆಯನ್ನು ಕೆಲಸ ಬಯಸುವವರಿಂದ ನಾವು ಕೆಲಸ ನೀಡುವಂತಾಗ ಬೇಕು. ಡಿ.ಐ.ಸಿ.ಸಿ.ಐನ ಪ್ರಾರಂಭದಿಂದ ದಲಿತ ಚಳಚಳಿಯ ಚರಿತ್ರೆಯಲ್ಲಿ ಶಾಶ್ವತವಾಗಿ ಒಂದು ಹೊಸ ಅಧ್ಯಾಯ ತೆರೆದುಕೊಂಡಿದೆ. ಅದೇ 21ನೇ ಶತಮಾನಕ್ಕೆ ಅಂಬೇಡ್ಕರ್ ವಾದದ ಲಗ್ಗೆ.

* * * * * *

2004ನ ಸಂಸತ್ತಿನ ಚುನಾವಣಾ ಸಂಧರ್ಭದಲ್ಲಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ದಲಿತರಿಗೆ ಈ ಕೆಳಗಿನಂತೆ ಸೌಲತ್ತುಗಳನ್ನು ನೀಡುವುದಾಗಿ ಭರವಸೆ ನೀಡಿತು.

"ಖಾಸಗಿ ಕ್ಷೇತ್ರದಲ್ಲಿನ ಉದ್ಯೋಗಗಳಲ್ಲಿ ದಲಿತರು ಮತ್ತು ಆದಿವಾಸಿಗಳು ಸರಿಯಾದ ಪಾಲನ್ನು ದೊರಕಿಸಿಕೊಳ್ಳುವಂತೆ ಮಾಡಲು ಕಾಂಗ್ರೆಸ್ ಪಕ್ಷ ಒಮ್ಮತ ಮೂಡಿಸುತ್ತದೆ. ಯುವಕರು ಅದರಲ್ಲೂ ಸಮಾಜದ ಹಿಂದುಳಿದ ವರ್ಗದವರ ಅಪೇಕ್ಷೆಗಳನ್ನು ಹೇಗೆ ಪೂರೈಸಬಹುದು ಎಂಬುದನ್ನು ಗುರುತಿಸಲು ಅದು ಖಾಸಗಿ ಕೈಗಾರಿಕಾ ಕ್ಷೇತ್ರದೊಡನೆ ಮಾತುಕತೆ ನಡೆಸುತ್ತದೆ".

ಬೂಪಾಲ್ ಸಭೆಯಿಂದ ಉತ್ತೇಜಿತ ಆ ಪ್ರಣಾಳಿಕೆ ಇನ್ನೂ ಕೆಲವು ಭರವಸೆಗಳನ್ನು ನೀಡಿತು. "ದಲಿತ ಮತ್ತು ಆದಿವಾಸಿ ವ್ಯಾಪಾರೋದ್ಯಮಗಳಿಗೆ ಸರ್ಕಾರಕೊಳ್ಳುವ ಸಾಮಗ್ರಿಗಳನ್ನು ಒದಗಿಸವಲ್ಲಿ ಆದ್ಯತೆ ನೀಡಿ ಅವರಲ್ಲಿ ಔದ್ಯೋಗಿಕ ಸಂಸ್ಕೃತಿ ಬೆಳೆಸಲು ದೃಢ ಪ್ರಯತ್ನ ಮಾಡಲಾಗುವುದು".

ಈ ಭರವಸೆಗಳನ್ನು ನೀಡಿ ಏಳು ವರ್ಷಗಳಾಗಿದ್ದರೂ ಖಾಸಗಿ ವಲಯದಲ್ಲಿ ಉದ್ಯೋಗ ನೀಡುವಂತೆ 'ರಾಷ್ಟ್ರೀಯ ಒಮ್ಮತ' ಮೂಡಿಸುವ ಪ್ರಯತ್ನ ಏನಾಯಿತು ಎಂದು 'ಯುನೈಟೆಡ್ ಪ್ರೋಗ್ರೆಸಿವ್ ಅಲಿಯನ್ಸ್ ಪಕ್ಷ' ಹೇಳುವುದಿಲ್ಲ.

ಇಂಡಿಯಾದ ಕೈಗಾರಿಕೋದ್ಯಮಿಗಳು ತುರ್ತಾಗಿ ಪರಿಹರಿಸಬೇಕಾದ ಸಾಮಾಜಿಕ ಪ್ರಶ್ನೆಗಳಿಗೆ ಕುರುಡಾಗಿದ್ದಾರೆ ಎಂದು ಮಾತ್ರ ಖಂಡಿತವಾಗಿ ಹೇಳಬಹುದು. ಅವರು ತಮ್ಮ ವೈಯಕ್ತಿಕ ಕೈಗಾರಿಕಾ ಆಸಕ್ತಿಗಳಿಗೂ ಸಹ ಕುರುಡಾಗಿದ್ದಾರೆ. ಏಕೆಂದರೆ ಕೈಗಾರಿಕೆ ಬೆಳೆಯಬೇಕಾದರೆ ಬಳಕೆದಾರರ ಹೆಚ್ಚಳ ಅತಿ ಮುಖ್ಯ. ಸಿಐಐನ ಅಫರ್‌ಮೆಟಿವ್ ಆಕ್ಷನ್ ಕೌನ್ಸಿಲ್ ಜತೆಗಿನ ನನ್ನ ಚರ್ಚೆಗಳಲ್ಲಿ ನಾನು ಹೊಸದಾಗಿ ಉದ್ಯಮಿಗಳಾದ ದಲಿತರು ತಮ್ಮ ಸಂಪಾದನೆಯನ್ನು ಕೂಡಿಡುವುದಿಲ್ಲ ಎಂದು ವಾದಿಸಿದ್ದೇನೆ. ಅವರ ಎಲ್ಲ ಸಂಪಾದನೆ ಅವರು ಹಿಂದೆ ಬಡವರಾಗಿದ್ದುದರಿಂದ ತಿರುಗಿ ಮಾರುಕಟ್ಟೇಗೇ ಬರುತ್ತದೆ. ಖಾಸಗಿ ಕ್ಷೇತ್ರದಲ್ಲಿ ದಲಿತಪರ ಕಾರ್ಯಕ್ರಮಕ್ಕೆ ಪ್ರಮುಖವಾದ ಇದೆನ್ನಿಸುತ್ತದೆ ನನಗೆ.

ದಲಿತರು ಯು.ಪಿ.ಎ ಸರ್ಕಾರ ಮುಂದೊಂದು ದಿನ 'ರಾಷ್ಟ್ರೀಯ ಒಮ್ಮತ' ವನ್ನು ಮೂಡಿಸಿ ತಮ್ಮ ಜೀವನದಲ್ಲಿ ಕ್ರಾಂತಿ ತರುತ್ತದೆ ಎಂದು ಎಂದೆಂದಿಗೂ ಕಾಯುತ್ತಲೆ ಇರಬೇಕೆ? ಈಗ ಏಳು ವರ್ಷಗಳು ಕಳೆದಿರುವಂತೆ ಮುಂದಿನ ಮೂರು ವರ್ಷಗಳೂ ಕಳೆಯಬಹುದು. ಸತತ ಎರಡು ಬಾರಿ ಅಧಿಕಾರ ಹಿಡಿದಿರುವ ಒಂದು ರಾಜಕೀಯ ಪಕ್ಷ ಒಂದು ಭರವಸೆಯನ್ನು ಪೂರೈಸಲಿಲ್ಲ ಎಂದಾದರೆ ಮೂರನೆ ಬಾರಿ ಗೆದ್ದಾಗ ಯು.ಪಿ.ಎ ಸರ್ಕಾರ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುತ್ತದೆ ಎಂಬುದರಲ್ಲಿ ಏನು ಖಾತರಿ? ಇದೆಲ್ಲದರಲ್ಲಿ ದಲಿತರು ಕಲಿಯಬಹುದಾದ ಒಂದು ಪಾಠವಿದೆ. ಬೇರಾರೊ ಬಂದು ನಮ್ಮನ್ನು ಮುಕ್ತಗೊಳಿಸುತ್ತಾರೆ ಎಂದು ದಲಿತರು ಎಂದೂ ಕಾಯಬಾರದು.

ಆದರೆ ಸರ್ಕಾರ ಕೈಗಾರಿಕೆಗಳ ಜತೆ ಮಾತನಾಡುವಾಗ ಅದು ಕಾರ್ಪೊರೇಟ್‌ಗಳ ಸಾಮಾಜಿಕ ಜವಾಬ್ದಾರಿಯಂತಹ (ಸಿ.ಎಸ್.ಆರ್) ಆರ್ಥಿಕೇತರ ವಾದಗಳನ್ನು ಬಳಸುತ್ತದೆ. ಕಾರ್ಪೊರೇಟ್‌ಗಳು ತಮ್ಮ ಕಡೆಯಿಂದ ಸರ್ಕಾರದ ವಾದವನ್ನು 'ಯೋಗ್ಯತೆ' ವಾದ ಬಳಸಿ ಅಲ್ಲಗಳೆಯುತ್ತವೆ.

ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸುವಲ್ಲಿ ಭಾರತೀಯ ಕೈಗಾರಿಕೋದ್ಯಮಿಗಳು ಯು.ಪಿ.ಎ–1 ಮತ್ತು 2 ಸರ್ಕಾರಗಳಿಗಿಂತ ಹೆಚ್ಚು ಅಧಿಕಾರಯುಕ್ತವಾಗಿವೆ ಎಂದುಕೊಂಡರೂ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಎರಡನೆ ಭರವಸೆಯಾದ ಸರ್ಕಾರ ಕೊಳ್ಳುವ ಸಾಮಗ್ರಿಗಳನ್ನು ಒದಗಿಸುವಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ ಆದ್ಯತೆ ನೀಡಿ ಅವರಲ್ಲಿ ಕೈಗಾರಿಕಾ ಸಂಸ್ಕೃತಿ ಬೆಳೆಯುವಂತೆ ಮಾಡುವುದನ್ನು ಏನು ತಡೆದಿದೆ ಎಂದು ಕೇಳಬಹುದು. ಇಲ್ಲಿಯೂ ಸರ್ಕಾರ ಖಾಸಗಿ ಕೈಗಾರಿಕೋದ್ಯಮದ ಅನುಮತಿಗಾಗಿ ಕಾದಿದೆಯೆ? ಮುಕ್ತ ಮಾರುಕಟ್ಟೆಯಿಂದ ಅತಿ ಹೆಚ್ಚು ಸಾಮಗ್ರಿ ಮತ್ತು ಸೇವೆ ಕೊಳ್ಳುವ ಸಂಸ್ಥೆ ಎಂದರೆ ಸರ್ಕಾರ. ಪ್ರತಿ ವರ್ಷ ರೈಲ್ವೆ ಇಲಾಖೆ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳ ಸಾಮಗ್ರಿ ಮತ್ತು ಸೇವೆಗಳನ್ನು ಕೊಳ್ಳುತ್ತದೆ.

ಮಾತು ಮತ್ತು ಕೃತಿ ಭಿನ್ನವಾಗಿರಬಹುದು. ಆದರೆ ದಲಿತರು ಯು.ಪಿ.ಎ ಸರ್ಕಾರ ಮುಂದೊಂದು ದಿನ 'ರಾಷ್ಟ್ರೀಯ ಒಮ್ಮತ'ವನ್ನು ಮೂಡಿಸಿ ತಮ್ಮ ಜೀವನದಲ್ಲಿ ಕ್ರಾಂತಿ ತರುತ್ತದೆ ಎಂದು ಎಂದೆಂದಿಗೂ ಕಾಯುತ್ತಲೆ ಇರಬೇಕೆ? ಈಗ ಏಳು ವರ್ಷಗಳು ಕಳೆದಿರುವಂತೆ ಮುಂದಿನ ಮೂರು ವರ್ಷಗಳೂ ಕಳೆಯಬಹುದು. ಸತತ ಎರಡು ಬಾರಿ ಅಧಿಕಾರ ಹಿಡಿದಿರುವ ಒಂದು ರಾಜಕೀಯ ಪಕ್ಷ ಒಂದು ಭರವಸೆಯನ್ನು ಪೂರೈಸಲಿಲ್ಲ ಎಂದಾದರೆ ಮೂರನೆ ಬಾರಿ ಗೆದ್ದಾಗ ಯು.ಪಿ.ಎ ಸರ್ಕಾರ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುತ್ತದೆ ಎಂಬುದರಲ್ಲಿ ಏನು ಖಾತರಿ?

ಇದೆಲ್ಲದರಲ್ಲಿ ದಲಿತರು ಕಲಿಯಬಹುದಾದ ಒಂದು ಪಾಠವಿದೆ. ಬೇರಾರೊ ಬಂದು ನಮ್ಮನ್ನು ಮುಕ್ತಗೊಳಿಸುತ್ತಾರೆ ಎಂದು ದಲಿತರು ಎಂದೂ ಕಾಯಬಾರದು. ಅವರು ತಮ್ಮದೇ ಕ್ರಮ ಕೈಗೊಳ್ಳಬೇಕು. ಮಿಲಿಂದ್ ಕಾಂಬ್ಳೆ ಅದ್ಯಕ್ಷರು, ದಲಿತ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ (ಡಿ.ಐ.ಸಿ.ಸಿ.ಐ) ಅವರು ನಮಗೆ ಕಲಿಸಿಕೊಟ್ಟಿರುವ ದೊಡ್ಡ ಪಾಠ ಇದು.

ಈ ವರ್ಷದ ಜನವರಿ 2 ರಂದು ಡಿ.ಐ.ಸಿ.ಸಿ.ಐ ದೆಹಲಿಯಲ್ಲಿ ದಲಿತ ಬಂಡವಾಳಗಾರರ ಔತಣ ಕೂಟವನ್ನು ಏರ್ಪಡಿಸಿತ್ತು. ಈ ಔತಣಕ್ಕೆ ಭಾರತದ ಎರಡು ಪ್ರಮುಖ ಉದ್ಯಮ ಸಂಸ್ಥೆಗಳಾದ ಸಿ.ಐ.ಐ ಮತ್ತು ಎಫ್.ಐ.ಸಿ.ಸಿ.ಐಗಳನ್ನೂ ಸಹ ಆಹ್ವಾನಿಸಲಾಗಿತ್ತು. ಔತಣದ ಮಧ್ಯೆಯೆ ಸಿ.ಐ.ಐ ಮತ್ತು ಎಫ್.ಐ.ಸಿ.ಸಿ.ಐ ಎರಡೂ ಡಿ.ಐ.ಸಿ.ಸಿ.ಐ ಮತ್ತು ಅದರ ಸದಸ್ಯ ಉದ್ಯಮಿಗಳ ಜೊತೆ ಸಹಭಾಗಿತ್ವ ಹೊಂದುವುದಾಗಿ ಸಾರ್ವಜನಿಕ ಘೋಷಣೆ ಮಾಡಿದುವು.

ಒಂದೆರಡು ವಾರಗಳ ಹಿಂದೆ ಮಿಲಿಂದ್ ಕಾಂಬ್ಳೆ ನನಗೆ ಕರೆಮಾಡಿ ಡಿ.ಐ.ಸಿ.ಸಿ.ಐ ಪೂನಾ ಆಫೀಸಿಗೆ ಸಿ.ಐ.ಐನ ಒಂದು ಉನ್ನತ ಮಟ್ಟದ ತಂಡ ಬರುತ್ತಿರುವುದಾಗಿ ತಿಳಿಸಿದಾಗ ನನಗೆ ಸಂತೋಷ ಮತ್ತು ಆಶ್ಚರ್ಯ ಎರಡೂ ಆಯಿತು. ಆಶ್ಚರ್ಯ ಮತ್ತು ಸಂತೋಷ ಏಕೆಂದರೆ ಕೇವಲ ಅರ್ಧ ದಶಕದ ಹಿಂದೆ ದೆಹಲಿಯ ಶಿಶುಪಾಲ್ ಸಿಂಗ್ ಎಫ್.ಐ.ಸಿ.ಸಿ.ಐ ಗೆ ಭಾರತೀಯ ಉದ್ದಿಮೆಗಳ ಜೊತೆ ಸಹಯೋಗ ಕೇಳಲು ಒಂದು ಜಾತಾದಲ್ಲಿ ಅಲ್ಲಿ ಹೋದಾಗ ಅವರ ಅಹವಾಲನ್ನು ಸ್ವೀಕರಿಸಲು ಒಬ್ಬ ಗುಮಾಸ್ತ ಕೆಳಗೆ ಬಂದಿದ್ದ.

ಈಗ ಡಿ.ಐ.ಸಿ.ಸಿ.ಐ ನ ಸತತ ಪ್ರಯತ್ನದ ಫಲವಾಗಿ ದೇಶದ ಮುಖ್ಯ ಔದ್ಯಮಿಕ ಸಂಘಗಳಲ್ಲಿ ಒಂದಾದ ಸಿ.ಐ.ಐ ಕಳೆದ ತಿಂಗಳು ಅದಕ್ಕೆ ಭೇಟಿ ನೀಡಿದೆ. ಸಿ.ಐ.ಐನ ಮುಖ್ಯ ಸಲಹೆಗಾರರಾದ ಶುಶಾಂತ್ ಸೇನ್ ಅವರ ನೇತೃತ್ವದ ಈ ತಂಡ ಡಿ.ಐ.ಸಿ.ಸಿ.ಐಗೆ ಈ ಕೆಳಗಿನ ಭರವಸೆಗಳನ್ನು ನೀಡಿದೆ.

ಅಫರ್ಮೆಟಿವ್ ಆಕ್ಷನ್:

1. ಪ್ರಣಾಳಿಕೆ ಈಗಾಗಲೇ ತಯಾರಾಗದಿದ್ದಲ್ಲಿ ಅದನ್ನು ತಯಾರಿಸಲು ಸಹಾಯ;
2. ಅವರ ಕಚೇರಿ ಗಟ್ಟಿ ಮಾಡುವಲ್ಲಿ ಸಹಾಯ;
   ಡಿ.ಐ.ಸಿ.ಸಿ.ಐ ಕಛೇರಿಯ ಸಿಬ್ಬಂದಿ ಸಿ.ಐ.ಐ ಪ್ರಧಾನ ಕಚೇರಿ ಮತ್ತು ವಿಭಾಗೀಯ ಕಚೇರಿಗಳಲ್ಲಿ ಸಮಯ ಉಪಯೋಗಿಸಲು ಅವಕಾಶ;

3. ನೀತಿ ನಿರೂಪಕ ಕಾರ್ಯಗಳಲ್ಲಿ ಸಲಹೆ ಮತ್ತು ಬೆಂಬಲ
4. ಅವಶ್ಯಕತೆಗನುಗುಣವಾಗಿ ಯಾವ ಸೇವೆಗಳನ್ನು ನೀಡಬಹುದು ಎಂಬುದರ ಬಗ್ಗೆ ಸಲಹೆ;
5. ಆದಾಯ ಮೂಲಗಳ ಸಾಧ್ಯತೆ;
6. ಸರ್ಕಾರದೊಡನೆ ಸಂಬಂಧ;
7. ಅಂತರರಾಷ್ಟ್ರೀಯ ಸಂಪರ್ಕ;
8. ಡಿ.ಐ.ಸಿ.ಸಿ.ಐ ಸದಸ್ಯರಿಗೆ ಬೇಕಾದ ತಿಳುವಳಿಕೆ, ತರಬೇತಿ;
9. ಸಿ.ಐ.ಐ. ಸದಸ್ಯರ ಜೊತೆ ಸಂಪರ್ಕ;
10. ದೇಶದ ಇತರ ಭಾಗಗಳಲ್ಲಿ ಸಿ.ಐ.ಐ ಸದಸ್ಯರ ಜೊತೆ ಸಭೆಗಳು.

ಸಿ.ಐ.ಐ ತಾನು ನೀಡಿರುವ ಭರವಸೆಗಳನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಸಿ.ಐ.ಐ ತಂಡದ ಬೇಟಿ ಒಂದು ಸನ್ನೆಯಷ್ಟೇ ಎಂದುಕೊಂಡರೂ ಅಥವಾ ಸಮಯ ಗಿಟ್ಟಿಸುವ ಒಂದು ತಂತ್ರ, ಅವರಿಗೆ ವಾಸ್ತವಿಕವಾಗಿ ಏನನ್ನೂ ಮಾಡುವ ಉದ್ದೇಶವಿಲ್ಲ ಎಂದುಕೊಂಡರೂ ಇದು ಒಂದು ಉತ್ತಮ ಪ್ರಾರಂಭ ಎನ್ನುವುದು ನಿಜ. ಸರ್ಕಾರ ಭರವಸೆ ನೀಡಿದ್ದಾಗ್ಯೂ ಏಳು ವರ್ಷಗಳಲ್ಲಿ ಏನನ್ನು ಮಾಡಲು ಸಾಧ್ಯವಾಗಿದ್ದಿಲ್ಲವೊ ಮಿಲಿಂದ್ ಒಂದು ವರ್ಷದಲ್ಲಿ ಅದನ್ನು ಸಾಧಿಸಿದ್ದಾರೆ. ಅವರು ದಲಿತರ ಬಾಗಿಲಿಗೆ ಕೈಗಾರಿಕೆಗಳ ಸಂಸ್ಥೆಯನ್ನು ತಂದಿದ್ದಾರೆ. ಸಿ.ಐ.ಐ. ಯು.ಪಿ.ಎ ಆಗುವುದಿಲ್ಲವೆಂದು ಆಶಿಸೋಣ.

* * * * * *

ಜಾಟ್ ಬುದ್ದಿಜೀವಿಗಳ ಗುಂಪು ಅಥವಾ ಅವರು ಇಂಗ್ಲೀಷ್‌ನಲ್ಲಿ ಮಾತನಾಡುವುದು ಅಥವಾ ಸಾಹಿತ್ಯ ಸಭೆಗಳಿಗೆ ಜಾಟರು ಹಾಜರಾಗುವುದು ಇಂತವು ಗಳನ್ನು ನಾವು ಎಷ್ಟು ಬಾರಿ ನೊಡಿದ್ದೇವೆ? ಜಾಟ್ ಪ್ರಾಧಾಪಕರು ಅಥವಾ ಜಾಟ್ ಮಾಹಿತಿ ತಂತ್ರಜ್ಞಾನ ತಜ್ಞರು ಇಂತವರುಗಳನ್ನು ನಾವು ಎಷ್ಟು ಬಾರಿ ನೋಡಲು ಸಾಧ್ಯ? ನಾಗರೀಕ ಸೇವೆಗಳಲ್ಲಿ ಜಾಟರಿ ರುವುದೇ ಬಹಳ ವಿರಳ.

ನಿಜವಾಗಿ ಜಾಟರನ್ನು ವಿಶ್ವವಿದ್ಯಾನಿಲಯಗಳು, ಆರ್ಥಿಕ ಕೇಂದ್ರಗಳು, ಸಾರ್ವಜನಿಕ ಸೇವೆಗಳು, ಇಂತವುಗಳಲ್ಲಿ ಹೆಚ್ಚಾಗಿ ಕಾಣಬೇಕಾಗಿದೆ. ಆದರೆ ಅವರು ಇಂದು ಅಲ್ಲಿ ಕಾಣುತ್ತಿಲ್ಲ. ನಾವು ಸಾಮಾಜದ ಅಂಚಿಗೆ ದೂಡಲ್ಪಟ್ಟಿದ್ದೇವೆ ಎಂಬುದನ್ನು ಅವರು ಈಗ ಅರಿತುಕೊಂಡು ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸರ್ಕಾರದ ರಕ್ಷಣೆಯನ್ನು ಪಡೆದುಕೊಂಡ ಹೊರತು, ಬೇರೆ ಪದದಲ್ಲಿ ಹೇಳುವುದಾದರೆ ಮೀಸಲಾತಿ ಪಡೆಯದ ಹೊರತು ತಮ್ಮ ಈ ಸ್ಥಿತಿ ಕೊನೆಗೊಳ್ಳುವುದಿಲ್ಲ ಎಂದು ಈಗ ಅವರು ನಂಬಿದ್ದಾರೆ. ಆದ್ದರಿಂದಲೇ ಈಗ ಅವರು ತಮ್ಮ ಸಾಮಾಜಿಕ ಪ್ರಾಮುಖ್ಯತೆಯಿಂದ ಕೆಳಗಿಳಿದಾದರೂ ಸಹ ಇತರ ಹಿಂದುಳಿದ ಜಾತಿಗಳಲ್ಲಿ ಸೇರಿಕೊಳ್ಳಲು ಇಚ್ಛಿಸುತ್ತಾರೆ. ಇದೊಂದು ರೀತಿಯ ವ್ಯಂಗ್ಯ. 1905ರಲ್ಲಿ ಜಾಟರು ಒಂದು ಮಹಾಸಭಾವನ್ನು ಸ್ಥಾಪಿಸಿಕೊಂಡು ಕ್ಷತ್ರಿಯರ ಅಂತಸ್ತನ್ನು ಬ್ರಿಟಿಷ್ ಜನಸಂಖ್ಯಾ ಗಣಕಕಾರರಿಂದ ಒತ್ತಾಯಿಸಿದ್ದರು.

ಜಾಟರು ಮೀಸಲಾತಿಗೆ ಅರ್ಹರೆ ಎಂಬುದು ಮುಖ್ಯವಲ್ಲ. ನಿಜಸ್ಥಿತಿಯೆಂದರೆ ಜಾಟರು ಹೆಚ್ಚು ಕಡಿಮೆ ಉನ್ನತ ಶಿಕ್ಷಣದಿಂದ ಹೊರಗಿಡಲ್ಪಟ್ಟಿದ್ದಾರೆ. ಅದೇ ಕಾರಣವಾಗಿ ಸರ್ಕಾರಿ ಸೇವೆಗಳ ಮತ್ತು ಇತರ ಉದ್ಯೋಗಗಳಿಂದ ಅವರು ಹೊರಗಿದ್ದಾರೆ ಅಥವಾ ಕಡಿಮೆ ಇದ್ದಾರೆ. ಜಾಟರು ಇತರ ಹಿಂದುಳಿದ ಜಾತಿಗಳ ಗುಂಪಿಗೆ ಸೇರಲು ಅರ್ಹರೆ ಅಥವಾ ಇಲ್ಲವೇ ಎಂಬುದನ್ನು ವಾದಿಸುವುದರಲ್ಲಿ ಉಪಯೋಗವಿಲ್ಲ. ಹಾಗೆಯೇ ಜಾಟರು ತಾವು ಇರುವ ಸ್ಥಳಗಳಲ್ಲಿ ಒಂದು ಬಲಿಷ್ಠ ಸಾಮಾಜಿಕ ಗುಂಪಾಗಿದ್ದು ಅಫರ್ಮೆಟಿಕ್ ಆಕ್ಷನ್ ಒಳಗೆ ಬರಲು ಅರ್ಹರಲ್ಲ ಎಂದು ವಾದಿಸುವುದೂ ಸಹ ನಿಷ್ಪ್ರಯೋಜಕ. ಈ ಜನಾಂಗ ಮತ್ತು ಇತರೆ ಹಿಂದುಳಿದ ಜಾತಿಗಳು ಸಾಮಾನ್ಯವಾಗಿ ವ್ಯವಸಾಯ ಮತ್ತು ಪಶುಸಂಗೋಪನೆ ಜೊತೆಯಲ್ಲಿ ತಳಕು ಹಾಕಿಕೊಡಿರುವ ಒಂದು ಸಾಮಾಜಿಕ ವರ್ಗವಾಗಿದೆ. ಅವರು ಬಹಳ ಕಷ್ಟಪಟ್ಟು ದುಡಿಯುತ್ತಾರಾದರೂ ಇತರ ಹಿಂದುಳಿದ ಜಾತಿಗಳಂತೆ ಆಧುನಿಕತೆಯನ್ನು ಹತ್ತಿಕ್ಕುವ ಪ್ರವೃತ್ತಿಯುಳ್ಳವರಾಗಿದ್ದಾರೆ. ಆದರೂ ಈ ರೀತಿಯ ಪ್ರವೃತ್ತಿಗೆ ಅವರನ್ನು ದೂರುವ ಅವಶ್ಯಕತೆಯಿಲ್ಲ. ಅವರ ಚರಿತ್ರೆಯ ವಿವಿಧ ಘಟ್ಟಗಳಲ್ಲಿ ವ್ಯವಸಾಯ ಮತ್ತು ಪಶುಸಂಗೋಪನೆ ಅವಲಂಭಿತ ಸಾಮಾಜಿಕ ವರ್ಗಗಳು ಆಧುನಿಕತೆಯನ್ನು ಪ್ರತಿರೋಧಿಸಿದ್ದುಂಟು ಆಧುನಿಕ ಶಿಕ್ಷಣ ಆಧುನಿಕತೆಯ ಕಡೆಗೆ ಕೊಂಡೊಯ್ಯುವ ವಾಹನ. ಆಧುನಿಕತೆ ಕೇವಲ ಜೀವನ ಶೈಲಿ ಅಥವಾ ವೇಷಭೂಷಣಕ್ಕೆ ಸಂಬಂಧಿಸಿದುದಲ್ಲ.

ಉತ್ತರ ಭಾರತದಲ್ಲಿ 60ರ ಕೊನೆಯಲ್ಲಿ ನಡೆದ ಇಂಗ್ಲೀಷ್ ವಿರೋಧಿ ಚಳವಳಿ ಒ.ಬಿ.ಸಿ.ಗಳು ನಡೆಸಿದ ಅತಿ ಯಶಸ್ವಿ ಚಳುವಳಿಯಾಗಿತ್ತು. ಆ ಕಾರಣವಾಗಿ ಇಂಗ್ಲೀಷ್‌ನ್ನು ಶಾಲೆಗಳಲ್ಲಿ ಕಡ್ಡಾಯ ವಿಷಯವಾಗಿ ಕೈಬಿಡಲಾಯಿತು.

ಒಬ್ಬ ದಲಿತನ ಜತೆ ಇಂಗ್ಲೀಷ್‌ನ ಹೆಗ್ಗಳಿಕೆಯ ಬಗ್ಗೆ ವಾದಿಸಿ. ಅವನು ನಿಮ್ಮ ವಾದವನ್ನು ಒಪ್ಪಿಕೊಳ್ಳುತ್ತಾನೆ. ಅವನೊಡನೆ ಹೇಗೆ ಸ್ಥಳೀಯ ಭಾಷೆಗಳು ಪ್ರಗತಿಗೆ ಮಾರಕವಾಗಿವೆ ಎಂಬುದನ್ನು ಹೇಳಿ. ನಿಮ್ಮ ಹೇಳಿಕೆಯನ್ನು ಒಪ್ಪುವುದಕ್ಕೆ ಅವನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಒಬ್ಬ ಒ.ಬಿ.ಸಿ ಇಂಗ್ಲೀಷ್ ಭಾಷೆಯ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ವರ್ಷಗಳನ್ನು ತೆಗೆದುಕೊಳ್ಳಬಹುದು. ಮಣ್ಣು ಮತ್ತು ಗೋವಿನ ಜೊತೆ ಗಟ್ಟಿ ಸಂಬಂಧ ಹೊಂದಿರುವ ಈ ಜನ ತಮ್ಮ ಸ್ಥಳೀಯ ಭಾಷೆಗಳಿಂದ ಬಿಡುಗಡೆಗೊಳ್ಳುವ ಕೊನೆಯ ಸಾಮಾಜಿಕ ವರ್ಗ.

ಉತ್ತರ ಭಾರತದ ಯಾವುದೇ ಹಳ್ಳಿಗೆ ಹೋಗಿ ಜಾಟರ ಮತ್ತು ಇತರೆ ಹಿಂದುಳಿದ ಜಾತಿಗಳವರ ಮನೆಗಳಿಗೆ ಬೇಟಿ ನೀಡಿ. ಇವರಲ್ಲಿಯ ಕುಶಲಕರ್ಮಿಗಳ ಮನೆಗಳನ್ನು ಬಿಟ್ಟರೆ ಹೆಚ್ಚು ಮನೆಗಳಲ್ಲಿ ಆ ಕುಟುಂಬದ ಸದಸ್ಯರಿಗಿಂತ ಹೆಚ್ಚು ಜಾನುವಾರುಗಳೇ ಇರುತ್ತವೆ. ದೇಶದ ಇತರ ಭಾಗಗಳಲ್ಲಿಯೂ ಇದೇ ಪರಿಸ್ಥಿತಿ ಇರುವುದು ಖಂಡಿತ. ಅನೇಕ ಸ್ಥಳಗಳಲ್ಲಿ ಕುಟುಂಬರ ಸದಸ್ಯರು ಈ ಜಾನುವಾರುಗಳ ಮಧ್ಯೆಯೇ ವಾಸಿಸುತ್ತಾರೆ.

ಯಾವ ಸಾಮಾಜಿಕ ವರ್ಗ ಈ ಪಶುಗಳ ಧ್ವನಿ ಕೇಳದೆಯೆ ರಾತ್ರಿಕಳೆಯಲಾರದೊ ಅಂತಹ ಸಾಮಾಜಿಕ ವರ್ಗ ಯಾವ ಶೈಲಿಯ ಜೀವನವನ್ನು ಬೆಳೆಸಬಲ್ಲದು! ಎಲ್ಲಿ ಸ್ವಚ್ಚತೆಯ ಗಂಧ ಗಾಳಿಯೂ ಇಲ್ಲವೊ ಅಂತಹ ಸ್ಥಳದಲ್ಲಿ ವಾಸಿಸುವ ಸಾಮಾಜಿಕ ವರ್ಗ ಎಂತಹ ಶೈಕ್ಷಣಿಕ ಪರಿಸರವನ್ನು ಪಡೆಯಬಲ್ಲುದು.

ಈಗ ದಲಿತರ ಮತ್ತು ಇತರ ಹಿಂದುಳಿದ ಜಾತಿಗಳ ಜೀವನ ಶೈಲಿಯನ್ನೊಮ್ಮೆ ಹೋಲಿಸಿ ನೋಡೋಣ. ಒಂದೇ ತರಹದ ಆರ್ಥಿಕ ತಳಹದಿಯ ಮೇಲಿರುವ ದಲಿತ ಕುಟುಂಬ ಒ.ಬಿ.ಸಿ ಗಿಂತ ಹೆಚ್ಚು ಆದಾಯವನ್ನು ಶಿಕ್ಷಣಕ್ಕೆ ಖರ್ಚು ಮಾಡುತ್ತದೆ. ಇತರೆ ಹಿಂದುಳಿದ ಜಾತಿಗಳು ತಮ್ಮ ಹೆಣ್ಣು ಮಕ್ಕಳನ್ನು ಹೈಸ್ಕೂಲ್ ನಂತರ ಮದುವೆ ಮಾಡಿಬಿಡುವ ಎಷ್ಟೋ ಉದಾಹರಣೆಗಳನ್ನು ನೋಡಬಹುದು. ಆದರೆ ದಲಿತರು ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಲು ಅವರು ಕಾಲೇಜಿನ ಡಿಗ್ರಿ ಪಡೆಯುವವರೆಗೆ ಕಾಯುತ್ತಾರೆ. ಪಟ್ಟಣಗಳಿಗೆ ಹೊಲಸೆ ಹೋಗುವುದು ಮತ್ತೊಂದು ಪ್ರಮುಖ ಅಂಶ. ತನ್ನ ಹಳ್ಳಿಯಲ್ಲಿ ಯಾವುದೂ ಭೂಮಿ, ಮನೆ ಅಥವಾ ದನಕರುಗಳನ್ನು ಹೊಂದಿಲ್ಲದ ದಲಿತ ಯುವಕ ಪಟ್ಟಣಕ್ಕೆ ಹೊಲಸೆ ಹೋಗುವುದು ಹೆಚ್ಚು ಸಂಭವ. ಆದರೆ ಇತರೆ ಹಿಂದುಳಿದ ಜಾತಿಗಳ ವ್ಯಕ್ತಿ ಹಾಗೆ ಮಾಡುವುದು ಅಸಂಭವ. ಅವನಿಗೆ ನೋಡಿಕೊಳ್ಳಲು ಅವನ ಭೂಮಿ ಮತ್ತು ದನಕರುಗಳಿರುತ್ತವೆ. ನನ್ನ ಒಂದು ಲೆಕ್ಕದ ಪ್ರಕಾರ 2050 ರ ವೇಳೆಗೆ ದಲಿತರು ಹಳ್ಳಿಗಳಲ್ಲಿ ಸಿಗುವುದು ಬಹಳ ಅಪರೂಪ. ಹಳ್ಳಿಗಳು ಹೆಚ್ಚು ಕಡಿಮೆ ಸಂಪೂರ್ಣವಾಗಿ ಇತರ ಹಿಂದುಳಿದ ಜಾತಿಗಳ ನಾಡಾಗುತ್ತವೆ. ಅವರು ಅವರ ಮುಂದಿನ ಪೀಳಿಗೆಗಳು ಇಂಡಿಯಾ ದೇಶದ ಪ್ರಗತಿಯನ್ನು ದೂರದಿಂದ ನೋಡುತ್ತಾ ಇಂದು ಜಾಟರು ಹೇಗೆ ಬಲಿಪಶುಗಳಾದಂತೆ ತವಕ ಪಡುತ್ತಿರುವರೋ ಹಾಗೆಯೇ ಅವರೂ ಸಹ ಆ ಪಾತ್ರ ವಹಿಸುತ್ತಾರೆ. ಇದು ಸಮಾಜದಲ್ಲಿ ತೀವ್ರ ಅಶಾಂತಿ ಮತ್ತು ದಂಗೆಯನ್ನು ಉಂಟುಮಾಡಬಹುದು ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವುದು?

ಇದಕ್ಕೆ ಒಂದೇ ಒಂದು ಉತ್ತರವಿದೆ. ನಾವು ಈಗಲೇ ಇತರೆ ಹಿಂದುಳಿದ ಜಾತಿಗಳಲ್ಲಿ ಒಂದು ಬಂಡುಕೋರ ವರ್ಗವನ್ನು ಹುಟ್ಟು ಹಾಕುವುದಕ್ಕೆ ಎಲ್ಲಾ ಪ್ರಯತ್ನ ಮಾಡಬೇಕು. ಈ ವರ್ಗ ತಮ್ಮೆಲ್ಲ ಇಚ್ಛೆಗಳಲ್ಲಿ, ಇಂಗಿತಗಳಲ್ಲಿ, ನಡತೆಯಲ್ಲಿ ಮತ್ತು ಬುದ್ಧಿಮತ್ತೆಯಲ್ಲಿ ದಲಿತರಂತಿರಬೇಕು. ಆ ವರ್ಗ ತಮ್ಮ ಸಮೂದಾಯವನ್ನು ಪ್ರೇರೇಪಿಸಬೇಕು ಮತ್ತು ಅವರು ಭಾರತದ ನಗರ ಬದುಕಿನ ಮುಖ್ಯ ವಾಹಿನಿಯನ್ನು ಸೇರುವಂತೆ ಮಾಡಬೇಕು. ಬೇರೆ ಭಾಷೆಯಲ್ಲಿ ಹೇಳುವುದಾದರೆ ಭಾರತದ

ಒಳಗಿನಿಂದಲೇ ಬಂಡುಕೋರರನ್ನು ಸೃಷ್ಟಿಸಿ

ಇತರ ಹಿಂದುಳಿದ ಜಾತಿಗಳ ಅಭ್ಯುದಯ

ಇತರ ಹಿಂದುಳಿದ ಜಾತಿಗಳ ಮಧ್ಯೆ ಹಲವು ಬಂಡುಕೋರರನ್ನು ದೇಶ ಸೃಷ್ಟಿಸಬೇಕು. ಅವರು ತಮ್ಮ ಸಮೂದಾಯದಲ್ಲಿ ಒಂದು ಪುನರುಜ್ಜೀವನವನ್ನು ಉಂಟುಮಾಡಬೇಕು. ಇಲ್ಲದಿದ್ದಲ್ಲಿ ಭಾರತದ ಪ್ರಜಾಪ್ರಭುತ್ವ ಅಪಾಯದಲ್ಲಿರುತ್ತದೆ.

* * * * * *

ಹಿಂದಿನ ಬರಹದಲ್ಲಿ ಹೇಳಿರುವಂತೆ ಪ್ರಪಂಚದಾದ್ಯಂತ ವ್ಯವಸಾಯ ಮತ್ತು ಪಶುಸಂಗೋಪನೆ ಅವಲಂಭಿತ ಸಾಮಾಜಿಕ ವರ್ಗಗಳು ಸುಧಾರಣೆಗೊಳ್ಳುವುದು ಮತ್ತು ಬದಲಾಗುವುದು ಎಲ್ಲರಿಗಿಂತ ಕೊನೆಯಲ್ಲಿ. ಭಾರತದ ಇತರೆ ಹಿಂದುಳಿದ ಜಾತಿಗಳು ಇದರಿಂದ ಹೊರತೇನಲ್ಲ. ಆದುದರಿಂದ ನಾವು ಅವರನ್ನು ಹೆಚ್ಚು ಅನುಕಂಪದಿಂದ ನೋಡಬೇಕು.

ಓ.ಬಿ.ಸಿಗಳ ಮೇಲೆ ಯಾವುದೇ ಹೊರ ಒತ್ತಡ ಹೇರುವುದರಿಂದ ಪ್ರಯೋಜನವಿಲ್ಲ. ಆದುದರಿಂದ ಆ ಸಮೂದಾಯದ ಒಳಗೇ ಬಂಡಾಯಗಾರರನ್ನು ಸೃಷ್ಟಿಸಬೇಕು ಎಂದು ನಾನು ಹಿಂದೆಯೇ ಹೇಳಿದ್ದೇನೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಓ.ಬಿ.ಸಿಗಳ ಅಭ್ಯುದಯವನ್ನು ನಾವು ನಮ್ಮ ಕೈಯಿಂದಲೇ ತಯಾರುಮಾಡಬೇಕು. ಈ ಅಭ್ಯುದಯ ಉಂಟಾಗುವಂತೆ ಮಾಡುವವರು ಆ ಜನಾಂಗದ ಪಾರಂಪರಿಕ ನಂಬಿಕೆಗಳು, ಜೀವನ ರೀತಿ ಇವುಗಳಲ್ಲಿ ನಂಬಿಕೆಯಿಡದ ಅದೇ ಜನಾಂಗದ ಗುಂಪುಗಳು. ಅವರಿಗೆ ಬೇರೆ ದೇಶಗಳ ಚರಿತ್ರೆಯನ್ನು ನಾವು ಕಲಿಸಬೇಕಾಗುತ್ತದೆ.

ಇಂದು ಕೇವಲ ಶೇಖಡ 1.4ರಷ್ಟು ಬ್ರಿಟಿಷ್ ಜನಸಂಖ್ಯೆ ವ್ಯವಸಾಯದಲ್ಲಿ ತೊಡಗಿದೆ. 16ನೇ ಶತಮಾನದಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿತವಾದಾಗ ಇಂಡಿಯಾದಂತೆ ಅಲ್ಲಿಯೂ ಹೆಚ್ಚು ಜನರು ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ಅವಲಂಬಿಸಿದ್ದರು. ಕೈಗಾರಿಕಾ ಕ್ರಾಂತಿ ಮತ್ತು ನಗರೀಕರಣಕ್ಕೆ ತಾಯ್ನಾಡು ಬ್ರಿಟನ್. ಅಭಿವೃದ್ಧಿ ಹೊಂದಿದ ದೇಶಗಳಿಗೆಲ್ಲ ಬ್ರಿಟನ್ ಮಾದರಿ.

ಭಾರತ ಸಹ ಪ್ರಪಂಚದ ಇತರೆ ಅಭಿವೃದ್ಧಿ ಹೊಂದಿದ ದೇಶಗಳಂತೆ ತಾನೂ ಈ ಶತಮಾನದಲ್ಲಾದರೂ ಅಭಿವೃದ್ಧಿ ಹೊಂದಿದ ದೇಶವಾಗಬೇಕಾದರೆ, ಅದು ಸಹ ಕೈಗಾರೀಕರಣ ಮತ್ತು ನಗರೀಕರಣಕ್ಕೊಳಪಡಬೇಕು. ಆಗ ವ್ಯವಸಾಯ ಸಹ ಒಂದು ಕೈಗಾರಿಕೆಯಾಗಿ ಮಾರ್ಪಡುತ್ತದೆ ಮತ್ತು ಕಡಿಮೆ ಜನರು ವ್ಯವಸಾಯ ಮಾಡಿ ಬದುಕುತ್ತಾರೆ. ದವಸದಾನ್ಯಗಳು, ಹಣ್ಣು ತರಕಾರಿಗಳು, ಹಾಲು ಮತ್ತು ಅದರ ಉತ್ಪನ್ನಗಳು, ಮತ್ತು ಮಾಂಸ ಇವುಗಳ ಉತ್ಪತ್ತಿಯಲ್ಲಿ ಯಂತ್ರಗಳನ್ನು ಬಳಸಲಾಗುತ್ತದೆ. ಮುಂದಿನ ಕೆಲವು ದಶಕಗಳಲ್ಲಿ ತಮ್ಮ ಮುಂದೆ ತೆರೆದುಕೊಳ್ಳಬಹುದಾದ ಅವಶ್ಯಕತೆಗಳನ್ನು ಓ.ಬಿ.ಸಿಗಳು ಉಪಯೋಗಿಸಿಕೊಳ್ಳಬಹುದಾದ ಬಗೆಯನ್ನು ಯೋಜಿಸದಿದ್ದರೆ ಅವರ ಭವಿಷ್ಯ ಒಂದು ಸವಾಲಾಗಿ ಮಾರ್ಪಡುತ್ತದೆ ಮತ್ತು ಅವುಗಳನ್ನು ಪರಿಹರಿಸುವುದರಲ್ಲಿ ಸೋತರೆ ನಮ್ಮ ದೇಶದ ಪ್ರಜಾಪ್ರಭುತ್ವ ಮತ್ತು ಶಾಂತಿ ಅದರಿಂದ ದಕ್ಕೆಗೊಳಗಾಗಬಹುದು. ಇತ್ತೀಚಿನ ಜಾಟರ ಚಳವಳಿ ಮುಂದೆ ಆಗಬಹುದಾದ ಅನಾಹುತಕ್ಕೊಂದು ನಿದರ್ಶನ.

ಭಾರತ ಕೈಗಾರೀಕರಣ, ನಗರೀಕರಣ ಹೊಂದಿದ, ಜಾತಿಪಕ್ಷಪಾತಿಯಲ್ಲದ ಸಮಾಜವಾಗಿ, ಶಾಂತಿಯುತವಾಗಿ ಮಾರ್ಪಾಡಾಗಬೇಕಾದರೆ ಓ.ಬಿ.ಸಿಗಳ ಅಭ್ಯುದಯವನ್ನು ಉಂಟುಮಾಡುವುದು ಅತ್ಯವಶ್ಯಕ. ಮೊದಲೇ ಹೇಳಿದಂತೆ ಇದು ಆ ಸಮಾಜದ ಒಳಗಿನಿಂದಲೇ ಹುಟ್ಟಬೇಕು ಮತ್ತು ಅವರು ದಲಿತರಂತೆ ಯೋಚಿಸಿ, ದಲಿತರಂತೆ ನಡವಳಿಕೆ ಹೊಂದಿ, ದಲಿತರಂತೆ ಉಡುಗೆ ತೊಡುಗೆ ಧರಿಸುವುದನ್ನು ಕಲಿಯಬೇಕು. ಈ ಬದಲಾವಣೆ ಅತಿ ಮುಖ್ಯವಾದದ್ದು.

ಓ.ಬಿ.ಸಿ ಯುವಕರು ವ್ಯವಸಾಯ, ಪಶುಸಂಗೋಪನೆ ಮತ್ತು ಹಳ್ಳಿ ಜೀವನದ ಬಗ್ಗೆ ತಿರಸ್ಕಾರ ಹೊಂದಬೇಕು. ತಮ್ಮ ಅಂತಿಮ ಗುರಿ ಇಡೀ ಭಾರತ ಎಂದು ಅವರು ತಿಳಿಯುವಂತೆ ಅವರಿಗೆ ತರಬೇತಿ ನೀಡಬೇಕಾಗುತ್ತದೆ. ಈಗ ಅವರು ಒಂದು ಚಿಕ್ಕ ಚಿತ್ರವನ್ನು ಕಾಣುತ್ತಿದ್ದಾರೆ. ಅದು ಅವರ ವಾಸಸ್ಥಳದ ಚಿತ್ರ. ಆದರೆ ಓ.ಬಿ.ಸಿಗಳ ಈ ವರ್ಗವನ್ನು ಭವಿಷ್ಯಕ್ಕೆ ತಯಾರುಮಾಡುವುದು ಹೇಗೆ? ಅದೇನು ಅಷ್ಟು ಕಷ್ಟವಿಲ್ಲ.

ಕೇಂದ್ರ ಸರ್ಕಾರ ನಡೆಸುತ್ತಿರುವ ನವೋದಯ ಶಾಲೆಗಳು ವಸಾಹತುಶಾಹಿ ನಂತರದ ಭಾರತದಲ್ಲಿ ನಾವು ಸ್ಥಾಪಿಸಿರುವ ಅತ್ಯುತ್ತಮ ಸಂಸ್ಥೆಗಳಲ್ಲೊಂದಾಗಿವೆ. ಈ ಶಾಲೆಗಳಿಗೆ ಮಕ್ಕಳನ್ನು ಒಂದು ಬರಹದ ಪರೀಕ್ಷೆಯ ನಂತರ ಆರಿಸಿ 6ನೇ ತರಗತಿಗೆ ಸೇರಿಸಿಕೊಳ್ಳಲಾಗುವುದು. ಅವರು ಅಲ್ಲಿ 12ನೇ ತರಗತಿಯವರೆಗೆ ಓದುವರು. ಮಕ್ಕಳು ಮತ್ತು ಉಪಧ್ಯಾಯರುಗಳು ಒಂದೇ ಸಂಕೀರ್ಣದಲ್ಲಿ ವಾಸಿಸುತ್ತಾರೆ. ಊಟದಿಂದ ಟೂತ್‌ಪೇಸ್ಟ್‌ವರೆಗೆ ಪ್ರತಿಯೊಂದನ್ನೂ ಉಚಿತವಾಗಿ ನೀಡಲಾಗುತ್ತಿದೆ. ಈ ನವೋದಯ ಶಾಲೆಗಳಿಂದ ಪಾಸಾಗಿ ಹೊರಬಂದ ಅನೇಕ ವಿದ್ಯಾರ್ಥಿಗಳು ಒಳ್ಳೆಯ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಆಯ್ಕೆಯಾಗುತ್ತಾರೆ. ದುರಾದೃಷ್ಟವಶಾತ್ ದೇಶದಲ್ಲಿ ಅಂತಹ ಶಾಲೆಗಳ ಸಂಖ್ಯೆ ಕಡಿಮೆ.

ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಅಂತಹ ಅನೇಕ ಶಾಲೆಗಳನ್ನು ತೆರೆದು ಓ.ಬಿ.ಸಿ ಕುಟುಂಬಗಳು ತಮ್ಮ ಮಕ್ಕಳನ್ನು ಆ ಶಾಲೆಗಳಿಗೆ ಕಳುಹಿಸುವಂತೆ ನೋಡಿಕೊಳ್ಳಬೇಕು. ದೇಶದುದ್ದಕ್ಕೂ ಅಂತಹ ಶಾಲೆಗಳನ್ನು ತೆರೆಯಲು ಹಣಕಾಸು ಎಲ್ಲಿ ಒದಗುತ್ತದೆ ಎಂಬುದು ಪ್ರಶ್ನೆಯಾದರೆ, ಅದನ್ನು ಪರಿಹರಿಸುವುದು ಬಹಳ ಸುಲಭ. ಈಗ ನೀಡುತ್ತಿರುವ ಮದ್ಯಾಹ್ನದ ಊಟದ ಯೋಜನೆಯನ್ನು ಕೈಬಿಡಿ. ಅದು ದೇಶದ ನಿರ್ಲಕ್ಷಿತರ ಮೇಲೆ ಹಾಕಿದ ಹಿರೋಶಿಮ ಬಾಂಬ್ ಇದರಿಂದ ಉಳಿತಾಯವಾದ ಹಣದಿಂದ ಸರ್ಕಾರ ಪ್ರತಿ ವರ್ಷ ಲಕ್ಷ ನವೋದಯ ಶಾಲೆಗಳನ್ನು ತೆರೆಯಬಹುದು. ಓ.ಬಿ.ಸಿ ತಂದೆ ತಾಯಿಗಳನ್ನು ಅವರ ಮಕ್ಕಳನ್ನು ಇಂತಹ ಶಾಲೆಗಳಿಗೆ ಸೇರಿಸುವಂತೆ ಮಾಡುವುದಕ್ಕಾಗಿ ಸ್ವಲ್ಪ ಲಂಚವನ್ನು ನೀಡಬೇಕಾಗಬಹುದು.

ಆದರೆ ಇದು ಸುಲಭದ ಕೆಲಸವಲ್ಲ. ಅವರಿಗೆ ಲಂಚಕೊಡುವುದು ಬಹಳ ಕಷ್ಟಕರ. ಏಕೆಂದರೆ ಅವರಲ್ಲಿಯೆ ಬಹಳ ಹಣವಿದೆ. ಅವರಿಗೆ ಬೇಕಾಗಿರುವುದು ಗನ್ ಲೈಸನ್ಸ್‌ಗಳು, ಪೊಲೀಸ್ ಕೆಲಸಗಳು ಮತ್ತು ವಿದ್ಯುತ್, ಟ್ರ್ಯಾಕ್ಟರ್, ಬೀಜ, ಗೊಬ್ಬರ ಮತ್ತು ಕೀಟನಾಶಕಗಳಿಗೆ ಸಹಾಯಧನ. ಇವುಗಳನ್ನು ನೀಡಬಹುದು. ಎಷ್ಟೇ ಆದರೂ ಇದು ದೇಶದ ಒಳಿತಿಗಾಗಿ, ಪ್ರಜಾಪ್ರಭುತ್ವದ ಉಳಿವಿಗಾಗಿ, ದೇಶದ ಕೈಗಾರೀಕರಣಕ್ಕಾಗಿ ಮಾಡಬೇಕಾದದ್ದು. ಆದರೆ ಇದನ್ನು ಒಂದು ಷರತ್ತಿನ ಮೇಲೆ ನೀಡಬೇಕು. ಆ ಕುಟುಂಬಗಳು ತಮ್ಮ ಮಕ್ಕಳನ್ನು ನವೋದಯ ಶಾಲೆಗೆ ಸೇರಿಸಬೇಕೆಂಬುದು ಆ ಷರತ್ತು.

ಮತ್ತೊಂದು ದಾರಿ ಎಂದರೆ ದೇಶದಲ್ಲಿ ಈಗಾಗಲೇ ನವೋದಯ ಶಾಲೆಗಳ ಮಾದರಿಯಲ್ಲೇ ನಡೆಸುತ್ತಿರುವ ಅನೇಕ ಶಾಲೆಗಳಿದ್ದು ಸರ್ಕಾರ ಓ.ಬಿ.ಸಿ ಕುಟುಂಬದಿಂದ ಬಂದ ಮಕ್ಕಳು ಅಂತಹ ಶಾಲೆಗಳಲ್ಲಿ ಓದುವಂತೆ ನೋಡಿಕೊಳ್ಳಬೇಕು. ಸರ್ಕಾರ ಖಾಸಗಿ ವಲಯದ ಜೊತೆ ಒಪ್ಪಂದ ಮಾಡಿಕೊಂಡು ಅಂತಹ ಶಾಲೆಗಳು ಹೆಚ್ಚು ತೆರೆಯುವಂತೆ ಮಾಡಬೇಕು ಮತ್ತು ಆ ಶಾಲೆಗಳು ಈ ವರ್ಗದಿಂದ ಬಂದ ಮಕ್ಕಳಿಗೆ ಶಿಕ್ಷಣ ನೀಡಬೇಕು.

ಉನ್ನತ ಶಿಕ್ಷಣ ಕೇಂದ್ರಗಳಾದ ಐ.ಐ.ಟಿಗಳು, ಐ.ಐ.ಎಮ್‌ಗಳು, ಜವಹರ್‌ಲಾಲ್ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ ಮುಂತಾದವುಗಳಲ್ಲಿ ಓ.ಬಿ.ಸಿ ವರ್ಗದಿಂದ ಬಂದ ಬುದ್ಧಿವಂತರನ್ನು, ವಿದ್ಯಾರ್ಥಿಗಳು, ಶಿಕ್ಷಕರು, ಗುಮಾಸ್ತರು, ವಾಹನ ಚಾಲಕ್ಕರು, ತೋಟದ ಮಾಲಿ ಮುಂತಾದವರಾಗಿ ಒಂದು ಷರತ್ತಿನ ಮೇಲೆ ಸೇರಿಸಿಕೊಳ್ಳಬೇಕು. ಅವರ ತಮ್ಮ ಕುಟುಂಬಗಳೊಡನೆ ಅಂತಹ ಸಂಸ್ಥೆಗಳೊಳಗೇ ನೆಲಸಬೇಕು ಎಂಬುದು ಆ ಷರತ್ತು.

ಓ.ಬಿ.ಸಿ ವಿದ್ಯಾರ್ಥಿಗಳು ಅವರದೇ ಸಂಘ ಮಾಡಿಕೊಳ್ಳಲು ಪ್ರೋತ್ಸಾಹಿಸಬೇಕು ಮತ್ತು ಅವರಲ್ಲಿ ಕೆಲವರನ್ನು ಆರಿಸಿ ಹೊರದೇಶಗಳಿಗೆ ಪ್ರವಾಸ ಕಳುಹಿಸಬೇಕು. ಇದರಿಂದ ಅವರು ಒಂದು ಭಿನ್ನವಾದ ಪರಿಸರದ ಪರಿಚಯ ಹೊಂದುತ್ತಾರೆ.

* ಓ.ಬಿ.ಸಿ ಕುಟುಂಬಗಳು ತಮ್ಮ ಮಕ್ಕಳಿಗೆ ಇಂಗ್ಲೀಷ್ ಕಲಿಕೆಯನ್ನು ಆರಿಸಿಕೊಂಡಿರುವುದರಿಂದ ಅವರಿಗೆ ಹಣ ನೀಡಬೇಕು.

* ಅಂತಹ ಕುಟುಂಬಗಳಿಗೆ ಉಚಿತವಾಗಿ ಕೇಬಲ್ ಟಿ.ವಿ ಸಂಪರ್ಕ ಅಥವಾ ಮನೆಗೆ ಟಿ.ವಿ ನೇರ ಸಂಪರ್ಕ (ಡಿ.ಟಿ.ಹೆಚ್) ಇವುಗಳನ್ನು ಕಲ್ಪಿಸಬೇಕು. ಇದರಿಂದ ಅವರು ಎಂಟಿ.ವಿ, ಟ್ರಾವೆಲ್ ಅಂಡ್ ಲಿವಿಂಗ್, ಎನ್.ಡಿ ಟಿ.ವಿ, ಗುಡ್ ಟೈಮ್ಸ್ ಮತ್ತು ಡಿಸ್ಕವರಿ ಚಾನೆಲ್‌ಗಳನ್ನು ನೋಡಲು ಸಾಧ್ಯವಾಗುತ್ತದೆ. ಅವರ ಜೀವನ ಶೈಲಿಯಲ್ಲಿ ಬದವಾಣೆ ತರಲು ಇದೆಲ್ಲಾ ಮಾರ್ಗಗಳು ಸಾಧ್ಯವಿವೆ. □

ಓ.ಬಿ.ಸಿಗಳನ್ನು ಸರಿದಾರಿಗೆ ತರದಿದ್ದಲ್ಲಿ ದೇಶದ ಭವಿಷ್ಯ ಕಳಾಹೀನವಾಗುತ್ತದೆ.

ಬುದ್ಧಾಯಣ

೬೮

ಆತ ಹೀಗೆ ರಾಜನಾದ?!

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸ್ರಾವಸ್ಥಿಯ ಜೇತ ವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಕಾಶಿಯ ಒಂದು ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ದೊಡ್ಡ ವರಾದ ಮೇಲೆ ವಿದ್ಯೆ ಕಲಿತು ಪಂಡಿತರಾದರು. ಎಲ್ಲರೂ ದುಃಖದಲ್ಲಿ ಮುಳುಗಿರುವಾಗ ನಾನು ಸಂಸಾರಿಕ ಜೀವನದಲ್ಲಿ ಸುಖ ಪಡಲು ಹೇಗೆ ಸಾಧ್ಯ ಎಂಬ ಜಿಜ್ಞಾಸೆಯು ಅವರಲ್ಲಿ ಮೊಳೆಯಿತು. ಅದರ ಪ್ರತಿಫಲವಾಗಿ ಅವರು ಗೃಹತ್ಯಾಗ ಮಾಡಿ ಭಿಕ್ಷುವಾದರು.

ಹೀಗಿರಲು ಒಮ್ಮೆ ಬೋಧಿಸತ್ವರು ಭಿಕ್ಷಾಟನೆಗಾಗಿ ವಾರಾಣಸಿ ನಗರವನ್ನು ಪ್ರವೇಶಿಸಿದರು. ಅದೇ ನಗರದ ಒಂದು ಬೀದಿಯಲ್ಲಿ ರಾಜನ ಅರಮನೆಯಲ್ಲಿ ಆನೆಗಳನ್ನೆಲ್ಲ ನೋಡಿಕೊಳ್ಳುವ ಒಬ್ಬ ಮುಖ್ಯ ಮಾವುತನಿದ್ದ. ಆತ ಒಳ್ಳೆಯವನಾಗಿದ್ದ. ಪೂರ್ವ ಜನ್ಮದಲ್ಲಿ ತನ್ನ ಕುಶಲ ಕರ್ಮದ ಫಲವಾಗಿ ಅಪಾರ ಪುಣ್ಯವನ್ನು ಗಳಿಸಿದವನಾಗಿದ್ದ. ಆತ ಈ ಜನ್ಮದಲ್ಲಿ ಕೂಡ ಜನಪ್ರಿಯನು ಮತ್ತು ಧರ್ಮವಂತನೂ ಆಗಿದ್ದ. ಆತನನ್ನು ಗಜಾಚಾರ್ಯನೆಂದು ಕರೆಯಲಾಗುತ್ತಿತ್ತು .

ಅಂತಹ ಗಜಾಚಾರ್ಯನು ಭಿಕ್ಷೆಗೆ ಬಂದಿದ್ದ ಬೋಧಿಸತ್ವರ ಸಚ್ಚಾರಿತ್ರ್ಯಕ್ಕೆ ಮನಸೋತು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಭಿಕ್ಷೆ ನೀಡಿ ಸತ್ಕರಿಸಿದರು. ಅವರಿಗಾಗಿ ಒಂದು ಕುಟೀರವನ್ನು ನಿರ್ಮಿಸಿ ಕೊಟ್ಟು ಕೆಲ ಕಾಲ ತನ್ನೊಂದಿಗೆ ತಂಗಲು ವಿನಂತಿಸಿ ಕೊಂಡ. ದಿನವೂ ಅವರ ಸೇವೆ ಮಾಡುತ್ತಿದ್ದ. ಅವರ ಬೋಧನೆ ಯನ್ನು ಆಲಿಸಿ ಶೀಲವನ್ನು ಆಚರಿಸುತ್ತಿದ್ದ.

ಹೀಗಿರಲು ಅದೇ ನಗರದಲ್ಲಿ ಒಬ್ಬ ಸೌದೆ ಮಾರಿ ಜೀವನ ಮಾಡುವ ಕೂಲಿಕಾರನಿದ್ದ. ಆತ ದುರಾಸೆ ಮತ್ತು ದುಷ್ಟವಂತನಿದ್ದ. ಒಂದು ದಿನ ಸಂಜೆ ಕಾಡಿನಿಂದ ಸೌದೆ ತರುವುದು ತಡವಾಯಿತು. ಆಗಾಗಿ ಕೋಟೆಯ ಹೆಬ್ಬಾಗಿಲು ಮುಚ್ಚಿತು. ಆತ ತನ್ನ ಸೌದೆಯ ಹೊರೆಯೊಂದಿಗೆ ಕೋಟೆಯ ಹೊರ ಭಾಗದಲ್ಲಿ ಇದ್ದ ದೇವಾಲಯ ಒಂದರಲ್ಲಿ ಅಂದು ತಂಗಿದ. ಮುಂಜಾನೆಯಲ್ಲಿ ಸಮೀಪವೇ ಇದ್ದ ಒಂದು ಮರದ ಮೇಲೆ ಎರಡು ಹುಂಜಗಳು ಮಲಗಿದ್ದವು. ಮರದ ಕೊಂಬೆಯ ಮೇಲೆ ಮಲಗಿದ್ದ ಹುಂಜವು ಕೆಳಗಿನ ಕೊಂಬೆಯ ಮೇಲೆ ಮಲಗಿದ್ದ ಹುಂಜನ ಮೇಲೆ ಹಿಕ್ಕೆ ಹಾಕಿತು. ಕೋಪಗೊಂಡ ಆ ಹುಂಜವು ಏಕೆ ಹಿಕ್ಕೆ ಹಾಕಿದೆ ಎನ್ನಲು.

"ಮಿತ್ರ, ತಿಳಿಯದೆ ಹಾಕಿ ಬಿಟ್ಟೆ ಕ್ಷಮಿಸಿಬಿಡು" "ಆಗಲಿ" ಎಂದು ಸುಮ್ಮನಾಯಿತು. ಮತ್ತೆ ಸ್ವಲ್ಪ ಹೊತ್ತಿನ ನಂತರ ಅದೇ ರೀತಿ ಹಿಕ್ಕೆ ಹಾಕಿತು. ಆಗ ಕೆಳಗಿದ್ದ ಹುಂಜದ ಸ್ವಾಭಿಮಾನ ಕೆರಳಿ;

"ಎಲೈ ಅವಿವೇಕಿಯೇ , ಈಗ ಯಾವ ಕಾರಣಕ್ಕಾಗಿ ಹಿಕ್ಕೆ ಹಾಕಿದೆ?"

"ನನ್ನ ಅಹಂಕಾರಕ್ಕಾಗಿ"

"ಅಂಥಹ ಅಹಂಕಾರಕ್ಕೆ ಇರುವ ಕಾರಣವೇನು?" ಎಂದು ಆ ಎರಡೂ ಹುಂಜಗಳು ಜಗಳಕ್ಕೆ ತೊಡಗಿದವು. ಆಗ ಈ ಸೌದೆ ಮಾರುವವನ ಕಿವಿಯು ನೆಟ್ಟಗಾಯಿತು. ಮೇಲಿನ ಹುಂಜವು ಮಾತನ್ನು ಮುಂದುವರಿಸುತ್ತಾ;

"ಮಿತ್ರ, ಕಾರಣವಿದೆ . ಮನಸ್ಸಿಟ್ಟು ಕೇಳು"

"ನಾನು ಸಾಮಾನ್ಯ ಹುಂಜನಲ್ಲ. ಯಾರು ನನ್ನನ್ನು ಹಿಡಿದು ಕೆಂಡದ ಮೇಲೆ ಸುಟ್ಟು ತಿನ್ನುತ್ತಾರೋ ಅವರಿಗೆ ಸಾವಿರ ಚಿನ್ನದ ನಾಣ್ಯಗಳು ದೊರೆಯುತ್ತವೆ" ಎಂದಿತು. ತಕ್ಷಣವೆ ಸೌದೆ ಮಾರು ವವನ ಮನದಲ್ಲಿ ಆಸೆಯು ಮೂಡಿ "ಹಾಗಾದರೆ ಈ ಹುಂಜವನ್ನು ಹಿಡಿದು ಸುಟ್ಟು ತಿಂದರೆ ನನ್ನ ಬಡತನವೆ ಬಯಲಾಗುವುದು" ಎನ್ನುತ್ತಾ ಮಲಗಿದವನು ದಿಢೀರನೆ ಮೇಲೆದ್ದು ಕುಳಿತ. ಅಷ್ಟರಲ್ಲಿ ಕೆಳಗೆ ಮಲಗಿದ್ದ ಹುಂಜವು ತಲೆಯನ್ನು ಎತ್ತಿ ಠೀವಿಯಿಂದ;

"ಎಲೈ ಕಡು ಮೂರ್ಖನೇ, ಅಷ್ಟಕ್ಕೇ ಹೀಗೆ ಬೀಗುವೆ ಏನು? ಹಾಗಾದರೆ ನನ್ನ ವಿಷಯವನ್ನು ಕೇಳು. ಯಾರು ನನ್ನನ್ನು ಹಿಡಿದು ಕೊಂದು ನನ್ನ ಮೃದು ಮಾಂಸ ವನ್ನು ತಿನ್ನುತ್ತಾರೋ ಅವರು ರಾಜ ನಾಗುತ್ತಾನೆ. ಹೊರ ಭಾಗದ ಮಾಂಸವನ್ನು ಗಂಡಸು ತಿಂದರೆ ಸೇನಾಧಿಪತಿಯಾಗುತ್ತಾನೆ. ಹೆಂಗಸು ತಿಂದರೆ ಪಟ್ಟಮಹಿಷಿಯಾಗು ತ್ತಾಳೆ. ಹಾಗೆಯೆ ಗೃಹಸ್ಥನು ಮೂಳೆ ಮೇಲಿನ ಮಾಂಸವನ್ನು ತಿಂದರೆ ಅಗರ್ಭ ಶ್ರೀಮಂತನಾಗುತ್ತಾನೆ. ಒಂದು ಪಕ್ಷ ಸಂನ್ಯಾಸಿಯು ತಿಂದರೆ ರಾಜನ ವಿಸ್ವಾಸಕ್ಕೆ ಪಾತ್ರನಾಗುತ್ತಾನೆ" ಎಂದಿತು.

ಆಗ ಆ ಸೌದೆ ಮಾರುವವನ ಮನದಲ್ಲಿ ದುರಾ ಸೆಯು ಭುಗಿಲೆದ್ದು ತನ್ನಷ್ಟಕ್ಕೆ ತಾನೆ ಹೀಗೆಂದು ಕೊಂಡ;

"ನಾನೇ ರಾಜನಾಗುವುದಾದರೆ ಈ ಒಂದು ಸಾವಿರದ ಹುಂಜ ವನ್ನೇಕೆ ಕೊಲ್ಲಬೇಕು? ಅದರ ಬದಲಿಗೆ ಕೆಳಗೆ ಮಲಗಿರುವ ಹುಂಜ ವನ್ನೆ ಕೊಲ್ಲುವುದು ಸರಿ ಎಂದು ನಿರ್ಧರಿಸಿ ಮೇಲೆ ಎದ್ದ. ಆ ನಸು



ನಾನೇ ರಾಜನಾಗುವುದಾದರೆ ಈ ಒಂದು ಸಾವಿರದ ಹುಂಜ ವನ್ನೇಕೆ ಕೊಲ್ಲಬೇಕು? ಅದರ ಬದ ಲಿಗೆ ಕೆಳಗೆ ಮಲ ಗಿರುವ ಹುಂಜ ವನ್ನೆ ಕೊಲ್ಲುವುದು ಸರಿ ಎಂದು ನಿರ್ಧರಿಸಿ ಮೇಲೆ ಎದ್ದ.
ಆ ನಸು ಕತ್ತಲೆಯಲ್ಲಿ ಮೆಲ್ಲನೆ ಮರದ ಮೇಲೆ ಹತ್ತಿ ಕೆಳಗೆ ಮಲ ಗಿದ್ದ ರಾಜಹುಂಜವನ್ನು ಹಿಡಿದು ಬಿಟ್ಟ. ಕ್ಷಣಾರ್ಧದಲ್ಲಿ ವಿಕಟವಾಗಿ ನಗುತ್ತಾ ಅದರ ಕುತ್ತಿಗೆಯನ್ನು ತಿರುಗಿಸಿ ಸಾಯಿಸಿದ. ಭಯದಿಂದ ಅಕ್ಕ ಪಕ್ಕ ಕಣ್ಣಾಡಿಸಿದ. ಯಾರ ಸುಳಿವು ಇರಲಿಲ್ಲ. ಮರದಿಂದ ಕೆಳಗಿಳಿದು ಸತ್ತ ಆ ರಾಜ ಹುಂಜ ವನ್ನು ತನ್ನ ಹೊದಿಕೆಯಲ್ಲಿ ಸುತ್ತಿಕೊಂಡ.

ಕತ್ತಲೆಯಲ್ಲಿ ಮೆಲ್ಲನೆ ಮರದ ಮೇಲೆ ಹತ್ತಿ ಕೆಳಗೆ ಮಲಗಿದ್ದ ರಾಜಹುಂಜವನ್ನು ಹಿಡಿದು ಬಿಟ್ಟ. ಕ್ಷಣಾರ್ಧದಲ್ಲಿ ವಿಕಟವಾಗಿ ನಗುತ್ತಾ ಅದರ ಕುತ್ತಿಗೆಯನ್ನು ತಿರುಗಿಸಿ ಸಾಯಿಸಿದ. ಭಯದಿಂದ ಅಕ್ಕ ಪಕ್ಕ ಕಣ್ಣಾಡಿಸಿದ. ಯಾರ ಸುಳಿವು ಇರಲಿಲ್ಲ. ಮರದಿಂದ ಕೆಳಗಿಳಿದು ಸತ್ತ ಆ ರಾಜ ಹುಂಜವನ್ನು ತನ್ನ ಹೊದಿಕೆಯಲ್ಲಿ ಸುತ್ತಿಕೊಂಡ. ಇನ್ನೂ ಈ ಸೌದೆ ಹೊರೆಯಿಂದ ನನಗೇನು ಪ್ರಯೋಜನ"ಎಂದು ಬೀಗುತ್ತಾ ಮನೆಯ ಕಡೆ ಬಿರುಸಾಗಿ ನಡೆದ.

ಮನೆಗೆ ಬಂದು ಹೆಂಡತಿಗೆ ವಿಷಯ ತಿಳಿಸಿದ. ಆಕೆ ಸಂತೋಷವನ್ನು ತಾಳಲಾರದೆ ನಾನು ರಾಣಿಯಾಗುತ್ತೇನೆ ಎಂದು ಕುಣಿದು ಕುಪ್ಪಳಿಸಿದಳು. ನಂತರ ಅವನು ನೀರನ್ನು ಕುದಿಯುವಂತೆ ಕಾಯಿಸಿದ. ಆ ಹುಂಜವನ್ನು ನೀರಿಗೆ ಅದ್ದಿ ಅದರ ಪುಕ್ಕಗಳನ್ನು ತರಿದು ಅದರ ಒಳ ಭಾಗವನ್ನು ಶುದ್ದಗೊಳಿಸಿದ. ಬೇಕಾದ ಆಕಾರಕ್ಕೆ ಮಾಂಸವನ್ನು ಕತ್ತರಿಸಿ ಹೆಂಡತಿಗೆ [illegible]ಟ್ಟು ಸಾರು ಮಾಡಲು ಹೇಳಿದ. ಆಕೆ ಸಾರು ವ[illegible] ಬಳಿಕ;

"ಸ್ವಾಮಿ, ಕೋಳಿ ಸಾರು ಮತ್ತು ಅನ್ನವು ಸಿದ್ಧವಾಗಿದೆ" ಎಂದಳು. ಅವನ ಮನದಲ್ಲಿ ಒಂದು ಯೋಚನೆ ಮೂಡಿತು. ಅಶುದ್ಧನಾಗಿರುವ ನಾನು ಮತ್ತು ನನ್ನ ಹೆಂಡತಿ ನದಿಗೆ ಹೋಗಿ ಸ್ನಾನ ಮಾಡಿ ಇದನ್ನು ಊಟ ಮಾಡುವುದು ಸರಿ ಎನ್ನಿಸಿತು. ತನ್ನ ಮನದ ಇಂಗಿತವನ್ನು ಹೆಂಡತಿಗೆ ಹೇಳಲು ಆಕೆ ಕೂಡ ಒಪ್ಪಿದಳು. ಆ ಕೋಳಿಯ ಸಾರು ಮತ್ತು ಅನ್ನವನ್ನು ತೆಗೆದುಕೊಂಡು ನದಿಯ ಬಳಿಗೆ ಬಂದರು. ಅದನ್ನು ನದಿಯ ದಡದ ಬಳಿ ಇಟ್ಟು ಅವರು ನೀರಿಗಿಳಿದು ಸ್ನಾನ ಮಾಡಲು ತೊಡಗಿದರು. ಅಷ್ಟರಲ್ಲಿ ನದಿ ಪಾತ್ರದ ಮೇಲು ಭಾಗದ ದಟ್ಟ ಅರಣ್ಯ ಪ್ರದೇಶದಿಂದ ಭೀಕರ ಬಿರುಗಾಳಿಯು ಬೀಸಿತು. ಅದರ ರಭಸಕ್ಕೆ ದಡದ ಮೇಲೆ ಇದ್ದ ಬುತ್ತಿಯ ಗಂಟು ತೂರಿ ನದಿಗೆ ಬಿದ್ದು ಬೀಕರ ಅಲೆಯ ಮೇಲೆ ತೇಲುತ್ತಾ ಮುಂದೆ ಸಾಗಿತು. ಅದನ್ನು ಹಿಂಬಾಲಿಸಿಕೊಂಡು ಹೋದ ಸೌದೆ ಮಾರುವವನು ನೀರಿನ ಸುಳಿಗೆ ಸಿಲುಕಿ ಅಸು ನೀಗಿದ.

ನದಿಯ ಮತ್ತೊಂದು ಹಂಚಿನಲ್ಲಿ ಗಜಾಚಾರ್ಯನು ತನ್ನ ಆನೆಗಳನ್ನೆಲ್ಲ ನೀರಿಗೆ ಇಳಿಸಿ ಅವುಗಳ ಮೈಯನ್ನು ತನ್ನ ಇತರೆ ಮಾವುತರೊಂದಿಗೆ ತೊಳೆಯುತ್ತಿದ್ದ. ಆತನ ಬಳಿಗೆ ಆ ಬುತ್ತಿಯ ಗಂಟು ತೇಲಿ ಬಂದಿತು. ಆಶ್ಚರ್ಯದಿಂದ ಅದನ್ನು ಕೈಗೆತ್ತಿಕೊಂಡ ಅವನು ತನ್ನ ಸಹಾಯಕನ ಕೈಗೆ ಅದನ್ನು ಕೊಡುತ್ತಾ;

"ಎಲೈ ಸೇವಕ, ಇದರಲ್ಲಿ ಏನಿದೆ ಬಿಚ್ಚಿ ನೋಡು!" ಎಂದ. ಅವನು ನದಿಯ ದಡದ ಮೇಲೆ ತೆಗೆದುಕೊಂಡು ಹೋಗಿ ಅದನ್ನು ಬಿಚ್ಚಿ ನೋಡಿದ. ಕೋಳಿಯ ಸಾರು ಮತ್ತು ಅನ್ನವಿತ್ತು. ಅದನ್ನು ಗಜಾಚಾರ್ಯನಿಗೆ ತಿಳಿಸಿದ. ಅವನು ಅದನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಿ ತನ್ನ ಹೆಂಡತಿಗೆ ತಲುಪಿಸಲು ಹೇಳಿದ. ಈ ವಿಷಯವು ಬೋಧಿಸತ್ವರಿಗೆ ಅವರ ದಿವ್ಯ ದೃಷ್ಟಿಯಿಂದ ತಿಳಿಯಿತು. ಗಜಾಚಾರ್ಯನು ಮನೆಗೆ ಬರುವ ಮುನ್ನವೆ ಅವರ ಮನೆಯನ್ನು ತಲುಪಿದರು. ಗಜಾಚಾರ್ಯರಿಗೆ ಬೋಧಿಸತ್ವರನ್ನು ಕಂಡು ಅಪಾರ ಸಂತೋಷವಾಯಿತು. ಅವರನ್ನು ಊಟಕ್ಕೆ ಕೂರಿಸಿ ಊಟ ಬಡಿಸಲು ಮುಂದಾದ. ಆಗ ಬೋಧಿಸತ್ವರು ಗಜಾಚಾರ್ಯನ ಪೂರ್ವಜನ್ಮದ ಪುಣ್ಯವು ಅವನ ಮನೆಯ ಬಾಗಿಲಿಗೆ ಹುಡುಕಿಕೊಂಡು ಬಂದಿರುವಾಗ ನಾನು ಅದನ್ನು ದಾರಿ ತಪ್ಪಿಸುವುದು ಧರ್ಮವಲ್ಲ ಎಂಬ ಸತ್ಯವನ್ನು ಅರಿತ ಬಳಿಕ;

"ಸಹೋದರ, ನಾನಿನ್ನು ಹಿಮಾಲಯದ ನನ್ನ ಸ್ವಸ್ಥಳದತ್ತ ಪ್ರಯಾಣಿಸುತ್ತೇನೆ. ಇಂದು ನಿನ್ನ ಪೂರ್ವ ಜನ್ಮದ ಪುಣ್ಯವು ನಿನ್ನನ್ನು ಹುಡುಕಿಕೊಂಡು ಬಂದು ನಿನ್ನ ಕೈ ಸೇರಿತು. ನೀನು ಇಂದಿಗೆ ಮೂರನೆಯ ದಿನಕ್ಕೆ ಈ ರಾಜ್ಯದ ರಾಜನಾಗುವೆ. ಆಗೆಯೇ ನಿನ್ನ ಹೆಂಡತಿ ನಿನ್ನ ಪಟ್ಟಮಹಿಷಿಯಾಗುವಳು. ಬಯಸದೆ ಬಂದ ಭಾಗ್ಯಕ್ಕಾಗಿ ಮರುಳಾಗಬೇಡ. ಆಸೆ ಮತ್ತು ಸುಖಕ್ಕೆ ಅಂಟ ಬೇಡ. ಹಿಂದಿನ ಪುಣ್ಯವನ್ನು ನೆನೆನೆನೆದು ಇಂದಿನ ಪುಣ್ಯವನ್ನು ಕಳೆದುಕೊಳ್ಳಬೇಡ. ಅಂದಿನ ಪುಣ್ಯದೊಂದಿಗೆ ಇಂದಿನ ಪುಣ್ಯವನ್ನು ಕೂಡಿಸಿಕೊಂಡು ಮುಂದಿನ ಜನ್ಮದಲ್ಲಿ ಮತ್ತೂ ಭಾಗ್ಯಶಾಲಿಯಾಗು.

"ಸಹೋದರ, ದಿನವೂ ನೀನು ಮತ್ತು ನಿನ್ನ ಹೆಂಡತಿಯು ನನ್ನ ಸೇವೆಯನ್ನು ಮಾಡುತ್ತಿದ್ದೀರಿ. ಇಂದು ನಾನು ನಿಮ್ಮ ಸೇವೆಯನ್ನು ಮಾಡುತ್ತೇನೆ. ನೀವು ಕುಳಿತುಕೊಳ್ಳಿ ನಾನು ಊಟವನ್ನು ಬಡಿಸುತ್ತೇನೆ" ಎಂದ ಅವರು ಗಜಾಚಾರ್ಯನಿಗೆ ಕೋಳಿಯ ಮೃದು ಮಾಂಸ ಮತ್ತು ಅನ್ನವನ್ನು ಬಡಿಸಿದರು. ಆತನ ಹೆಂಡತಿಗೆ ಹೊರ ಭಾಗದ ಮಾಂಸ ಮತ್ತು ಅನ್ನವನ್ನು ಬಡಿಸಿದರು. ಉಳಿದ ಅಸ್ಥಿ ಮಾಂಸ ಮತ್ತು ಅನ್ನವನ್ನು ತಾವು ಬಡಿಸಿಕೊಂಡು ಊಟ ಮಾಡಿದರು. ನಂತರ ಗಜಾಚಾರ್ಯನನ್ನು ಉದ್ದೇಶಿಸಿ;

"ಸಹೋದರ, ನಾನಿನ್ನು ಹಿಮಾಲಯದ ನನ್ನ ಸ್ವಸ್ಥಳದತ್ತ ಪ್ರಯಾಣಿಸುತ್ತೇನೆ. ಇಂದು ನಿನ್ನ ಪೂರ್ವ ಜನ್ಮದ ಪುಣ್ಯವು ನಿನ್ನನ್ನು ಹುಡುಕಿಕೊಂಡು ಬಂದು ನಿನ್ನ ಕೈ ಸೇರಿತು. ನೀನು ಇಂದಿಗೆ ಮೂರನೆಯ ದಿನಕ್ಕೆ ಈ ರಾಜ್ಯದ ರಾಜನಾಗುವೆ. ಆಗೆಯೇ ನಿನ್ನ ಹೆಂಡತಿ ನಿನ್ನ ಪಟ್ಟಮಹಿಷಿಯಾಗುವಳು. ಬಯಸದೆ ಬಂದ ಭಾಗ್ಯಕ್ಕಾಗಿ ಮರುಳಾಗಬೇಡ. ಆಸೆ ಮತ್ತು ಸುಖಕ್ಕೆ ಅಂಟಬೇಡ. ಹಿಂದಿನ ಪುಣ್ಯವನ್ನು ನೆನೆನೆನೆದು ಇಂದಿನ ಪುಣ್ಯವನ್ನು ಕಳೆದುಕೊಳ್ಳಬೇಡ. ಅಂದಿನ ಪುಣ್ಯದೊಂದಿಗೆ ಇಂದಿನ ಪುಣ್ಯವನ್ನು ಕೂಡಿಸಿಕೊಂಡು ಮುಂದಿನ ಜನ್ಮದಲ್ಲಿ ಮತ್ತೂ ಭಾಗ್ಯಶಾಲಿಯಾಗು. ಸಕಲ ಜೀವರಾಶಿಗಳ ಬಗ್ಗೆ ಕರುಣೆಯುಳ್ಳವನಾಗು. ಹಿಂಸೆಯನ್ನು ಮಾಡದಿರು. ತನ್ನದಲ್ಲದ ವಸ್ತುವನ್ನು ಎಂದಿಗೂ ಪಡೆಯದಿರು. ಅನೈತಿಕ ಸಂಬಂಧವನ್ನು ಹೊಂದದಿರು. ಸುಳ್ಳನ್ನು ಹೊಂದದಿರು. ಸುರೆ ಮುಂತಾದ ಮಾಧಕ ವಸ್ತುವನ್ನು ಸೇವಿಸದಿರು. ಎಂದಿಗೂ ಯಾವ ಕಾರಣಕ್ಕೂ ಅಪ್ರಮಾದಿಯಾಗದಿರು. ಪ್ರಜೆಗಳನ್ನು ತನ್ನ ಸ್ವಂತ ಮಕ್ಕಳಂತೆ ಕಾಪಾಡು. ನಾನಿನ್ನು ಬರುತ್ತೇನೆ" ಎನ್ನಲು ಆ ಗಜಾಚಾರ್ಯನು ತಬ್ಬಿಬ್ಬಾಗಿ;

"ಸ್ವಾಮಿ, ಈ ಬಡವನನ್ನು ಅಂಗಿಸುತ್ತಿರುವಿರಾ? ಅಥವಾ ಆಶೀರ್ವದಿಸುತ್ತಿರುವಿರಾ?" ಎನ್ನಲು, ನಸುನಕ್ಕ ಬೋಧಿಸತ್ವರು;

"ಈ ಮಾತಿಗೆ ಇಂದಿಗೆ ಮೂರು ದಿನದ ಬಳಿಕ ಉತ್ತರ ದೊರೆಯುತ್ತದೆ!" ಎಂದು ಅಲ್ಲಿಂದ ಮರೆಯಾದರು. ಮರು ದಿನ ವಾರಾಣಸಿಯ ಪಕ್ಕದ ರಾಜನು ತನ್ನ ಬೃಹತ್ ಸೈನ್ಯದೊಂದಿಗೆ ಕೋಟೆಯ ಹೊರ ಭಾಗದಲ್ಲಿ ಬಂದು ನಿಂತು ಮುತ್ತಿಗೆ ಹಾಕಿದ. ಅಧೀರನಾದ ಬ್ರಹ್ಮದತ್ತ ರಾಜನು ಕಂಗಾಲಾದ. ಆ ಬೃಹತ್ ಸೈನ್ಯದ ಎದುರು ನನ್ನ ಅಲ್ಪ ಸೈನ್ಯವು ಯಾವುದಕ್ಕೂ ಸಮನಲ್ಲ. ನಾನು ಯುದ್ಧದಲ್ಲಿ ಸೋಲುವುದು ಖಚಿತವೆಂದು ಅರಿತ. ಒಂದು ಪಕ್ಷ ಶತ್ರು ಸೈನ್ಯವು ನನ್ನನ್ನು ಬಂಧಿಸಿದ್ದೇ ಆದರೆ ನನ್ನ ಶಿರಚ್ಛೇದನ ಮಾಡದೇ ಬಿಡಲಾರ ಎಂಬ ವಾಸ್ತವ ಸತ್ಯವನ್ನು ಅರಿತ. ಇಂತಹ ಸಮಯದಲ್ಲಿ ನಾನು ತಲೆಮರೆಸಿಕೊಂಡು ಹೋಗಲೂ ಸಾಧ್ಯವಿಲ್ಲ ಎಂದು ಅರಿತ ಅವನು ತನ್ನ ನಿಷ್ಠಾವಂತ ಗಜಾಚಾರ್ಯನನ್ನು ಕರೆದು ಅವನಿಗೆ ತನ್ನ ರಾಜ ಪೋಷಾಕನ್ನು ತೊಡಿಸಿದ. ಒಂದು ಅಲಂಕೃತ ಆನೆಯ ಮೇಲೆ ಅವನನ್ನು ಕೂರಿಸಿ ಕೋಟೆಯ ಹೆಬ್ಬಾಗಿಲನ್ನು ತೆರೆದ. ಅವನ ಹಿಂದೆ ತನ್ನ ಅಲ್ಪ ಸೈನ್ಯವನ್ನು ಕಳುಹಿಸಿದ. ಯುದ್ಧವು ಪ್ರಾರಂಭವಾಯಿತು. ಸೋಲು ಖಚಿತವೆಂದು ದೃಢಪಟ್ಟ ಮೇಲೆ ಬ್ರಹ್ಮದತ್ತ ರಾಜನು ಮಾರುವೇಷದಲ್ಲಿ ಓಡಿ ಹೋಗಲು ಪ್ರಯತ್ನಿಸುತ್ತಿರುವಾಗ ಆತನನ್ನು ಗುರುತಿಸಿದ ಶತ್ರು ಸೇನೆಯು ಆತನ ಹತ್ಯೆ ಮಾಡಿತು.

ಈ ವಿಷಯವು ವಾರಾಣಸಿಯ ಸೈನಿಕರಿಗೆ ತಿಳಿಯಲು ತಮ್ಮ ಜಂಘಾಬಲವೆ ಉಡುಗಿತು. ಶತ್ರು ರಾಜನಿಗೆ ಶರಣಾಗಲು ತೀರ್ಮಾನಿಸಿದರು. ಅಷ್ಟರಲ್ಲಿ ಅವರನ್ನು ತಡೆದ ಗಜಾಚಾರ್ಯನು ಯುದ್ಧವನ್ನು ಮುಂದುವರಿಸಲು ಘೋಷಿಸಿದ. ಅಂದಿನ ಯುದ್ಧದಲ್ಲಿ ತಮ್ಮ ಸೈನ್ಯವು ಸಾವು ನೋವಿಗೆ ತುತ್ತಾಗಿ ಅಳಿವಿನ ಹಂಚನ್ನು ತಲುಪಿತು. ಇದನ್ನು ಅರಿತ ಗಜಾಚಾರ್ಯನು ರಾಜನ ಖಜಾನೆಯನ್ನು ತೆರೆಸಿದ ಅದರಲ್ಲಿ ಅಪಾರ ಸಂಪತ್ತಿತ್ತು. ಅದರ ಬಲದಿಂದ ರಾತ್ರೋರಾತ್ರಿ ಅಧಿಕ ಸಂಖ್ಯೆಯ ಬಾಡಿಗೆ ಯೋಧರನ್ನು ಕರೆಸಿದ. ಅವರಿಗೆ ಅಪಾರ ಹಣವನ್ನು ಕೊಡುವ ಭರವಸೆ ಕೊಟ್ಟ. ಅವರು ಹಣದ ಆಸೆಗಾಗಿ ಮರು ದಿನ ಯುದ್ಧ ಭೂಮಿಗೆ ನಾಲ್ಕೂ ದಿಕ್ಕಿನಿಂದ ದಾಳಿ ಮಾಡಿದರು. ಸೂರ್ಯಾಸ್ತಕ್ಕೆ ಮುನ್ನವೇ ಶತ್ರು ಸೈನ್ಯವನ್ನು ಸೋಲಿಸಿ ವಿಜಯ ಪತಾಕೆಯನ್ನು ಹಾರಿಸಿದರು.

ಮೂರನೆಯ ದಿನ ಅರಮನೆಯ ಮುಂದೆ ಸೈನಿಕರು ಮತ್ತು ಪ್ರಜೆಗಳು ನೆರೆದು ವಿಜಯೋತ್ಸವವನ್ನು ಆಚರಿಸಿದರು. ಬಳಿಕ ರಾಜನಿಲ್ಲದ ರಾಜ್ಯಕ್ಕೆ ಯಾರನ್ನು ರಾಜನನ್ನಾಗಿ ಆಯ್ಕೆ ಮಾಡಬೇಕು ಎಂಬ ವಿಷಯವು ಪ್ರಸ್ತಾಪವಾಯಿತು. ಆಗ ಪ್ರಜೆಗಳು ಒಕ್ಕೊರಲಿನಿಂದ ಗಜಾಚಾರ್ಯನ ಹೆಸರನ್ನು ಸೂಚಿಸಿದರು. ಸಂದಿಗ್ಧ ಪರಿಸ್ಥಿತಿಯಲ್ಲಿ ಹೆದರದೆ, ಹಿಂಜರಿಯದೆ ಯುದ್ಧರಂಗದಲ್ಲಿ ಪ್ರಜೆಗಳ ಹಿತದೃಷ್ಟಿಯಿಂದ ಹೋರಾಡಿದ ಗಜಾಚಾರ್ಯನಿಗೆ ರಾಜಪದವಿಯನ್ನು ನೀಡಿ ಪಟ್ಟಾಭಿಷೇಕವನ್ನು ಮಾಡಲಾಯಿತು. ಆ ಸಂದರ್ಭದಲ್ಲಿ ಗಜಾಚಾರ್ಯನು ತನ್ನ ಗುರುವಾದ ಬೋಧಿಸತ್ವರ ಮಾತನ್ನು ನೆನೆದು;

"ಹೌದು ಗುರುದೇವಾ, ಕರ್ಮ ಮತ್ತು ಧರ್ಮಗಳ ಸಂಯೋಗವೇ ಆಕಸ್ಮಿಕ ಮತ್ತು ಅದೃಷ್ಟ! ಅದರ ಮುಂದೆ ವಿಧಿ ಎಂಬುದಾಗಲೀ ಅಥವಾ ವಿಧಿಲೀಲೆ ಎಂಬುದಾಗಲೀ ಇಲ್ಲವೆಂಬುದನ್ನು ಅರಿತೆ!! ನಿನ್ನ ದೂರದೃಷ್ಟಿಗೆ ತಲೆಬಾಗಿದೆ ತಂದೆ!!!" ಎಂದು ಕೃತಜ್ಞತೆಯನ್ನು ಸಲ್ಲಿಸಿದ. □

'SAMVADA' Kannada Monthly, MaY 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ರಾಜ್ಯದ ಸಹಕಾರ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳು

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

ರಾಜ್ಯದ ಜನಸಾಮಾನ್ಯರ ಜನ ಜೀವನವನ್ನು ರೂಪಿಸುವುದರಲ್ಲಿ ಸಹಕಾರ ರಂಗ ವಹಿಸಿರುವ ಪಾತ್ರ ಗಣನೀಯವಾದದ್ದು. ಕುಶಲಕರ್ಮಿಗಳು, ಸಾಂಪ್ರದಾಯಿಕ ವೃತ್ತಿ ನಿರತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳು ಇತ್ಯಾದಿ ಜನರ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಮಹತ್ವದ ಕೊಡುಗೆ ನೀಡಿರುವ ಸಹಕಾರ ರಂಗವು ಪ್ರಸ್ತುತ ಸರ್ಕಾರದ ಆಡಳಿತಾವಧಿಯಲ್ಲಿ ಕೆಲವು ಅಭೂತಪೂರ್ವ ಕ್ರಮಗಳನ್ನು ಅನುಷ್ಠಾನಗೊಳಿಸಿ ರೈತರು ಹಾಗೂ ಸಂಬಂಧಿತ ಚಟುವಟಿಕೆಗಳಲ್ಲಿ ನಿರತರಾಗಿರುವ ಜನತೆಯ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ನೆರವಾಗಿದೆ.



ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
ಮಾನ್ಯ ಸಹಕಾರ ಸಚಿವರು

ಸಹಕಾರ ಇಲಾಖೆಯ ಸಾಧನೆಗಳು

ರಾಜ್ಯದ ಕೃಷಿ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ಶೇ. **3** ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ **14.00** ಲಕ್ಷ ರೈತರಿಗೆ ರೂ. **3835.04** ಕೋಟಿ ಸಾಲ ನೀಡಲಾಗಿದೆ.

- ಒಂದು ವರ್ಷದ ಅವಧಿಯಲ್ಲಿ **10621** ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಶೇ. 4ರ ಬಡ್ಡಿ ದರದಲ್ಲಿ ರೂ. **106.02** ಕೋಟಿ ಸಾಲ ನೀಡಲಾಗಿದೆ.

ರೈತರ ಸಾಲ ಮನ್ನಾ

ಸಾಲ ಮನ್ನಾ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ **85.60** ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

- **2.54** ಲಕ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿಸಲು ರೂ. **3.00** ಕೋಟಿ ಸರ್ಕಾರದ ಷೇರು ಧನ ನೀಡಿಕೆ.

2009-10ನೇ ಸಾಲಿಗೆ ಯೋಜಿತ ಕಾರ್ಯಕ್ರಮಗಳು

- **3.75** ಲಕ್ಷ ರೈತರನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಹೊಸದಾಗಿ ಸದಸ್ಯರನ್ನಾಗಿ ನೋಂದಾಯಿಸಿ, ಸಾಲ ನೀಡಲು ಗುರಿ ಹಮ್ಮಿಕೊಳ್ಳಲಾಗಿದೆ.
- ಒಟ್ಟು ಕೃಷಿ ಸಾಲ ನೀಡಿಕೆಯಲ್ಲಿ ಶೇ.25ರಷ್ಟು ಹೊಸ ಸದಸ್ಯರಿಗೆ ಸಾಲ ನೀಡಲು ಉದ್ದೇಶಿಸಲಾಗಿದೆ.
- ಭೂ ಹಿಡುವಳಿ ಹೊಂದಿದ ಎಲ್ಲಾ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳನ್ನು ಸದಸ್ಯರನ್ನಾಗಿ ನೋಂದಾಯಿಸುವುದು ಹಾಗೂ ಕೃಷಿ ಸಾಲ ನೀಡುವ ಗುರಿ ಇಟ್ಟುಕೊಳ್ಳಲಾಗಿದೆ.

ಸಹಕಾರ-ಪ್ರಗತಿಯ ಮೂಲಾಧಾರ

ಸರ್ಕಾರದ ಮಹತ್ವಾಕಾಂಕ್ಷೆಯ "ಯಶಸ್ವಿನಿ" ಯೋಜನೆಯ ಸಾಧನೆ

- ನೋಂದಣಿಯಾದ ಸದಸ್ಯರು : 30.59 ಲಕ್ಷ
- ಸದಸ್ಯರಿಂದ ಒಟ್ಟು ಸಂಗ್ರಹಣೆಯಾದ ಮೊತ್ತ : ರೂ. 3641.00 ಲಕ್ಷ
- ಸರ್ಕಾರವು ಯಶಸ್ವಿನಿ ಟ್ರಸ್ಟ್‌ಗೆ ಬಿಡುಗಡೆ ಮಾಡಿರುವ ಮೊತ್ತ : ರೂ. 3000 .00 ಲಕ್ಷ
- ಹೊರರೋಗಿ ಚಿಕಿತ್ಸೆ ಪ್ರಕರಣಗಳು : 1,81,000
- ಶಸ್ತ್ರಚಿಕಿತ್ಸೆ ಪ್ರಕರಣಗಳು : 66,837
- ಶಸ್ತ್ರಚಿಕಿತ್ಸೆಗೆ ಖರ್ಚಾದ ಮೊತ್ತ : ರೂ. 54.50 ಕೋಟಿ

ಸರ್ಕಾರದ ಇನ್ನಿತರ ಸಾಧನೆಗಳು

- **92,359** ರೈತರಿಗೆ ಬೆಳೆ ವಿಮೆ ಪರಿಹಾರವಾಗಿ ರೂ. **25.16** ಕೋಟಿಗಳನ್ನು ವಿತರಿಸಲಾಗಿದೆ.
- ಹೈದ್ರಾಬಾದ್ - ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಗಾಗಿ ರೂ. **227.54** ಲಕ್ಷ ಷೇರು ಬಂಡವಾಳ ಹಾಗೂ ರೂ. **79.00** ಲಕ್ಷ ಸಾಲ ಬಿಡುಗಡೆ ಮಾಡಲಾಗಿದೆ.
- ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲಕ್ಕೆ ಸಹಕಾರ ಸಂಘಗಳ ಮೂಲಕ ರೈತರಿಗೆ ರಸಗೊಬ್ಬರವನ್ನು ಕಾಪು ದಾಸ್ತಾನು ಮಾಡಿ ವಿತರಿಸಲು ರೂ. **400** ಕೋಟಿ ಸಾಲವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಪಡೆಯಲು ಸರ್ಕಾರವು ಖಾತರಿ ನೀಡಿದೆ ಹಾಗೂ ಈ ಉದ್ದೇಶಕ್ಕಾಗಿ ರೂ. 25 ಕೋಟಿ ಅನುದಾನವನ್ನು ನೀಡಿದೆ.
- ಸಹಕಾರ ಸಂಘಗಳ ನೌಕರರ ನಿವೃತ್ತಿ ವಯಸ್ಸನ್ನು **58** ವರ್ಷಗಳಿಂದ **60** ವರ್ಷಗಳಿಗೆ ಏರಿಕೆ ಮಾಡಲಾಗಿದೆ.

ಮೂರ್ತೆದಾರರ ಸಹಕಾರ ಸಂಘಗಳಿಗೆ ಪ್ರೋತ್ಸಾಹ

- ಮೂರ್ತೆದಾರರ ಸಹಕಾರ ಸಂಘಗಳಿಗೆ ಶೇ 6 ರ ಬಡ್ಡಿ ದರದಲ್ಲಿ ಸಾಲ ವಿತರಿಸಲು ಕ್ರಮ, ಅವುಗಳಿಗೆ ಲೆಕ್ಕ ಪರಿಶೋಧನಾ ಶುಲ್ಕ ಆಕರಣೆಯಿಂದ ವಿನಾಯಿತಿಗೆ ಆದೇಶ.

ಶ್ವೇತ ಕ್ರಾಂತಿಗೆ ಪ್ರೋತ್ಸಾಹ

- ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ. 2 ರಂತೆ ಪ್ರೋತ್ಸಾಹ ಧನ.
- ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿನ ಸಣ್ಣ ಮತ್ತು ಮಧ್ಯಮ ರೈತರುಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯ ಮುಖಾಂತರ ತಲಾ ರೂ. **50,000/-** ವೆಚ್ಚ ಭರಿಸಿ **1000** ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ವಾರ್ತೆ